
# ಕರ್ನಾಟಕದ ಸೇವುಣರ ಇತಿಹಾಸ

ಡಾ. ಎ.ವಿ. ನರಸಿಂಹಮೂರ್ತಿ







# ಕರ್ನಾಟಕದ ಸೇವುಣರ ಇತಿಹಾಸ

ಡಾ. ಎ.ವಿ. ನರಸಿಂಹಮೂರ್ತಿ
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಪ್ರಾಧ್ಯಾಪಕ (ನಿ)
ಮೈಸೂರು ವಿಶ್ವವಿದ್ಯಾನಿಲಯ

ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ
ಗೋಕುಲಂ ಮೂರನೆಯ ಹಂತ, ಮೈಸೂರು - ೨

**KARNATAKADA SEVUNARA ITIHASA**
A History of the Sevuna (dynasty) of Karnataka

*by*
**Dr. A.V. Narasimha Murthy**

*Published by*
**Talukina Venkanniah Smaraka Granthamale**
9, Ramya, Gokulam 3rd stage
Mysore - 570 002

Pages : 232 Price : Rs. *150/-*

Second Impression : 2010



**D.T.P at : Lekha Graphics**
Jayanagar, Mysore - 14
Phone : 2568854

**Printed at : Good Touch Printers**
C-29-30, Industrial Area
Yadavagiri, Mysore - 20
Ph: 4262722; 4262733

# ಅರಿಕೆ

ಸೇವುಣ ರಾಜವಂಶ ಎಂದರೆ ಅನೇಕರಿಗೆ ಅರ್ಥವೇ ಆಗುತ್ತಿರಲಿಲ್ಲ. ಏಕೆಂದರೆ ಹಿಂದಿನ ವಿದ್ವಾಂಸರು ಅವರನ್ನು ದೇವಗಿರಿಯ ಯಾದವರು ಎಂದೇ ಕರೆಯುತ್ತಿದ್ದರು. ಆದರೆ ನನ್ನ ಸಂಶೋಧನೆಯಿಂದಾಗಿ ಈ ರಾಜವಂಶದ ನಿಜವಾದ ಹೆಸರು ಸೇವುಣ ಅಥವಾ ಸೇಉಣ ಎಂದು ತಿಳಿದುಬಂದಿತು. ಹಾಗಾಗಿ ನಾನು ಈ ಹೆಸರನ್ನೇ ಬಳಸಿ ನನ್ನ ಪುಸ್ತಕವನ್ನು ಬರೆದೆ. ಮತ್ತೊಂದು ವಿಷಯವೆಂದರೆ ಇವರು ಮರಾಠಿಗರಲ್ಲ, ಕನ್ನಡದವರು ಎನ್ನುವ ವಿಷಯವೂ ನನ್ನ ಸಂಶೋಧನೆಯಿಂದ ಹೊರಹೊಮ್ಮಿತು. ಇದು ಪ್ರೊ. ದೇ. ಜವರೇಗೌಡ ಅವರ ಗಮನಕ್ಕೆ ಬಂದಾಗ ಅವರು ನನ್ನನ್ನು ಪ್ರೋತ್ಸಾಹಿಸಿ, ಈ ಗ್ರಂಥವನ್ನು ಬರೆಯಲು ಪ್ರೇರಣೆ ಒದಗಿಸಿದರು. ಇದರಿಂದಾಗಿ 1971ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆ ಈ ಪುಸ್ತಕವನ್ನು ಪ್ರಕಟಿಸಿತು. ಇತಿಹಾಸಕಾರರು, ವಿದ್ವಾಂಸರು ಮೇಲಾಗಿ ಕನ್ನಡಿಗರು ಈ ಪುಸ್ತಕವನ್ನು ಮೆಚ್ಚಿಕೊಂಡರು. ವಿಶ್ವವಿದ್ಯಾನಿಲಯಗಳಲ್ಲಿ ಇದು ಇತಿಹಾಸದ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕವೂ ಆಯಿತು. ಇದರ ಪ್ರತಿಗಳು ಮುಗಿದು ಹೋಗಿ, ಇದಕ್ಕೆ ಬೇಡಿಕೆ ಇದ್ದಿತು. ಇದನ್ನು ಗಮನಿಸಿದ ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆಯ ಚಾಲನ ಶಕ್ತಿಯಾದ ಶ್ರೀ ಛಾಯಾಪತಿಯವರು ಈ ಪುಸ್ತಕದ ಮರುಮುದ್ರಣಕ್ಕೆ ಮುಂದಾದರು. ಈ ಎರಡನೆಯ ಮುದ್ರಣದಲ್ಲಿ ಕೆಲವು ಸಣ್ಣ ಪುಟ್ಟ ಬದಲಾವಣೆಗಳನ್ನು ಮಾಡಿದ್ದೇನೆ.

ಇಂತಹ ಸಮಯದಲ್ಲಿ, ಮೈಸೂರು ವಿಶ್ವವಿದ್ಯಾನಿಲಯದ ಸನ್ಮಾನ್ಯ ಕುಲಪತಿಗಳಾದ ಪ್ರೊ. ವಿ.ಜಿ. ತಳವಾರ್ ಅವರು ನನ್ನ ಮೇಲಿನ ವಿಶ್ವಾಸದಿಂದ ಈ ಮರುಮುದ್ರಣಕ್ಕೆ ಅನುಮತಿ ನೀಡಿ ಉಪಕಾರಮಾಡಿದ್ದಾರೆ. ಕಾರ್ಯಶೀಲರೂ, ಸರಳರೂ, ಸಜ್ಜನರೂ ಆದ ಕುಲಪತಿ ಪ್ರೊ. ತಳವಾರ್‌ಅವರಿಗೆ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾದ ಡಾ.ಕೆ.ಎನ್. ಗಂಗಾನಾಯಕ್ ಅವರು ಈ ವಿಷಯದಲ್ಲಿ ನನಗೆ ಸಹಾಯ ಮಾಡಿದ್ದಾರೆ. ಅವರಿಗೆ ನಾನು ಆಭಾರಿಯಾಗಿದ್ದೇನೆ.

ನಾನು 75 ವಸಂತಗಳನ್ನು ಮುಗಿಸಿದ ಈ ಸಂದರ್ಭದಲ್ಲಿ ಅದರ ಸವಿನೆನಪಿಗಾಗಿ ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಮತ್ತು ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಇವರ ಸಂಯುಕ್ತಾಶ್ರಯದಲ್ಲಿ 31-5-2010ರಂದು

ಏರ್ಪಡಿಸಿರುವ ಸಮಾರಂಭದಲ್ಲಿ ಈ ಪುಸ್ತಕವನ್ನು ಬಿಡುಗಡೆ ಮಾಡಬೇಕೆಂಬ ಛಲದಿಂದ ಶ್ರೀ ಟಿ.ಎಸ್. ಛಾಯಾಪತಿಯವರು ತುಂಬ ಶ್ರಮವಹಿಸಿ ಹತ್ತು ದಿನ ಗಳಲ್ಲಿ ಇದನ್ನು ಅಚ್ಚಿನ ಮನೆಯಿಂದ ಹೊರತಂದಿದ್ದಾರೆ. ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಶ್ರೀ ಮಡ್ಡೀಕೆರೆ ಗೋಪಾಲ್ ಅವರು ಸಹಕಾರ ನೀಡಿದ್ದಾರೆ. ಇವರೀರ್ವರಿಗೂ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ನನ್ನ ತರುಣ ಮಿತ್ರರಾದ ಶ್ರೀ ಕಾರ್ತಿಕ್ ಅವರು ಕೆಲವು ಸೂಚನೆಗಳನ್ನು ನೀಡಿದ್ದಲ್ಲದೆ ಸೇವುಣರ ಶಾಸನಗಳ ಪಟ್ಟಿಯನ್ನು ಪುನಾರಚಿಸಿ ಕೊಟ್ಟಿದ್ದಾರೆ. ಅವರಿಗೆ ನನ್ನ ವಂದನೆಗಳು. ಬಹಳ ಕಡಿಮೆ ಸಮಯ ದಲ್ಲಿ ಇದನ್ನು ಡಿಟಿಪಿ ಮಾಡಿಕೊಟ್ಟ ಲೇಖಾಗ್ರಾಫಿಕ್ಸ್ ರವರಿಗೂ, ಮುದ್ರಿಸಿಕೊಟ್ಟ ಗುಡ್‌ಟಚ್ ಪ್ರಿಂಟರ್ಸ್ ಸಂಸ್ಥೆಯ ಶ್ರೀ ಪಿ.ಎಸ್. ಗಣಪತಿ ಯವರಿಗೂ ನನ್ನ ವಂದನೆಗಳು. ಇದೇ ಮುದ್ರಣ ಸಂಸ್ಥೆಯ ಶ್ರೀ ಟಿ.ಎಸ್. ರಾಘವೇಂದ್ರ ಅವರು ವಿಶೇಷ ಮುತುವರ್ಜಿ ವಹಿಸಿದ್ದಾರೆ.

ಕರ್ನಾಟಕ ಇತಿಹಾಸದಲ್ಲಿ ಪ್ರಮುಖ ಪಾತ್ರವಹಿಸಿದ ಸೇವುಣರನ್ನು ಕುರಿತಾದ ಈ ಗ್ರಂಥವನ್ನು ಇತಿಹಾಸದ ವಿದ್ಯಾರ್ಥಿಗಳು ಹಾಗೂ ಸಾಮಾನ್ಯ ಓದುಗರು ಆದರದಿಂದ ಸ್ವಾಗತಿಸುತ್ತಾರೆಂದು ನಾನು ಭಾವಿಸಿದ್ದೇನೆ.

24-5-2010 **ಡಾ. ಎ.ವಿ. ನರಸಿಂಹಮೂರ್ತಿ**

7A/2, ದೇವಗಿರಿ, ಗೋಕುಲಂ ರಸ್ತೆ
ಜಯಲಕ್ಷ್ಮೀಪುರಂ, ಮೈಸೂರು - 12

# ಮುನ್ನುಡಿ
## (ಮೊದಲನೆಯ ಆವೃತ್ತಿ)

ಕನ್ನಡ ಭಾಷೆ ಸಾಹಿತ್ಯಗಳ ಸರ್ವತೋಮುಖವಾದ ಬೆಳವಣಿಗೆಯನ್ನು ಸಾಧಿಸುವ ದೃಷ್ಟಿಯಿಂದ 1966ರ ಕೊನೆಯಲ್ಲಿ ಕನ್ನಡ ಅಧ್ಯಯನ ಸಂಸ್ಥೆ ಪ್ರಾರಂಭ ವಾಯಿತು. ಈಗ್ಗೆ ಹತ್ತು ಹನ್ನೆರಡು ವರ್ಷಗಳಿಗೆ ಹಿಂದೆ ರಾಷ್ಟ್ರಕವಿ ಕುವೆಂಪು ಅವರ ಮಾರ್ಗದರ್ಶನದಲ್ಲಿ ರೂಪುಗೊಂಡಿದ್ದ ಯೋಜನೆಗಳೆಲ್ಲ ಡಾ. ಶ್ರೀಮಾಲಿಯವರ ನೇತೃತ್ವದಲ್ಲಿ ಸಾಕಾರಗೊಳ್ಳತೊಡಗಿದುದಕ್ಕೆ ಕನ್ನಡ ಅಧ್ಯಯನ ಸಂಸ್ಥೆ ಸಾಕ್ಷಿಯಾಗಿದೆ. ಈಗ ಪ್ರೊಫೆಸರ್ ಜವರೇಗೌಡರು ನಮ್ಮ ವಿಶ್ವವಿದ್ಯಾ ನಿಲಯದ ಕುಲಪತಿಗಳಾಗಿರುವುದರಿಂದ ಈ ಸಂಸ್ಥೆಯ ಚಟುವಟಿಕೆಗಳು ತೀವ್ರತರ ವಾಗಿ ಬೆಳೆಯುವುದೆಂದು ನಿರೀಕ್ಷಿಸಬಹುದಾಗಿದೆ. ಕನ್ನಡ ಸ್ನಾತಕೋತ್ತರ ಶಿಕ್ಷಣ ಮತ್ತು ಸಂಶೋಧನ ವಿಭಾಗ, ಸ್ನಾತಕೋತ್ತರ ಭಾಷಾಂತರ ಡಿಪ್ಲೊಮಾ ಶಿಕ್ಷಣ, ಕನ್ನಡೇತರರಿಗಾಗಿ ಕನ್ನಡ ಸರ್ಟಿಫಿಕೇಟ್ ಮತ್ತು ಡಿಪ್ಲೊಮಾ ಶಿಕ್ಷಣ ಇವುಗಳ ಜೊತೆಗೆ ಇಂದು ಸಂಸ್ಥೆಯಲ್ಲಿ ಐದು ಪ್ರಮುಖ ವಿಭಾಗಗಳಿವೆ: (1) ಸಂಪಾದನ ವಿಭಾಗ, (2) ಭಾಷಾಂತರ ಮತ್ತು ಪಠ್ಯಪುಸ್ತಕ ವಿಭಾಗ, (3) ಜಾನಪದ ವಿಭಾಗ, (4) ಕನ್ನಡ ವಿಶ್ವಕೋಶ ವಿಭಾಗ ಮತ್ತು (5) ಹರಿದಾಸ ಸಾಹಿತ್ಯ ಸಂಪಾದನ ಮತ್ತು ಸಂಶೋಧನ ವಿಭಾಗ, ಸಂಸ್ಥೆಯ ಬಹುಮುಖವಾದ ಚಟುವಟಿಕೆಗಳ ಪ್ರತೀಕವಾಗಿದೆ ಈ ವಿಭಾಗಗಳು.

ವಿಶ್ವವಿದ್ಯಾನಿಲಯದ ಎಲ್ಲ ಹಂತಗಳಲ್ಲಿಯೂ ಕನ್ನಡವನ್ನು ಶಿಕ್ಷಣ ಮಾಧ್ಯಮ ವನ್ನಾಗಿ ಬಳಸಬೇಕೆಂಬ ನೀತಿಗನುಗುಣವಾಗಿ ಭಾಷಾಂತರ ಮತ್ತು ಪಠ್ಯಪುಸ್ತಕ ವಿಭಾಗವನ್ನು ಸ್ಥಾಪಿಸಲಾಗಿದೆ. ವಿಜ್ಞಾನ ಮತ್ತು ಮಾನವಿಕ ಶಾಸ್ತ್ರಗಳಿಗೆ ಸಂಬಂಧ ಪಟ್ಟ ಪಠ್ಯಪುಸ್ತಕಗಳನ್ನು ಮತ್ತು ಸಂದರ್ಭಗ್ರಂಥಗಳನ್ನು ಹೊರತರುವುದೇ ಈ ವಿಭಾಗದ ಮುಖ್ಯ ಉದ್ದೇಶ. ಮೂರು ರೀತಿಯಲ್ಲಿ ಈ ಕಾರ್ಯವನ್ನು ನೆರವೇರಿಸ ಬೇಕೆಂದು ಯೋಚಿಸಲಾಗಿದೆ : (1) ಸಮರ್ಥ ಲೇಖಕರಿಂದ ಗ್ರಂಥಗಳನ್ನು ಬರೆಸು ವುದು, (2) ಪ್ರಸಿದ್ಧ ಆಕರ, ಸಂದರ್ಭ ಗ್ರಂಥಗಳನ್ನು ತಜ್ಞರಿಂದ ಭಾಷಾಂತರಿ ಸುವುದು ಮತ್ತು (3) ಸಂಸ್ಥೆಯ ಕಾರ್ಯಕರ್ತರೇ ಸಾಧ್ಯವಾದಷ್ಟು ಗ್ರಂಥಗಳನ್ನು ಭಾಷಾಂತರಿಸುವುದು. ಈಗಾಗಲೇ ವಿವಿಧ ವಿಷಯಗಳಿಗೆ ಸಂಬಂಧಿಸಿದ 52 ಗ್ರಂಥಗಳು ಹೊರಬಂದಿವೆ. ಈ ವರ್ಷದ ಒಳಗಾಗಿ ಸುಮಾರು 25 ಗ್ರಂಥಗಳು

ಹೊರಬರುವ ನಿರೀಕ್ಷೆಯಿದೆ. ವೈಜ್ಞಾನಿಕ ಗ್ರಂಥಗಳ ರಚನೆಯಲ್ಲಿ ಎದುರಿಸಬಹುದಾದ ಸಮಸ್ಯೆಗಳನ್ನು ಪರಿಹರಿಸುವತ್ತಲೂ ಗಮನ ಕೊಡಲಾಗಿದೆ. ತಜ್ಞ ವಿದ್ವಾಂಸರುಗಳು ಒಂದುಗೂಡಿ 'ಪಾರಿಭಾಷಿಕ ಕೋಶ'ಗಳನ್ನು ತಯಾರಿಸುತ್ತಿದ್ದಾರೆ. ಈಗಾಗಲೇ 'ಮನೋವಿಜ್ಞಾನಕೋಶ' ಹೊರಬಂದಿದೆ. 'ಭಾಷಾವಿಜ್ಞಾನ ಕೋಶ' ಅಚ್ಚಿನಮನೆಗೆ ಹೋಗಲಿದೆ. ಇಂಥ ಇನ್ನು ಒಂಬತ್ತು ಕೋಶಗಳು ಸಿದ್ಧವಾಗುತ್ತಿವೆ. ಈ ಎಲ್ಲ ಯೋಜನೆ, ನೆರವು ಮತ್ತು ಪ್ರೋತ್ಸಾಹಗಳಿಂದಾಗಿ ಮುಂದಿನ ಮೂರು ನಾಲ್ಕು ವರ್ಷಗಳಲ್ಲಿ ಸುಮಾರು 250 ಗ್ರಂಥಗಳನ್ನು ಹೊರತರಬಹುದೆಂಬ ನಂಬಿಕೆಯಿದೆ. ಇವುಗಳ ಜೊತೆಗೆ ಸ್ನಾತಕಪೂರ್ವ, ಸ್ನಾತಕ ಮತ್ತು ಸ್ನಾತಕೋತ್ತರ ಹಂತಗಳಿಗೆ ಅಗತ್ಯವಾದ ಭಾಷಾ ಪಠ್ಯಪುಸ್ತಕಗಳನ್ನು ಹೊರತರಲಾಗುತ್ತಿದೆ. ಸಂಕಲಿತ, ಸಂಪಾದಿತ ಪಠ್ಯಗ್ರಂಥಗಳು ಈ ವರ್ಗಕ್ಕೆ ಸೇರುತ್ತವೆ. ಈ ಕಾರ್ಯದಲ್ಲಿ 'ಸಂಪಾದನ ವಿಭಾಗ' ನಮಗೆ ನೆರವಾಗುತ್ತಿದೆ.

ಸಂದರ್ಭ ಗ್ರಂಥಗಳು, ಆಕರ ಗ್ರಂಥಗಳು ಪಠ್ಯಪುಸ್ತಕಗಳಿಗೆ ಪೂರಕವಾಗಿ ಪ್ರೇರಕವಾಗಿ ಪೋಷಕವಾಗಿ ಇರುವಂಥವು; ಬೆನ್ನೆಲುಬಾಗಿ ಇರುವಂಥವು. ಪಠ್ಯಪುಸ್ತಕಗಳ ವಿಷಯ ಸಂಪತ್ತಿಗೆ, ನಿರೂಪಿತ ವಿಚಾರಗಳ ನಿರ್ದುಷ್ಟತೆ, ನಿಖರತೆ ಮತ್ತು ಪ್ರಾಮಾಣಿಕತೆಗೆ ಅವು ಒರೆಗಲ್ಲಾಗಿರುತ್ತವೆ. ಶಾಖೋಪಶಾಖೆಗಳಾಗಿ ಒಡೆದು ನಿಲ್ಲುವ ಹೆಮ್ಮರಕ್ಕೆ ತಾಯಿಬೇರು ಹೇಗೋ ಜ್ಞಾನಕ್ಷೇತ್ರಕ್ಕೆ ಆಕರಗ್ರಂಥಗಳೂ, ಸಂದರ್ಭಗ್ರಂಥಗಳೂ ಹಾಗೆ. ಪಠ್ಯಪುಸ್ತಕಗಳು ಅಲ್ಪಾಯುಗಳು. ಹೊಸ ಹೊಸ ಸಂಶೋಧನೆಗಳ ಬೆಳಕಿನಲ್ಲಿ, ವಿಚಾರಗಳ ಮತ್ತು ಪರಿಸ್ಥಿತಿಗಳ ಹಿನ್ನೆಲೆಯಲ್ಲಿ ಆಗಿಂದಾಗ್ಗೆ ಅವುಗಳನ್ನು ಪರಿಷ್ಕರಿಸಬೇಕಾಗುತ್ತದೆ. ಪುನರ್‌ರಚಿಸಬೇಕಾಗುತ್ತದೆ. ಹೊಸ ಹೊಸ ಅಂಶಗಳನ್ನು ಸೇರಿಸಬೇಕಾಗುತ್ತದೆ. ತಿದ್ದುಪಡಿಗಳನ್ನು ಮಾಡಬೇಕಾಗುತ್ತದೆ. ಸಂದರ್ಭಗ್ರಂಥಗಳು ಮತ್ತು ಆಕರ ಗ್ರಂಥಗಳು ಈ ಎಲ್ಲ ಪ್ರಕ್ರಿಯೆಗಳಿಗೆ ಸಂಪೂರ್ಣವಾಗಿ ಹೊರತಲ್ಲವಾದರೂ ಅವುಗಳು ಸಾರುವ ಸತ್ಯಗಳು, ತತ್ತ್ವಗಳು, ಸೂತ್ರಗಳು ಬಹುಮಟ್ಟಿಗೆ ದೇಶಕಾಲಗಳ ಉಪಹತಿಯನ್ನು ಮೀರಿ ನಿಲ್ಲುತ್ತವೆ. ಹೀಗಾಗಿ ಅವು ಸಾರ್ವಕಾಲಿಕ, ಸಾರ್ವದೇಶಿಕವಾಗಿ ಪರಿಣಮಿಸುತ್ತವೆ ಅಥವಾ ಅಲ್ಪಸ್ವಲ್ಪ ಬದಲಾವಣೆಗಳೊಂದಿಗೆ ಇತರ ದೇಶಕಾಲಗಳಿಗೆ ಅನ್ವಯವಾಗುವ ವೈಶಿಷ್ಟ್ಯವನ್ನು ಪಡೆದುಕೊಂಡಿರುತ್ತವೆ. ಆಕರ ಗ್ರಂಥಗಳು, ಸಂದರ್ಭಗ್ರಂಥಗಳು ಆಯಾ ಕ್ಷೇತ್ರದಲ್ಲಿನ ಪ್ರಾಜ್ಞ ವಿದ್ವಾಂಸರ ಆಲೋಚನಾಶಕ್ತಿ, ಜ್ಞಾನಾನ್ವೇಷಣೆ ಮತ್ತು ವಿಚಾರವಂತಿಕೆಗೆ ಸಾಕ್ಷಿಯಾಗಿರುತ್ತವೆ. ಆದ್ದರಿಂದ ಪಠ್ಯಪುಸ್ತಕಗಳ ಜೊತೆಗೆ ಅಮೂಲ್ಯವಾದ ಆಕರಗ್ರಂಥಗಳ, ಸಂದರ್ಭಗ್ರಂಥಗಳ ಸಂಪತ್ತನ್ನೂ ಹೆಚ್ಚಿಸಿಕೊಂಡು ಹೋಗಬೇಕಾದ್ದು ಅಗತ್ಯ, ಅನಿವಾರ್ಯ.

ಆಕರ ಗ್ರಂಥಗಳು, ಸಂದರ್ಭ ಗ್ರಂಥಗಳು ಭಾಷೆಯ ಶಕ್ತಿಗೂ ಒರೆಗಲ್ಲಾಗುತ್ತವೆ. ಸೀಮಿತವಾದಷ್ಟು ಅಥವಾ ಅವಶ್ಯಕವಾದಷ್ಟು ಪಾರಿಭಾಷಿಕ ಪದಸಂಗ್ರಹ

ವನ್ನು ಬಳಸಿ ಪಠ್ಯಪುಸ್ತಕಗಳನ್ನು ರಚಿಸಬಹುದು; ಅವಶ್ಯಕವೆಂದು ಕಂಡುಬಂದಲ್ಲಿ ವಿವರಣೆಗಳನ್ನು ನೀಡಬಹುದು. ವಿಚಾರಗಳನ್ನು ಲಂಬಿಸಬಹುದು. ಉದಾಹರಣೆ ಗಳ ಮೂಲಕ ವಿಶದಪಡಿಸಬಹುದು. ಆದರೆ ವಿಚಾರ, ವಿವರಣೆ ಮತ್ತು ವಿಶದೀ ಕರಣಗಳ ದೃಷ್ಟಿಯಿಂದ ಹಿತಮಿತವಾಗಿ, ಸ್ಪಷ್ಟವಾಗಿ, ನಿರ್ದುಷ್ಟವಾಗಿ, ನಿಖರವಾಗಿ ವಿಚಾರಗಳನ್ನು ವ್ಯಕ್ತಪಡಿಸುವಾಗ ಭಾಷೆ ಪರೀಕ್ಷೆಗೊಳಗಾಗುತ್ತದೆ. ಅದರ ಸುಪ್ತಶಕ್ತಿಗಳು ಹೊರಹೊಮ್ಮುತ್ತವೆ, ಸಿಡಿದೇಳುತ್ತವೆ. ಕಿಡಿಗೆದರುತ್ತವೆ, ಭಾಷೆಯ ಸಂಪತ್ತು ಸಮೃದ್ಧವಾಗುತ್ತದೆ. ಭಾಷೆ ಎಲ್ಲ ಬಗೆಯ ವಿಚಾರಾಭಿವ್ಯಕ್ತಿಗೂ ಸಮರ್ಥ ವಾಹಕವಾಗುತ್ತದೆ.

ಯಾವುದೇ ಭಾಷೆಯಲ್ಲಿನ ಮಾನವಿಕ ಅಥವಾ ವೈಜ್ಞಾನಿಕ ಸಾಹಿತ್ಯ ನಿರಂತರ ವಾಗಿ ಭಾಷಾಂತರಗಳನ್ನು ಅವಲಂಬಿಸಿಕೊಂಡಿರುವುದು ಸಾಧ್ಯವಿಲ್ಲ. ಗ್ರಂಥ ಅಚ್ಚಾಗಿ ಹೊರಬರುವ ಹೊತ್ತಿಗಾಗಲೇ ನೂತನ ವಿಚಾರಗಳು ಹೊರಬಂದು ಗ್ರಂಥ ಹಳೆಯದಾಗಿ ಬಿಡುವಂಥ ಸಂದರ್ಭಗಳಿರುವಾಗ (ಇಂಗ್ಲಿಷಿನಂಥ ಭಾಷೆಯಲ್ಲೂ ಕೂಡ) ಅಂಥ ಗ್ರಂಥ ಭಾಷಾಂತರವಾಗಿ ಹೊರಬೀಳುವ ಹೊತ್ತಿಗೆ ಮತ್ತಷ್ಟು ಹಳೆಯದಾಗಿ ಬಿಟ್ಟಿರುತ್ತದೆ. ಹೀಗಾಗಿ ಹೊಸ ಹೊಸ ಮೌಲಿಕ ಅಥವಾ ಸ್ವತಂತ್ರ ಗ್ರಂಥಗಳನ್ನು ರಚಿಸಬೇಕಾಗುತ್ತದೆ. ಇಲ್ಲವಾದರೆ ಈ ಪ್ರಗತಿ ಪಥದಲ್ಲಿ ಹೆಗಲೆಣೆ ಯಾಗಿ ನಡೆಯಲಾರದೆ ಆ ಭಾಷೆ ಮತ್ತು ಆ ಭಾಷೆಯನ್ನಾಡುವ ಜನ ಹಿಂದೆ ಬೀಳುತ್ತಾರೆ. ಮೇಲಾಗಿ ಒಂದು ಭಾಷೆಯಲ್ಲಿ ರಚಿತವಾಗುವ ಸ್ವತಂತ್ರ ಗ್ರಂಥಗಳ ಸಂಖ್ಯೆ ಆಯಾ ಜನತೆಯ ಸಂಶೋಧನಾಸಕ್ತಿ, ವಿನೂತನ ವಿಚಾರಗ್ರಹಣ ಸಾಮರ್ಥ್ಯ, ಬುದ್ಧಿ ಪ್ರಖರತೆ ಮತ್ತು ಪ್ರತಿಭೆಯ ಸಂಕೇತವಾಗಿರುತ್ತದೆ. ಕಾಲ ದೊಡನೆ ಸರಿಜೋಡಿಯಾಗಿ ಸಾಗಬೇಕಾದ್ದು ಅಪೇಕ್ಷಣೀಯ, ಅನಿವಾರ್ಯ.

ಈ ದೃಷ್ಟಿಯಿಂದ ಸ್ವತಂತ್ರ ಗ್ರಂಥಗಳ ರಚನೆ ವಿಶೇಷ ಪ್ರೋತ್ಸಾಹಕ್ಕೆ ಅರ್ಹ ವಾಗಿದೆ. ಈ ಅಂಶವನ್ನು ಗಮನಿಸಿ ವಿಶ್ವವಿದ್ಯಾನಿಲಯ ಬಹುಮಾನ ಯೋಜನೆ ಯೊಂದನ್ನು ಜಾರಿಗೆ ತಂದಿತು. ಈ ಯೋಜನೆಯ ಅಂಗವಾಗಿ ಮೊದಲ ಹಂತದಲ್ಲಿ ಮಾನವಿಕಗಳಲ್ಲಿ ಮನೋವಿಜ್ಞಾನಕ್ಕೂ, ವಿಜ್ಞಾನಗಳಲ್ಲಿ ಭೌತವಿಜ್ಞಾನ ಮತ್ತು ರಸಾಯನ ವಿಜ್ಞಾನಗಳಿಗೂ ಬಹುಮಾನ ಯೋಜನೆಯನ್ನು ಜಾರಿಗೆ ಕೊಡಲಾಗಿತ್ತು. ಈ ವರ್ಷ ಸಸ್ಯವಿಜ್ಞಾನ, ಪ್ರಾಣಿವಿಜ್ಞಾನ, ಅರ್ಥವಿಜ್ಞಾನ ಮತ್ತು ಎಂಜಿನಿಯರಿಂಗ್ ವಿಭಾಗಗಳನ್ನು ಈ ಯೋಜನೆಗೆ ಒಳಪಡಿಸಲಾಗಿದೆ. ಮುಂಬರುವ ವರ್ಷಗಳಲ್ಲಿ ಈ ಯೋಜನೆಯನ್ನು ಇತರ ವಿಭಾಗಗಳಿಗೂ ವಿಸ್ತರಿಸಲಾಗುತ್ತದೆ.

ಪ್ರತಿಭೆಯಲ್ಲಿ, ವಿದ್ವತ್ತಿನಲ್ಲಿ, ಸಂಶೋಧನಾನುರಕ್ತಿಯಲ್ಲಿ, ಆಧುನಿಕ ವಿಚಾರ ಶೀಲತೆಯಲ್ಲಿ ಯಾರಿಗೂ ಕಡಿಮೆ ಇಲ್ಲದ ನಮ್ಮ ಅಧ್ಯಾಪಕವರ್ಗ ವಿಷಯ ಸಂಪತ್ತನ್ನು ಸಮೃದ್ಧಗೊಳಿಸಿಕೊಂಡಿರುವುದರ ಜೊತೆಗೆ ಕನ್ನಡ ಭಾಷೆಯ ಜಾಯ ಮಾನಕ್ಕೆ ಅನುಗುಣವಾದ ನಿರೂಪಣ ಪದ್ಧತಿಯನ್ನು ಅಳವಡಿಸಿಕೊಳ್ಳಬೇಕಾಗಿದೆ.

ವಿಚಾರ ಪರಿಪುಷ್ಟತವಾಗಿರುವ ಅನೇಕ ಗ್ರಂಥಗಳು ಭಾಷೆಯ ದೃಷ್ಟಿಯಿಂದ ಕುಂಟುತ್ತವೆಂಬುದು ಲೇಖಕರ ಮತ್ತು ಓದುಗರ ಅಭಿಪ್ರಾಯವಾಗಿದೆ. ಈ ದೃಷ್ಟಿಯಿಂದ ಕನ್ನಡ ಭಾಷೆಯ ಬಳಕೆಯ ವಿಚಾರದಲ್ಲಿ ಬೇಸಿಗೆ ಶಿಬಿರವೊಂದನ್ನು ಏರ್ಪಡಿಸಲಾಗಿತ್ತು. ಈ ಬಗೆಯ ಲೇಖನ ಕಾರ್ಯದಲ್ಲಿ ಎದುರಾಗುವ ಸಮಸ್ಯೆಗಳನ್ನು ಚರ್ಚಿಸುವುದು, ಕೆಲವಾದರೂ ಮಾರ್ಗದರ್ಶಿ ಸೂತ್ರಗಳನ್ನು ಕಂಡುಕೊಳ್ಳುವುದು ಈ ಯೋಜನೆಯ ಉದ್ದೇಶವಾಗಿತ್ತು. ಮೊದಲು ಶಿಬಿರದಲ್ಲಿ ಹದಿನೇಳು ಮಂದಿ ಪಠ್ಯಪುಸ್ತಕ ರಚನೆ ಮತ್ತು ಬೋಧನೆಗೆ ಸಂಬಂಧಿಸಿದ ಸಮಸ್ಯೆಗಳನ್ನು ಚರ್ಚಿಸಿದರು. ಕೆಲವು ಮಾರ್ಗದರ್ಶಿ ಸೂತ್ರಗಳನ್ನು ಕಂಡು ಕೊಂಡರು. ಶಿಬಿರದ ಕಾರ್ಯಕಲಾಪಗಳನ್ನು ಇಷ್ಟರಲ್ಲಿಯೇ ಪುಸ್ತಕರೂಪದಲ್ಲಿ ಹೊರತರಲಿದ್ದೇವೆ. ಈ ಶಿಬಿರದಲ್ಲಿ ಗಳಿಸಿದ ಅನುಭವ ಮತ್ತು ಪ್ರತಿಫಲಗಳ ಆಧಾರದ ಮೇಲೆ ಯೋಜನೆಯನ್ನು ಮತ್ತಷ್ಟು ವಿಸ್ತರಿಸಲಾಗಿದೆ. ಈ ವರ್ಷ 25 ಮಂದಿ ವಿಜ್ಞಾನ ಪಠ್ಯಪುಸ್ತಕ ಬರಹಗಾರರು ಕಾರ್ಯಶಿಬಿರದಲ್ಲಿ ಭಾಗವಹಿಸಲಿದ್ದಾರೆ. ಪಠ್ಯಪುಸ್ತಕಗಳ ಭಾಷಾಂತರದಲ್ಲಿ ಎದುರಾಗುವ ಸಮಸ್ಯೆಗಳನ್ನು ಈ ಬಾರಿ ವಿಶೇಷವಾಗಿ ಚರ್ಚಿಸಲಾಗುತ್ತದೆ. ಮುಂದೆ ಈ ಯೋಜನೆಯನ್ನು ಮಾನವಿಕಗಳಿಗೂ ವಿಸ್ತರಿಸಬೇಕೆಂಬ ಯೋಚನೆ ಇದೆ. ಈ ಎಲ್ಲ ಪ್ರೇರಣೆ ಪ್ರೋತ್ಸಾಹಗಳ ಫಲವಾಗಿ ಕನ್ನಡದಲ್ಲಿ ಸ್ವತಂತ್ರ ಗ್ರಂಥಗಳ ಉತ್ತಮ ಫಸಲು ಮೂಡಿಬರುವುದೆಂದು ನಂಬಿದ್ದೇವೆ.

ಇತಿಹಾಸ ವಿಭಾಗ ಮುಖ್ಯರಾದ ಡಾ. ಬಿ.ಷೇಕ್ ಆಲಿ ಅವರ ಸಂಪಾದಕತ್ವದಲ್ಲಿ ಹೊರಬರುತ್ತಿರುವ ಇತಿಹಾಸ ಪುಸ್ತಕಗಳ ಮಾಲೆಯಲ್ಲಿ ಇದು ಮೂರನೆಯ ಗ್ರಂಥ. ಪಠ್ಯಪುಸ್ತಕ ಮಾಲೆಯಲ್ಲಿ ಇಪ್ಪತ್ತೊಂಬತ್ತನೆಯ ಗ್ರಂಥ. ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗದಲ್ಲಿ ರೀಡರ್ ಆಗಿರುವ ಡಾ. ಎ.ವಿ. ನರಸಿಂಹ ಮೂರ್ತಿಯವರು ಪಿ.ಎಚ್.ಡಿ. ಪದವಿಗಾಗಿ ಸಿದ್ಧಪಡಿಸಿದ ಗ್ರಂಥದ ಕನ್ನಡ ರೂಪಾಂತರ 'ಕರ್ನಾಟಕದ ಸೇವುಣರ ಇತಿಹಾಸ'. ಈ ವಿಷಯಕ್ಕೆ ಸಂಬಂಧಿಸಿದ ಮೊದಲ ಗ್ರಂಥ ಇದು. ಜೊತೆಗೆ ಸೇವುಣರು ಕರ್ನಾಟಕದವರೆಂಬ ವಾದವನ್ನು ಮೊಟ್ಟ ಮೊದಲಿಗೆ ಸಾಧಾರವಾಗಿ ಮಂಡಿಸಿರುವುದೂ ಇದರ ವೈಶಿಷ್ಟ್ಯಪೂರ್ಣ ಅಂಶಗಳಲ್ಲಿ ಒಂದು. ಇಂತಹ ಒಂದು ಮಹತ್ವಪೂರ್ಣ ಗ್ರಂಥವನ್ನು ಸಂಸ್ಥೆಯ ಮಾಲೆಯಲ್ಲಿ ಹೊರತರಲು ಅವಕಾಶಮಾಡಿಕೊಟ್ಟ ಅವರಿಗೂ, ಇದನ್ನು ಸುಂದರವಾಗಿ ಅಚ್ಚುಮಾಡಿಕೊಟ್ಟ ತಾಂಡವಮೂರ್ತಿ ಅಚ್ಚುಕೂಟದವರಿಗೂ ನಮ್ಮ ವಂದನೆಗಳು ಸಲ್ಲುತ್ತವೆ.

ಕನ್ನಡ ಅಧ್ಯಯನ ಸಂಸ್ಥೆ<br>ಮೈಸೂರು, ೨೯.೩.೧೯೭೦

**ಹಾ.ಮಾ. ನಾಯಕ**<br>ನಿರ್ದೇಶಕ

## ಸಂಪಾದಕರ ಮಾತು
### (ಮೊದಲನೆಯ ಆವೃತ್ತಿ)

ಕರ್ನಾಟಕ, ದಕ್ಷಿಣಭಾರತದ ಇತಿಹಾಸದಲ್ಲಿ ಗಣನೀಯವಾದ ಹಾಗೂ ಬಲಯುತವಾದ ಪಾತ್ರವಹಿಸಿದೆ. ತಮಿಳುನಾಡು, ಆಂಧ್ರಪ್ರದೇಶ, ಮರಾಠವಾಡಿಗಳಿಂದ ಹರಿದುಬಂದ ಸಾಂಸ್ಕೃತಿಕ ಪ್ರವಾಹ-ಅಡ್ಡಪ್ರವಾಹಗಳು ಕರ್ನಾಟಕದ ಎಲ್ಲಕಟ್ಟುಗಳಲ್ಲಿ ಸಂಗಮವಾಗಿ ನಿಂತವು. ಈ ಸಂಮಿಳಿತ ಸಂಸ್ಕೃತಿ, ಹೃದಯದಿಂದ ಪ್ರಸರಿಸುವ ಚೇತನಕಾರಿ, ನೆತ್ತರಂತೆ, ಜನತೆಯ ಪ್ರತಿಯೊಂದು ಚಟುವಟಿಕೆಯಲ್ಲಿಯೂ ಪ್ರಸರಿಸಿ ಈ ಪುಣ್ಯಭೂಮಿಯನ್ನು ಶ್ರೀಮಂತಗೊಳಿಸಿದೆ. ರಾಜಕೀಯವಾಗಿ ಸುಮಾರು ೧೫೦೦ ವರ್ಷಗಳ ಕಾಲ ಕನ್ನಡಿಗರಿಗೆ ದಖನಿ ಪ್ರಾಂತ್ಯದ ಒಡೆತನವನ್ನೂ ಗಳಿಸಿ ಕೊಟ್ಟ ಹಲವಾರು ರಾಷ್ಟ್ರಗಳು ಕರ್ನಾಟಕದಲ್ಲಿ ಸ್ಥಾಪನೆಯಾಗಿವೆ. ಧಾರ್ಮಿಕ ಕ್ಷೇತ್ರದಲ್ಲಿ ಸಹ ಕರ್ನಾಟಕ ಉದಾರತೆಯನ್ನೂ, ಉದಾತ್ತಮನೋಭಾವವನ್ನೂ ಪ್ರಕಟಿಸಿ, 'ಭಕ್ತಿ' ಪಂಥಗಳ ಆಗಮನವನ್ನು ಸಾರಿ, ಜಾತಿಮತಗಳ ಎಲ್ಲ ತಡೆಗಳನ್ನೂ ತೊಡೆದುಹಾಕಿತು. ಅಂತೆಯೆ ಕಲೆ, ಶಿಲ್ಪ, ಭಾಷೆ, ಸಾಹಿತ್ಯ, ಸಂಗೀತ ಮತ್ತು ತತ್ತ್ವಶಾಸ್ತ್ರ ಸಂಬಂಧದಲ್ಲಿ ಭಾರತದ ಸಂಸ್ಕೃತಿಗೆ ಕರ್ನಾಟಕದ ಕೊಡುಗೆ ಅಸದೃಶವಾದದ್ದು.

ಆದರೂ ಸಹ, ಕರ್ನಾಟಕದ ಮನಮೋಹಕ ಕಥನದ ಪ್ರತಿಯೊಂದು ವಿಷಯವೂ ಪೂರ್ತಿಯಾಗಿ ನಿರೂಪಣೆಯಾಗಿಲ್ಲ. ಅಂಥ ನಿರೂಪಣೆ ಶ್ರದ್ಧಾವಂತರಾದ ವಿದ್ವನ್ಮಣಿಗಳ ತಾಳ್ಮೆಯಿಂದ ಆಗತಕ್ಕ ಮಹತ್ವಪೂರ್ಣವಾದ ಹಾಗೂ ಅಪಾರವಾದ ಕೆಲಸದಿಂದಲೇ ಸಾಧ್ಯ. ಈ ಕೆಲಸ ಅಂಧಕಾರದಲ್ಲಿ ಹುದುಗಿ ಹೋಗಿರುವ ವಿಚಾರಗಳನ್ನು ಹಾಗೂ ವಿವರಗಳನ್ನು ತೆರೆದುತೋರಿಸುವುದೊಂದೇ ಆಗಿಲ್ಲ; ಈ ಪ್ರದೇಶದ ಚರಿತ್ರೆಯ ಪ್ರತಿಯೊಂದು ಅಧ್ಯಾಯವೂ ಪುನರ್ರಚನೆಯಾಗಬೇಕಾದ ಮಟ್ಟಿಗೆ ಕೊಂಕಿಸಿ ವಿರೂಪಗೊಳಿಸಿರುವ ಗೊತ್ತಿರುವ ವಿಷಯಗಳನ್ನೇ ಸರಿಯಾಗಿ ಅರ್ಥಮಾಡಿ ವಿಶ್ಲೇಷಿಸಿ ವಿವರಿಸುವ ಕೆಲಸವೂ ಆಗಿದೆ. ಕರ್ನಾಟಕದ ತುಂಬುಜೀವನದಲ್ಲಿ ಎಳೆಯಷ್ಟು ಸೂಕ್ಷ್ಮವಾದ ವಿಷಯವನ್ನು ಸಹ ಅತ್ಯಂತ ಪ್ರಧಾನ ವಿಷಯವೆಂದು ಕಾಣಿಸಿರುವ ಪ್ರಯತ್ನಗಳು ಅನೇಕ ವೇಳೆ ಆಗಿವೆ. ಚರಿತ್ರೆಯ ಕಾಲದಿಂದಲೂ ಕರ್ನಾಟಕವು ನಂದ, ಮೌರ್ಯ, ಶಾತವಾಹನ,

ಕದಂಬ, ಗಂಗ, ಚಾಳುಕ್ಯ, ರಾಷ್ಟ್ರಕೂಟ, ಸೇವುಣ, ಹೊಯ್ಸಳ, ವಿಜಯನಗರದ ಅರಸರಿಗೂ, ಮೈಸೂರು ಒಡೆಯರಿಗೂ ಅಧೀನವಾಗಿದ್ದಿತೆಂದು ಸೂಚಿಸಲಾಗಿದೆ. ಈ ರಾಜಸಂತತಿಗಳಲ್ಲಿ ಅನೇಕ ಸಂತತಿಗಳ ಮೂಲವನ್ನು ಕರ್ನಾಟಕದ ಯಾವುದಾದರೊಂದು ಅರಸುವಂಶದೊಡನೆ ಗುರುತಿಸಿದ್ದಾರೆ. ಆಧುನಿಕ ವಿದ್ವಾಂಸರು ಸಹ ಸೇವುಣ ರಾಜ ಸಂತತಿಯ ಸ್ಥಾಪನೆಗೆ ಮರಾಠರು ಕಾರಣರೆಂದೂ ಹೊಯ್ಸಳ ಅರಸು ವಂಶಕ್ಕೆ ತಮಿಳರು ಮೂಲ ಪುರುಷರೆಂದೂ, ವಿಜಯನಗರ ರಾಜ್ಯ ಸ್ಥಾಪನೆ ಆಂಧ್ರರಿಂದಾಯಿತೆಂದೂ ಹಾಗೂ ಮೈಸೂರಿನ ಒಡೆಯರು ಉತ್ತರ ಭಾರತದಿಂದ ಬಂದವರೆಂದೂ ದೃಢೀಕರಿಸಲು ಶ್ರಮಿಸಿದ್ದಾರೆ. ಈ ತಪ್ಪು ಅಭಿಪ್ರಾಯಗಳನ್ನು ಅದಷ್ಟು ಬೇಗ ತಿದ್ದಿಕೊಂಡು, ಶ್ರದ್ಧೆಯುಳ್ಳ ಸಂಶೋಧಕರಿಗೆ ದೊರಕುವ ಹೊಸ ಆಧಾರಾಂಶಗಳ ಅರಿವಿನಿಂದ ಈ ರಾಜ ಸಂತತಿಗಳ ಪೈಕಿ ಅನೇಕ ಸಂತತಿಗಳ ಸ್ಥಾಪಕರು ಕನ್ನಡಿಗರೆ ಆಗಿರುವರೆಂಬ ವಿಷಯವನ್ನು ಸ್ಪಷ್ಟಗೊಳಿಸಬೇಕಾಗಿದೆ.

ಸೇವುಣರ ಸಂತತಿ ಸ್ಥಳಜನ್ಯವಾದದ್ದೆಂದೂ, ಭಂಡಾರ್ಕರ್, ಆಲ್ಟೇಕರ್ ಮತ್ತು ಡೆರೆಟ್ ಇವರು ಈ ಸಂತತಿಯ ಉಗಮವನ್ನು ಮರಾಠರೊಂದಿಗೆ ಗುರುತಿಸಲು ಮಾಡಿರುವ ಪ್ರಯತ್ನಗಳು ಸಾಧುವಲ್ಲವೆಂದೂ ಆಧಾರಗಳೊಡನೆ ಮನವೊಪ್ಪುವಂತೆ ಈ ಗ್ರಂಥದಲ್ಲಿ ಸಿದ್ಧಾಂತ ಮಾಡಿದೆ. ನಿರ್ದಿಷ್ಟವಾದೊಂದು ಪ್ರದೇಶಕ್ಕೆ ಸೇರಿದ ಚರಿತ್ರಕಾರನಿಗೆ, ಎಲ್ಲ ಯಶಸ್ಸೂ ತನ್ನ ಪೂರ್ವಿಕರಿಗೇ ಸಲ್ಲಬೇಕೆಂಬ ಚಪಲವಿರುವಾಗ, ಪ್ರಾಂತೀಯ ಚರಿತ್ರೆಗಳನ್ನು ಪುನರ್‍ರಚಿಸುವುದು ಸುಲಭವಾದ ಕೆಲಸವೇನಲ್ಲ. ವೈಯಕ್ತಿಕ ಭಾವನೆಗಳನ್ನು ಹುದುಗಿಸಿ, ದೊರಕುವ ಸಾಕ್ಷ್ಯಾಧಾರಗಳ ಮೇಲೆ ನಮ್ಮ ಸಿದ್ಧಾಂತಗಳನ್ನು ರೂಪಿಸುವುದು ಅತ್ಯಗತ್ಯ; ಅದರಿಂದ ವಾಸ್ತವ ಚಿತ್ರ ನಮ್ಮ ಮುಂದೆ ನಿಲ್ಲುತ್ತದೆ.

ಡಾ. ಎ.ವಿ. ನರಸಿಂಹಮೂರ್ತಿಯವರು ಎಲ್ಲ ಆಧಾರ ವಿಷಯಗಳನ್ನು ವಿಮರ್ಶಾತ್ಮಕವಾಗಿ ಅಧ್ಯಯನಮಾಡಿ, ಸೇವುಣರು ಕನ್ನಡಿಗರೇ ಎಂದು ನಿರ್ಣಾಯಕವಾಗಿ ಸ್ಥಿರಪಡಿಸಿರುವುದಲ್ಲದೆ, ಈ ಅರಸುಮನೆತನದ ಬಗ್ಗೆ ಹೊಸಬೆಳಕನ್ನು ಸಹ ಚೆಲ್ಲಿ ಶ್ಲಾಘನೀಯವಾದ ಕೆಲಸ ಮಾಡಿದ್ದಾರೆ. ಕಲ್ಪನಾ ಪಟುವಾದ ಸ್ಥಳೀಯ ಗಟ್ಟಿಗನೊಬ್ಬನ ಶಕ್ತಿ ಸಾಮರ್ಥ್ಯ ಮತ್ತು ಸಾಹಸ ಪ್ರವೃತ್ತಿಗಳಿಂದ ಸಣ್ಣದೊಂದು ರಾಜ್ಯಸ್ಥಾಪನೆಯಾಗಿ, ಕಾಲಕ್ರಮದಲ್ಲಿ ಅದು ಸ್ವಯಂಪೂರ್ಣವಾದ ರಾಷ್ಟ್ರವಾಗಿ ಪರಿಣಮಿಸಿ, ಅದರ ಸ್ಥಾಪಕ ಇತಿಹಾಸ ಪುರುಷನಾಗುವ ಸಾಮಾನ್ಯ ಮಾದರಿಯಲ್ಲೇ ಈ ರಾಜಸಂತತಿಯ ಉಗಮದ ಕಥೆಯೂ ಇದೆ. ಇಂಥ ಶಕ್ತಿವಂತನಾದ ರಾಜ್ಯ ಸ್ಥಾಪಕ ಪ್ರಾರಂಭದಲ್ಲಿ ಏನಾಗಿದ್ದ, ಎಲ್ಲಿದ್ದ ಎಂಬ ಬಗ್ಗೆ ಮಾಹಿತಿಗಳು ಸರಿಯಾಗಿ ದೊರಕದೆ, ಅವನ ವಂಶದ ವಿಷಯದಲ್ಲಿ ಜನತೆಯಲ್ಲಿ ಪೂಜ್ಯಭಾವನೆ ಮೂಡಿಸುವ ಪವಿತ್ರಾತ್ಮಕ ಕಥೆಗಳನ್ನು ಹೆಣೆದಿರುತ್ತಾರೆ. ರಾಜ್ಯಸ್ಥಾಪಕನಿಗೆ ಸಮಾಜ ಶ್ರೇಣಿಯಲ್ಲಿ ಉನ್ನತಸ್ಥಾನವನ್ನು ದೊರಕಿಸಿಕೊಡಲು, ಅವನ ಮೂಲ ಸಂತತಿ

ಅವನ ರಾಜ್ಯದ ಹೊರಗಿನ ಯಾವುದಾದರೊಂದು ಪ್ರಾಚೀನ ಅರಸುಮನೆತನವೆಂದು ಪ್ರಸಿದ್ಧ ಪಡಿಸುವ ರೂಢಿ ಇದ್ದಿತು. ಸಮಾಜದಲ್ಲಿ ಸ್ಥಾನಮಾನಗಳಿಗೆ ತಕ್ಕಂತೆ ವ್ಯಕ್ತಿಗೆ ಗೌರವ ಸಲ್ಲುತ್ತಿದ್ದ ಕಾಲದಲ್ಲಿ, ಪ್ರಜಾಪಾಲಕನಾದ ಅರಸನು ತನ್ನ ಪ್ರಜೆಗಳಿಗಿಂತ ಕೀಳುಸ್ಥಾನ ಹೊಂದದೆ ಅವನಲ್ಲಿ ಕ್ಷತ್ರಿಯಕುಲದ ನೆತ್ತರು ಸಹಜ ವಾಗಿ ಹರಿಯುತ್ತಿದೆಯೆಂಬ ಭಾವನೆಯನ್ನು ಮೂಡಿಸಬೇಕಾದ ಅನಿವಾರ್ಯತೆ ಯಿಂದ, ಜನಸಾಮಾನ್ಯರು ದೃಢಪಡಿಸಿಕೊಳ್ಳಲು ಸಾಧ್ಯವಿಲ್ಲದ ಹಾಗೂ ಅವರು ಕಾಣದ ರಾಜಸಂತತಿಯೊಂದಿಗೆ ಅವನ ಸಂಬಂಧ ಕಲ್ಪನೆಯಾಗುತ್ತಿತ್ತು.

ಈ ಅನಿವಾರ್ಯತೆಯಿಂದ, ಕರ್ಣಾಟಕದ ಅರಸು ಮನೆತನಗಳಲ್ಲಿ ಅನೇಕ ಮನೆತನಗಳ ಮೂಲಪುರುಷರು, ಹೊರಗಿನಿಂದ ಬಂದವರೆಂದು ಕಾಣಿಸಿದೆ. ಆದರೆ, ಅವರಲ್ಲಿಅನೇಕರು ಕನ್ನಡ ತಾಯ ಮಕ್ಕಳೆಂಬುದನ್ನೂ, ರಾಜಕೀಯ ಕಾರಣಗಳ ಒತ್ತಡದಿಂದ ಅವರನ್ನು ಉದ್ದೇಶ ಪೂರ್ವಕವಾಗಿಯೇ ಹೊರಗಿನವರೆಂದು ತೋರಿಸಲಾಗಿದೆಯೆಂಬುದನ್ನೂ ನಾವು ಮರೆಯುವ ಹಾಗಿಲ್ಲ. ಈ ಮಾತು, ಸಾಮಾನ್ಯ ಉಗಮದಿಂದ ಸಾಗಿ ಪ್ರಬಲ ರಾಷ್ಟ್ರ ಕಟ್ಟಿದ ಸೇವುಣರಿಗೂ ಅನ್ವಯಿಸುತ್ತದೆ. ತಮ್ಮ ಸ್ಥಾನ ಸುಭದ್ರವಾದ ಕೂಡಲೆ ಅವರು ಮಾಳವ, ಗೂರ್ಜರ ಮತ್ತು ಕಾಕತೀಯರ ದೌರ್ಬಲ್ಯದಿಂದ ತಮ್ಮ ರಾಜ್ಯವನ್ನು ವಿಸ್ತರಿಸಿಕೊಂಡರು. ರಾಜ್ಯದ ಹಿತದೃಷ್ಟಿಯಿಂದ, ಸಿಂಹಾಸನಾರೂಢರಾದ ಸೇವುಣರ ನೈಜ ಹುಟ್ಟನ್ನು ಖಂಡಿತ ವಾಗಿಯೂ ಬಹಿರಂಗಪಡಿಸುವಂತಿರಲಿಲ್ಲ. ಏನೇ ಆಗಲಿ, ಸತ್ಯವನ್ನು ಬೆಳಕಿಗೆ ತರುವುದು ಚರಿತ್ರೆಕಾರರ ಕರ್ತವ್ಯ. ಈ ಅಧ್ಯಯನ, ಕರ್ಣಾಟಕ ಇತಿಹಾಸವನ್ನು ಆಧಾರಗಳಿಂದ ಯುಕ್ತ ರೀತಿಯಲ್ಲಿ ಪುನರ್ರಚಿಸುವ ಪ್ರಯತ್ನವಾಗಿದೆ. ಸೇವುಣರ ಬಗ್ಗೆ ಪ್ರಪ್ರಥಮವಾಗಿ ಕನ್ನಡದಲ್ಲಿ ಪ್ರಕಟವಾಗಿರುವ ಈ ಅಮೂಲ್ಯ ಗ್ರಂಥ ವಿದ್ಯಾರ್ಥಿಗಳಿಗೂ, ಸಾರ್ವಜನಿಕರಿಗೂ ಉಪಯುಕ್ತವಾಗುವುದೆಂಬ ನಿರೀಕ್ಷೆ ನಮ್ಮದು.

ಮಾನಸಗಂಗೋತ್ರಿ
ಮೈಸೂರು
೩೧.೩.೧೯೭೧

ಬಿ.ಷೇಕ್‌ಅಲಿ
ಇತಿಹಾಸ ವಿಭಾಗದ ಪ್ರಾಧ್ಯಾಪಕರು

# ಅರಿಕೆ

## (ಮೊದಲನೆಯ ಆವೃತ್ತಿ)

ಕರ್ನಾಟಕದಲ್ಲಿ ಆಳಿದ ರಾಜಮನೆತನಗಳಲ್ಲಿ ಸೇವುಣ ವಂಶವೂ ಒಂದು. ದೇವಗಿರಿಯ ಯಾದವರೆಂದೇ, ಸೇವುಣರು ಇತಿಹಾಸದ ವಿದ್ಯಾರ್ಥಿಗಳಿಗೆ ಪರಿಚಿತರಾಗಿದ್ದಾರೆ. ಇವನು ಕನ್ನಡನಾಡಿನವರೆಂಬ ಕಲ್ಪನೆ ಅನೇಕರಲ್ಲಿಲ್ಲ. ಅದಕ್ಕೆ ಕಾರಣ ಇಷ್ಟೆ. ಮೊದ ಮೊದಲು ಕನ್ನಡನಾಡಿನ ಇತಿಹಾಸವನ್ನು ರಚಿಸಿದ ಫ್ಲೀಟ್, ಭಂಡಾರಕರ್ ಮತ್ತು ಇತ್ತೀಚಿನ ಆಲ್ಟೇಕರ್, ಡೆರೆಟ್ ಮುಂತಾದವರು ಸೇವುಣರು (ಯಾದವರು) ಮರಾಠಿಯವರೆಂದೇ ಹೇಳಿದರು. ಸ್ವಲ್ಪ ಸಂಕೋಚ ಪ್ರವೃತ್ತಿಯ ವರೆಂದು ಹೇಳಬಹುದಾದ ಕನ್ನಡನಾಡಿನ ಇತಿಹಾಸಕಾರರು, ಅದೇ ಸರಿಯೆಂದು ಕರ್ನಾಟಕ ಇತಿಹಾಸವನ್ನು ರಚಿಸುವಾಗಲೂ ಸೇವುಣರನ್ನು ಪೂರ್ಣವಾಗಿ ಕೈಬಿಡುತ್ತಿದ್ದರು. ಇಲ್ಲವೇ ಒಂದೆರಡು ಮಾತುಗಳಲ್ಲಿ ಇವರ ಇತಿಹಾಸವನ್ನು ಮುಗಿಸಿದಂತೆ ಮಾಡುತ್ತಿದ್ದರು. ಇದಕ್ಕೆ ಇತ್ತೀಚಿನ ಉದಾಹರಣೆಯೆಂದರೆ, ಮೈಸೂರು ಸರ್ಕಾರದ ಆಶ್ರಯದಲ್ಲಿಯೇ ಪ್ರಕಟಿತವಾದ "ಕರ್ನಾಟಕ ಥ್ರೂ ದಿ ಏಜಸ್," (1968) ಎಂಬ ಬೃಹದ್ಗ್ರಂಥ. "ದೇವಗಿರಿಯ- ಈಗಿನ ಮಹಾರಾಷ್ಟ್ರ ದಲ್ಲಿರುವ ದೌಲತಾಬಾದ್-ಯಾದವರ ಇತಿಹಾಸವು ಪ್ರಾಯಶಃ ಕರ್ನಾಟಕದ ಇತಿಹಾಸದ ವ್ಯಾಪ್ತಿಗೆ ಹೊರಗಿನದು ಎಂದು ಪರಿಗಣಿಸಬಹುದು" ಎಂಬುದಾಗಿ ಯಾವದರ ಮೇಲಿನ ಇತಿಹಾಸವು ಪ್ರಾರಂಭವಾಗುತ್ತದೆ. ನಿಜಕ್ಕೂ ಇದು ಖೇದದ ಸಂಗತಿ. ಶಾತವಾಹನರು ಮತ್ತು ವಿಜಯನಗರದವರು ಅಂಧ್ರರು; ಚಾಳುಕ್ಯರು ಗುಜರಾತಿನವರು;ರಾಷ್ಟ್ರಕೂಟರು ಮತ್ತು ಸೇವುಣರು ಮಹಾರಾಷ್ಟ್ರದವರು; ಹೊಯ್ಸಳರು ತಮಿಳುನಾಡಿನ ವೆಲ್ಲಾಳರು; ಕಲಚೂರಿಗಳು ಉತ್ತರ ಭಾರತದವರು! ಹಾಗಾದರೆ ಕರ್ನಾಟಕದವರಾರು? ಈ ರೀತಿಯ ಪ್ರವೃತ್ತಿಗಳಿಂದ ಕರ್ನಾಟಕ ಇತಿಹಾಸ ರಚನೆ ಇನ್ನೂ ಹಿಂದೆ ಬಿದ್ದಿದೆ.

ನಾನು ಆಂಧ್ರ ವಿಶ್ವವಿದ್ಯಾನಿಲಯದಲ್ಲಿ ಪ್ರಾಚೀನಚರಿತ್ರೆಯ ಅಧ್ಯಾಪಕನಾಗಿ ದ್ದಾಗ, ಪ್ರಾಧ್ಯಾಪಕ ಓರುಗಂಟಿ ರಾಮಚಂದ್ರಯ್ಯನವರು ನನ್ನ ಗಮನವನ್ನು ಸೇವುಣರ ಕಡೆಗೆ ಸೆಳೆದರು. ಅವರ ಮಾರ್ಗದರ್ಶನದಲ್ಲಿ ನಾನು ಸೇವುಣರ ಮೇಲೆ ನಿಬಂಧವೊಂದನ್ನು ಬರೆದು ಡಾಕ್ಟೊರಲ್ ಪದವಿಗೋಸ್ಕರ ಆಂಧ್ರ ವಿಶ್ವವಿದ್ಯಾ ನಿಲಯಕ್ಕೆ ಒಪ್ಪಿಸಿದೆನು. ಆ ಇಂಗ್ಲಿಷ್ ನಿಬಂಧದ ಆಧಾರದ ಮೇಲೆ ಮುಖ್ಯ

ವಿಷಯಗಳನ್ನೊಳಗೊಂಡ ಈ ಪುಟ್ಟ ಪುಸ್ತಕವನ್ನು ರಚಿಸಿದ್ದೇನೆ. ಸೇವುಣರ ಸಮಗ್ರ ಇತಿಹಾಸವನ್ನು ವಿವೇಚಿಸುವ ಮೊದಲನೆಯ ಪುಸ್ತಕವಿದೆಂದು ನಮ್ರತೆಯಿಂದ ಹೇಳಬಯಸುತ್ತೇನೆ. ಸೇವುಣ ವಂಶದ ಉಗಮ, ಆಳಿದ ರಾಜರುಗಳ ರಾಜಕೀಯ ಸಾಧನೆಗಳು, ಆ ಕಾಲದ ಆಡಳಿತಪದ್ಧತಿ, ಸಾಮಾಜಿಕ, ಧಾರ್ಮಿಕ, ಸ್ಥಿತಿಗಳು, ವಿದ್ಯಾಭ್ಯಾಸ ಮತ್ತು ಸಾಹಿತ್ಯ - ಈ ಎಲ್ಲ ವಿಷಯಗಳನ್ನೂ ಚರ್ಚಿಸಿದ್ದೇನೆ. ಅನುಬಂಧಗಳಲ್ಲಿ ಸೇವುಣರ ಚರಿತ್ರೆಗೆ ನೇರವಾಗಿ ಸಂಬಂಧಿಸದ ಆದರೆ ಮುಖ್ಯವಾದ ಸಾಮಂತರಾಜರು, ಅಧಿಕಾರಿಗಳು, ಪ್ರಾಂತ್ಯಗಳು, ಶಾಸನಗಳ ಪಟ್ಟಿ ಮುಂತಾದ ವನ್ನು ಸೇರಿಸಿದ್ದೇನೆ.

ಸೇವುಣರು ಕನ್ನಡಿಗರು ಎಂಬ ವಿಷಯದಲ್ಲಿ ಓದುಗರಿಗೆ ಆಸಕ್ತಿಯುಂಟಾದರೆ ನನ್ನ ಈ ಶ್ರಮ ಸಾರ್ಥಕವೆಂದು ಭಾವಿಸುತ್ತೇನೆ.

ಈ ಗ್ರಂಥರಚನೆಯಲ್ಲಿ ಅನೇಕ ಮಹನೀಯರಿಂದ ಸಹಾಯವನ್ನು ಪಡೆದಿದ್ದೇನೆ. ಆಂಧ್ರ ವಿಶ್ವವಿದ್ಯಾನಿಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗದ ಡಾ. ಓರುಗಂಟಿ ರಾಮಚಂದ್ರಯ್ಯನವರ ಮಾರ್ಗದರ್ಶನದಲ್ಲಿ ನಾನು ಈ ಸಂಶೋಧನೆಯನ್ನು ನಡೆಸಿದೆನು. ನನ್ನ ಗುರುಗಳಾದ ಪ್ರೊ. ಕೆ.ಎ. ನೀಲಕಂಠಶಾಸ್ತ್ರಿಗಳು ಮತ್ತು ಪ್ರೊ. ಎಂ. ಶೇಷಾದ್ರಿಯವರು ಇಂಗ್ಲಿಷ್ ನಿಬಂಧರಚನೆಯಲ್ಲಿ ಅನೇಕ ಸಲಹೆಗಳನ್ನು ಕೊಟ್ಟರು. ಡಾ. ಜಿ. ಎಸ್. ಗಾಯಿಯವರು, ಈ ನಿಬಂಧಕ್ಕೆ ಮುಖ್ಯ ಸಾಧನವಾದ ಶಾಸನಗಳ ಪ್ರತಿಗಳನ್ನು ಒದಗಿಸಿಕೊಟ್ಟು, ಉಪಕಾರ ಮಾಡಿದ್ದಾರೆ. ಈ ಎಲ್ಲ ಮಹನೀಯರಿಗೂ ನಾನು ಕೃತಜ್ಞನಾಗಿದ್ದೇನೆ. ಆಂಧ್ರ ವಿಶ್ವವಿದ್ಯಾನಿಲಯದ ಅಧಿಕಾರಿಗಳು ಈ ನಿಬಂಧವನ್ನು ಪ್ರಕಟಿಸಲು ಅನುಮತಿ ಕೊಟ್ಟಿದ್ದಾರೆ. ಅದಕ್ಕಾಗಿ ಅವರಿಗೆ ನನ್ನ ಕೃತಜ್ಞತೆಗಳು.

'ಸೇವುಣರು ಕನ್ನಡಿಗರು' (ಪ್ರಬುದ್ಧ ಕರ್ನಾಟಕ ಸಂ. 48, ಸಂ. 1. ಪು. 61-67) ಎಂಬ ಲೇಖನವನ್ನು ನೋಡಿ, ಪ್ರೋತ್ಸಾಹಿಸಿ, ಸೇವುಣರ ಚರಿತ್ರೆಯನ್ನು ಕನ್ನಡದಲ್ಲಿ ಬರೆಯಲು ಸೂಚಿಸಿದವರು ನಮ್ಮ ಕುಲಪತಿಗಳಾದ ಪ್ರೊ. ದೇ. ಜವರೇಗೌಡ ಅವರು. ಅವರು ತಮ್ಮ ಅನೇಕ ಭಾಷಣಗಳಲ್ಲಿ ಸೇವುಣರು ಕನ್ನಡಿಗರೆಂಬ ವಾದವನ್ನು ಎತ್ತಿ ಹಿಡಿದು ನನ್ನ ಉತ್ಸಾಹವನ್ನು ನೂರ್ಮಡಿಯಾಗಿಸಿದ್ದಾರೆ. ಅವರಿಗೆ ನಾನು ವಿಶೇಷವಾಗಿ ಕೃತಜ್ಞನಾಗಿದ್ದೇನೆ.

ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರೂ ಮಾನಸಗಂಗೋತ್ರಿಯ ಕನ್ನಡ ವಿಭಾಗದ ಮುಖ್ಯಸ್ಥರೂ ಆದ ಡಾ. ಹಾ. ಮಾ. ನಾಯಕರು ಬಹು ವಿಶ್ವಾಸದಿಂದ ಈ ಪುಸ್ತಕವನ್ನು ಅಧ್ಯಯನ ಸಂಸ್ಥೆಯ ಪ್ರಕಟನ ಮಾಲೆಯಲ್ಲಿ ಸೇರಿಸಿಕೊಂಡು ಮಹದುಪಕಾರ ಮಾಡಿದ್ದಾರೆ. ಅವರ ವಿಶ್ವಾಸವನ್ನು ಕೃತಜ್ಞತೆಯಿಂದ ನೆನೆಯುತ್ತೇನೆ. ವಿಭಾಗ ಸಂಪಾದಕರಾದ ಡಾ. ಬಿ. ಷೇಕ್ ಆಲಿಯವರು ವಿಚಾರ ಪೂರಿತ ಮುನ್ನುಡಿಯನ್ನು ಬರೆದು ಉಪಕಾರ ಮಾಡಿದ್ದಾರೆ. ಅದಕ್ಕಾಗಿ ಅವರಿಗೆ

ಕೃತಜ್ಞನಾಗಿದ್ದೇನೆ. ಮುದ್ರಣಕಾರ್ಯದಲ್ಲಿ ಮಿತ್ರರಾದ ಶ್ರೀ ಪ್ರಧಾನ್ ಗುರುದತ್ತ, ಶ್ರೀ ಶಾರದ ಪ್ರಸಾದ್ ಮತ್ತು ಶ್ರೀ ಎಚ್.ಎಂ. ನಾಗರಾಜರಾವ್ ನೆರವಾಗಿದ್ದಾರೆ. ನಕ್ಷೆಗಳನ್ನು ವಿದ್ಯಾರ್ಥಿಮಿತ್ರ ಶ್ರೀ ಎಚ್.ಆರ್. ರಘುನಾಥ ಭಟ್ಟರು ಬರೆದು ಕೊಟ್ಟಿದ್ದಾರೆ. ತಾಂಡವಮೂರ್ತಿ ಅಚ್ಚುಕೂಟದವರು ಮುದ್ರಣ ಭಾರವನ್ನು ವಹಿಸಿಕೊಂಡಿದ್ದಾರೆ. ಇವರೆಲ್ಲರ ಉಪಕಾರವನ್ನು ನೆನೆಯುತ್ತೇನೆ.

ಪ್ರಾಚೀನ ಇತಿಹಾಸ ಮತ್ತು ಪುರಾತತ್ವವಿಭಾಗ
ಮಾನಸಗಂಗೋತ್ರಿ — ಎ.ವಿ. ನರಸಿಂಹಮೂರ್ತಿ
೨೭-೩-೧೯೭೧

# ವಿಷಯಾನುಕ್ರಮಣಿಕೆ

ಅಧ್ಯಾಯ ೧

# ಪೀಠಿಕೆ ಮತ್ತು ಚರಿತ್ರೆಯ ಸಾಧನಗಳು

ಬಾದಾಮಿ ಚಾಳುಕ್ಯ ಚಕ್ರವರ್ತಿ ಇಮ್ಮಡಿ ಪುಲಕೇಶಿಯ ಮರಣಾನಂತರ ದಕ್ಷಿಣಾ ಪಥದಲ್ಲಿ ಒಂದು ವಿಲಕ್ಷಣ ರಾಜಕೀಯ ಪರಿಸ್ಥಿತಿಯುಂಟಾಯಿತು. ಅನಂತರ ರಾಷ್ಟ್ರಕೂಟರು ಪ್ರಬಲರಾಗಿ ದಕ್ಷಿಣಾಪಥವನ್ನು ಒಂದುಗೂಡಿಸಿ ಆಳಿ ಕೀರ್ತಿಗಳಿಸಿದರು. ಈ ರಾಷ್ಟ್ರಕೂಟರ ಆಶ್ರಯದಲ್ಲಿ ಅನೇಕ ಸಾಮಂತ ಮನೆತನಗಳು ತಲೆಯೆತ್ತಿದವು. ಅವುಗಳಲ್ಲಿ ಮುಖ್ಯರಾದವರು ಕಲ್ಯಾಣದ ಚಾಳುಕ್ಯರು ಮತ್ತು ದೇವಗಿರಿಯ ಸೇವುಣರು. ರಾಷ್ಟ್ರಕೂಟ ಮೂರನೆಯ ಕೃಷ್ಣನು ಅಂತಹ ಶಕ್ತನಾಗಿರಲಿಲ್ಲ. ಇದನ್ನು ತಿಳಿದ ಕಲ್ಯಾಣದ ಚಾಳುಕ್ಯರು ಸ್ವತಂತ್ರರಾಗುವ ಪ್ರಯತ್ನಗಳನ್ನು ನಡೆಸಿ, ಸಫಲರಾದರು. ಸೇವುಣರು ಸ್ವತಂತ್ರರಾಗುವಷ್ಟು ಶಕ್ತಿವಂತರಲ್ಲದೇ ಇದ್ದುದರಿಂದ, ಕಲ್ಯಾಣದ ಚಾಳುಕ್ಯರ ಸಾಮಂತರಾದರು. ಚಾಳುಕ್ಯರನ್ನು ಸೋಲಿಸಿ ಕಳಚೂರಿಯ ಬಿಜ್ಜಳನು ಕಳಚೂರ್ಯರ ಮನೆತನವನ್ನು ಬಲಪಡಿಸಿದನು. ಆದರೆ ಇದು ಬಹಳ ಕಾಲ ಉಳಿಯಲಿಲ್ಲ.

ಚಾಳುಕ್ಯರ ಸಾಮಂತರಾಗಿದ್ದ ಸೇವುಣರು ಮತ್ತು ಹೊಯ್ಸಳರು ಈ ಸಮಯಕ್ಕೆ ಬಲಯುತರಾಗಿದ್ದರು. ಚಾಳುಕ್ಯರಿಗೂ ಕಳಚೂರ್ಯರಿಗೂ ಯುದ್ಧ ನಡೆಯುತ್ತಿದ್ದಾಗ, ಈ ಸಾಮಂತರು ಸ್ವತಂತ್ರರಾಗಲು ಹವಣಿಸುತ್ತಿದ್ದರು. ಸುಮಾರು ಕ್ರಿ.ಶ. 1180ರ ಹೊತ್ತಿಗೆ ಸೇವುಣ ಐದನೆಯ ಭಿಲ್ಲಮನು ಚಾಳುಕ್ಯರ ಆಶ್ರಯದಿಂದ ಸ್ವತಂತ್ರನಾಗಿ ರಾಜ್ಯವನ್ನು ಕಟ್ಟಿದನು. ಪೂರ್ವ ಭಾಗದಲ್ಲಿ ಕಾಕತೀಯರು ಹನುಮಕೊಂಡ ಪ್ರದೇಶದಲ್ಲಿ ತಮ್ಮ ರಾಜ್ಯವನ್ನು ಸ್ಥಾಪಿಸಿದ್ದರು. ಇದೇ ಸಮಯದಲ್ಲಿ ಪಾಂಡ್ಯರು ದಕ್ಷಿಣದಲ್ಲಿ ತಮ್ಮ ರಾಜ್ಯವನ್ನು ಕಟ್ಟಿದರು. ಹೊಯ್ಸಳರು ಕರ್ಣಾಟಕದ ಬಹುಭಾಗವನಮ್ಮು ಆಕ್ರಮಿಸಿಕೊಂಡು ಪ್ರಭಾವಶಾಲಿಗಳಾಗಿದ್ದರು. ಉತ್ತರ ಭಾಗದಲ್ಲಿ ಪರಮಾರರು ಮತ್ತು ಗುಜರಾತಿನಲ್ಲಿ ಚೌಳುಕ್ಯರು ಈ ಸಮಯಕ್ಕಾಗಲೇ ಪ್ರತಿಭಾವಂತ ರಾಜಮನೆತನಗಳಾಗಿದ್ದರು. ಈ ಎಲ್ಲ ರಾಜಮನೆತನಗಳೂ ದಕ್ಷಿಣಾಪಥದಲ್ಲಿ ತಮ್ಮ ತಮ್ಮ ಮೇಲ್ಮೆಗೋಸ್ಕರ ಪರಸ್ಪರ ಯುದ್ಧಗಳನ್ನು ಮಾಡುತ್ತಿದ್ದು ಮುಸ್ಲಿಮರಿಂದ ಹದಿನಾಲ್ಕನೆಯ ಶತಮಾನದ ಮೊದಲ ಭಾಗದಲ್ಲಿ ಸಂಪೂರ್ಣವಾಗಿ ನಾಶವಾದವು.

ಈ ವಿವಿಧ ರಾಜಮನೆತಗಳ ರಾಜಕೀಯ ಚರಿತ್ರೆಯನ್ನು ಸ್ಪಷ್ಟವಾಗಿ ನಿರೂಪಿಸುವುದು ಜಟಿಲವಾದ ಕೆಲಸವೇ ಸರಿ. ಆದರೆ ಇವುಗಳನ್ನು ತಿಳಿಯಲು ಆಗಿನ ಕಾಲದ ಶಾಸನಗಳು ಬಹು ಸಹಾಯಕವಾಗಿವೆ. ಶಾಸನಗಳ ಜೊತೆಗೆ ಸಮಕಾಲೀನ ವಿವಿಧ ಭಾಷೆಗಳ ಸಾಹಿತ್ಯಗ್ರಂಥಗಳು ಉಪಯುಕ್ತ ವಿಷಯಗಳನ್ನು ಒದಗಿಸುತ್ತವೆ. ಸೇವುಣರ ಚರಿತ್ರೆಯನ್ನು ತಿಳಿಯಲು ಶಾಸನಗಳೇ ಮುಖ್ಯ ಆಧಾರ. ಇದುವರೆಗೂ ಈ ರಾಜಮನೆತನದ ಐನೂರಕ್ಕೂ ಹೆಚ್ಚು ತಾಮ್ರ ಮತ್ತು ಶಿಲಾಶಾಸನಗಳು ದೊರಕಿವೆ. ಇವುಗಳಲ್ಲಿ ಅಹಮದ್‌ನಗರ ಜಿಲ್ಲೆಯಲ್ಲಿ ಸಂಗಮ್‌ನೇರ್ ಎಂಬಲ್ಲಿ ದೊರಕಿರುವ ಎರಡನೆಯ ಭಿಲ್ಲಮ ರಾಜನ ಕ್ರಿ.ಶ. 1000ದ (ಶಕ ವರ್ಷ 922) ಶಾಸನವೇ ಪ್ರಾಚೀನತಮವಾದುದು.[1] ಸೇವುಣರ ಶಾಸನಗಳಲ್ಲಿ ಕನ್ನಡ ಭಾಷೆ ಮತ್ತು ಕನ್ನಡ ಲಿಪಿಯ ಶಾಸನಗಳೇ ವಿಶೇಷವಾಗಿವೆ. ಮಿಕ್ಕ ಕೆಲವು ಸಂಸ್ಕೃತ ಭಾಷೆ ಮತ್ತು ಕನ್ನಡ ಲಿಪಿಯಲ್ಲಿಯೂ, ಇನ್ನೂ ಕೆಲವು ಸಂಸ್ಕೃತ ಭಾಷೆ ಮತ್ತು ದೇವನಾಗರೀ ಲಿಪಿಯಲ್ಲಿಯೂ ಇವೆ. ಆದರೆ ಈ ರಾಜಮನೆತನದ ಕೊನೆಯ ಕಾಲಕ್ಕೆ ಸೇರಿದ ಕೆಲವು ಶಾಸನಗಳು ಮರಾಠೀ ಭಾಷೆಯಲ್ಲಿವೆ.

ಸಾಮಾನ್ಯವಾಗಿ ಶಾಸನಗಳು ಸಮಕಾಲೀನ ಪರಿಸ್ಥಿತಿಗಳನ್ನು ನಿರೂಪಿಸುವುದರಿಂದ, ಅವುಗಳು ಹೆಚ್ಚು ವಿಶ್ವಸನೀಯವಾದುವು. ಆದರೆ ಅನೇಕ ವೇಳೆ ಅವು ಕಾವ್ಯಾತ್ಮಕವಾದ ಪ್ರಶಸ್ತಿಗಳನ್ನು ಮಾತ್ರ ವರ್ಣಿಸಿ, ಇತರ ಚಾರಿತ್ರಿಕ ವಿಷಯಗಳನ್ನು ಹೇಳುವುದೇ ಇಲ್ಲ. ಉದಾಹರಣೆಗೆ, ಜೈತುಗಿಯ ಶಾಸನಗಳಲ್ಲಿ 'ತೆಲುಂಗರಾಯ ಶಿರಃಕಮಲ ಮೂಲೋತ್ಪಾಟನ' ಮತ್ತು 'ತೆಲುಂಗರಾಯ ಸ್ಥಾಪನಾಚಾರ್ಯ' ಎಂಬ ಬಿರುದುಗಳನ್ನು ಕಾಣುತ್ತೇವೆ. ಆದರೆ ಜೈತುಗಿಯು ಯಾವ ತೆಲುಂಗ ರಾಜನನ್ನು ಕೊಂದನು ಮತ್ತು ಯಾವ ತೆಲುಂಗ ರಾಜನನ್ನು ಸಿಂಹಾಸನದಲ್ಲಿ ಸ್ಥಾಪಿಸಿದನು ಎಂಬುದು ಇದರಿಂದ ಗೊತ್ತಾಗುವುದಿಲ್ಲ. ಹೀಗಾಗಿ ಶಾಸನಗಳಲ್ಲಿ ದೊರಕದೇ ಇರುವ ಮಾಹಿತಿಗಳನ್ನು ಇತರ ಕಡೆಗಳಿಂದ ಸಂಗ್ರಹಿಸಬೇಕಾಗುತ್ತದೆ. ಅಷ್ಟೇ ಅಲ್ಲದೆ, ಸಾಮಾನ್ಯವಾಗಿ ಈ ಬಿರುದುಗಳು ಆನುವಂಶಿಕವಾಗಿ ಎಲ್ಲ ರಾಜರುಗಳಿಗೂ ಅನ್ವಯವಾಗುತ್ತದೆ. ಮೇಲೆ ಹೇಳಿದ ಜೈತುಗಿಯ ಈ ಬಿರುದುಗಳು ಅವನ ಅನಂತರ ಬಂದ ಸಿಂಘಣ, ಕೃಷ್ಣ, ಮಹಾದೇವ, ರಾಮಚಂದ್ರ ಮುಂತಾದ ಎಲ್ಲ ರಾಜರುಗಳ ಶಾಸನಗಳಲ್ಲಿಯೂ ಕಾಣಬರುತ್ತವೆ. ಅದೇ ರೀತಿಯಲ್ಲಿ ಅವರು ಮಾಳ್ವ, ಘೂರ್ಜರ, ಹೊಯ್ಸಳ ಮುಂತಾದ ರಾಜರ ಮೇಲೆ ಸಂಪಾದಿಸಿದ ವಿಜಯಗಳೂ ಎಲ್ಲ ಸೇವುಣ ರಾಜರಿಗೂ ಅನ್ವಯವಾಗುವಂತೆ ಶಾಸನಗಳು ತಿಳಿಸುತ್ತವೆ. ಆದುದರಿಂದ ಶಾಸನಗಳು ತಿಳಿಸುವ ವಿಜಯಗಳು ನಿಜವಾದುವುಗಳೇ, ಇಲ್ಲವೇ ಕೇವಲ ಪ್ರಶಸ್ತಿಯ ಭಾಗಗಳೇ ಎಂದು ತಿಳಿಯುವುದು ಕಷ್ಟವಾಗುತ್ತದೆ.

ಶಾಸನಗಳಿಂದ ಕಾಲನಿರ್ಣಯ ಮಾಡುವುದು ಒಂದು ಸಮಸ್ಯೆಯೇ ಸರಿ.

ಸೇವುಣರ ಶಾಸನಗಳಲ್ಲಿ ಶಕ ವರ್ಷ, ಪ್ರಭವಾದಿ ಸಂವತ್ಸರ ಮತ್ತು ರಾಜನ ಆಳ್ವಿಕೆಯ ವರ್ಷಗಳು, ಇತರ ವಿವರಗಳೊಂದಿಗೆ, ದೊರಕುತ್ತವೆ. ಆದರೆ ವಿಶೇಷವಾಗಿ ಇವುಗಳಲ್ಲಿ ಒಂದಲ್ಲ ಒಂದು ನ್ಯೂನತೆ ಇರುತ್ತದೆ. ಅದರಲ್ಲಿಯೂ ರಾಜನ ಆಳ್ವಿಕೆಯ ವರ್ಷಗಳು ಶಾಸನಗಳಲ್ಲಿ ನಿರೂಪಿತವಾಗಿರುವಂತೆ ಬಹುವಾಗಿ ತಪ್ಪಾಗಿವೆ. ಆದುದರಿಂದ ಶಕ ವರ್ಷ ಇಲ್ಲವೇ ಪ್ರಭವಾದಿ ಸಂವತ್ಸರಗಳನ್ನೊಳಗೊಂಡ ಮಾಹಿತಿಯನ್ನು ಅವಲಂಬಿಸುವುದು ಕ್ಷೇಮಕರ.

ಐನೂರಕ್ಕೂ ಹೆಚ್ಚು ಸೇವುಣರ ಶಾಸನಗಳು ದೊರಕಿದ್ದಾಗ್ಯೂ, ಈ ರಾಜಮನೆತನದ ಎಲ್ಲ ರಾಜರ ಶಾಸನಗಳೂ ದೊರಕಿಲ್ಲ. ಅದರಲ್ಲಿಯೂ ಐದನೆಯ ಭಿಲ್ಲಮನ ಪೂರ್ವಜರ ಚರಿತ್ರೆಯನ್ನು ತಿಳಿಯಲು ಹತ್ತು-ಹನ್ನೆರಡು ಶಾಸನಗಳು ಮಾತ್ರ ದೊರಕಿವೆ. ಅಂದರೆ ಸುಮಾರು ಮುನ್ನೂರು ವರ್ಷಗಳ ಕಾಲ ಆಳಿದ ಈ ರಾಜರ ಚರಿತ್ರೆಗೆ ಕೇವಲ ಹತ್ತು -ಹನ್ನೆರಡು ಶಾಸನಗಳೆಂದರೆ, ಈ ರಾಜರ ಚರಿತ್ರೆಯನ್ನು ರೂಪಿಸುವುದು ಎಷ್ಟು ಕಷ್ಟ ಎಂದು ವ್ಯಕ್ತವಾಗುತ್ತದೆ. ಐದನೆಯ ಭಿಲ್ಲಮನ ಅನಂತರ ಆಳಿದ ಆರು ರಾಜರುಗಳಿಗೆ ಸುಮಾರು ಐನೂರು ಶಾಸನಗಳಿವೆ. ಆದರೆ ಇಲ್ಲಿ ಶಾಸನಗಳ ಮಾಹಿತಿಯಲ್ಲಿ ಅನೇಕಾನೇಕ ನ್ಯೂನತೆಗಳಿವೆ. ಹೀಗಾಗಿ ಶಾಸನಗಳು ತೀರಾ ಕಮ್ಮಿಯಿದ್ದರೆ ಒಂದು ವಿಧವಾದ ಕಷ್ಟವಾದರೆ, ಅವು ಹೆಚ್ಚಿಗೆ ಇದ್ದರೆ ಚರಿತ್ರಕಾರನಿಗೆ ಮತ್ತೊಂದು ವಿಧವಾದ ತೊಂದರೆಯನ್ನುಂಟು ಮಾಡುತ್ತವೆ.

ಸೇವುಣರ ಶಾಸನಗಳಲ್ಲಿ ಅನೇಕವು ಸಾಮಂತರಿಂದ, ಮಂತ್ರಿಗಳಿಂದ ಮತ್ತು ಇತರ ಹಿರಿಯ ಅಧಿಕಾರಿಗಳಿಂದ ಬರೆಯಲ್ಪಟ್ಟವು. ಇಂತಹ ಶಾಸನಗಳನ್ನು ಬಹಳ ಜಾಗರೂಕತೆಯಿಂದ ಪರೀಕ್ಷಿಸಬೇಕಾಗುತ್ತದೆ. ಸಾಮಂತರಾಜರು ತಮ್ಮ ಒಳಿತಿಗಾಗಿ ಒಬ್ಬ ರಾಜನ ಪಕ್ಷವನ್ನು ತ್ಯಜಿಸಿ ಮತ್ತೊಬ್ಬ ರಾಜನ ಆಶ್ರಯ ಪಡೆಯುವುದು ಬಹು ಸಾಮಾನ್ಯವಾಗಿದ್ದಿತು. ಅಷ್ಟೇ ಅಲ್ಲದೆ ಅವರು ಯಾವಾಗಲೂ ಸ್ವತಂತ್ರರಾಗಲು ಹವಣಿಸುತ್ತಿದ್ದರು. ಅಂತಹ ಸಮಯದಲ್ಲಿ ಸೇವು ಣ ರಾಜರ ಹೆಸರನ್ನು ಹೇಳದೆ ಸಾಮಂತರು ಶಾಸನಗಳನ್ನು ತಮ್ಮ ಹೆಸರಿನಲ್ಲಿಯೇ ಬರೆಸುತ್ತಿದ್ದರು. ಹೀಗಾಗಿ ಅನೇಕ ಸಮಸ್ಯೆಗಳು ತಲೆದೋರುತ್ತವೆ. ಶಾಸನಗಳಲ್ಲಿ ಈ ರೀತಿಯ ಅನೇಕ ನ್ಯೂನತೆಗಳಿದ್ದರೂ ಸೇವುಣರ ಚರಿತ್ರೆಯನ್ನು ತಿಳಿಯಲು ಅವು ಬಹುಮುಖ್ಯ ಸಾಧನಗಳಾಗಿವೆ.

ಸೇವುಣರ ನಾಣ್ಯಗಳು ಅವರ ಚರಿತ್ರೆಯನ್ನು ತಿಳಿಯಲು ಅಷ್ಟೇನೂ ಸಹಾಯಕವಾಗಿಲ್ಲ. ಕ್ಷತ್ರಪರ ನಾಣ್ಯಗಳಂತೆ ಅವು ಕಾಲನಿರ್ಣಯಕ್ಕೆ ಸಹಾಯಕವಾಗಿಲ್ಲ, ಇಲ್ಲವೇ ಅವುಗಳ ಮೇಲೆ ರಾಜರುಗಳ ಚಿತ್ರವೂ ಇಲ್ಲ. ಇದುವರೆಗೂ ಸೇವುಣದೇವ, ಐದನೆಯ ಭಿಲ್ಲಮ, ಸಿಂಘಣ, ಕೃಷ್ಣ, ಅಮಣ, ಮಹಾದೇವ ಮತ್ತು ರಾಮಚಂದ್ರ, ಈ ರಾಜರ ನಾಣ್ಯಗಳು ಮಾತ್ರ ಬೆಳಕಿಗೆ ಬಂದಿವೆ. ಈ

ನಾಣ್ಯಗಳು 58 ಗ್ರೇನ್ಸ್ ತೂಕವಾಗಿದ್ದು, ಮಧ್ಯದಲ್ಲಿ ಅಷ್ಟದಳ ಪದ್ಮ, ಇತರ ನಾಲ್ಕು ಕಡೆಗಳಲ್ಲಿ ಶಂಖ, ಖಡ್ಗ, ಭರ್ಜಿಯ ಚಿತ್ರಗಳಿವೆ. ನಾಣ್ಯದ ಮೇಲ್ಭಾಗದಲ್ಲಿ ಕನ್ನಡ ಅಥವಾ ದೇವನಾಗರೀ ಲಿಪಿಯಲ್ಲಿ ರಾಜನ ಹೆಸರು ಇರುತ್ತದೆ. ಈ ನಾಣ್ಯಗಳ ಹಿಂಭಾಗದಲ್ಲಿ ಏನೂ ಇರುವುದಿಲ್ಲ. ಸೇವುಣರ ನಾಣ್ಯಗಳು[2] ಆಂಧ್ರ ಪ್ರದೇಶದ ಕೃಷ್ಣಾ ಜಿಲ್ಲೆಯ ರಾಚಪಟ್ಟಣಂ, ಮಹಾರಾಷ್ಟ್ರದ ಮಾಲ್ದುಂಗೆ, ಕಲಂಬ್ ಎಂಬಲ್ಲಿಯೂ, ರಾಯ ಘರ್‌ಗೆ ಸಮೀಪದ ಪರಿಸಿಧಿ ಮತ್ತು ಮಧ್ಯಪ್ರದೇಶದ ನಿಮಾರ್ ಜಿಲ್ಲೆಯಲ್ಲಿಯೂ, ಔರಂಗಾಬಾದಿಗೆ ಸಮೀಪದಲ್ಲಿರುವ ದೇವಲಜಹರಿ ಎಂಬಲ್ಲಿಯೂ ದೊರಕಿವೆ.

ಶಾಸನಗಳ ನ್ಯೂನತೆಯನ್ನು ಸಾಹಿತ್ಯಾತ್ಮಕ ಸಾಧನಗಳಿಂದ ಸರಿಪಡಿಸಿ ಕೊಳ್ಳಬಹುದೆಂದು ಆಶಿಸಬಹುದು. ಆದರೆ ಸಾಹಿತ್ಯಾತ್ಮಕ ಸಾಧನಗಳು ಅನೇಕ ನ್ಯೂನತೆಗಳನ್ನು ಹೊಂದಿವೆ. ಪಕ್ಷಪಾತ, ಅತಿಶಯೋಕ್ತಿ ಮತ್ತು ಪ್ರಾಂತಿಯತೆಗಳೇ ಮುಖ್ಯವಾದ ಈ ನ್ಯೂನತೆಗಳು. ಸಾಮಾನ್ಯವಾಗಿ ಸಾಹಿತ್ಯಾತ್ಮಕ ಸಾಧನಗಳು ಕಾಲನಿರ್ಣಯಕ್ಕೆ ಅನುಕೂಲಕರವಾಗಿಲ್ಲ. ಸೇವುಣರ ಕಾಲದ ಸಾಹಿತ್ಯ ಗ್ರಂಥಗಳು ಸಂಸ್ಕೃತ, ತೆಲುಗು, ಮರಾಠಿ ಮತ್ತು ಕನ್ನಡ ಭಾಷೆಗಳಲ್ಲಿ ರಚಿತವಾಗಿವೆ.

ಸೇವುಣರ ಕಾಲದ ಸಂಸ್ಕೃತ ಗ್ರಂಥಗಳಲ್ಲಿ ಅತ್ಯಂತ ಮುಖ್ಯವಾದುದು ಹೇಮಾದ್ರಿಯ 'ಚತುರ್ವರ್ಗ ಚಿಂತಾಮಣಿ.'[3] ಇದೊಂದು ಧಾರ್ಮಿಕ ವಿಷಯಗಳ ವಿಶ್ವಕೋಶ. ವೈದಿಕ ಮತಾಚರಣೆಗಳ ವಿಷಯದಲ್ಲಿ ಇದೊಂದು ಭಾರಿ ಬೃಹದ್ಗ್ರಂಥ. ಹೇಮಾದ್ರಿಯು ಸೇವುಣ ರಾಜರಾದ ಮಹಾದೇವ (ಕ್ರಿ.ಶ. 1261-1271) ಮತ್ತು ರಾಮಚಂದ್ರ (ಕ್ರಿ.ಶ. 1271-1312), ಇವರ ಆಶ್ರಯದಲ್ಲಿ ಕರಣಾಗ್ರಣಿಯಾಗಿದ್ದನು. ಚತುರ್ವರ್ಗ ಚಿಂತಾಮಣಿಯ ಆದಿಭಾಗದಲ್ಲಿ ಹೇಮಾದ್ರಿಯು ಸೇವುಣರ ರಾಜಪ್ರಶಸ್ತಿಯನ್ನು ರಚಿಸಿದ್ದಾನೆ. ಇದುವರೆವಿಗೂ ಉಪಲಬ್ಧವಾಗಿರುವ ಸೇವುಣರ ವಂಶವೃಕ್ಷಗಳಲ್ಲಿ, ಇದೇ ಬಹು ಸಮರ್ಪಕ ವಾದುದು. ಹೇಮಾದ್ರಿಯು ಈ ವಂಶದ ಉತ್ಪತ್ತಿಯನ್ನು ಯದುವಂಶದಿಂದ ಪ್ರಾರಂಭಿಸಿ ಮಹಾದೇವ ರಾಜನವರೆಗೆ ಇತರ ರಾಜರ ಚರಿತ್ರೆಯನ್ನು ತಿಳಿಸಿದ್ದಾನೆ. ಹೇಮಾದ್ರಿಯು, ಮಹಾದೇವ ಮತ್ತು ರಾಮಚಂದ್ರರ ಆಸ್ಥಾನದಲ್ಲಿದ್ದರೂ, ಅವನು ವರ್ಣಿಸಿರುವ ಹಿಂದಿನ ರಾಜರುಗಳ ಚರಿತ್ರೆಯು ಸಾಮಾನ್ಯವಾಗಿ ಸಮರ್ಪಕವಾಗಿದೆ. ಅಲ್ಲಲ್ಲಿ ಕಾವ್ಯಾತ್ಮಕ ಭಾಷೆಯನ್ನು ಬಳಸಿದರೂ, ಚರಿತ್ರೆಗೆ ಯಾವ ದೋಷವೂ ಆಗಿಲ್ಲವೆಂದು ಹೇಳಬಹುದು. ಆದರೆ ಹೇಮಾದ್ರಿಯ ರಾಜಪ್ರಶಸ್ತಿಯಲ್ಲಿ ಕಾಲ ನಿರ್ಣಯಕ್ಕೆ ಸಹಾಯಕವಾದ ಮಾಹಿತಿಗಳಿಲ್ಲ. ಅಪಭ್ರಂಶ ಭಾಷೆಯ ಮಹಾಕವಿಯಾದ ಸ್ವಯಂಭೂ ತನ್ನ ಕೃತಿಗಳಲ್ಲಿ ಸೇವುಣರಾಜ್ಯದ ಗಡಿಗಳನ್ನೂ ಮತ್ತು ಸೇವುಣರಾಜರ ಹೆಸರುಗಳನ್ನೂ ಹೇಳಿದ್ದಾನೆಂದು ಡಾ. ಹಂಪನಾ ಹೇಳಿರುತ್ತಾರೆ. (Rastrakutras - Revisit, ಪು.214)

ಜಲ್ಹಣನ 'ಸೂಕ್ತಿ ಮುಕ್ತಾವಳಿ'ಯು, ಸೇವುಣರ ಆಶ್ರಯದಲ್ಲಿ ಸೈನ್ಯಾಧಿಕಾರಿಗಳಾಗಿದ್ದ ಜಲ್ಹಣನ ವಂಶಸ್ಥರ ವಿಷಯವನ್ನು ತಿಳಿಸುತ್ತದೆ. ದಾದ ಮತ್ತು ಮಹೀಧರ ಎಂಬುವರು ಮಲ್ಲುಗಿಯ ಆಶ್ರಯದಲ್ಲಿದ್ದರು. ಮಹೀಧರನ ಸಹೋದರನಾದ ಜಲ್ಹನು ಐದನೆಯ ಭಿಲ್ಲಮನ ಸೈನ್ಯದಲ್ಲಿ ಸೇನಾಧಿಪತಿಯಾಗಿದ್ದನು. ಅನಂತರ ಜನಾರ್ಧನನು ಸಿಂಘಣನ ಸೇನಾಧಿಪತಿಯಾಗಿ ಕೆಲಸ ಮಾಡಿದನು. ಲಕ್ಷ್ಮೀದೇವ ಮತ್ತು ಅವನ ಮಗನಾದ ಜಲ್ಹಣ ಕೃಷ್ಣನ ಸಮಕಾಲೀನರಾಗಿದ್ದರು. ಜಲ್ಹಣನು ತನ್ನ ಕಾವ್ಯದ ಮೊದಲ ಭಾಗದಲ್ಲಿ ಸೇವುಣ ರಾಜರ ವಿಷಯಗಳನ್ನು ವರ್ಣಿಸಿದ್ದಾನೆ.[4]

ಶಾರ್ಙ್ಗದೇವನಿಂದ ರಚಿತವಾದ 'ಸಂಗೀತ ರತ್ನಾಕರ' ಗ್ರಂಥವು ಸಿಂಘಣನ ಕಾಲಕ್ಕೆ ಸೇರಿದ್ದರೂ ಅದರಲ್ಲಿ ಚರಿತ್ರೆಗೆ ಉಪಯುಕ್ತವಾದ ವಿಷಯಗಳೇನೂ ಕಾಣಬರುವುದಿಲ್ಲ.[5]

ಸೋಮೇಶ್ವರನಿಂದ ರಚಿತವಾದ 'ಕೀರ್ತಿಕೌಮುದೀ' ಎಂಬ ಗ್ರಂಥವು ಗುಜರಾತಿನ ವಾಘೇಲ ರಾಜರ ವಿಜಯಗಳನ್ನು ವರ್ಣಿಸುತ್ತದೆ.[6] ಸಿಂಘಣ ರಾಜನ ಗುಜರಾತ್ ದಂಡಯಾತ್ರೆಯ ವಿಷಯಗಳನ್ನು ತಿಳಿಸುವ ಗ್ರಂಥಗಳಲ್ಲಿ ಇದು ಮುಖ್ಯವಾದುದು. ಇದೇ ವಿಭಾಗಕ್ಕೆ ಸೇರಬಹುದಾದ ಇನ್ನೊಂದು ಗ್ರಂಥವೆಂದರೆ ಬಾಲಚಂದ್ರ ಕವಿಯ 'ವಸಂತ ವಿಲಾಸ'.[7] ಸಿಂಘಣನ ಸಮಕಾಲೀನನಾದ ಜಯಸಿಂಹ ಸೂರಿಯ 'ಹಮ್ಮೀರ ಮದಮರ್ದನ' ಎಂಬ ಐದಂಕದ ನಾಟಕವು ಸಿಂಘಣನು ಗುಜರಾತಿನ ಮೇಲೆ ನಡೆಸಿದ ದಾಳಿಗಳ ವಿಚಾರವನ್ನು ತಿಳಿಸುತ್ತದೆ.[8] 'ಲೇಖಪದ್ಧತಿ ಅಥವಾ ಲೇಖಪಂಚಶಿಕ' ಎಂಬ ಗ್ರಂಥವು ಸಿಂಘಣನಿಗೂ ಲವಣಪ್ರಸಾದನಿಗೂ ಆದ ಸಂಧಿಯ ವಿಚಾರವನ್ನು ತಿಳಿಸುತ್ತದೆ.[9] ವಿದ್ಯಾನಾಥನ 'ಪ್ರತಾಪರುದ್ರ ಯಶೋಭೂಷಣ' ಎಂಬ ಗ್ರಂಥವು ಕಾಕತೀಯರಿಗೂ ಸೇವುಣರಿಗೂ ನಡೆದ ಯುದ್ಧಗಳ ವಿಚಾರವನ್ನು ತಿಳಿಸುತ್ತದೆ.[10]

ತೆಲುಗು ಭಾಷೆಯ ಗ್ರಂಥಗಳಲ್ಲಿ 'ಪ್ರತಾಪ ಚರಿತ್ರಮು' ಮತ್ತು 'ಸಿದ್ಧೇಶ್ವರ ಚರಿತ್ರಮು' ಮುಖ್ಯವಾದವು. [11] 'ಪ್ರತಾಪ ಚರಿತ್ರಮು' ಗ್ರಂಥವನ್ನು ಕ್ರಿ.ಶ. ಹದಿನಾರನೆಯ ಶತಮಾನದಲ್ಲಿದ್ದ ಏಕಾಮ್ರನಾಥನು ರಚಿಸಿದನು. ಸಿದ್ಧೇಶ್ವರ ಚರಿತ್ರೆಯ ಕರ್ತೃ ಸರ್ವಪ್ಪ. ಇವನು ಕ್ರಿ.ಶ. ಹದಿನಾರನೆಯ ಶತಮಾನದ ಕೊನೆಯ ಭಾಗದಲ್ಲಿದ್ದವನು. ಈ ಎರಡು ಗ್ರಂಥಗಳೂ ಕಾಕತೀಯ ರಾಜರನ್ನು ಮತ್ತು ಅವರ ವಿಜಯಗಳನ್ನು ಹೊಗಳುವುದಕ್ಕಾಗಿಯೇ ರಚಿತವಾದವು. ಆದುದರಿಂದ ಸೇವುಣರಿಗೂ ಕಾಕತೀಯರಿಗೂ ಆದ ಯುದ್ಧಗಳನ್ನು ವರ್ಣಿಸುವಾಗ, ಕಾಕತೀಯರ ಪರವಾಗಿಯೂ, ಸೇವುಣರ ವಿರುದ್ಧವಾಗಿಯೂ, ಈ ಗ್ರಂಥಗಳು ವಿವರಣೆಗಳನ್ನು ನೀಡುತ್ತವೆ. ಅಷ್ಟೇ ಅಲ್ಲದೆ ಈ ಗ್ರಂಥಗಳು ಸಮಕಾಲೀನವಾದುವಲ್ಲ. ಕ್ರಿ.ಶ. ಹನ್ನೆರಡು-ಹದಿಮೂರನೆಯ ಶತಮಾನದ ಚಾರಿತ್ರಿಕ ವಿಷಯಗಳನ್ನು ಕ್ರಿ.ಶ.

ಹದಿನಾರನೆಯ ಶತಮಾನದಲ್ಲಿ ಕೂಡಿಹಾಕಲು ಪ್ರಯತ್ನಿಸಿವೆ. ಹೀಗಾಗಿ ಅನೇಕ ಅಸಂಬದ್ಧತೆಗಳೂ, ಅಸತ್ಯ ಸಂಗತಿಗಳೂ ಈ ಗ್ರಂಥಗಳಲ್ಲಿ ಸೇರಿವೆ.[12]

ತಿಕ್ಕನ ಸೋಮಯಾಜಿಯ 'ನಿರ್ವಚನೋತ್ತರ ರಾಮಾಯಣ' ಗ್ರಂಥದಲ್ಲಿ ಸೇವುಣರಿಗೂ ತೆಲುಗು ಚೋಳರಾಜರಿಗೂ ನಡೆದ ಯುದ್ಧಗಳ ವಿಚಾರವು ದೊರಕುತ್ತದೆ.[13] ಅದೇ ರೀತಿಯಲ್ಲಿ ಕೇತನನಿಂದ ರಚಿತವಾದ ತೆಲುಗು 'ದಶಕುಮಾರ ಚರಿತ್ರಮು' ಗ್ರಂಥದಲ್ಲಿಯೂ ಕೆಲವು ಚಾರಿತ್ರಿಕ ಸಂಗತಿಗಳು ಕಾಣ ಬರುತ್ತವೆ.[14] ಆದರೆ ಮುಖ್ಯವಾಗಿ ಇವು ಸಾಹಿತ್ಯ ಗ್ರಂಥಗಳೆಂಬುದನ್ನು ಗಮನದಲ್ಲಿಡಬೇಕು.

ಪ್ರಧಾನವಾಗಿ ಮರಾಠಿ ಭಾಷೆಯ ಗ್ರಂಥಗಳು ಮಹಾನುಭಾವ ಧಾರ್ಮಿಕ ಪಂಥಕ್ಕೆ ಸಂಬಂಧಿಸಿದ 'ಸತೀ ಗ್ರಂಥಗಳು'. ಮಹಾನುಭಾವ ಪಂಥವು ಸೇವುಣರ ಕಾಲದಲ್ಲಿ ಹೆಚ್ಚಾಗಿ ಅಭಿವೃದ್ಧಿ ಹೊಂದಿ, ಅನೇಕ ಮರಾಠಿ ಗ್ರಂಥಗಳು ರಚಿತ ವಾದವು. ಅವುಗಳು ಸೇವುಣರ ಕಾಲದ ಧಾರ್ಮಿಕ ಚರಿತ್ರೆಗೆ ವಿಶೇಷ ಅನುಕೂಲವಾದರೂ, ಅಲ್ಲಲ್ಲಿ ರಾಜಕೀಯ ಚರಿತ್ರೆಗೆ ಸಂಬಂಧಿಸಿದ ವಿಷಯಗಳಿವೆ. ಈ ಸತೀ ಗ್ರಂಥಗಳಲ್ಲಿ ಮುಖ್ಯವಾದವು ಮಾಯಿಮಭಟ್ಟನ 'ಲೀಲಾಚರಿತ'[15] ನರೇಂದ್ರನ 'ರುಕ್ಮಿಣೀ ಸ್ವಯಂವರ'[16] ಮುನಿವ್ಯಾಸ ಕುಮಾರಾಮ್ನಾಯನ 'ಸ್ಥಾನೋಪೋತಿ'[17] ದಾಮೋದರನ 'ವಚ್ಛಹರಣ'[18] ಮತ್ತು ಭಾಸ್ಕರಭಟ್ಟನ 'ಶಿಶುಪಾಲ ವಧ.'[19] ಜ್ಞಾನದೇವನಿಂದ ರಚಿತವಾದ 'ಜ್ಞಾನೇಶ್ವರಿ' ಗ್ರಂಥವು ಭಗವದ್ಗೀತೆಯ ಒಂದು ಮರಾಠಿ ವ್ಯಾಖ್ಯಾನ.[20] ಇದು ಆ ಕಾಲದ ಸಾಮಾಜಿಕ ಮತ್ತು ಮತೀಯ ವಿಷಯಗಳನ್ನು ತಿಳಿಯಲು ಬಲು ಉಪಯುಕ್ತ ಗ್ರಂಥ.

ಸೇವುಣರ ಕಾಲದಲ್ಲಿ ರಚಿತವಾದ ಕನ್ನಡ ಭಾಷೆಯ ಗ್ರಂಥಗಳು ಹೆಚ್ಚಾಗಿ ನಮಗೆ ಉಪಲಬ್ಧವಾಗಿಲ್ಲ. ಸಿಂಘಣನ ಆಶ್ರಯದಲ್ಲಿ ಕಮಲಭವನೆಂಬ ಕವಿಯಿಂದ ರಚಿತವಾದ 'ಶಾಂತೀಶ್ವರ ಪುರಾಣ'ವು ಕೆಲವು ವಿಷಯಗಳನ್ನು ತಿಳಿಸುತ್ತದೆ.[21] ಹೊಯ್ಸಳರ ಆಶ್ರಯದಲ್ಲಿದ್ದ ರಾಜಾದಿತ್ಯನ 'ವ್ಯವಹಾರ ಗಣಿತ' ಗ್ರಂಥದಲ್ಲಿ ಐದನೆಯ ಭಿಲ್ಲಮನಿಗೂ ಹೊಯ್ಸಳರಿಗೂ ಆದ ಯುದ್ಧಗಳ ವಿಚಾರದಲ್ಲಿ ಕೆಲವು ಮಾಹಿತಿಗಳು ದೊರಕುತ್ತವೆ.

ಸೇವುಣರ ಅವನತಿಯ ಕಾಲದ ವಿಷಯಗಳನ್ನು ತಿಳಿಯಲು ಮಹಮ್ಮದೀಯ ಚರಿತ್ರಕಾರರ ಬರವಣಿಗೆಗಳು ಬಲು ಉಪಯುಕ್ತವಾಗಿವೆ. ಆ ಕಾಲದ ಶಾಸನಗಳು ಬಹು ವಿರಳ. ಆದುದರಿಂದ ಮಹಮ್ಮದೀಯ ಚರಿತ್ರಕಾರರ ಬರವಣಿಗೆಗಳೇ ಈ ಕಾಲಕ್ಕೆ ಮುಖ್ಯ ಸಾಧನಗಳಾಗಿವೆ. ಈ ಬರವಣಿಗೆಗಳಲ್ಲಿಯೂ ಅನೇಕ ನ್ಯೂನತೆ ಗಳಿವೆ. ಈ ಚರಿತ್ರಕಾರರು ಸುಲ್ತಾನನೊಡನೆ ನಿಕಟ ಸಂಪರ್ಕಗಳನ್ನು ಹೊಂದಿದ್ದು ಸತ್ಯಾಸತ್ಯತೆಯನ್ನು ತಿಳಿಯಬಲ್ಲವರಾಗಿದ್ದರೂ ಕೂಡ, ಅವರು ಹಾಗೆ ಮಾಡದೆ ಸುಲ್ತಾನರನ್ನು ಹೊಗಳುವ ಮತ್ತು ಅವರಿಗೆ ಪ್ರಿಯವಾಗುವ ರೀತಿಯಲ್ಲಿ ತಮ್ಮ

ಬರವಣಿಗೆಯನ್ನು ರೂಪಿಸಿದ್ದಾರೆ. ಹೀಗಾಗಿ ಅನೇಕ ಸ್ಥಳಗಳಲ್ಲಿ ತಮಗೆ ಗೊತ್ತಿದ್ದೋ ಇಲ್ಲದೆಯೋ ಅವರು ಎಡವಿದ್ದಾರೆ. ಇದರಿಂದ ಅವರ ಬರವಣಿಗೆಯ ಚಾರಿತ್ರಿಕ ಮೌಲ್ಯ ಕಡಿಮೆಯಾಗಿದೆ.

ಅಮೀರ್ ಖುಸ್ರುವಿನ 'ಖಜಾನ್-ಉಲ್-ಫುತುಹ್'[22] ಎಂಬ ಅಲ್ಲಾವುದ್ದೀನನ ದಂಡಯಾತ್ರೆಯ ಅಧಿಕೃತ ಚರಿತ್ರೆಯೂ, ಮತ್ತು ಅದೇ ಲೇಖಕನ 'ದೇವಲ್ ರಾಣೀ-ವ-ಖಿಸ್ರ್‌ಖಾನ್' ಎಂಬ ಇನ್ನೊಂದು ಗ್ರಂಥವೂ ಬಹಳ ಉಪಯುಕ್ತವಾದುವು. ಅಮೀರ್ ಖುಸ್ರುವು ಅಲ್ಲಾವುದ್ದೀನನ ಜೊತೆಯಲ್ಲಿಯೇ ಇದ್ದು ದಕ್ಷಿಣಾಪಥದ ಎಲ್ಲಾ ಯುದ್ಧಗಳನ್ನು ಕಣ್ಣಾರೆ ಕಂಡರೂ, ಅವನೊಬ್ಬ ಕವಿಯಾದುದರಿಂದ, ಚರಿತ್ರೆಗೆ ಅವನು ಅಷ್ಟಾಗಿ ಗಮನಕೊಟ್ಟಿಲ್ಲ. ಆದುದರಿಂದ ಅವನ ಬರವಣಿಗೆಯು ಅನೇಕ ಕಡೆಗಳಲ್ಲಿ ವಿಶ್ವಸನೀಯವಲ್ಲ.

ಜಿಯಾ ಉದ್ದೀನ್ ಬರನೀ ಎಂಬ ಇನ್ನೊಬ್ಬ ಚರಿತ್ರಕಾರನು ಅಲ್ಲಾವುದ್ದೀನನ ದಂಡಯಾತ್ರೆಯ ವಿವರಗಳನ್ನು 'ತಾರಿಖ್-ಇ-ಫಿರೋಜ್ ಷಾಹೀ' ಎಂಬ ಗ್ರಂಥದಲ್ಲಿ ಬರೆದಿದ್ದಾನೆ.[23] ಬರನಿಯು ಸತ್ಯಾಸತ್ಯತೆಗಳನ್ನು ಚೆನ್ನಾಗಿ ಪರಾಮರ್ಶಿಸಿ ತನ್ನ ಗ್ರಂಥವು ಚರಿತ್ರೆಗೆ ಸಮೀಪವಾಗುವ ಹಾಗೆ ರಚಿಸಿದ್ದಾನೆ. ಆದರೆ ಇವನ ಗ್ರಂಥದಲ್ಲಿ ಕಾಲನಿರ್ಣಯಕ್ಕೆ ಬೇಕಾದ ಮಾಹಿತಿಗಳು ಕಡಿಮೆ ಮತ್ತು ಇವನ ಬರವಣಿಗೆಯಲ್ಲಿ ಒಂದು ವ್ಯವಸ್ಥಿತ ಕ್ರಮವಿಲ್ಲ.

ಇಸಾಮಿಯ 'ಫು ತುಹ್-ಉಸ್-ಸಲಾತೀನ್'[24] ಎಂಬ ಗ್ರಂಥವು ಕ್ರಿ.ಶ. 1358ರಲ್ಲಿ ರಚಿತವಾಯಿತು. ಇವನು ಸೇವುಣರ ಸಮಕಾಲೀನನಲ್ಲದಿದ್ದರೂ, ಆಗಿನ ಕಾಲದಲ್ಲಿ ಪ್ರಚಾರದಲ್ಲಿದ್ದ ಕತೆಗಳಿಂದ, ಪುಸ್ತಕಗಳಿಂದ ತನ್ನ ಗ್ರಂಥವನ್ನು ರಚಿಸಿದ್ದಾನೆ.

ಫಿರಿಷ್ಟ ಎಂಬ ಚರಿತ್ರಕಾರನು ತನ್ನ ಬರವಣಿಗೆಯನ್ನು ಕ್ರಿ.ಶ. 1606ರಲ್ಲಿ ಪೂರೈಸಿದನು.[25] ಇವನು ಸ್ನೇಹಿತರಿಂದ ಕೇಳಿದ ಕಥೆಗಳನ್ನೂ, ಕೆಲವು ಗ್ರಂಥಗಳನ್ನೂ ಆಧಾರವಾಗಿಟ್ಟುಕೊಂಡು ತನ್ನ ಗ್ರಂಥವನ್ನು ರಚಿಸಿದನು. ಆದರೆ ಇವನು ಮಹಮ್ಮದೀಯರ ಪಕ್ಷಪಾತಿಯಾಗಿದ್ದನು. ಆದುದರಿಂದ ಇವನ ಬರವಣಿಗೆಯಲ್ಲಿ ಅನೇಕ ನ್ಯೂನತೆಗಳಿದ್ದು ನಂಬಲು ಅರ್ಹವಾಗಿಲ್ಲ. ಇದೇ ರೀತಿ ವಸಾಫ್, ಇಬ್ನಬತೂತಮುಂತಾದವರ ಲೇಖನಗಳನ್ನು ಸೇರಿಸಬಹುದು.

ಈ ಮೇಲೆ ಹೆಸರಿಸಿದ ಎಲ್ಲ ಸಾಧನಗಳೂ ವೈವಿಧ್ಯಮಯವಾಗಿವೆ. ಅವುಗಳಲ್ಲಿ ಏಕಾಭಿಪ್ರಾಯ ದೊರಕುವುದು ಕಷ್ಟ. ಈ ಮುಂದಿನ ಪುಟಗಳಲ್ಲಿ ಈ ವೈವಿಧ್ಯಮಯ ಮತ್ತು ವಿರೋಧಾತ್ಮಕವಾದ ಸಾಧನಗಳಿಂದ ಸೇವುಣ ರಾಜರ ಚರಿತ್ರೆಯನ್ನು ವಿಶದವಾಗಿ ಚರ್ಚಿಸಲು ಪ್ರಯತ್ನಿಸಲಾಗಿದೆ.

## ಟಿಪ್ಪಣಿಗಳು

1. EI Vol. II P. 212
2. Journal of the Numismatic Society of India, Vol. XXIX Part ii, P. 47 ಮತ್ತು Vol. XXVIII.
3. ಇದು ಭಾರತಚಂದ್ರಶಿರೋಮಣಿಯವರಿಂದ ಸಂಪಾದಿಸಲ್ಪಟ್ಟು Bibliotheca India ಮಾಲೆಯಲ್ಲಿ ಪ್ರಕಟವಾಗಿದೆ.
4. Gaikwad Oriental Series, 1938 ಮತ್ತು collected works of Bhandarkar. Vol. II, P. 349.
5. Adyar Library Series, Madras.
6. ಎ.ವಿ. ಕತ್ವಾಟೆಯವರಿಂದ ಸಂಪಾದಿತ, ಬೊಂಬಾಯಿ, 1883
7. Gaikwad Oriental Series, VII
8. ಅದೇ, X
9. ಅದೇ, X
10. ಕೆ.ಪಿ. ತ್ರಿವೇದಿಯವರಿಂದ ಸಂಪಾದಿತ, ಬೊಂಬಾಯಿ 1909.
11. ಶೈವಪ್ರಚಾರಿಣೀ ಗ್ರಂಥಮಾಲ, ವಾರಂಗಲ್; ಮತ್ತು ಲಕ್ಷ್ಮೀರಂಜನಂರವರಿಂದ ಸಂಪಾದಿತ ಹೈದರಬಾದ್, 1960
12. Narasimha Murthy, A.V. All India Oriental Conference Papers, Aligarh
13. Madras, 1919
14. Pithapuram, 1928
15. Ed. H.N. Nene
16. Ed. V.B. Kolte
17. Mahanubhava Tatvajnan, Ed. V.B. Kolte
18. Ed. V.L. Bhave and D.S. Pangu
19. Ed. V.L. Bhave
20. Ed. S.V. Dandekar
21. ಕರ್ನಾಟಕ ಕವಿಚರಿತೆ ಆರ್. ನರಸಿಂಹಚಾರ್, Vol. I,P. 292
22. Translated by Habib, Journal of Indian History, Vols. VIII-IX.
23. Elliot
24. Agra Edition
25. Translation by Briggs.

* * *

ಅಧ್ಯಾಯ ೨

# ಸೇವುಣ ರಾಜವಂಶದ ಉಗಮ

ಕರ್ನಾಟಕದ ಸೇವುಣರು ವಿಶೇಷವಾಗಿ ದೇವಗಿರಿಯ ಯಾದವರು ಎಂದೇ ಭಾರತದ ಇತಿಹಾಸದಲ್ಲಿ ಪ್ರಸಿದ್ಧರಾಗಿದ್ದಾರೆ. ಮಹಮ್ಮದೀಯ ಚರಿತ್ರಕಾರರು ಅವರನ್ನು ಯಾದವರೆಂದು ಕರೆದರು. ಅದನ್ನೇ ಅನುಸರಿಸಿ ಫ್ಲೀಟ್‌ರವರು ತಮ್ಮ 'Dynasties of the Kanarese Districts of Bombay Presidency' ಎಂಬ ಗ್ರಂಥದಲ್ಲಿ ಸೇವುಣರನ್ನು ದೇವಗಿರಿಯ ಯಾದವರೆಂದೇ ವ್ಯವಹರಿಸಿದರು. ಅನಂತರ ಬಂದ ಚರಿತ್ರಕಾರರು ಇದನ್ನೇ ಅನುಸರಿಸುತ್ತಾ ಬಂದಿದ್ದಾರೆ.

ಆದರೆ ಸೇವುಣರ ಸಮಕಾಲೀನ ರಾಜವಂಶಗಳಾದ ಕಲ್ಯಾಣದ ಚಾಳುಕ್ಯರು, ಹೊಯ್ಸಳರು, ಕಾಕತೀಯರು ಮುಂತಾದವರ ಶಾಸನಗಳಲ್ಲಿ ದೇವಗಿರಿಯ ಯಾದವರು ಎಂಬ ಹೆಸರು ಕಾಣುವುದಿಲ್ಲ. ಹೇಮಾದ್ರಿಯ ರಾಜ ಪ್ರಶಸ್ತಿಯಲ್ಲಿ ಇವರನ್ನು ಸೇವುಣರೆಂದು ಕರೆಯಲಾಗಿದೆ. ಈ ರಾಜವಂಶದ ಎರಡನೆಯ ದೊರೆಯಾದ ಸೇವುಣ ಚಂದ್ರನಿಂದ ಈ ವಂಶಕ್ಕೆ ಸೇವುಣವಂಶವೆಂಬ ಹೆಸರು ಬಂದಿತು ಎಂದು ಹೇಮಾದ್ರಿಯು ಸ್ಪಷ್ಟಪಡಿಸಿದ್ದಾನೆ. ಸೇವುಣರ ಶಾಸನಗಳಲ್ಲಿ ಯಾದವ ನಾರಾಯಣ ಎನ್ನುವ ಬಿರುದಿನೊಂದಿಗೆ ಅವರು ಸೇವುಣ ಚಕ್ರವರ್ತಿ, ಸೇವುಣ ವಂಶದರಸು ಎಂಬ ಹೆಸರಿನಿಂದ ಕರೆಯಲ್ಪಟ್ಟಿದ್ದಾರೆ. ಹೊಯ್ಸಳರು, ಚಾಳುಕ್ಯರು, ಕಾಕತೀಯರು ಅವರನ್ನು ಸೇವುಣರೆಂದೇ ಕರೆದಿದ್ದಾರೆ. ಅಂದರೆ ಸಮಕಾಲೀನ ರಾಜರುಗಳಿಗೆ ಅವರು ಸೇವುಣರೆಂಬ ಹೆಸರಿನಿಂದ ಪ್ರಸಿದ್ಧರಾಗಿದ್ದರು. ಮಹಮ್ಮದೀಯ ಚರಿತ್ರಕಾರರಾದ ಅಮೀರ್ ಖುಸ್ರು, ಫಿರಿಷ್ಟ, ಬರನಿ ಮುಂತಾದವರು ಮಾತ್ರ ಅವರನ್ನು ಯಾದವರೆಂದು ಕರೆದರು.

ಹೊಯ್ಸಳವಂಶದವರೂ ಯಾದವರೇ ಆಗಿದ್ದರು. ಅವರಿಗೂ ಯಾದವ ನಾರಾಯಣ, ದ್ವಾರಾವತೀ ಪುರವರಾಧೀಶ್ವರ ಮುಂತಾದ ಬಿರುದುಗಳಿದ್ದುವು. ಆದರೆ ಅವರನ್ನು ನಾವು ದ್ವಾರಸಮುದ್ರದ ಯಾದವರು ಎಂದು ಕರೆಯುವುದಿಲ್ಲ. ಅವರ ಮನೆತನದ ಹೆಸರಾದ ಹೊಯ್ಸಳ ಎಂಬುದರಿಂದಲೇ ಅವರನ್ನು ವ್ಯವಹರಿಸುತ್ತೇವೆ. ಅದೇ ರೀತಿಯಲ್ಲಿ ದೇವಗಿರಿಯ ಯಾದವರು ಎಂಬುದಕ್ಕಿಂತ ಸೇವುಣರು ಎಂಬುದು ಸಮಂಜಸವೂ, ಸಮರ್ಪಕವೂ ಆಗಿದೆ. ಈ ಹೆಸರು ಶಾಸನಗಳಲ್ಲಿ

ಸೇಉಣ, ಸೇಗುಣ, ಸೇವುಣ, ಸೇಮುಣ, ಸೇಗುಣ್ಣ ಎಂಬ ವಿವಿಧ ರೂಪಗಳಲ್ಲಿ ಕಾಣಬರುತ್ತವೆ.

ಸೇವುಣರು ಯಾರು ಎಂಬ ವಿಚಾರವಾಗಿ ಸಾಕಷ್ಟು ಚರ್ಚೆಯೇ ನಡೆದಿಲ್ಲ. ಫ್ಲೀಟ್[1], ಭಂಡಾರಕರ್[2], ಮತ್ತು ಆಲ್ತೇಕರ್,[3] ಮುಂತಾದ ಪ್ರಸಿದ್ಧ ಚರಿತ್ರಕಾರರು ಸೇವುಣರು ಮರಾಠಿಯವರು ಎಂದು ಹೇಳಿ ಈ ವಿಷಯದಲ್ಲಿ ಸಂದೇಹವೇ ಇಲ್ಲವೆಂಬಂತೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದರು. ಆದುದರಿಂದ ಈಗ್ಗೆ ಸುಮಾರು ಮುಕ್ಕಾಲು ಶತಮಾನದಿಂದಲೂ ಈ ಅಭಿಪ್ರಾಯವೇ ಪ್ರಾಧಾನ್ಯವನ್ನು ಪಡೆದಿದೆ. ಆದರೆ ಇತ್ತೀಚೆಗೆ ದೊರಕಿರುವ ಶಾಸನಗಳಿಂದ ಸೇವುಣರು ಕನ್ನಡಿಗರೆಂದು ಹೇಳಬಹುದಾಗಿದೆ. ಈ ವಿಚಾರವನ್ನು ಚರ್ಚಿಸಲು ಉಪಯುಕ್ತವಾದ ಆಧಾರಗಳು ಬಹುಕಡಿಮೆ. ಹೇಮಾದ್ರಿಯ 'ಚತುರ್ವರ್ಗ ಚಿಂತಾಮಣಿ' ಯ ಭಾಗವಾದ ವ್ರತಖಂಡದ ಆದಿಯಲ್ಲಿರುವ ರಾಜಪ್ರಶಸ್ತಿಯನ್ನು[4] ಬಿಟ್ಟರೆ ಉಳಿದವು ಆಗಿನ ಕಾಲದ ಶಾಸನಗಳು ಮಾತ್ರ.

ಹೇಮಾದ್ರಿಯ ರಾಜಪ್ರಶಸ್ತಿಯಿಂದ ಸೇವುಣರು ಮೊಟ್ಟ ಮೊದಲು ಮಧುರೆಯಲ್ಲಿದ್ದರೆಂದೂ, ಅನಂತರ ಶ್ರೀಕೃಷ್ಣನ ಕಾಲದಲ್ಲಿ ದ್ವಾರಾವತೀ ಪಟ್ಟಣಕ್ಕೆ ಬಂದರೆಂದೂ ತಿಳಿಯುತ್ತದೆ. ಅದಾದ ಅನಂತರ ಸುಬಾಹುವಿನ ಮಗನಾದ ದೃಢಪ್ರಹಾರನು ದಕ್ಷಿಣ ದೇಶಕ್ಕೆ ಬಂದು ಶ್ರೀನಗರವನ್ನು ತನ್ನ ರಾಜಧಾನಿಯನ್ನಾಗಿ ಮಾಡಿದನೆಂದು ವಿದಿತವಾಗುತ್ತದೆ. ಇವನ ಮಗನಾದ ಸೇವುಣಚಂದ್ರನು ಅತಿ ಪ್ರಸಿದ್ಧನಾದುದರಿಂದ ಈ ಪ್ರದೇಶಕ್ಕೆ ' ಸೇವುಣದೇಶ' ಎಂದು ಹೆಸರು ಬಂದಿತು.[5]

ಸಂಗಮ್‌ನೇರ್ (ಕ್ರಿ.ಶ. 1000),[6] ಕಲಾಸ್ ಬದ್ರುಕ್ (ಕ್ರಿ.ಶ. 1025),[7] ಬಸೇನ್ (ಕ್ರಿ.ಶ. 1068),[8] ಅಶ್ವಿ (ಕ್ರಿ.ಶ. 1098),[9] ಮೇಥಿ (ಕ್ರಿ.ಶ. 1254),[10] ಮುಂತಾದ ಶಾಸನಗಳಿಂದಲೂ ಇವರು ದ್ವಾರಾವತಿಯಿಂದ ಬಂದವರೆಂದು ತಿಳಿಯಬರುತ್ತದೆ. ಆದರೆ ಪ್ರಾಚೀನ ಭಾರತದಲ್ಲಿ 'ಯಾದವವಂಶ ಕುಲೋದ್ಭವ' 'ದ್ವಾರಾವತೀ ಪುರವರಾಧೀಶ್ವರ' ಮುಂತಾದ ಬಿರುದುಗಳು ಸಾಮಾನ್ಯವಾಗಿ ಅನೇಕ ರಾಜವಂಶದವರಿಗೂ ಇದ್ದವು. ಶ್ರೀ ಕೃಷ್ಣನ ಕುಲವದರೆಂದು ತಮ್ಮನ್ನು ತಾವು ಗೌರವಿಸಿಕೊಳ್ಳುವ ಮತ್ತು ಅದರಿಂದ ತನ್ನ ಘನತೆಯನ್ನು ಹೆಚ್ಚಿಸಿಕೊಳ್ಳುವ ಪ್ರವೃತ್ತಿ ಹೊಸದೇನೂ ಅಲ್ಲ. ಹೀಗೆ ಹೇಳಿಕೊಳ್ಳುವ ಎಲ್ಲಾ ರಾಜಮನೆತನದವರೂ ದ್ವಾರಾವತಿಯವರಲ್ಲ. ಇದಕ್ಕೆ ಕಾರಣವನ್ನು ನಾವು ಊಹಿಸಬಹುದಾಗಿದೆ. ಪಲ್ಲವರ ಅನಂತರ ದಕ್ಷಿಣ ಭಾರತದಲ್ಲಿ ಆಳಿದ ಅನೇಕ ರಾಜಮನೆತನಗಳು ಬ್ರಾಹ್ಮಣ ಅಥವಾ ಕ್ಷತ್ರಿಯ ಪಂಗಡಗಳಿಗೆ ಸೇರಿರಲಿಲ್ಲ. ಆದರೆ ಅವರುಗಳು ತಮ್ಮ ಸ್ವಂತ ಪರಾಕ್ರಮದಿಂದ ಬಹಳ ಶಕ್ತಿಯುತವಾದ, ರಾಜಮನೆತನದವರಾಗಿದ್ದರು. ತಮ್ಮ ಶಕ್ತಿಯ ಮೇಲ್ಮೆಗೆ ತಕ್ಕಂತೆ ಅವರಿಗೆ ಜಾತಿಯ ಮೇಲ್ಮೆ ಇರಲಿಲ್ಲ. ಅಂಥ ರಾಜರುಗಳು ತಾವು ಯದುವಂಶದವರೆಂದೂ ಮತ್ತು ದ್ವಾರಾವತಿ

ಯವರೆಂದೂ ಹೇಳಿಕೊಂಡು ತಮ್ಮ ಘನತೆಯನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸಿದ್ದಾರೆ. ಸೇವುಣರೂ ಕೂಡ ಈ ಗುಂಪಿಗೆ ಸೇರಿದವರು. ಚರಿತ್ರೆಯ ದೃಷ್ಟಿಯಿಂದ ಆ ಸಮಯದಲ್ಲಿ ದ್ವಾರಾವತಿಯಿಂದ ಯಾದವರು ದಕ್ಷಿಣಕ್ಕೆ ಬಂದರೆಂದು ಹೇಳಲು ಯಾವ ಆಧಾರವೂ ಇಲ್ಲ. ಕ್ರಿ.ಶ. ಒಂಬತ್ತನೆಯ ಶತಮಾನದಲ್ಲಿ ಗುಜರಾತಿನಲ್ಲಿ ಯಾವ ವಿಧವಾದ ರಾಜಕೀಯ ತೊಂದರೆಯೂ ಕಾಣಬರುವುದಿಲ್ಲ. ಆದ್ದರಿಂದ ಸೇವುಣರು ಗುಜರಾತಿನಿಂದ ದಕ್ಷಿಣಕ್ಕೆ ಬಂದವರು ಎಂಬ ವಾದವನ್ನು ಬಹಳ ಸುಲಭವಾಗಿ ತಳ್ಳಿಹಾಕಬಹುದು.

ಹಾಗಾದರೆ ಇವರು ಯಾರು ಮತ್ತು ಎಲ್ಲಿಂದ ಬಂದವರು? ಕ್ರಿ.ಶ. ಒಂಬತ್ತನೆಯ ಶತಮಾನದಲ್ಲಿ ಅನೇಕ ಯಾದವ ಮನೆತನದವರು ಕರ್ನಾಟಕದ ಉತ್ತರ ಭಾಗದಲ್ಲಿ ಸಾಮಂತರಾಗಿ ಆಳುತ್ತಿದ್ದರು[11] ಎಂದು ತಿಳಿದುಬಂದಿದೆ. ಯಾದವ ಕುಪ್ಪೇಯರಸನು ರಾಷ್ಟ್ರಕೂಟ ಅಮೋಘವರ್ಷನ ಕಾಲದಲ್ಲಿ ಈಗಿನ ಗದಗ್ ಪ್ರದೇಶವನ್ನು ಆಳುತ್ತಿದ್ದನು.[12] ಇನ್ನೊಬ್ಬ ಯಾದವನಾದ ಕುಪ್ಪದೇವನು ರಾಷ್ಟ್ರಕೂಟ ಕೃಷ್ಣನ ಸಾಮಂತನಾಗಿ ಬಿಜಾಪುರದ ಹತ್ತಿರದಲ್ಲಿರುವ ಮೆವುಂಡಿಯನ್ನು ಪಾಲಿಸುತ್ತಿದ್ದನು.[13] ಮತ್ತೊಬ್ಬ ಸಾಮಂತನಾದ ಮಹಾಮಂಡಳೇಶ್ವರ ಪೆರ್ಮಡಿಯರಸನೂ[14] ಮತ್ತೊಬ್ಬ 'ಯಾದವನಾರಾಯಣ' ಬಿರುದಾಂಕಿತನೂ[15] ಚಾಳುಕ್ಯರ ಆಧೀನದಲ್ಲಿ ಆಳುತ್ತಿದ್ದರು. ಇದೇ ಸಮಯದಲ್ಲಿ ಹೊಯ್ಸಳ ಯಾದವರು ತಮ್ಮ ಪ್ರಾಬಲ್ಯವನ್ನು ಹೆಚ್ಚಿಸಿಕೊಳ್ಳುತ್ತಿದ್ದರು. ಅಂದರೆ ಅನೇಕ ಯಾದವ ಮನೆತನಗಳು ರಾಷ್ಟ್ರಕೂಟರ ಇಲ್ಲವೇ ಚಾಳುಕ್ಯರ ಆಶ್ರಯದಲ್ಲಿ ತಮ್ಮ ತಮ್ಮ ಸ್ಥಾನವನ್ನು ಭದ್ರಪಡಿಸಿ ಕೊಳ್ಳುತ್ತಿದ್ದರು. ಆದರೆ ರಾಷ್ಟ್ರಕೂಟರು ಬಹಳ ಬಲಶಾಲಿಗಳಾಗಿದ್ದುದರಿಂದ ಸ್ವತಂತ್ರವಾಗಲು ಅವಕಾಶವಿಲ್ಲದೆ ಸಮಯವನ್ನು ಕಾಯುತ್ತಿದ್ದರು. ಇದೇ ರೀತಿ ಸೇವುಣ ದೃಢಪ್ರಹಾರನೂ, ಸೇವುಣ ಚಂದ್ರನೂ ಸಮಯವನ್ನು ಕಾಯುತ್ತಾ, ನಾಸಿಕದಲ್ಲಿ ಆಳುತ್ತಿದ್ದರು ಎಂದು ಊಹಿಸಬಹುದು. ಬಿಜಾಪುರ, ಧಾರವಾಡ ಪ್ರದೇಶದಲ್ಲಿ ಈ ಸಣ್ಣ ರಾಜರುಗಳಿಗೆ ಅವಕಾಶವಿಲ್ಲದುದರಿಂದ ಇನ್ನೂ ಉತ್ತರಕ್ಕೆ ಹೋಗಿ ಚಂದ್ರಾದಿತ್ಯಪುರದಲ್ಲಿ ನೆಲಸಿರಬೇಕು. ಕರ್ನಾಟಕಕ್ಕೆ ಮರಳಿ ಬರಬೇಕೆಂಬುದೇ ಇವರ ಮತ್ತು ಇವರ ಅನಂತರ ಬಂದ ಸೇವುಣ ರಾಜರ ಮಹದಾಕಾಂಕ್ಷೆಯಾಗಿತ್ತು. ಅದನ್ನು ಅವರು ಸ್ವಲ್ಪ ಮಟ್ಟಿಗೆ ಮಾತ್ರ ಸಾಧಿಸಿದರು. ಅವರ ಈ ಸಾಧನೆ ಅವರ ಸ್ವದೇಶಕ್ಕೆ ಮರಳಿ ಅಲ್ಲಿ 'ಕರ್ನಾಟಕ ಚಕ್ರವರ್ತಿ' ಎಂಬ ಬಿರುದಾಂಕಿತರಾಗಬೇಕೆಂದಿದ್ದ ಆಪೇಕ್ಷೆಯನ್ನು ವ್ಯಕ್ತಪಡಿಸುತ್ತದೆ.

ಈ ದೃಷ್ಟಿಯಿಂದ ಸೇವುಣರಾಜರ ಹೆಸರುಗಳು ಗಮನಾರ್ಹವಾದವು. ಧಡಿಯಪ್ಪ, ವಡ್ಡಿಗ, ರಾಜುಗಿ, ಮಲ್ಲುಗಿ, ಜೈತುಗಿ, ಸಿಂಘಣ, ಭಿಲ್ಲಮ ಮುಂತಾದ ಹೆಸರುಗಳು ಬಳಕೆಯಲ್ಲಿದ್ದವು. ಅದರಲ್ಲಿಯೂ ಧಡಿಯಪ್ಪ ಎಂಬ ಹೆಸರಿನಲ್ಲಿ

'ಧಡಿಯ' ಮತ್ತು 'ಅಪ್ಪ' ಎಂಬ ಈ ಎರಡು ಶಬ್ದಗಳೂ ಕನ್ನಡ ಪದಗಳು. ಇಂದಿಗೂ ಕನ್ನಡನಾಡಿನಲ್ಲಿ 'ಅಪ್ಪ' ಎಂಬ ಶಬ್ದ ಹೆಸರಿನ ಕೊನೆಯಲ್ಲಿ ಬಹಳ ಮಟ್ಟಿಗೆ ಬಳಕೆಯಲ್ಲಿದೆ. ಇದೇ ರೀತಿ 'ಗ' ಮತ್ತು 'ಗಿ' ಅಕ್ಷರಗಳಲ್ಲಿ ಅಂತ್ಯಗೊಳ್ಳುವ ಹೆಸರುಗಳಾದ ವಡ್ಡಿಗ, ರಾಜುಗಿ, ಜೈತುಗಿ ಇತ್ಯಾದಿಗಳು ಕನ್ನಡನಾಡಿನಲ್ಲಿ ಬಳಕೆ ಯಲ್ಲಿದ್ದವು. ಭಿಲ್ಲಮ ಮತ್ತು ಸಿಂಘಣ ಎಂಬ ಹೆಸರುಗಳು ಕರ್ನಾಟಕದ ಅರಸು ಮನೆತನಗಳಾದ ಕಳಚೂರ್ಯರು, ಮಹಾಮಂಡಳೇಶ್ವರ ಮನೆತನಗಳಾದ ಸಾಂತಾ ರರು, ಸಿಂದರು ಇವರಲ್ಲಿ ಬಳಕೆಯಲ್ಲಿದ್ದವು.

ಸೇವುಣ ರಾಜರು ಮದುವೆಯಾದ ಮನೆತನಗಳು ಗಮನಾರ್ಹವಾದ ವಿಷಯ ವನ್ನು ಹೊರಗೆಡುಹುತ್ತವೆ. ವಡ್ಡಿಗನು ಧೋರಪ್ಪನ ಮಗಳಾದ ವಡ್ಡಿಯವ್ವಳನ್ನು ಮದುವೆಯಾದನು. ಇನ್ನೊಬ್ಬ ಸೇವುಣರಾಜ ಎರಡನೆಯ ಭಿಲ್ಲಮನು ಲಚ್ಚಿಯವ್ವಳನ್ನು ಮದುವೆಯಾದನು. ವೇಸುಗಿಯು ಚಾಳುಕ್ಯ ವಂಶದವಳಾದ ನಾಯಿಲ್ಲ ದೇವಿಯನ್ನು ಮದುವೆಯಾದನು. ಮೂರನೆಯ ಭಿಲ್ಲಮನ ಹೆಂಡತಿ ಯಾದ ಅವಲ್ಲದೇವಿಯೂ ಚಾಳುಕ್ಯ ವಂಶದವಳೇ. ಉಳಿದ ಸೇವುಣ ರಾಜರ ವಿಚಾರವಾಗಿ ನಮಗೆ ಸಾಕಷ್ಟು ಮಾಹಿತಿ ದೊರಕಿಲ್ಲ. ಆದರೂ ಈ ಮೇಲೆ ಹೇಳಿದ ರಾಣಿಯರು ಕನ್ನಡ ದೇಶದವರು ಎಂಬುದು ಅವರ ಹೆಸರುಗಳಿಂದಲೇ ವ್ಯಕ್ತವಾಗು ತ್ತದೆ. ಜೊತೆಗೆ ಕರ್ನಾಟಕದ ಚಾಳುಕ್ಯವಂಶದವರ ಜೊತೆ, ವಿವಾಹಸಂಬಂಧವನ್ನು ಬೆಳೆಸಿರುವುದು ಗಮನಾರ್ಹ. ಈ ಬಾಂಧವ್ಯಗಳು ಕೇವಲ ರಾಜಕಾರಣದ ದೃಷ್ಟಿಯಿಂದಲೇ ಆದವು ಎಂದು ಹೇಳುವುದು ಕಷ್ಟ. ಅದೂ ಇರಬಹುದು. ಅದರ ಜೊತೆಗೆ, ತಮ್ಮವರೇ ಆದ ಕರ್ನಾಟಕ ಮನೆತನದವರೊಡನೆ ಸಂಬಂಧ ಬೆಳೆಸಬೇಕೆಂಬ ಆಶಯವೂ ಕಾರಣವಾಗಿರಬೇಕು. ಇನ್ನು, ಸೇವುಣ ರಾಜರುಗಳಿಂದ ನೇಮಿಸಲ್ಪಟ್ಟ ಅಧಿಕಾರಿಗಳು ಯಾರು ಎಂಬುದನ್ನು ಪರಿಶೀಲಿಸೋಣ. ಮಂತ್ರಿ ಗಳು, ರಾಜ್ಯಪಾಲರು ಮೊದಲಾದ ಮೇಲ್ದರ್ಜೆಯ ಅಧಿಕಾರಿಗಳಲ್ಲಿ, ಕೆಲವರನ್ನು ಉದಾಹರಿಸಬಹುದು. ಬಚ್ಚಿದೇವರಸ, ಬೊಪ್ಪಣ್ಣ, ಕಲ್ಲರಸ, ಗೋನರಸ, ಆನೆಮಲ್ಲಯ್ಯ, ಚಾವುಂಡರಸ, ಬೀಚ ಮೊದಲಾದವರು ಸೇವುಣ ರಾಜರ ಕೃಪೆಗೆ ಪಾತ್ರರಾಗಿದ್ದರು ಎಂದು ಶಾಸನಗಳಿಂದ ತಿಳಿದುಬರುತ್ತದೆ. ಈ ಮೇಲ್ಮಟ್ಟದ ಅಧಿಕಾರಿಗಳು ಕನ್ನಡದವರೆಂದು ಮೇಲೆ ಉದಾಹರಿಸಿದ ಹೆಸರುಗಳಿಂದಲೇ ತಿಳಿಯು ತ್ತದೆ. ಇದರಿಂದ ಕನ್ನಡದ ಅಧಿಕಾರಿಗಳಲ್ಲಿ ಸೇವುಣ ರಾಜರಿಗೆ ಇದ್ದ ವಿಶ್ವಾಸ ವ್ಯಕ್ತವಾಗುತ್ತದೆ.

ಸೇವುಣರ ರಾಜ್ಯಭಾರಕ್ರಮವನ್ನು ಪರಿಶೀಲಿಸಿದರೆ ಇವರು ಕನ್ನಡ ಪಕ್ಷಪಾತಿ ಗಳೆಂದು ತಿಳಿಯುತ್ತದೆ. ಸಂಸ್ಕೃತ ಭಾಷೆಯ ಅಧಿಕಾರಗಳ ಹೆಸರುಗಳು ಬಳಕೆಯಲ್ಲಿ ದ್ದವು. ಆದರೆ ಅದಕ್ಕಿಂತ ಜಾಸ್ತಿಯಾಗಿ ಕನ್ನಡ ಪದಗಳೇ ಕಾಣಿಸುತ್ತವೆ. ಮನ್ನೆಯ, ಸುಂಕದ ಅಧಿಕಾರಿ, ಸುಂಕದ ಹೆಗ್ಗಡೆ, ಮೇಲಾಲಿಕೆ ಅಧಿಕಾರಿ, ಹಿರಿಯ ಹೆಗ್ಗಡೆ

ಮುಂತಾದವು ಸಾಮಾನ್ಯವಾಗಿ ಪ್ರತಿ ಶಾಸನದಲ್ಲಿಯೂ ಕಾಣಿಸುತ್ತವೆ. ಈ ಹೆಸರುಗಳು ಕುಂತಳ ಮತ್ತು ತಡ್ಡವಾಡಿ ಪ್ರದೇಶಗಳಲ್ಲಿ ಮಾತ್ರವಲ್ಲದೇ, ಅದಕ್ಕಿಂತ ಉತ್ತರದಲ್ಲಿಯೂ ಬಳಕೆಯಲ್ಲಿದ್ದವು.

ಇದುವರೆಗೆ ಸುಮಾರು ಆರುನೂರು ಸೇವುಣರ ಶಾಸನಗಳು ಬೆಳಕಿಗೆ ಬಂದಿವೆ. ಇವುಗಳಲ್ಲಿ ಮುಕ್ಕಾಲುಭಾಗ ಶಾಸನಗಳು ಕನ್ನಡ ಭಾಷೆ ಮತ್ತು ಕನ್ನಡ ಲಿಪಿಯಲ್ಲಿವೆ. ಉಳಿದವುಗಳಲ್ಲಿ ಬಹುಭಾಗ ಸಂಸ್ಕೃತ ಭಾಷೆ ಮತ್ತು ನಾಗರೀ ಲಿಪಿಯಲ್ಲಿವೆ. ಈ ಮನೆತನದ ಕೊನೆಯ ಶತಮಾನದಲ್ಲಿ ಬರೆದ ಕೆಲವು ಶಾಸನಗಳು ಮಾತ್ರ ಮರಾಠಿಯ ನಾಂದಿ ಶ್ಲೋಕಗಳನ್ನು ಒಳಗೊಂಡಿವೆ. ಮತ್ತೆ ಕೆಲವು ಪೂರ್ತಿ ಮರಾಠಿಯಲ್ಲಿವೆ. ಅಂದರೆ ಮೊದಲ ಮೂರು-ನಾಲ್ಕು ಶತಮಾನಗಳ ಶಾಸನಗಳಲ್ಲಿ ಮರಾಠಿ ಇಲ್ಲವೆಂಬುದು ಮತ್ತು ಕನ್ನಡವೇ ಬಹು ಸಾಮಾನ್ಯವಾಗಿ ಇರುವುದೂ ಬಹಳ ಮುಖ್ಯವಾದ ಮತ್ತು ಗಮನಿಸಬೇಕಾದ ಅಂಶ.

ಸೇವುಣರ ರಾಜ್ಯವು ಬಹುಮಟ್ಟಿಗೆ ಕನ್ನಡದ ಜಿಲ್ಲೆಗಳನ್ನೇ ಒಳಗೊಂಡಿತ್ತು. ಶಿವಮೊಗ್ಗ, ಹಾಸನ, ಚಿತ್ರದುರ್ಗ, ಧಾರವಾಡ, ಬಿಜಾಪುರ, ರಾಯಚೂರು, ಬಿದರೆ ಮತ್ತು ಬಳ್ಳಾರಿ ಜಿಲ್ಲೆಗಳು ಅಥವಾ ಅವುಗಳ ಕೆಲವು ಭಾಗಗಳು ಸೇವುಣರ ರಾಜ್ಯದಲ್ಲಿ ಸೇರಿದ್ದವು. ಕರ್ನಾಟಕದ ಸಿಂದರು, ಸಾಂತಾರರು, ರಟ್ಟರು, ಗುತ್ತರು, ಹೈಹೆಯರು, ಸೇವುಣರ ಆಧೀನರಾಗಿ ಆಳಿದರು.

ಇಷ್ಟೆಲ್ಲಾ ಅಂಶಗಳನ್ನು ಪರಿಶೀಲಿಸಿದರೆ ಸೇವುಣರು ಕರ್ನಾಟಕ ಪಕ್ಷಪಾತಿಗಳಾಗಿದ್ದರೆಂಬುದರಲ್ಲಿ ಸಂದೇಹಕ್ಕೆ ಆಸ್ಪದವೇ ಇಲ್ಲ. ಈ ಪಕ್ಷಪಾತಕ್ಕೆ ಕಾರಣವಾದರೂ ಸ್ವಯಂವಿದಿತವಾಗಿಯೇ ಇದೆ. ಇವರು ನಿಜವಾಗಿಯೂ ಮರಾಠಿಯವರೇ ಆಗಿದ್ದರೆ ಇವರ ಕನ್ನಡ ಪಕ್ಷಪಾತ ಅರ್ಥಬಾಹಿರವಾಗುತ್ತದೆ. ಹಾಗಾದರೂ ಕೂಡ ಫ್ಲೀಟ್ ಮತ್ತು ಭಂಡಾರ್‌ಕರ್ ಅವರು ಸೇವುಣರನ್ನು ಮರಾಠರು ಎಂದು ಹೇಗೆ ತಿಳಿದರೋ ಅರ್ಥವಾಗುವುದಿಲ್ಲ. 1882ರಲ್ಲಿ ಫ್ಲೀಟ್‌ರವರು ಸೇವುಣರ ಚರಿತ್ರೆಯನ್ನು ಮೊಟ್ಟ ಮೊದಲನೆಯ ಬಾರಿ ಬರೆದಾಗ ಅವರಿಗೆ ದೊರೆತಿದ್ದ ಶಾಸನಗಳು ತೀರಾ ಕಡಿಮೆ. ಇಪ್ಪತ್ತು-ಮೂವತ್ತಕ್ಕಿಂತ ಜಾಸ್ತಿಯಾಗಿ ಇರಲಿಲ್ಲ. ಆದ್ದರಿಂದ ಈ ಮನೆತನದ ಪ್ರಶ್ನೆಯನ್ನು ಕೂಲಂಕಷವಾಗಿ ಪರಿಶೀಲಿಸಲು ಸಾಧ್ಯವಾಗಿರಲಿಕ್ಕಿಲ್ಲ. ಆದರೆ ಅಲ್ತೇಕರರು, ಫ್ಲೀಟ್ ಮತ್ತು ಭಂಡಾರ್‌ಕರ್ ಅವರ ಅಭಿಪ್ರಾಯವನ್ನು ಸಮರ್ಥನೆ ಮಾಡಿದ್ದು ಆಶ್ಚರ್ಯವೇ ಸರಿ. ಅಲ್ತೇಕರ್ ಅವರ ವಾದವೇನೆಂದರೆ, ಸೇವುಣರ ರಾಜಧಾನಿಯಾದ ದೇವಗಿರಿಯು ಮಹಾರಾಷ್ಟ್ರದಲ್ಲಿರುವುದು ಮತ್ತು ಸೇವುಣರು ಕನ್ನಡ ಭಾಷೆಯನ್ನು ಪ್ರೋತ್ಸಾಹಿಸದೇ ಇರುವುದು.

ದೇವಗಿರಿಯು ಈಗಿನ ಮಹಾರಾಷ್ಟ್ರದಲ್ಲಿರುವುದೇನೋ ನಿಜ. ಆದರೆ ಒಂಬತ್ತನೆಯ ಶತಮಾನದಲ್ಲಿ ಆ ಪ್ರದೇಶಕ್ಕೆ ಈಗಿನ ಮಹಾರಾಷ್ಟ್ರದ ಅರ್ಥ ಇರಲಿಲ್ಲವೆಂದು ಗೊತ್ತಾಗುತ್ತದೆ. ರಾಜಧಾನಿಯನ್ನು ರಾಜಕಾರಣದ ದೃಷ್ಟಿಯಿಂದ

ಮಾಡಿಕೊಳ್ಳುವರೇ ವಿನಾ ಜಾತಿ, ಮತ ಮತ್ತು ಭಾಷೆಯಿಂದಲ್ಲ ಎಂದು ಸುಲಭವಾಗಿ ತೀರ್ಮಾನಿಸಬಹುದು. ಸೇವುಣರು ದೇವಗಿರಿಗೆ ಹೋಗಲು ಕಾರಣಗಳು ಬೇರೆ ರೀತಿಯವು. ಐದನೆಯ ಭಿಲ್ಲಮನ ಕಾಲದಲ್ಲಿ ಹೊಯ್ಸಳರಿಗೂ ಮತ್ತು ಸೇವುಣರಿಗೂ ನಡೆದ ಯುದ್ಧದಲ್ಲಿ ಹೊಯ್ಸಳರದ್ದೇ ಮೇಲುಗೈ ಆದಾಗ ಭಿಲ್ಲಮನಿಗೆ ಬೇರೆ ಮಾರ್ಗವಿಲ್ಲದೆ ಉತ್ತರಕ್ಕೆ ಹೋಗಲೇಬೇಕಾಯಿತು. ಇದು, ಸೇವುಣ ರಾಜ್ಯದ ಕ್ಷೇಮದ ದೃಷ್ಟಿಯಿಂದ ಭಿಲ್ಲಮನು ಮಾಡಿದ ಕೆಲಸ. ಆದರೆ ಅವನು ತನ್ನ ಬಹಳ ಸಮಯವನ್ನೆಲ್ಲ ಬಿಜಾಪುರ-ಧಾರವಾಡದಲ್ಲಿಯೇ ಕಳೆದು, ಹೊಯ್ಸಳರನ್ನು ಸದೆಬಡಿಯಲು ಪ್ರಯತ್ನಿಸುತ್ತಿದ್ದನು. ಆದರೆ ಸೊರಟೂರಿನ ಕದನವಾದ ಮೇಲೆ ಅವನು ಸೋತು ದೇವಗಿರಿಗೆ ಹಿಂದಿರುಗಲೇ ಬೇಕಾಯಿತು.

ಸೇವುಣರು ಕನ್ನಡ ಭಾಷೆ ಮತ್ತು ಸಾಹಿತ್ಯಕ್ಕೆ ಪ್ರೋತ್ಸಾಹ ಕೊಡಲಿಲ್ಲ ಎಂಬ ಅಲ್ತೇಕರ್‌ರ ಅಭಿಪ್ರಾಯ ನಿರಾಧಾರವಾದದು. 'ಶಾಂತೀಶ್ವರ ಪುರಾಣ'ದ ಕರ್ತೃವಾದ ಕಮಲಭವನು ಸೇವುಣ ಸಿಂಘಣನ ಆಸ್ಥಾನ ಕವಿಯಾಗಿದ್ದನು. ಇವನು ಜೈನಮತಕ್ಕೆ ಸೇರಿದವನು. ಶಾಂತೀಶ್ವರ ಪುರಾಣದಲ್ಲಿ ಹದಿನಾರನೆಯ ತೀರ್ಥಂಕರನಾದ ಶಾಂತಿನಾಥನ ಚರಿತ್ರೆಯನ್ನು ಕನ್ನಡದಲ್ಲಿ ಬರೆದಿದ್ದಾನೆ. ಇದು ಹದಿನಾರು ಆಶ್ವಾಸಗಳನ್ನುಳ್ಳ ಚಂಪೂಗ್ರಂಥ. ಈ ಗ್ರಂಥವನ್ನು ಬಿಟ್ಟರೆ ಮತ್ತೆ ಯಾವ ಕನ್ನಡ ಗ್ರಂಥವೂ ದೊರಕಿಲ್ಲ. ಆದರೆ ತಿಳಿವಳ್ಳಿ, ದೇವಸ್ಥಾನ ಕಲ್ಲು, ಸಂಗೂರು, ಬೇದ್ರಾಪುರ, ದಾವಣಗೆರೆಯಲ್ಲಿ ದೊರಕಿರುವ ಕನ್ನಡ ಶಾಸನಗಳಿಂದ ಕನ್ನಡ ಭಾಷೆಗೆ ಎಷ್ಟೊಂದು ರಾಜಗೌರವ ಇತ್ತೆಂಬುದು ಗೊತ್ತಾಗುತ್ತದೆ. ಕನ್ನಡ ಗ್ರಂಥಗಳು ಅಷ್ಟೊಂದು ವಿರಳವಾಗಿರುವುದಕ್ಕೆ ಕಾರಣವನ್ನು ಊಹಿಸಬಹುದು. ಸೇವುಣರಿಗೂ ಮತ್ತು ಹೊಯ್ಸಳರಿಗೂ ನಡೆದ ಯುದ್ಧಗಳಲ್ಲಿ ಅಂತಿಮವಾಗಿ ಹೊಯ್ಸಳರೇ ಜಯಶಾಲಿಗಳಾಗಿ ಕರ್ನಾಟಕದ ಹಿತರಕ್ಷಕರಾದರು. ಆದ್ದರಿಂದ ಕನ್ನಡ ಕವಿಗಳು ಹೊಯ್ಸಳರೇ ಕನ್ನಡದ ಹಿತೈಷಿಗಳೆಂದು ಅವರ ಆಶ್ರಯವನ್ನು ಕೋರಿದುದರಲ್ಲಿ ಆಶ್ಚರ್ಯವೇನೂ ಇಲ್ಲ. ಹೀಗಾಗಿ ಕನ್ನಡ ಗ್ರಂಥಗಳು ಸೇವುಣರ ಆಸ್ಥಾನದಲ್ಲಿ ಅಪರೂಪವಾದವು.

ಈ ಎಲ್ಲ ಆಧಾರಗಳಿಂದ ವ್ಯಕ್ತವಾಗುವ ಮುಖ್ಯ ವಿಚಾರವೆಂದರೆ ಸೇವುಣರಿಗೆ ಇದ್ದ ಕನ್ನಡ-ಕರ್ನಾಟಕದ ಅಭಿಮಾನ ಮತ್ತು ಪಕ್ಷಪಾತ. ಮೊದಲೇ ಹೇಳಿದಂತೆ ಇವರು ಬಿಜಾಪುರ-ಧಾರವಾಡದಲ್ಲಿ ಹುಟ್ಟಿ ರಾಜ್ಯವನ್ನು ಕಟ್ಟಬೇಕೆಂಬ ಆಕಾಂಕ್ಷೆಯಿಂದ ಸ್ವಲ್ಪ ಉತ್ತರಕ್ಕೆ ಹೋಗಿ ನೆಲಸಿ, ಮರಳಿ ಸ್ವದೇಶಕ್ಕೆ -ಕರ್ನಾಟಕಕ್ಕೆ ಬರಲಾರದೇ ಹೋದ ಮತ್ತು 'ದೇವಗಿರಿಯ ಯಾದವರು' ಎಂದು ಪ್ರಸಿದ್ಧರಾದ 'ಕರ್ನಾಟಕದ ಸೇವುಣರು.'

## ಟಿಪ್ಪಣಿಗಳು

1. Dynasties of Kanarese Districts.
2. Early History of the Dekkan
3. Early Histroy of the Deccan, Vol. II. Ed., Yazdani
4. ಭಂಡಾರಕರ್‌ರವರ ಗ್ರಂಥ, ಪುಟ, 152
5. ಅದೇ ಶ್ಲೋಕ 22. (ಯತ್ಸಂಜ್ಞಯಾ ಸೇವುಣದೇಶಮಾಹುಃ)
6. EI. Vol. II. P. 212
7. IA. Vol, XVII, P. 117
8. ಅದೇ, Vol. XII, P. 119
9. JBBRAS, Vol. III, P. 189
10. EI. Vol. XXVIII, P. 312
11. ಅದೇ.
12. BK Inscriptions, Vol. I, Part I Nos. 11, 12
13. ಅದೇ. No. 22
14. ಅದೇ. No. 30
15. ಅದೇ. Part II. No. 165.

* * *

—

ಅಧ್ಯಾಯ ೩
# ಕಾಲ ನಿರ್ಣಯ

ಸೇವುಣ ವಂಶದ ರಾಜರುಗಳು ಆಳಿದ ಕಾಲದ ವಿಚಾರವಾಗಿ ಫ್ಲೀಟ್ ಮತ್ತು ಭಂಡಾರಕರ್‌ರವರು ಈಗ್ಗೆ ಅರ್ಧ ಶತಮಾನಗಳಿಗಿಂತ ಹಿಂದೆ ಬರೆದಿದ್ದರು. ಅಂದಿನಿಂದ ಈಚೆಗೆ ಅನೇಕ ಹೊಸ ಶಾಸನಗಳು ಬೆಳಕಿಗೆ ಬಂದಿವೆ. ಈ ಹೊಸ ಶಾಸನಗಳ ಆಧಾರದ ಮೇಲೆ ಈ ಮೇಲೆ ಹೇಳಿದ ವಿದ್ವಾಂಸರ ಅಭಿಪ್ರಾಯಗಳನ್ನು ಬದಲಾಯಿಸಬೇಕಾಗಿದೆ. ಆದರೆ ಇತ್ತೀಚೆಗೆ ಸೇವುಣರ ವಿಚಾರವನ್ನು ವಿಮರ್ಶೆ ಮಾಡಿದ ಅಲ್ತೇಕರ್ ಅವರು ಫ್ಲೀಟ್‌ರವರ ಅಭಿಪ್ರಾಯಗಳನ್ನೇ ಹೆಚ್ಚು ಕಡಿಮೆ ಅನುಮೋದಿಸಿದ್ದಾರೆ.

ಸೇವುಣ ರಾಜರ ಕಾಲನಿರ್ಣಯಮಾಡಲು ಶಾಸನಗಳು ಮಾತ್ರ ಉಪಯುಕ್ತ ಸಾಧನವಾಗಿವೆ. ಹೇಮಾದ್ರಿಯ ರಾಜಪ್ರಶಸ್ತಿಯನ್ನೂ ಒಳಗೊಂಡಂತೆ ಯಾವ ಗ್ರಂಥವೂ ಈ ವಿಚಾರದಲ್ಲಿ ಬೆಳಕು ಚೆಲ್ಲುವುದಿಲ್ಲ. ಕಾಲನಿರ್ಣಯದ ದೃಷ್ಟಿಯಿಂದ ಸುಮಾರು ಐನೂರು ಶಾಸನಗಳು ನಮಗೆ ಉಪಯೋಗಕ್ಕೆ ಬರುತ್ತವೆ. ಆದರೆ ಈ ಶಾಸನಗಳು ವಿಶೇಷವಾಗಿ ಈ ವಂಶದ ಅನಂತರದ ರಾಜರುಗಳಿಗೇ ಸೇರಿದವು. ಆದಿಭಾಗದ ಸುಮಾರು ಇಪ್ಪತ್ತು ರಾಜರುಗಳಿಗೆ ಕೇವಲ ಹನ್ನೆರಡು ಶಾಸನಗಳಿವೆ. ಇದರಿಂದಾಗಿ ಕಾಲನಿರ್ಣಯಮಾಡುವ ಕೆಲಸ ಕಷ್ಟಕರವಾಗಿ ಪರಿಣಮಿಸಿದೆ. ಮಿಕ್ಕ ಶಾಸನಗಳಲ್ಲಿ ಕಾಲವು ಉಲ್ಲೇಖಿತವಾಗಿರುವ ಕ್ರಮದಲ್ಲಿ ಅನೇಕ ಸಾರಿ ತಪ್ಪುಗಳಾಗಿವೆ. ಒಂದು ಶಾಸನದಲ್ಲಿ ಕೊಟ್ಟಿರುವ ಶಕ ಕಾಲ, ರಾಜನ ಆಳ್ವಿಕೆಯ ಕಾಲ ಸರಿಯೇ ಇಲ್ಲವೇ ಎಂದು ತೀರ್ಮಾನಿಸುವುದು ಬಹು ಜಟಿಲ ಸಮಸ್ಯೆಯೇ ಆಗುತ್ತದೆ.

ಈ ವಂಶದ ಪ್ರಾಚೀನತಮ ಶಾಸನವೆಂದರೆ ಎರಡನೆಯ ಭಿಲ್ಲಮನಿಂದ ಹೊರಡಿಸಲ್ಪಟ್ಟ ಸಂಗಮ್‌ನೇರ್ ಶಾಸನ.[1] ಇದರ ಕಾಲ ಕ್ರಿ.ಶ. 1000. ಈ ಎರಡನೆಯ ಭಿಲ್ಲಮನು ಚಾಳುಕ್ಯ ಎರಡನೆಯ ತೈಲನ ಸಮಕಾಲೀನನಾಗಿದ್ದು, ಅವನಿಂದ ಪಂಚಮಹಾಶಬ್ದಗಳನ್ನು ಪಡೆದನೆಂದು ಈ ಶಾಸನವು ತಿಳಿಸುತ್ತದೆ. ಈ ಭಿಲ್ಲಮನು ಸೇವುಣ ವಂಶದಲ್ಲಿ ಏಳನೆಯ ದೊರೆ. ಅವನ ಹಿಂದಿನವರು ಕ್ರಮವಾಗಿ ದೃಢಪ್ರಹಾರ, ಸೇವುಣಚಂದ್ರ, ಧಡಿಯಪ್ಪ, ಭಿಲ್ಲಮ, ರಾಜಗಿ ಮತ್ತು ವಡ್ಡಿಗ. ಈ ವಡ್ಡಿಗನು ಕೃಷ್ಣರಾಜನ ಮಿತ್ರನಾಗಿದ್ದನೆಂದು ಉಲ್ಲೇಖಿತವಾಗಿದೆ.

ಸಮಕಾಲೀನ ಕರ್ಣಾಟಕದಲ್ಲಿ ಪ್ರಖ್ಯಾತನಾಗಿದ್ದವನು ರಾಷ್ಟ್ರಕೂಟ ಮೂರನೆಯ ಕೃಷ್ಣ. ಇವನ ಕಾಲ ಕ್ರಿ.ಶ. 939-967. ಆದುದರಿಂದ ವಡ್ಡಿಗನು ರಾಷ್ಟ್ರಕೂಟ ಎರಡನೆಯ ಕೃಷ್ಣನ ಸ್ನೇಹಿತನಾಗಿದ್ದನು. ವಡ್ಡಿಗನ ಅನಂತರ ಬಂದವನೇ ಎರಡನೆಯ ಭಿಲ್ಲಮ. ಅವನ ಅನಂತರ ವೇಸುಗಿ ಮತ್ತು ಮೂರನೆಯ ಭಿಲ್ಲಮ ರಾಜ್ಯವಾಳಿದರು. ಮೂರನೆಯ ಭಿಲ್ಲಮನ ಶಾಸನಗಳ ಕಾಲ ಕ್ರಿ.ಶ. 1025 ಮತ್ತು 1052.[2] ಅಂದರೆ ವೇಸುಗಿಯು ಕ್ರಿ.ಶ. 1000 ರಿಂದ 1025 ರವರೆಗೂ, ಅನಂತರ ಮೂರನೆಯ ಭಿಲ್ಲಮನೂ ಆಳಿದರೆಂದು ಊಹಿಸಬಹುದು. ಅಂದರೆ ಒಬ್ಬೊಬ್ಬ ರಾಜನು ಸುಮಾರು ಇಪ್ಪತ್ತೈದು ವರ್ಷ ಆಳಿದನೆಂದು ಹೇಳಬಹುದು. ಹಾಗಾದರೆ ಎರಡನೆಯ ಭಿಲ್ಲಮನಿಗಿಂತ ಮುಂಚೆ ಆಳಿದ ಏಳು ಜನ ರಾಜರುಗಳಿಗೆ 175 ವರ್ಷಗಳನ್ನು ಕೊಡುವುದಾದರೆ, ಮೊದಲನೆಯ ರಾಜನಾದ ದೃಢಪ್ರಹಾರನು ಸುಮಾರು ಕ್ರಿ.ಶ. ಒಂಬತ್ತನೆಯ ಶತಮಾನದ ಮೂರನೆಯ ದಶಕದಲ್ಲಿ ಆಳಿರ ಬಹುದು ಎಂದು ಹೇಳಬೇಕಾಗುತ್ತದೆ.

ಮೂರನೆಯ ಭಿಲ್ಲಮನ ಕಾಲದ ಎರಡು ಶಾಸನಗಳು ದೊರಕಿವೆ. ಮೊದಲನೆಯ ಕಲಾಸ್ ಬದ್ರುಕ್ ಶಾಸನದ ಕಾಲ ಶಕ 948 ಕ್ರೋಧನ ಕಾರ್ತೀಕ, ಸೂರ್ಯಗ್ರಹಣ ಅಂದರೆ ಕ್ರಿ.ಶ. 1025, ನವೆಂಬರ್ 23.[3] ಎರಡನೆಯದಾದ ದೇವಲಾಲಿ ಶಾಸನದ ಕಾಲ ಶಕ 974, ನಂದನ, ಪುಷ್ಯ ಶುದ್ಧ 15 ಅಂದರೆ ಕ್ರಿ.ಶ. 1052.[4] ಆದುದರಿಂದ ಮೂರನೆಯ ಭಿಲ್ಲಮನು ಕೊನೆಯ ಪಕ್ಷ ಕ್ರಿ.ಶ. 1025 ರಿಂದ 1052ರವರೆಗೆ 27 ವರ್ಷ ರಾಜ್ಯವಾಳಿರಬೇಕು.

ಅನಂತರ ರಾಜ್ಯವಾಳಿದ ಎರಡನೆಯ ಸೇವುಣಚಂದ್ರನ ಒಂದೇ ಒಂದು ಶಾಸನ ದೊರಕಿದೆ. ಬಸೇನ್ ಎಂಬಲ್ಲಿ ಸಿಕ್ಕಿದ ಈ ಶಾಸನದ ಕಾಲ ಶಕ 991, ಸೌಮ್ಯ, ಶ್ರಾವಣ, 14 ಅಂದರೆ ಕ್ರಿ.ಶ. 1069, ಆಗಸ್ಟ್ 4.[5] ಇದು ಎರಡನೆಯ ಸೇವುಣ ಚಂದ್ರನು ಪಟ್ಟಕ್ಕೆ ಬಂದ ಕಾಲವಾದರೆ ಮೂರನೆಯ ಭಿಲ್ಲಮನ ಅಂತ್ಯಕ್ಕೂ ಇವನ ಆಳ್ವಿಕೆಯ ಪ್ರಾರಂಭಕ್ಕೂ ನಡುವೆ 17 ವರ್ಷಗಳ ಅಂತರ ಕಾಣಬರುತ್ತದೆ. ಹೇಮಾದ್ರಿಯ ರಾಜಪ್ರಶಸ್ತಿಯಿಂದ ಮೂರನೆಯ ಭಿಲ್ಲಮನ ಅನಂತರ 2ನೆಯ ವಾಡುಗಿ, 2ನೆಯ ವೇಸುಗಿ ಮತ್ತು 4ನೆಯ ಭಿಲ್ಲಮ ಇವರು ಕ್ರಮವಾಗಿ ಆಳಿ, ಅನಂತರ 2ನೆಯ ಸೇವುಣ ಚಂದ್ರನು ಪಟ್ಟಕ್ಕೆ ಬಂದನೆಂದು ತಿಳಿಯುತ್ತದೆ. ಅಂದರೆ ಮೂವರು ರಾಜರು ಕೇವಲ 17 ವರ್ಷಗಳಲ್ಲಿ ಆಳಿದರೆಂದರೆ, ಆ ಕಾಲದಲ್ಲಿ ಒಳಜಗಳಗಳೂ, ಅಂತರ್ಯುದ್ಧ ನಡೆದಿರಬೇಕೆಂದೂ, ಅವೆಲ್ಲವನ್ನೂ ಕೊನೆ ಗಾಣಿಸಿ ಎರಡನೆಯ ಸೇವುಣಚಂದ್ರನು ಕ್ರಿ.ಶ. 1069ರಲ್ಲಿ ಪಟ್ಟಕ್ಕೆ ಬಂದಿರ ಬೇಕೆಂದೂ ಹೇಳಬೇಕಾಗುತ್ತದೆ.

ಎರಡನೆಯ ಸೇವುಣಚಂದ್ರನು ಸುಮಾರು ಮೂವತ್ತು ವರ್ಷಗಳ ಕಾಲ ರಾಜ್ಯವಾಳಿರಬೇಕು. ಅವನ ಆನಂತರ ಬಂದ ಐರಮದೇವನ ಆಶ್ವಿ ತಾಮ್ರ ಶಾಸನದ

ಕಾಲ ಶಕ 1020, ವೈಶಾಖ ಬಹುಳ 15, ಸೋಮವಾರ ಅಂದರೆ ಕ್ರಿ.ಶ.1098, ಮೇ, 3.[6] ಹೇಮಾದ್ರಿಯ ರಾಜಪ್ರಶಸ್ತಿಯ ಪ್ರಕಾರ ಐರಮದೇವನ ಉತ್ತರಾಧಿಕಾರಿ ಸಿಂಹರಾಜ. ಕ್ರಿ.ಶ. 1142ರ ಅಂಜನೇರಿ ಶಾಸನದ ಸೇವುಣದೇವನು ಈ ಸಿಂಹರಾಜನೇ ಇರಬೇಕು. ಇತ್ತೀಚೆಗೆ ಚನ್ನೈ ಎಂಬಲ್ಲಿ ದೊರಕಿರುವ ಶಾಸನದಲ್ಲಿ ಮಹಾಕುಮಾರ ಸಿಂಘಣನ ಉಲ್ಲೇಖವಿದೆ.[7] ಈ ಶಾಸನದ ಕಾಲ ಶಕ 1062, ರೌದ್ರ, ಆಷಾಢ, 6 ಅಂದರೆ ಕ್ರಿ.ಶ. 1140 ಜೂನ್ 11. ಕಾಲದೃಷ್ಟಿಯಿಂದ ಈ ಸಿಂಘಣನು ಹೇಮಾದ್ರಿಯ ಸಿಂಹಿರಾಜ ಮತ್ತು ಅಂಜನೇರಿ ಶಾಸನದ ಸೇವುಣದೇವನೇ ಇರಬೇಕೆಂದು ಶಾಸನತಜ್ಞರು ತೀರ್ಮಾನಿಸಿದ್ದಾರೆ. ಈ ಸಿಂಹಿರಾಜನು ಚಾಳುಕ್ಯ ಆರನೆಯ ವಿಕ್ರಮಾದಿತ್ಯನ (ಕ್ರಿ.ಶ. 1076-1126) ಅನುಯಾಯಿಯಾಗಿದ್ದು, ಕರ್ಪೂರ ವ್ರತವನ್ನು ಪೂರ್ಣಗೊಳಿಸುವುದರಲ್ಲಿ ಸಹಾಯಕನಾಗಿದ್ದನೆಂದು ಹೇಮಾದ್ರಿಯಿಂದ ತಿಳಿದುಬರುತ್ತದೆ. ಐರಮದೇವನ ಕ್ರಿ.ಶ. 1098 ರ ಶಾಸನವು ಅವನ ಮೊಟ್ಟ ಮೊದಲನೆಯ ವರ್ಷದ್ದಾದರೆ, ಮತ್ತು ಸಿಂಹರಾಜನು ಕ್ರಿ.ಶ. 1123 ರಲ್ಲಿ ಪಟ್ಟಕ್ಕೆ ಬಂದುದಾದರೆ ಐರಮದೇವನ ಕಾಲ ಕ್ರಿ.ಶ. 1098-1123 ಎಂದು ತೀರ್ಮಾನಿಸಬಹುದು.

ಅನಂತರ ಆಳಿದ ಮಲ್ಲುಗಿಯ ಶಾಸನಗಳು ಯಾವುವೂ ಬೆಳಕಿಗೆ ಬಂದಿಲ್ಲ. ಜಲ್ಹಣನ ಸೂಕ್ತಿ ಮುಕ್ತಾವಲೀ ಗ್ರಂಥದಿಂದ ಮಲ್ಲುಗಿಯು ವಿಜ್ಜಣನೊಂದಿಗೆ ಯುದ್ಧ ಮಾಡಿದನೆಂದು ಗೊತ್ತಾಗುತ್ತದೆ. ಈ ವಿಜ್ಜಣನು ಕಳಚೂರಿ ವಂಶದ ವೀರ ಬಿಜ್ಜಳನೆಂದು (ಕ್ರಿ.ಶ. 1145-1167) ಗೊತ್ತಾಗುತ್ತದೆ. ಮಲ್ಲುಗಿಯ ಹಿಂದಿನವನಾದ ಸೇವುಣದೇವನ ಕ್ರಿ.ಶ. 1142ರ ಶಾಸನವು ಅವನ ಕೊನೆಯ ವರ್ಷದ್ದಾದರೆ, ಮಲ್ಲುಗಿಯು ಅದೇ ವರ್ಷದಿಂದ ಸುಮಾರು 25 ವರ್ಷಗಳವರೆಗೆ ಅಂದರೆ ಕ್ರಿ.ಶ. 1167 ರವರೆಗೆ ಆಳಿರಬೇಕೆಂದು ಊಹಿಸಬಹುದು.

ಮಲ್ಲುಗಿಯ ಅನಂತರ ರಾಜ್ಯಕ್ಕಾಗಿ ಅಣ್ಣತಮ್ಮಂದಿರಲ್ಲಿ ಕಲಹಗಳು ಉಂಟಾದವು ಎಂದು ಹೇಮಾದ್ರಿಯು ತಿಳಿಸುತ್ತಾನೆ. ಅಮರಗಾಂಗೇಯ, ಅಮರ ಮಲ್ಲುಗಿ, ಗೋವಿಂದರಾಜ, ಕಲಿಯಬಲ್ಲಾಳ ಮತ್ತು ಐದನೆಯ ಭಿಲ್ಲಮ ಎಂಬ ಈ ರಾಜಕುಮಾರರು ಈ ಕಲಹದಲ್ಲಿ ಪಾಲ್ಗೊಂಡಿದ್ದರು. ಯದುವಂಶ ಲಕ್ಷ್ಮಿಯು ಎಲ್ಲರನ್ನೂ ಬಿಟ್ಟು ಐದನೆಯ ಭಿಲ್ಲಮನನ್ನು ವರಿಸಿದಳೆಂದು ಹೇಮಾದ್ರಿಯು ಸ್ಪಷ್ಟಪಡಿಸುತ್ತಾನೆ. ಐದನೆಯ ಭಿಲ್ಲಮನನ್ನು ಹೆಸರಿಸುವ ಅತ್ಯಂತ ಪ್ರಾಚೀನ ಶಾಸನವು ಕ್ರಿ.ಶ. 1173 ರ ಕಳಚೂರಿ ಶಾಸನ.[8] ಇದು ಅವನು ರಾಜ್ಯಕ್ಕೆ ಬಂದ ಮೊದಲನೆಯ ವರ್ಷವಾದರೆ, ಮಲ್ಲುಗಿಯ ಮರಣಾನಂತರದ ಅಂದರೆ ಕ್ರಿ.ಶ. 1167 ರಿಂದ 1173ರ ವರೆಗಿನ ವರ್ಷಗಳಲ್ಲಿ ಈ ಯಾದವೀ ಕಲಹಗಳು ನಡೆದು ಅದರಲ್ಲಿ ಐದನೆಯ ಭಿಲ್ಲಮನು ಜಯಶಾಲಿಯಾಗಿರಬೇಕು. ಇವನು ಕ್ರಿ.ಶ. 1173 ರಲ್ಲಿಯೇ ರಾಜನಾಗಿದ್ದರೂ, ಅವನ ಹೆಸರಿನಲ್ಲಿ ಶಾಸನಗಳು ಕಾಣಬರುವುದು

ಕ್ರಿ.ಶ. 1187 ರಿಂದ. 1183ರಲ್ಲಿ ಕಳಚೂರಿ ವಂಶದ ಪತನವಾಯಿತು. ಅವರ ಅಧೀನದಲ್ಲಿದ್ದ ಭಿಲ್ಲಮನು ಕ್ರಿ.ಶ. 1183ರ ಅನಂತರ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡು ಕ್ರಿ.ಶ. 1187 ರಿಂದ ರಾಜ ಸೂಚಕವಾದ ಎಲ್ಲ ಬಿರುದುಗಳನ್ನು ಉಳ್ಳ ಶಾಸನಗಳನ್ನು ಹೊರಡಿಸಿರಬೇಕು.

ಕ್ರಿ.ಶ. 1187ರ ಅನಂತರ ಸೇವುಣರ ಶಾಸನಗಳು ಸಂಖ್ಯೆಯಲ್ಲಿ ಹೆಚ್ಚುತ್ತವೆ. ಆದರೆ ಇವುಗಳಲ್ಲಿ ವಿರೋಧಾತ್ಮಕವಾದ ಮಾಹಿತಿಗಳೇ ವಿಶೇಷವಾಗಿವೆ. ಉದಾಹರಣೆಗೆ, ಕ್ರಿ.ಶ. 1300 ರ ರಾಮಚಂದ್ರನ ಹರಿಹರದ ಶಾಸನದಲ್ಲಿ ಅದು ಆ ರಾಜನ 32ನೆಯ ಆಳ್ವಿಕೆಯ ವರ್ಷವೆಂದು ಹೇಳಿದೆ.[9] ಇದರ ಪ್ರಕಾರ ರಾಮಚಂದ್ರನು ಕ್ರಿ.ಶ. 1269ರಲ್ಲಿ ಪಟ್ಟಕ್ಕೆ ಬಂದಿರಬೇಕು. ಅದೇ ರಾಜನ ಕ್ರಿ.ಶ. 1287 ರ ಹಲುಗಾವಲು ಶಾಸನದಲ್ಲಿ ಅದು ಅವನ 14ನೆಯ ವರ್ಷದ ಆಳ್ವಿಕೆಯೆಂದು ಹೇಳಿದೆ. [10] ಇದು ನಿಜವಾದಲ್ಲಿ ಅವನು ಕ್ರಿ.ಶ. 1273 ರಲ್ಲಿ ಪಟ್ಟಕ್ಕೆ ಬಂದಿರಬೇಕು. ಹೀಗಾಗಿ ಈ ಎರಡು ಶಾಸನಗಳಿಂದ ರಾಮಚಂದ್ರನ ಆಳ್ವಿಕೆಯ ಪ್ರಾರಂಭಕ್ಕೆ ಕ್ರಿ.ಶ. 1269 ಮತ್ತು 1273 ಎಂಬ ಎರಡು ಭಿನ್ನಕಾಲಗಳು ದೊರಕುತ್ತವೆ. ಸಿಂಘಣನ ಆಳ್ವಿಕೆಯ ವರ್ಷದಲ್ಲಿಯಂತೂ ಈ ತೊಂದರೆಯು ಇನ್ನೂ ಹೆಚ್ಚುತ್ತದೆಯೆಂಬುದನ್ನು ಕೆಳಗಿನ ಈ ಪಟ್ಟಿಯು ತೋರಿಸುತ್ತದೆ.

| ಸಂಖ್ಯೆ | ಶಾಸನದ ಸ್ಥಳ | ಕಾಲ | ಆಳ್ವಿಕೆಯ ವರ್ಷ | ಮೊದಲ ವರ್ಷ |
|---|---|---|---|---|
| 1 | ಸಂಗಂ, ಬಿಜಾಪುರ 11 | ಕ್ರಿ.ಶ. 1213 | 14 | 1200 |
| 2 | ಕಂಡಗಾಲ್ " 12 | ಕ್ರಿ.ಶ. 1220 | 21 | 1200 |
| 3 | ತಾಳಿಕೋಟೆ " 13 | ಕ್ರಿ.ಶ. 1224 | 26 | 1200 |
| 4 | ಉದಗುತ್ತಿ, ಧಾರ್ವಾಡ 14 | ಕ್ರಿ.ಶ. 1207 | 1 | 1207 |
| 5 | ಕಲ್ಕೇರಿ " 15 | ಕ್ರಿ.ಶ. 1224 | 16 | 1209 |
| 6 | ತಿಳಿವಳ್ಳಿ, " 16 | ಕ್ರಿ.ಶ. 1238 | 27 | 1212 |
| 7 | ಎಲೆವಾಲ, ಶಿವಮೊಗ್ಗ 17 | ಕ್ರಿ.ಶ. 1241 | 49 | 1193 |
| 8 | ತಟ್ಟೂರು " 18 | ಕ್ರಿ.ಶ. 1233 | 34 | 1200 |
| 9 | ಕಲ್ಲೂರು " 19 | ಕ್ರಿ.ಶ. 1224 | 16 | 1209 |

ಇದರಿಂದ ಸಿಂಘಣನ ಆಳ್ವಿಕೆಯ ವರ್ಷದಲ್ಲಿ ಎಷ್ಟೊಂದು ಭಿನ್ನ ಮಾಹಿತಿಗಳು ಶಾಸನಗಳಿಂದ ದೊರಕುತ್ತವೆ ಎಂಬುದು ಗೊತ್ತಾಗುತ್ತದೆ. ಇದಕ್ಕೆ ಕಾರಣಗಳೇನು ಎಂಬುದನ್ನು ಹೇಳುವುದು ಕಷ್ಟ ಸಾಧ್ಯವಾದ ಕೆಲಸವೇ ಸರಿ. ಆದರೆ ಒಂದು ಸಂಗತಿ ಮಾತ್ರ ನಮ್ಮ ಗಮನವನ್ನು ಸೆಳೆಯುತ್ತದೆ. ಬಿಜಾಪುರದ

ಶಾಸನಗಳು ಸಾಮಾನ್ಯವಾಗಿ ಕ್ರಿ.ಶ. 1200 ಸಿಂಘಣನ ಆಳ್ವಿಕೆಯ ಮೊದಲನೆಯ ವರ್ಷವೆಂಬುವನ್ನು ಸೂಚಿಸುತ್ತವೆ. ಇತರ ಜಿಲ್ಲೆಯ-ಶಾಸನಗಳಲ್ಲಿ ಈ ಒಮ್ಮತ ಕಾಣಬರುವುದಿಲ್ಲ. ದೇವಗಿರಿಯು ಸೇವುಣರ ರಾಜಧಾನಿಯಾಗಿದ್ದರೂ, ಬಿಜಾಪುರವು ಸಿಂಘಣನ ಯುದ್ಧದ ಮುಖ್ಯ ಕೇಂದ್ರವಾಗಿದ್ದತು. ಅಷ್ಟೇ ಅಲ್ಲದೆ ಅವರು ಈ ಜಿಲ್ಲೆಯ ಸುತ್ತಮುತ್ತಲ ಭಾಗಗಳ ಮೇಲೆ ತಮ್ಮ ಆಧಿಪತ್ಯವನ್ನು ಸ್ಥಿರವಾಗಿ ಸ್ಥಾಪಿಸಿಕೊಂಡಿದ್ದರು. ಆದರೆ ಧಾರ್ವಾಡ, ಶಿವಮೊಗ್ಗ ಮುಂತಾದ ಜಿಲ್ಲೆಗಳು ಯುದ್ಧದ ಪ್ರದೇಶಗಳಾಗಿದ್ದು, ಕೆಲವು ಕಾಲ ಅವು ಹೊಯ್ಸಳರ ಆಧಿಪತ್ಯದಲ್ಲೂ ಮತ್ತೆ ಕೆಲವು ಸಾರಿ ಸೇವುಣರ ಆಧಿಪತ್ಯದಲ್ಲಿಯೂ ಸೇರಿಹೋಗಿದ್ದವು. ಆದುದರಿಂದ ಈ ಜಿಲ್ಲೆಯ ಶಾಸನಗಳಲ್ಲಿ ಭಿನ್ನತೆ ಬಂದಿರಬಹುದು ಎಂದು ಸೂಚಿಸಬಹುದು. ಬಿಜಾಪುರವು ಯಾವಾಗಲೂ ಸೇವುಣರ ಆಳ್ವಿಕೆಗೇ ಸೇರಿದ್ದರಿಂದ ಅಲ್ಲಿ ಈ ಭಿನ್ನತೆಗೆ ಅವಕಾಶವಾಗಿಲ್ಲದಿರಬಹುದು. ಅದು ಹೇಗಾದರೂ ಇರಲಿ, ಇದರಿಂದ ಮುಖ್ಯವಾಗಿ ವ್ಯಕ್ತವಾಗುವ ಸಂಗತಿಯೆಂದರೆ, ರಾಜನ ಆಳ್ವಿಕೆಯ ವರ್ಷಗಳು ನಂಬಲರ್ಹವಾದುದಲ್ಲವೆಂಬುದು. ಆದುದರಿಂದ ಶಾಸನದಲ್ಲಿ ಉಲ್ಲೇಖಿತವಾಗಿರುವ ಕಾಲಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಟ್ಟು, ಈ ಆಳ್ವಿಕೆಯ ವರ್ಷಗಳನ್ನು ಅಷ್ಟಾಗಿ ಗಮನಕ್ಕೆ ತಂದುಕೊಳ್ಳದೇ ಇರುವುದು ಕ್ಷೇಮಕರ.

ನಾವು ಆಗಲೇ ಗಮನಿಸಿರುವಂತೆ ಐದನೆಯ ಭಿಲ್ಲಮನು ಕ್ರಿ.ಶ. 1173 ರಿಂದಲೇ ರಾಜ್ಯವಾಳಲು ಪ್ರಾರಂಭಿಸಿದನು. ಅವನ ಕೊನೆಯ ಶಾಸನವು ಕ್ರಿ.ಶ. 1192 ರ ಹಿಪ್ಪರ್ಗಿಯ ಶಾಸನ.[20] ಇವನ ಉತ್ತರಾಧಿಕಾರಿಯಾದ ಜೈತುಗಿಯ ಮೊದಲನೆಯ ಶಾಸನ ಕಡ್ಲೆವಾಡದಲ್ಲಿ (ಬಿಜಾಪುರ ಜಿಲ್ಲೆ) ದೊರಕಿದೆ. [21] ಇದರ ಕಾಲ ಶಕ 1114, ಪರೀಧಾವಿ, ಪುಷ್ಯ 10, ಭಾನುವಾರ ಅಂದರೆ ಕ್ರಿ.ಶ. 1192 ಡಿಸೆಂಬರ್ 30. ಆದುದರಿಂದ ಭಿಲ್ಲಮನು ಕ್ರಿ.ಶ. 1192 ನೆಯ ವರ್ಷದ ಆಗಸ್ಟ್ 31 ಮತ್ತು ಡಿಸೆಂಬರ್ 30, ಈ ಅವಧಿಯಲ್ಲಿ ಮರಣಹೊಂದಿರಬೇಕು. ಆದುದರಿಂದ ಭಿಲ್ಲಮನ ಕಾಲ ಕ್ರಿ.ಶ. 1173-1192.

ಕ್ರಿ.ಶ. 1192 ರಲ್ಲಿ ಪಟ್ಟಕ್ಕೆ ಬಂದ ಜೈತುಗಿಯ ಕೊನೆಯ ಶಾಸನವು ಕೂಡಿಗಿ ಎಂಬಲ್ಲಿ ದೊರಕಿದೆ.[22] ಇದರ ಕಾಲ ದುರ್ಮತಿ, ಪುಷ್ಯ ಶುದ್ಧ 11, ಸೋಮವಾರ ಅಂದರೆ ಕ್ರಿ.ಶ. 1200. ಜೈತುಗಿಯ ಉತ್ತರಾಧಿಕಾರಿಯಾದ ಸಿಂಘಣ ಮೊಟ್ಟ ಮೊದಲನೆಯ ಶಾಸನದ ಕಾಲ ರೌದ್ರಿ, ವೈಶಾಖ, ಬಹುಳ 15 ಸೋಮವಾರ ಸೂರ್ಯಗ್ರಹಣ ಅಂದರೆ, ಕ್ರಿ.ಶ. 1200. [23] ಈ ಶಾಸನವು ಬಿಜಾಪುರ ಜಿಲ್ಲೆಯ ಕುಮ್ಮ ಎಂಬಲ್ಲಿ ದೊರಕಿದೆ. ಅಂದರೆ ಜೈತುಗಿಯ ಕೊನೆಯ ವರ್ಷವೂ ಮತ್ತು ಸಿಂಘಣನು ಪಟ್ಟಕ್ಕೆ ಬಂದ ವರ್ಷವೂ ಕ್ರಿ.ಶ. 1200 ಆಗಿರುವುದರಿಂದ, ಜೈತುಗಿಯೂ ಕ್ರಿ.ಶ. 1200 ರಲ್ಲಿ ಮರಣಹೊಂದಿದನೆಂದೂ ಸಿಂಘಣನು ಅದೇ ವರ್ಷ ರಾಜನಾದನೆಂದೂ ಗೊತ್ತಾಗುತ್ತದೆ. ಆದರೆ ಆಲ್ತೇಕರ್‌ರವರು ಸಿಂಘಣನು

ಕ್ರಿ.ಶ. 1210 ರಲ್ಲಿ ಪಟ್ಟಕ್ಕೆ ಬಂದನೆಂದೂ, ಮತ್ತು ಕ್ರಿ.ಶ. 1200 ರಿಂದ 1210ರ ವರೆಗೆ ಅವನು ಯುವರಾಜನಾಗಿದ್ದನೆಂದೂ ಹೇಳಿದ್ದಾರೆ.[24] ಇದು ಸರಿಯಾದುದಲ್ಲವೆಂದು ಹೇಳಬೇಕು. ಕ್ರಿ.ಶ. 1200 ರ ಅನಂತರ ಜೈತುಗಿಯ ಶಾಸನಗಳೂ ಇಲ್ಲ ಅಥವಾ ಸಮಕಾಲೀನ ರಾಜವಂಶದ ಶಾಸನಗಳಲ್ಲಿ ಅವನ ಉಲ್ಲೇಖವು ಬರುವುದೂ ಇಲ್ಲ. ಜೈತುಗಿಯು ಕಾಕತೀಯ ಗಣಪತಿಯನ್ನು ಆಂಧ್ರರಾಜನನ್ನಾಗಿ ಮಾಡಿದುದು ಕ್ರಿ.ಶ. 1198 ರಲ್ಲಿ. ಸಿಂಘಣನ ಶಾಸನಗಳು ಕ್ರಿ.ಶ. 1200 ರಿಂದಲೇ ಅಧಿಕ ಸಂಖ್ಯೆಯಲ್ಲಿ ದೊರಕುತ್ತವೆ. ಕ್ರಿ.ಶ. 1200-1210,ಈ ಕಾಲದ ಸಿಂಘಣನ ಶಾಸನಗಳಲ್ಲಿ ಅವನನ್ನು ಯುವರಾಜನೆಂದು ಕರೆದಿಲ್ಲ. ಸಿಂಘಣನಿಗೆ ಸಾರ್ವಭೌಮ ಸೂಚಕವಾದ ಬಿರುದುಗಳೇ ಇವೆ. ಅಷ್ಟೇ ಅಲ್ಲದೆ ಜೈತುಗಿಯು ಕ್ರಿ.ಶ. 1210 ರವರೆಗೆ ಜೀವಿಸಿದ್ದರೆ, ಅವನ ಶಾಸನಗಳು ಕ್ರಿ.ಶ. 1200ರಿಂದೀಚೆಗೆ ಏಕೆ ದೊರಕಿಲ್ಲ ಎಂಬ ಪ್ರಶ್ನೆಗೆ ಉತ್ತರ ದೊರಕುವುದಿಲ್ಲ. ಆದುದರಿಂದ ಫ್ಲೀಟ್, ಭಂಡಾರ್‌ಕರ್ ಅವರ ಅಭಿಪ್ರಾಯಗಳಿಗೆ ಮನ್ನಣೆ ಕೊಟ್ಟು, ಅದನ್ನೇ ಅನುಮೋದಿಸಿದ ಆಲ್ಟೇಕರರ ಅಭಿಪ್ರಾಯವು ತಪ್ಪು ಎಂದು ಹೇಳಬೇಕಾಗುತ್ತದೆ. ನಾವು ಆಗಲೇ ಗಮನಿಸಿರುವಂತೆ ಬಿಜಾಪುರ ಜಿಲ್ಲೆಯ ಶಾಸನಗಳಿಂದ ಸಿಂಘಣನ ಆಳ್ವಿಕೆಯ ಮೊದಲ ವರ್ಷ ಕ್ರಿ.ಶ. 1200 ಎಂದು ಗೊತ್ತಾಗುತ್ತದೆ. ಆದುದರಿಂದ ಜೈತುಗಿಯು ಕ್ರಿ.ಶ. 1200 ರಲ್ಲಿ ಮರಣಹೊಂದಲು ಅವನ ಮಗನಾದ ಸಿಂಘಣನು ಅದೇ ವರ್ಷದಲ್ಲಿ ಪಟ್ಟಕ್ಕೆ ಬಂದನೆಂದು ಖಚಿತವಾಗಿ ಹೇಳಬೇಕು. ಸಿಂಘಣನ ಶಾಸನಗಳು ಕ್ರಿ.ಶ. 1247 ರವರೆಗೆ ದೊರಕುತ್ತವೆ. ಆದುದರಿಂದ ಅವನು ಅಲ್ಲಿಯವರೆಗೆ ರಾಜ್ಯಭಾರ ಮಾಡುತ್ತಿದ್ದನೆಂದು ಹೇಳಬೇಕಾಗುತ್ತದೆ. ಆದುದರಿಂದ ಸಿಂಘಣನ ರಾಜ್ಯಭಾರ ಕಾಲ ಕ್ರಿ.ಶ. 1200-1247.

ಸಿಂಘಣನ ಮಗನಾದ ಜೈತುಗಿಯು ತನ್ನ ತಂದೆಗಿಂತ ಮೊದಲೇ ಮೃತನಾದುದರಿಂದ, ಸಿಂಘಣನ ಅನಂತರ ಅವನ ಮೊಮ್ಮಗನಾದ ಕೃಷ್ಣನು ಪಟ್ಟಕ್ಕೆ ಬಂದನು. ಈ ಕೃಷ್ಣನ ಅತ್ಯಂತ ಪ್ರಾಚೀನ ಶಾಸನವು ಬೆಳ್ಳಾಂಬಿ ಎಂಬಲ್ಲಿ ದೊರಕಿದೆ.[25] ಇದರ ಕಾಲ ಶಕ 1169, ಪ್ಲವಂಗ, ಅಷಾಢ ಬಹುಳ 1, ಅಂದರೆ ಕ್ರಿ.ಶ. 1247, ಜೂನ್ 20. ಸಿಂಘಣನ ಮರಣಾನಂತರ ಅದೇ ವರ್ಷದಲ್ಲಿ ಅಂದರೆ ಕ್ರಿ.ಶ. 1247 ರಲ್ಲಿ ಕೃಷ್ಣನು ಪಟ್ಟಕ್ಕೆ ಬಂದನೆಂದು ಗೊತ್ತಾಗುತ್ತದೆ. ಕೃಷ್ಣನ ಕೊನೆಯ ಶಾಸನದ ಕಾಲ ಶಕ 1184, ದುರ್ಮತಿ ಅಂದರೆ ಕ್ರಿ.ಶ. 1261. ಈ ಶಾಸನವು ಬೆಳಗಾಂನಲ್ಲಿ ದೊರಕಿದೆ.[26] ಕೃಷ್ಣನ ಉತ್ತರಾಧಿಕಾರಿಯಾದ ಅವನ ಸಹೋದರ ಮಹಾದೇವನ ಮೊಟ್ಟಮೊದಲನೆಯ ಶಾಸನದ ಕಾಲವೂ ಕ್ರಿ.ಶ. 1261. ಅಂದ ಮೇಲೆ ಕೃಷ್ಣನ ರಾಜ್ಯಭಾರ ಕಾಲ ಕ್ರಿ.ಶ. 1247-1261.

ಮಹಾದೇವನ ಮೊಟ್ಟಮೊದಲನೆಯ ಶಾಸನವಾದ ಕಾಳೆಗಾಂವ್ ತಾಮ್ರಪತ್ರದಲ್ಲಿ ಅವನು ಪಟ್ಟಕ್ಕೆ ಬಂದ ಶುಭದಿನದಲ್ಲಿ ಕೊಟ್ಟ ದಾನದ ವಿವರಗಳಿವೆ.[27]

ಇದರ ಕಾಲ ಕ್ರಿ.ಶ.1261. ಈ ಮಹಾದೇವನ ಕೊನೆಯ ಶಾಸನವು ಕಲ್ಕೇರಿ ಎಂಬಲ್ಲಿ ದೊರಕಿದ್ದು, ಇದರ ಕಾಲ ಪ್ರಮೋದೂತ, ಜ್ಯೇಷ್ಠ ಶುದ್ಧ 5, ಸೋಮವಾರ ಅಂದರೆ ಕ್ರಿ.ಶ.1270, ಮೇ26.[28] ಮಹಾದೇವನ ಆನಂತರ ಅವನ ಮಗನಾದ ಆಮನು ಪಟ್ಟಕ್ಕೆ ಬಂದನು. ಆದರೆ ಕೃಷ್ಣನ ಮಗನಾದ ರಾಮ ಚಂದ್ರನು ತಾನೇ ರಾಜ್ಯಕ್ಕೆ ಹಕ್ಕುದಾರನೆಂದು ಆಮಣನ ಮೇಲೆ ಯುದ್ಧ ಮಾಡಿ ಅವನನ್ನು ಸೋಲಿಸಿ ತಾನೇ ರಾಜನಾದನು. ಆದುದರಿಂದ ಆಮಣನು ಕೇವಲ ಒಂದು ವರ್ಷಕ್ಕೂ ಕಡಿಮೆಯ ಕಾಲ ರಾಜನಾಗಿದ್ದನು. ರಾಮಚಂದ್ರನ ಮೊಟ್ಟ ಮೊದಲನೆಯ ಶಾಸನ ಕ್ರಿ.ಶ. 1271 ಕ್ಕೆ ಸೇರಿದೆ. [29] ಆದುದರಿಂದ ಮಹಾದೇವನ ಆಳ್ವಿಕೆಯ ಕಾಲ ಕ್ರಿ.ಶ. 1261-1270 ಮತ್ತು ಆಮಣನ ಆಳ್ವಿಕೆಯ ಕಾಲ ಕ್ರಿ.ಶ. 1270-71.

ರಾಮಚಂದ್ರನ ಕೊನೆಯ ಶಾಸನದ ಕಾಲ ಪರೀಧಾವಿ, ಜ್ಯೇಷ್ಠ, ಬಹುಳ 11, ಅಂದರೆ ಕ್ರಿ.ಶ. 1313.[30] ಇದು ಶಿವಮೊಗ್ಗ ಜಿಲ್ಲೆಯ ಕಲ್ಲೂರು ಎಂಬಲ್ಲಿ ದೊರಕಿದೆ. ಅಮೀರ್ ಖುಸ್ರು ಎಂಬ ಚರಿತ್ರಕಾರನ ಪ್ರಕಾರ ರಾಮಚಂದ್ರನು 13, ರಂಜಾನ್, ಹಿಜಿರಾ 710 ಅಂದರೆ ಕ್ರಿ.ಶ. 1311, ಫೆಬ್ರುವರಿ 3, ಈ ದಿನ ದೋರ ಸಮುದ್ರದ ಮೇಲೆ ದಂಡೆತ್ತಿ ಹೋಗುತ್ತಿದ್ದ ಮಹಮ್ಮದೀಯ ಸೈನ್ಯಕ್ಕೆ ಬೇಕಾದ ಸಹಾಯವನ್ನು ಮಾಡಿದನೆಂದು ಗೊತ್ತಾಗುತ್ತದೆ.[31] ಇಸಾಮಿ ಎಂಬ ಇನ್ನೊಬ್ಬ ಚರಿತ್ರಕಾರನು 23, ರಂಜಾನ್ ಹಿಜಿರ 711, ಅಂದರೆ ಕ್ರಿ.ಶ. 1312, ಫೆಬ್ರುವರಿ 4ನೆಯ ತಾರೀಖು ದೆಹಲಿಯಲ್ಲಿ ನಡೆದ ರಾಜಕುಮಾರ ಖಿಸ್ರ್‌ಖಾನನ ಮದುವೆಯಲ್ಲಿ, ರಾಮಚಂದ್ರನು ಭಾಗವಹಿಸಿದ್ದನೆಂದು ತಿಳಿಸುತ್ತಾನೆ.[32] ಆದರೆ ಫಿರಿಷ್ಟನೆಂಬ ಚರಿತ್ರಕಾರನು ಹಿಜಿರ 710 ಅಂದರೆ ಕ್ರಿ.ಶ. 1310-11 ರಲ್ಲಿ ರಾಮಚಂದ್ರನು ಮರಣ ಹೊಂದಿದ್ದನೆಂದು ಹೇಳುತ್ತಾನೆ.[33] ಫಿರಿಷ್ಟನ ಬರವಣಿಗೆಯು ನಂಬಲರ್ಹವಾದುದಲ್ಲವೆಂದು, ನಾವು ಆಗಲೇ ಗಮನಿಸಿದ್ದೇವೆ. ಆದರೆ ಫ್ಲೀಟ್, ಭಂಡಾರಕರ್ ಮತ್ತು ಆಲ್ಟೇಕರ್‌ರವರು ಈ ಆಧಾರದ ಮೇಲೆ ರಾಮಚಂದ್ರನ ಮರಣವು ಕ್ರಮವಾಗಿ ಕ್ರಿ.ಶ. 1310, 1309 ಮತ್ತು 1311 ರಲ್ಲಿ ಆಯಿತು ಎಂದು ಹೇಳಿದ್ದಾರೆ. ಆದರೆ ಕಲ್ಲೂರು ಶಾಸನದ ಆಧಾರದ ಮೇಲೆಯೂ, ಇಸಾಮಿ ಮತ್ತು ಅಮೀರ್ ಖುಸ್ರು ಎಂಬ ಮಹಮ್ಮದೀಯ ಚರಿತ್ರಕಾರರ ಬರವಣಿಗೆಯ ಪ್ರಕಾರವೂ, ಫ್ಲೀಟ್, ಭಂಡಾರ್‌ಕರ್ ಮತ್ತು ಆಲ್ಟೇಕರ್‌ರವರ ಅಭಿಪ್ರಾಯಗಳು ತಪ್ಪೆಂದೂ, ರಾಮ ಚಂದ್ರನು ಕ್ರಿ.ಶ. 1312ರಲ್ಲಿ ಮರಣಹೊಂದಿದನೆಂದೂ ಖಚಿತವಾಗಿ ಹೇಳಬಹುದಾಗಿದೆ.

ರಾಮಚಂದ್ರನ ಅನಂತರ ಅವನ ಮಗನಾದ ಎರಡನೆಯ ಸಿಂಘಣನು ಪಟ್ಟಕ್ಕೆ ಬಂದನು. ಆದರೆ ಇವನು ಕ್ರಿ.ಶ. 1296 ರಿಂದಲೇ ಯುವರಾಜನಾಗಿ ತನ್ನ ತಂದೆಗೆ ಸಹಾಯ ಮಾಡುತ್ತಿದ್ದನು. ತನ್ನ ತಂದೆಯ ಮರಣಾನಂತರ ಇವನು ಮಲ್ಲಿಕ್ ಕಾಫರನ ಮೇಲೆ ದಂಗೆಯೆದ್ದು, ಅವನಿಂದ ಸೋಲಿಸಲ್ಪಟ್ಟು ಕೊಲ್ಲಲ್ಪಟ್ಟನು.

ಇದು ಕ್ರಿ.ಶ.1313ರಲ್ಲಿ ಆಗಿರಬೇಕು. ಇವನ ಮರಣಾನಂತರ ದೇವಗಿರಿಯು ಮಹಮ್ಮದೀಯರ ವಶವಾಯಿತು. ಮಲ್ಲಿಕ್ ಕಾಫರನು ಕ್ರಿ.ಶ.1315ರವರೆಗೆ ಅಲ್ಲಿಯೇ ಇದ್ದನು. ಕ್ರಿ.ಶ.1315ರಲ್ಲಿ ಅವನು ದೆಹಲಿಗೆ ಹಿಂದಿರುಗಿದನು. ಇದನ್ನು ನೋಡಿದ ರಾಮಚಂದ್ರನ ಅಳಿಯನಾದ ಹರಪಾಲದೇವನು ಕ್ರಿ.ಶ.1315ರಲ್ಲಿ ದೇವಗಿರಿಯನ್ನು ತನ್ನ ವಶಮಾಡಿಕೊಂಡನು. ಕ್ರಿ.ಶ.1318ರಲ್ಲಿ ಖುಸ್ರುಖಾನನು ದೇವಗಿರಿಗೆ ಬಂದು ಹರಪಾಲನನ್ನು ಕೊಲ್ಲಿಸಿದನು.

ಇತ್ತೀಚೆಗೆ ಧೂಲಿಯ ಜಿಲ್ಲೆಯ ಬೊರಡಿ ಎಂಬಲ್ಲಿ ದೊರಕಿರುವ ಶಾಸನದ ಪ್ರಕಾರ ಸಿಂಘಣನ ಮಗನಾದ ಮೇಲುಗಿದೇವನು ರಾಜ್ಯವಾಳುತ್ತಿದ್ದನೆಂದು ಗೊತ್ತಾಗುತ್ತದೆ.[34] ಈ ಶಾಸನದ ಕಾಲ ಕ್ರಿ.ಶ. 1333-34 ಎಂದು ಶಾಸನ ಶಾಖೆಯ ಮುಖ್ಯಾಧಿಕಾರಿಗಳು ನಿರ್ಧರಿಸಿದ್ದಾರೆ. ಆದುದರಿಂದ ಈ ಮೇಲುಗಿದೇವನು ಸೇವುಣ ವಂಶದವನೇ ಆಗಿದ್ದು, ಸಿಂಘಣನ ಮಗನಾಗಿರಬೇಕು. ಇದೇ ಸೇವುಣ ರಾಜರ ಕೊನೆಯ ಶಾಸನ.

## ಟಿಪ್ಪಣಿಗಳು

1. EI. Vol. II. P. 212
2. IA. Vol. XVII, P. 117 ; A 12 of 1957-58
3. ಅದೇ
4. ಅದೇ
5. IA. Vol. XII, P. 119
6. EI. Vol. XXXVI, P. 249
7. B 33 of 1964-65
8. EI. Vol. XV, P. 322
9. EC. Vol. XI, ದಾವಣಗೆರೆ 27
10. SII, Vol. IX, Part i, no. 365
11. ಅದೇ, Vol. XV, no. 160
12. ಅದೇ, no. 164
13. ಅದೇ, no. 171
14. ಅದೇ, Vol. XX, no. 187
15. ಅದೇ, no. 196
16. 255 of 1945-46
17. EC. Vol. VIII, ಸೊರಬ 387
18. ಅದೇ, ಸೊರಬ 403
19. ಅದೇ, ಸೊರಬ 293

20. SII, Vol. XX, no. 178
21. BK 50 of 1936-37
22. ಅದೇ, no. 183
23. 181 of 1933-34
24. Yazdani (Ed) : E.H.D.
25. BK 14 of 1942-43
26. Karnataka Inscriptions, Vol. ii, P. 193
27. EI, Vol. XXXII, P. 31
28. SII. Vol. XX, no. 220
29. IA. Vol. XIV, P. 314
30. EC. Vol. VIII, ಸೊರಬ 295
31. ಖಜಾಇನ್-ಉಲ್-ಫು ತುಹ್, Journal of Indian History, Vol. IX, Pp. 53-54
32. ಇಸಾಮಿ, P. 312
33. Elliott, Vol. III, P. 203
34. B 744 of 1962-63

* * *

ಅಧ್ಯಾಯ ೪

# ಪೂರ್ವಜರ ಚರಿತ್ರೆ

ಹೇಮಾದ್ರಿಯ ರಾಜಪ್ರಶಸ್ತಿಯ ಪ್ರಕಾರ ಪ್ರತಿಬಾಹುವಿನ ಮಗನಾದ ಸುಬಾಹುವು ಚಕ್ರವರ್ತಿಯಾಗಿದ್ದು, ತನ್ನ ರಾಜ್ಯವನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿ, ದಕ್ಷಿಣದ ಭಾಗವನ್ನು ತನ್ನ ಎರಡನೆಯ ಮಗನಾದ ದೃಢಪ್ರಹಾರನಿಗೆ ಕೊಟ್ಟನು ಎಂದು ತಿಳಿದುಬರುತ್ತದೆ. ಈ ಸುಬಾಹುವಿನ ಹೆಸರು ಸೇವುಣರ ಯಾವ ಶಾಸನಗಳಲ್ಲಿಯೂ ಕಾಣಬರುವುದಿಲ್ಲ. ಆದುದರಿಂದ ಅವನು ಚರಿತ್ರಾರ್ಹ ರಾಜನೇ ಎಂದು ಹೇಳಲು ಯಾವ ಆಧಾರಗಳೂ ಇಲ್ಲ. ಪ್ರತಿಬಾಹುವಿನಂತೆ ಅವನೂ ಪುರಾಣ ಪುರುಷ ಎಂದು ಹೇಳಬೇಕಾಗುತ್ತದೆ. ಮೇಥಿ, ಬಸೇನ್ ಮತ್ತು ಆಶ್ವಿ ಶಾಸನಗಳು ಸೇವುಣರ ವಂಶಾವಳಿಯನ್ನು ದೃಢಪ್ರಹಾರನಿಂದಲೇ ಪ್ರಾರಂಭಿಸುತ್ತವೆ.[1] ಆದರೆ ಸಂಗಮ್‌ನೇರ್ ಮತ್ತು ಕಲಾಸ್ ಬದ್ರುಕ್ ಶಾಸನಗಳ ಪ್ರಕಾರ ದೃಢಪ್ರಹಾರನ ಉತ್ತರಾಧಿಕಾರಿಯಾದ ಸೇವುಣಚಂದ್ರನೇ ಈ ವಂಶದ ಮೊದಲನೆಯ ದೊರೆ.[2] ಈ ವಂಶದಲ್ಲಿ ಸೇವುಣಚಂದ್ರನು ಮುಖ್ಯನಾಗಿದ್ದುದರಿಂದ, ಈ ವಂಶಕ್ಕೆ ಸೇವುಣವಂಶವೆಂದು ಹೆಸರಾದುದರಿಂದ, ಹಿಂದಿನವನಾದ ದೃಢಪ್ರಹಾರನನ್ನು ಕೆಲವು ಶಾಸನಗಳು ಕಡೆಗಾಣಿಸಿರಬೇಕು. ದೃಢಪ್ರಹಾರನು ಶ್ರೀನಗರ ಎಂಬಲ್ಲಿ ತನ್ನ ರಾಜಧಾನಿಯನ್ನು ಸ್ಥಾಪಿಸಿದನೆಂದು ಹೇಮಾದ್ರಿಯು ಹೇಳಿದ್ದರೆ ಬಸೇನ್ ಮತ್ತು ಆಶ್ವಿ ಶಾಸನಗಳು ಚಂದ್ರಾದಿತ್ಯಪುರ ಅವನ ರಾಜಧಾನಿಯೆಂದು ಉಲ್ಲೇಖಿಸುತ್ತವೆ. ಈ ಚಂದ್ರಾದಿತ್ಯಪುರವು ನಾಸಿಕ್ ಜಿಲ್ಲೆಯಲ್ಲಿರುವ ಈಗಿನ ಚಂದೋರ್ ಎಂದು ಗುರುತಿಸಬಹುದಾಗಿದೆ. ದೃಢಪ್ರಹಾರನು ಜೈನಗುರುವಾದ ಚಂದ್ರಪ್ರಭ ಸ್ವಾಮಿಯ ಆಶ್ರಯದಲ್ಲಿ ಬೆಳೆದನೆಂದು ಶಾಸನಗಳು ತಿಳಿಸುತ್ತವೆ. ಆದುದರಿಂದ ಶ್ರೀನಗರವೆಂಬ ರಾಜಧಾನಿಯ ಹೆಸರನ್ನು ದೃಢಪ್ರಹಾರನು ತನ್ನ ಗುರುವಾದ ಚಂದ್ರಪ್ರಭ ಸ್ವಾಮಿಯ ಗೌರವಾರ್ಥವಾಗಿ ಚಂದ್ರಾದಿತ್ಯಪುರ ಎಂದು ಕರೆದಿರಬೇಕು. ಆದುದರಿಂದ ಕೆಲವು ಶಾಸನಗಳು ಅದನ್ನು ಚಂದ್ರಾದಿತ್ಯಪುರ ಎಂದು ವ್ಯವಹರಿಸಿರಬೇಕು.

ಅನಂತರ ರಾಜನಾದವನೇ ಮೊದಲನೆಯ ಸೇವುಣಚಂದ್ರ. ಇವನು ದೇವ ನದಿಯ ತೀರದಲ್ಲಿದ್ದ ಸಿಂದಿನೇರ ಎಂಬ ಪ್ರಾಂತ್ಯದಲ್ಲಿ ಸೇವುಣಪುರ ಎಂಬ

ರಾಜಧಾನಿಯನ್ನು ಸ್ಥಾಪಿಸಿದನು. ಇವನಿಂದ ಈ ವಂಶಕ್ಕೆ ಸೇವುಣ ವಂಶವೆಂಬ ಹೆಸರು ಬಂದಿತೆಂಬುದನ್ನು ಆಗಲೇ ಗಮನಿಸಿದ್ದೇವೆ. ಇವನ ಅನಂತರ ಧಡಿಯಪ್ಪನು ರಾಜನಾದನು. ಶಾಸನಗಳಲ್ಲಿ ಇವನ ಹೆಸರು ದಡಿಪಕ, ಧ್ವಾಡಿಯಪ್ಪ ಮತ್ತು ಧಡಿಯಸ ಎಂಬ ವಿವಿಧ ರೂಪಗಳಲ್ಲಿ ಕಾಣಬರುತ್ತವೆ. ಧಡಿಯಪ್ಪನಿಗೂ ಸೇವುಣ ಚಂದ್ರನಿಗೂ ಇದ್ದ ಬಾಂಧವ್ಯವನ್ನು ಯಾವ ಶಾಸನಗಳಲ್ಲಿಯೂ ಹೇಳಿಲ್ಲ.

ಧಡಿಯಪ್ಪನ ಅನಂತರ ಅವನ ಮಗನಾದ ಮೊದಲನೆಯ ಭಿಲ್ಲಮನು ರಾಜನಾದನು. ಇವನ ವಿಚಾರವಾಗಿ ಇನ್ನೇನೂ ತಿಳಿದಿಲ್ಲ. ಈ ಭಿಲ್ಲಮನಿಗೆ ರಾಜಗಿ ಎಂಬ ಮಗನಿದ್ದನು. ತನ್ನ ತಂದೆಯ ಮರಣಾನಂತರ ರಾಜಗಿಯು ದೊರೆಯಾದನು. ಸಂಗಮ್‌ನೇರ್, ಮೇಥಿ ಮತ್ತು ಕಾಳೆಗಾಂವ್ ಶಾಸನಗಳಲ್ಲಿ ಇವನ ಹೆಸರು ರಾಜ ಎಂದು ಉಲ್ಲೇಖಿತವಾಗಿದೆ. ರಾಜಗಿಯ ಮರಣಾನಂತರ ವಾಡುಗಿಯು ದೊರೆಯಾದನು. ಇವನ ಹೆಸರು ವದ್ದಿಗ, ವಂಡಿಗ, ಬಾಡುಗಿ ಎಂಬ ಇತರ ರೂಪಗಳಲ್ಲಿಯೂ ದೊರೆಯುತ್ತದೆ. ಇವನು ಕೃಷ್ಣರಾಜನ ಅನುಯಾಯಿಯೆಂದು ಶಾಸನಗಳು ತಿಳಿಸುತ್ತವೆ. ಈ ಕೃಷ್ಣರಾಜನು ರಾಷ್ಟ್ರಕೂಟ ವಂಶದ ಮೂರನೆಯ ಕೃಷ್ಣನೆಂದು (ಕ್ರಿ.ಶ.939-967) ಸುಲಭವಾಗಿ ಊಹಿಸಬಹುದು. ಇದೇ ಸಮಯದಲ್ಲಿ ಸೇವುಣರು ಪ್ರಾಮುಖ್ಯವನ್ನು ಪಡೆದಿದ್ದು, ಆದುದರಿಂದ ಸೇವುಣ ವದ್ದಿಗನು ನಾಲ್ಕನೆಯ ಗೋವಿಂದನನ್ನು ಪದಚ್ಯುತನನ್ನಾಗಿ ಮಾಡಲು ಸಹಾಯ ಮಾಡಿ, ಮೂರನೆಯ ಕೃಷ್ಣನ ಸ್ನೇಹವನ್ನು ಸಂಪಾದಿಸಿ ಅದರಿಂದ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡಿರಬೇಕು. ವದ್ದಿಗನು ದೋರಪ್ಪ ಮಹಾನೃಪನ ಮಗಳಾದ ವದ್ದಿಯವ್ವಳನ್ನು ಮದುವೆಯಾದನು.[3] ಕೀಲ್‌ಹಾರ್ನ್‌ರವರು ಈ ದೋರಪ್ಪನು ಮೂರನೆಯ ಕೃಷ್ಣನ ಸಹೋದರನಾದ ನಿರುಪಮನೆಂದು ಅಭಿಪ್ರಾಯ ಪಟ್ಟಿದ್ದಾರೆ.[4] ನಿರುಪಮನಿಗೆ ಧ್ರುವ ಎಂಬ ಹೆಸರಿದ್ದಿರಬೇಕೆಂದೂ, ದೋರಪ್ಪ ಎನ್ನುವುದು ಆ ಹೆಸರಿನ ಪ್ರಾಕೃತ ರೂಪವೆಂದು ಕೀಲ್‌ಹಾರ್ನ್‌ರವರ ತರ್ಕ. ಆದರೆ ಶಾಸನಗಳಲ್ಲಿ ನಿರುಪಮನಿಗೆ ಧ್ರುವ ಎಂಬ ಹೆಸರಿದ್ದುದು ಎಲ್ಲಿಯೂ ಕಾಣಬರುವುದಿಲ್ಲ. ಸಂತ ಲಾಲ ಕಟಾರೆಯವರು ಈ ದೋರಪ್ಪನು ಚಾಳುಕ್ಯವಂಶದವನೆಂದು ಹೇಳಿದ್ದಾರೆ.[5] ಆದರೆ ಯಾವ ಚಾಳುಕ್ಯ ಶಾಸನಗಳಲ್ಲಿಯೂ ಈ ವಿವಾಹದ ವಿಚಾರವೇ ಇಲ್ಲದಿರುವುದು ಗಮನಾರ್ಹವಾದುದು. ಅಷ್ಟೇ ಅಲ್ಲದೆ, ರಾಷ್ಟ್ರಕೂಟರ ಆಶ್ರಯದಲ್ಲಿ ಬೆಳೆಯುತ್ತಿದ್ದ ಸೇವುಣರು ಚಾಳುಕ್ಯರ ಮನೆತನ ದೊಡನೆ ವಿವಾಹ ಸಂಬಂಧವನ್ನು ಬೆಳೆಸುವಷ್ಟು ಶಕ್ತರಾಗಿದ್ದರೇ ಎಂಬ ಪ್ರಶ್ನೆ ಏಳುತ್ತದೆ. ವದ್ದಿಗನ ವಿವಾಹವು ಶಾಸನಗಳಲ್ಲಿ ಪದೇ ಪದೇ ಉಲ್ಲೇಖಿತವಾಗಿರು ವುದನ್ನು ನೋಡಿದರೆ, ಅದರಲ್ಲಿ ಒಂದು ಮಹತ್ವವಿದ್ದಂತೆ ತೋರುತ್ತದೆ. ವದ್ದಿಗನ ರಾಜಕೀಯ ಜೀವನಕ್ಕೆ ಈ ವಿವಾಹದಿಂದ ಹೆಚ್ಚು ಉಪಯೋಗ ದೊರಕಿರಬೇಕು. ಆದುದರಿಂದ ದೋರಪ್ಪನು ಪ್ರಮುಖ ರಾಷ್ಟ್ರಕೂಟ ಸಾಮಂತನಾಗಿದ್ದಿರಬೇಕೆಂದು ಮಾತ್ರ ಹೇಳಬಹುದಾಗಿದೆ.

ವಡ್ಡಿಗನ ಮರಣಾನಂತರ ಧಡಿಯಮನೆಂಬುವನು ರಾಜನಾದನೆಂದು ಹೇಮಾದ್ರಿಯ ರಾಜಪ್ರಶಸ್ತಿಯಿಂದ ತಿಳಿದುಬರುತ್ತದೆ. ಆದರೆ ಶಾಸನಗಳು ಈ ಧಡಿಯಮನ ವಿಚಾರವನ್ನು ತಿಳಿಸುವುದೇ ಇಲ್ಲ. ಎರಡನೆಯ ಭಿಲ್ಲಮನು ಅಂತರ್ಯುದ್ಧದಲ್ಲಿ ಗೆದ್ದು ಸಿಂಹಾಸನವನ್ನು ತನ್ನ ವಶಮಾಡಿಕೊಂಡನು ಎಂಬುದು ಶಾಸನಗಳಿಂದ ತಿಳಿದಿರುವ ವಿಚಾರ. ಅಂದರೆ ವಡ್ಡಿಗನ ಅನಂತರ ಧಡಿಯಮ ನೆಂಬುವನು ರಾಜನಾದನೆಂದೂ, ಅವನ ಮೇಲೆ ಯುದ್ಧ ಮಾಡಿ ಅವನನ್ನು ಸೋಲಿಸಿ ಎರಡನೆಯ ಭಿಲ್ಲಮನು ರಾಜನಾದನೆಂದೂ ಹೇಳಬಹುದು.

ಎರಡನೆಯ ಭಿಲ್ಲಮನು ಲಚ್ಛಿಯವ್ವಳನ್ನು ಮದುವೆಯಾದನು. ಆಕೆಯು ರಾಷ್ಟ್ರಕೂಟ ಝಂಝ ರಾಜನ ಮಗಳು.[6] ಶಾಸನದ ಈ ಪದ್ಯವು ಹೀಗಿದೆ:

ಭಾರ್ಯಾಯಸ್ಯಚ ಝಂಝರಾಜತನಯಾ ಶ್ರೀ ಲಚ್ಛಿಯವ್ವಾಹ್ವಯಾ
ಧರ್ಮ ತ್ಯಾಗ ವಿವೇಕ ಬುದ್ಧಿ ಸುಗುಣಾ ರಾಷ್ಟ್ರಕೂಟಾನ್ವಯಾ
ಯಾ ಜಾತಾ ನವಬಾಲಾ ರಾಜ್ಯಸಮ ಯೇ ಯದನ್ವಯಾಧಾರಿತಾ
ಸಪ್ತಾಂಗೋದ್ಯತ ರಾಜ್ಯಭಾರಧರಣಾದ್ರಾಯತ್ರಯಾರ್ಥ್ಯಾ ತತಃ

ಭಂಡಾರಕರ್‌ರವರು ಈ ಶಾಸನದಲ್ಲಿ ಉಲ್ಲೇಖಿತವಾಗಿರುವ 'ರಾಯ ತ್ರಯರು' ಯಾರು ಎಂದು ಪ್ರಶ್ನೆಮಾಡಿದ್ದಾರೆ. ಸೇವುಣ ಮತ್ತು ರಾಷ್ಟ್ರಕೂಟ ವಂಶಗಳು ಹೇಳಲ್ಪಟ್ಟಿವೆ. ಹಾಗಾದರೆ ಮೂರನೆಯದು ಯಾವುದು ಎಂಬುದೇ ಅವರ ಪ್ರಶ್ನೆ. ಈ ಪ್ರಶ್ನೆಯನ್ನು ಉತ್ತರಿಸುವ ಸಲುವಾಗಿ ಅವರು ಝಂಝರಾಜನು ಶಿಲಾಹಾರ ವಂಶದವನೆಂದು ಹೇಳುತ್ತಾರೆ.[7] ಅಂದರೆ ಲಚ್ಛಿಯವ್ವಳ ತಂದೆ ಶಿಲಾಹಾರ ಕುಲದವನು, ತಾಯಿ ರಾಷ್ಟ್ರಕೂಟ ವಂಶದವಳು ಮತ್ತು ಗಂಡ ಯಾದವವಂಶದವನು. ಒಟ್ಟಿನಲ್ಲಿ ಮೂರು ವಂಶಗಳನ್ನು ಹೇಳಿದಂತಾಯಿತು ಎಂಬುದೇ ಭಂಡಾರಕರ್‌ರವರ ಅಭಿಪ್ರಾಯ. ಮೇಲಿನ ಪದ್ಯದಲ್ಲಿ ಲಚ್ಛಿಯವ್ವಳ 'ಅನ್ವಯ' ರಾಷ್ಟ್ರಕೂಟವೆಂಬುದು ಸ್ಪಷ್ಟ. ಆಕೆಯು ಝಂಝರಾಜನ ಮಗಳು. ಅದು ಹೇಳಿದ ಮೇಲೆ ಝಂಝರಾಜನೂ ರಾಷ್ಟ್ರಕೂಟವಂಶದವನೆಂದು ಹೇಳುವ ಅಗತ್ಯವಿಲ್ಲ. ಅಷ್ಟೇ ಅಲ್ಲದೆ 'ರಾಷ್ಟ್ರಕೂಟ ಝಂಝರಾಜತನಯಾ' ಮತ್ತು 'ರಾಷ್ಟ್ರ ಕೂಟಾನ್ವಯಾ' ಎಂಬ ಎರಡು ಪದಗಳು ಒಂದೇ ಪದ್ಯದಲ್ಲಿ ಬಂದಿದ್ದರೆ, ಶಾಸನ ಕಾರನು ಒಳ್ಳೆಯ ಕವಿಯಾಗುತ್ತಿರಲಿಲ್ಲ. ಅಷ್ಟೇ ಅಲ್ಲದೆ, ಛಂದಸ್ಸಿನ ದೃಷ್ಟಿ ಯಿಂದಲೂ ಅದು ಸಾಧ್ಯವಿಲ್ಲ. ಪುತ್ರಿಯು ವಿವಾಹವಾಗುವವರೆಗೆ ತನ್ನ ತಂದೆಯ ಕುಲಕ್ಕೇ ಸೇರಿದವಳು ಎಂಬುದು ನಿಸ್ಸಂದೇಹವಾದ ವಿಚಾರ. ಆದರೆ ಭಂಡಾರಕರ್ ರವರು ತಾಯಿಯ ಕಡೆಯಿಂದ ಆಕೆ ರಾಷ್ಟ್ರಕೂಟ ವಂಶದವಳು ಎಂದು ಹೇಳಿರುವುದು ಬಲು ಆಶ್ಚರ್ಯವಾಗಿದೆ. ಮಾತೃ ಯಾಜಮಾನ್ಯ ಪದ್ಧತಿಯ ಸಮಾಜವನ್ನು ಬಿಟ್ಟು ಮಿಕ್ಕೆಲ್ಲಾ ಕಡೆಗಳಲ್ಲಿಯೂ ಕನ್ನಿಕೆಯರಿಗೆ ಅನ್ವಯ ಎಂದರೆ

ತಂದೆಯ ವಂಶ ಎಂದೇ ಅರ್ಥ. ಆದುದರಿಂದ ಲಚ್ಚಿಯವ್ವಳ ತಂದೆ ರಾಷ್ಟ್ರಕೂಟ ವಂಶದವನೇ ಹೊರತು ಶಿಲಾಹಾರ ವಂಶದವನಲ್ಲ. ಅಷ್ಟೇ ಅಲ್ಲದೆ ಶಿಲಾಹಾರ ಝುಂಝು ರಾಜನು ಕ್ರಿ.ಶ.910 ರಿಂದ 930ವರೆಗೆ ರಾಜ್ಯವಾಳಿದನು. ಆದರೆ ಸೇವುಣ ಎರಡನೆಯ ಭಿಲ್ಲಮನ ಕಾಲ ಕ್ರಿ.ಶ.975-1000. ಆದುದರಿಂದ ಈ ಭಿಲ್ಲಮನು ತನಗಿಂತ ಅರ್ಧ ಶತಮಾನಕ್ಕೂ ಹಿರಿಯವನಾದ ಝುಂಝು ರಾಜನ ಅಳಿಯನಾಗಿರುವುದು ಅಸಂಭವ. ಆದುದರಿಂದ ಶಿಲಾಹಾರ ಝುಂಝು ರಾಜನಿಗೂ ಸೇವುಣ ಭಿಲ್ಲಮನಿಗೂ ಯಾವ ವಿಧವಾದ ಸಂಬಂಧವೂ ಇರಲಿಲ್ಲವೆಂದು ಖಚಿತವಾಗಿ ಹೇಳಬಹುದು. ಹಾಗಾದರೆ ಮೂರನೆಯ ರಾಜವಂಶ ಯಾವುದು ಎನ್ನುವ ಪ್ರಶ್ನೆ ಮಾತ್ರ ಹಾಗೆಯೇ ಉಳಿದ ಹಾಗಾಯಿತು. ನಾವು ಮುಂದೆ ಗಮನಿಸುವಂತೆ ಎರಡನೆಯ ಭಿಲ್ಲಮನು ರಾಷ್ಟ್ರಕೂಟರ ಸ್ನೇಹವನ್ನು ತ್ಯಜಿಸಿ ಚಾಳುಕ್ಯರ ಆಶ್ರಿತನಾದನು. ಆದುದರಿಂದ ಲಚ್ಚಿಯವ್ವಳು ಬೆಳಗಿದ ಮೂರು ರಾಜವಂಶಗಳು ಯಾದವ, ರಾಷ್ಟ್ರಕೂಟ ಮತ್ತು ಚಾಳುಕ್ಯ. ಈ ವಂಶಗಳು ಕ್ರಮವಾಗಿ ಅವಳ ಗಂಡ, ತಂದೆ ಮತ್ತು ಆಶ್ರಯದಾತ ರಾಜವಂಶಕ್ಕೆ ಸಂಬಂಧಿಸಿ ದವು.

ಎರಡನೆಯ ಭಿಲ್ಲಮನು ಸಿಂಹಾಸನಕ್ಕೆ ಬಂದಾಗ, ಅನೇಕ ಗಮನಾರ್ಹ ರಾಜಕೀಯ ಬದಲಾವಣೆಗಳುಂಟಾಗುತ್ತಿದ್ದವು. ರಾಷ್ಟ್ರಕೂಟರ ಪ್ರಾಬಲ್ಯ ಕಡಿಮೆಯಾಗುತ್ತಾ ಇದ್ದು, ಅವರ ಸ್ಥಾನದಲ್ಲಿ ಕಲ್ಯಾಣದ ಚಾಳುಕ್ಯರು ತಲೆಯೆತ್ತುತ್ತಿದ್ದರು. ಸುಮಾರು ಕ್ರಿ.ಶ. 972 ರಲ್ಲಿ ರಾಷ್ಟ್ರಕೂಟ ಖೊಟ್ಟಿಗನ ಕಾಲದಲ್ಲಿ ಪರಮಾರರು ಮಾನ್ಯಖೇಟವನ್ನು ಮುತ್ತಿದರು. ಇದರಿಂದ ರಾಷ್ಟ್ರಕೂಟರಿ ಗಿದ್ದ ಗೌರವ ಕಡಿಮೆಯಾಯಿತು. ಪರಮಾರರು ಹೊಡೆದೋಡಿಸಲ್ಪಟ್ಟರೂ, ರಾಷ್ಟ್ರಕೂಟ ಮೂರನೆಯ ಕೃಷ್ಣನ ಅನಂತರ ಬಂದ ರಾಜರು ಸಮರ್ಥರಲ್ಲರೆಂದು ಇದರಿಂದ ವ್ಯಕ್ತವಾಯಿತು. ಅನಂತರ ಬಂದ ಕರ್ಕ್ಕನೂ ಸಮರ್ಥ ರಾಜನಾಗಿರ ಲಿಲ್ಲ. ಇದನ್ನು ಗಮನಿಸುತ್ತಿದ್ದ ಸಾಮಂತ ರಾಜರುಗಳಲ್ಲಿ ಸ್ವತಂತ್ರವಾಗುವ ಅಕಾಂಕ್ಷೆ ಅಂಕುರಿಸಿತು. ಚಾಳುಕ್ಯ ಎರಡನೆಯ ತೈಲಪನು ರಾಷ್ಟ್ರಕೂಟ ಕರ್ಕ್ಕನ ಮೇಲೆ ಯುದ್ಧ ಮಾಡಿದನು. ಕರ್ಕ್ಕನು ಹೆದರಿ ರಾಜಧಾನಿಯಿಂದ ಓಡಿಹೋದನು. ತೈಲಪನು ರಾಷ್ಟ್ರಕೂಟ ರಾಜಧಾನಿಯನ್ನು ತನ್ನದನ್ನಾಗಿ ಮಾಡಿಕೊಂಡನು. ಇದನ್ನು ಗಮನಿಸಿದ ಸೇವುಣ ಎರಡನೆಯ ಭಿಲ್ಲಮನು ರಾಷ್ಟ್ರಕೂಟರ ಆಶ್ರಯವನ್ನು ತ್ಯಜಿಸಿ ಚಾಳುಕ್ಯ ತೈಲಪನಿಗೆ ಸಹಾಯಕನಾದನು. ಇದರಿಂದ ಇಬ್ಬರಿಗೂ ಅನುಕೂಲವಾಯಿತು.

ಸಂಗಮ್‌ನೇರ್ ಶಾಸನದಲ್ಲಿ ಎರಡನೆಯ ಭಿಲ್ಲಮನು "ಪರಮಾರ ಮುಂಜನ ಅದೃಷ್ಟವನ್ನು ನಾಶಮಾಡಿ, ರಾಜ್ಯಲಕ್ಷ್ಮಿಯು ರಣರಂಗಭೀಮನ ಮನೆಯಲ್ಲಿ ಶಾಶ್ವತವಾಗಿ ಇರುವಂತೆ ಮಾಡಿದನು" ಎಂದು ಹೇಳಿದೆ.[8] ರಾಷ್ಟ್ರಕೂಟರ ಶತ್ರುಗಳಾಗಿದ್ದ ಪರಮಾರರು ರಾಷ್ಟ್ರಕೂಟರ ಪತನಾನಂತರ ಚಾಳುಕ್ಯ ತೈಲಪನನ್ನೂ ತಮ್ಮ ಶತ್ರುವೆಂದು ತಿಳಿದು, ಅವನ ಮೇಲೆ ಯುದ್ಧಮಾಡಿದರು. ಮುಂಜನು

ತೈಲಪನನ್ನು ಆರು ಸಾರಿ ಸೋಲಿಸಿದನೆಂದು ಮೇರುತುಂಗನು ವರ್ಣಿಸಿದ್ದಾನೆ. ಆದರೆ ಅಂತಿಮ ಯುದ್ಧವು ಗೋದಾವರೀ ತೀರದಲ್ಲಿ ನಡೆದು, ಮುಂಜನು ಸೆರೆಸಿಕ್ಕಿದನು. ಈ ಯುದ್ಧದಲ್ಲಿ ಭಿಲ್ಲಮನು ತೈಲನಿಗೆ ಸಹಾಯಕನಾಗಿದ್ದನು. ಇದರಿಂದ ಸಂತೋಷಗೊಂಡ ತೈಲನು ಭಿಲ್ಲಮನಿಗೆ ಮಹಾಸಾಮಂತ ಎಂಬ ಬಿರುದನ್ನೂ ಮತ್ತು ಅಹಮದ್‌ನಗರ ಜಿಲ್ಲೆಯ ಸುತ್ತಮುತ್ತಲ ಪ್ರದೇಶಗಳನ್ನು ದಯಪಾಲಿಸಿದನು. ಇದರಿಂದ ಸೇವುಣರ ಪ್ರಾಬಲ್ಯ ಹೆಚ್ಚಲು ಅವಕಾಶವಾಯಿತು. ಭಿಲ್ಲಮನು ಆರತಿನಿಸೂದನ, ವಿಜಯಾಭರಣ, ಕಂದುಕಾಚಾರ್ಯ, ಸೆಲ್ಲವಿಡೆಗ ಮುಂತಾದ ಬಿರುದುಗಳನ್ನು ಧರಿಸಿದನು. ದೇವಲಾಲಿ ತಾಮ್ರಶಾಸನದಲ್ಲಿ, ಭಿಲ್ಲಮನು ಎರಡು ನಗರಗಳನ್ನು (ದೇವಾಲಯ?) ನಿರ್ಮಿಸಿದನೆಂದು ಹೇಳಿದೆ.[9] ಮೊದಲನೆಯದು ಗ್ರಾವೇಶ್ವರ ಮತ್ತು ಎರಡನೆಯದು ಮರದಿಂದ ಮಾಡಿದ ಸೋಮನಾಥ. ಸೇವುಣ ರಾಜ್ಯದಲ್ಲಿ ಗ್ರಾವೇಶ್ವರ ಮತ್ತು ಸೋಮನಾಥ ಎಂಬ ನಗರಗಳು ಮರದಿಂದ ನಿರ್ಮಿತವಾದುವು ಎಂದು ಹೇಳಿರುವುದು ಆಶ್ಚರ್ಯ. ಅಶೋಕನ ಕಾಲಕ್ಕಿಂತ ಮುಂಚೆ ಮರದಿಂದ ನಗರವನ್ನು ದೇವಾಲಯವನ್ನು ನಿರ್ಮಿಸುವ ಪದ್ಧತಿ ಯಿದ್ದಿತು. ಆದರೆ ಅಶೋಕನ ಕಾಲಾನಂತರ ಮರದ ಬದಲು ಕಲ್ಲು ಉಪಯೋಗಕ್ಕೆ ಬಂದಿತು. ಒಟ್ಟಿನಲ್ಲಿ ಸೇವುಣರ ರಾಜ್ಯಕ್ಕೆ ಭದ್ರವಾದ ಆಸ್ತಿಭಾರ ವನ್ನು ಹಾಕಿದ ಕೀರ್ತಿ ಎರಡನೆಯ ಭಿಲ್ಲಮನಿಗೆ ಸೇರಬೇಕು.

ಅನಂತರ ವೇಸುಗಿಯು ರಾಜನಾದನು. ವೇಸು, ವೇಸುಕ, ತೇಸುಕ ಮುಂತಾದ ವಿವಿಧ ರೂಪಗಳಲ್ಲಿ ಅವನ ಹೆಸರು ಶಾಸನಗಳಲ್ಲಿ ಕಾಣಬರುತ್ತವೆ. ಇವನು ಗೊಗ್ಗಿರಾಜನ ಮಗಳಾದ ನಾಯಿಲ್ಲದೇವಿಯನ್ನು ಮದುವೆಯಾದನು.[10] ಈ ಗೊಗ್ಗಿರಾಜನು ಚಾಳುಕ್ಯಾನ್ವಯ ಮಾಂಡಲಿಕನಾಗಿದ್ದನು. ಆದರೆ ಭಂಡಾರಕರ್ ರವರು ಗೊಗ್ಗಿರಾಜನು ಶಿಲಾಹಾರ ವಂಶದವನೆಂದೂ, ಝುಂಝು ರಾಜನ ಉತ್ತರಾಧಿಕಾರಿಯಾಗಿದ್ದವನೆಂದೂ ವಾದಿಸಿದ್ದಾರೆ.[11]ಇದು ಸರಿಯಲ್ಲ. ಶಿಲಾಹಾರ ವಂಶದ ಗೊಗ್ಗಿರಾಜನ ಕಾಲ ಕ್ರಿ.ಶ. 930-945. ಆದರೆ ವೇಸುಗಿಯ ಕಾಲ ಕ್ರಿ.ಶ. 1000-1025. ಆದುದರಿಂದ ಇವರಿಬ್ಬರಿಗೂ ಕೊನೆಯಪಕ್ಷ 60-70 ವರ್ಷಗಳ ಅಂತರವಿರುವುದು ಗೊತ್ತಾಗುತ್ತದೆ. ಅಷ್ಟೇ ಅಲ್ಲದೆ ಗೊಗ್ಗಿರಾಜನು ಚಾಳುಕ್ಯಾನ್ವಯ ಮಾಂಡಲಿಕನಾಗಿದ್ದನೆಂದು ಹೇಳಿದೆ. ಅಂದರೆ ಅವನು ಚಾಳುಕ್ಯ ವಂಶದವನಾಗಿದ್ದು, ಮಾಂಡಲಿಕನಾಗಿದ್ದನೆಂದು ಸ್ಪಷ್ಟಪಡುತ್ತದೆ. ಕಟಾರೆಯವರು ಈ ಗೊಗ್ಗಿರಾಜನು, ಲಾಟ ದೇಶದ ಬಾರಪ್ಪನ ಮಗನಾದ ಗೊಗ್ಗಿಯೆಂದು ಅಭಿಪ್ರಾಯ ಪಟ್ಟಿದ್ದಾರೆ. ಆದರೆ ಮೈಸೂರಿನ ಸಮೀಪದಲ್ಲಿರುವ ವರುಣ ಎಂಬಲ್ಲಿ ದೊರಕಿರುವ ಶಾಸನಗಳಿಂದ ಚಾಳುಕ್ಯ ವಂಶಕ್ಕೆ ಸೇರಿದ ರಾಜರುಗಳು ಆಳುತ್ತಿದ್ದ ರೆಂದು ಗೊತ್ತಾಗುತ್ತದೆ.[12] ಇವರಲ್ಲಿ ಗೊಗ್ಗಿರಾಜನೆಂಬುವನು ಒಬ್ಬ. ಬಹುಶಃ ಈ ಗೊಗ್ಗಿರಾಜನೇ ವೇಸುಗಿಯ ಮಾವನಾಗಿರಬೇಕೆಂದು ಹೇಳಬಹುದಾಗಿದೆ.

ಹೇಮಾದ್ರಿಯ ರಾಜಪ್ರಶಸ್ತಿಯ ಪ್ರಕಾರ, ವೇಸುಗಿಯ ಅನಂತರ ಅರ್ಜುನನೆಂಬುವನು ರಾಜನಾದನು. ಆದರೆ ಶಾಸನಗಳು ಇವನ ಹೆಸರನ್ನು ಹೇಳದೆ ವೇಸುಗಿಯ ಅನಂತರ ಮೂರನೆಯ ಭಿಲ್ಲಮನು ರಾಜನಾದನೆಂದು ತಿಳಿಸುತ್ತವೆ. ಈ ಮೂರನೆಯ ಭಿಲ್ಲಮನು ಅರ್ಜುನನ ಮಗನೆಂದು ಹೇಮಾದ್ರಿ ತಿಳಿಸುತ್ತಾನೆ. ಆದರೆ ಶಾಸನಗಳ ಪ್ರಕಾರ ವೇಸುಗಿ ಮತ್ತು ನಾಯಿಲ್ಲದೇವಿಯರ ಮಗನೇ ಮೂರನೆಯ ಭಿಲ್ಲಮ. ಈ ಭಿಲ್ಲಮನ ಎರಡು ತಾಮ್ರ ಶಾಸನಗಳು ದೊರಕಿವೆ; ಕ್ರಿ.ಶ.1025ಕ್ಕೆ ಸೇರಿದ ಕಲಾಸ್ ಬದ್ರುಕ್ ಶಾಸನ ಮತ್ತು ದೇವಲಾಲಿಯಲ್ಲಿ ದೊರಕಿರುವ ಕ್ರಿ.ಶ.1052ರ ಶಾಸನ. ಇವನು ತನ್ನ ತಂದೆ ವೇಸುಗಿಯಂತೆ ಮಹಾಸಾಮಂತನಾಗಿದ್ದನು. ಇವನು ಚಾಳುಕ್ಯ ಎರಡನೆಯ ಜಯಸಿಂಹನ ಪುತ್ರಿಯೂ ಮತ್ತು ಚಾಳುಕ್ಯ ಆಹವಮಲ್ಲ ಸೋಮೇಶ್ವರನ ಸಹೋದರಿಯೂ ಆದ ಆವಲ್ಲ ದೇವಿಯನ್ನು ವಿವಾಹವಾದನು.[13] ಭಿಲ್ಲಮನು ಚಾಳುಕ್ಯರ ಮಾಂಡಲಿಕನಾಗಿ ನಿಷ್ಠೆಯಿಂದಿದ್ದನು. ಅವನು ಚಾಳುಕ್ಯ ಜಯಸಿಂಹ ಮತ್ತು ಆಹವಮಲ್ಲ ಸೋಮೇಶ್ವರ ಇಬ್ಬರಿಗೂ ವಿಧೇಯನಾಗಿದ್ದು, ಅವರ ಯುದ್ಧಗಳಲ್ಲಿ ಪಾಲ್ಗೊಂಡನು. ಆದರೆ ಭಗವಾನ್ ಲಾಲ್ ಇಂದ್ರಜಿಯವರು ಬಸೇನ್ ಶಾಸನವನ್ನು ಸಂಪಾದಿಸುವಾಗ, "ಈ ಪದ್ಯವು ಬರೀ ಬಿರುದುಗಳಿಂದ ಕೂಡಿದೆ. ಅದರಿಂದ ಯಾವ ಅರ್ಥವೂ ಆಗುವುದಿಲ್ಲ. ಏಕೆಂದರೆ ಅದು ಸ್ವಲ್ಪವೂ ವ್ಯಾಕರಣಬದ್ಧ ವಾಗಿಲ್ಲ. ಒಟ್ಟಿನಲ್ಲಿ ಅದರ ಅರ್ಥವು ಮೂರನೆಯ ಭಿಲ್ಲಮನು ಆಹವಮಲ್ಲನನ್ನು ಕೊಂದನು ಎಂಬುದು" ಎಂದು ಹೇಳಿದ್ದಾರೆ.[14] ಆ ಪದ್ಯ ಹೀಗಿದೆ:

ತ್ರೈಲೋಕ್ಯ ನಿಜವಂಶ ಕೀರ್ತಿ ನಿರ್ಮಲತೆಯಾ ಸಂಭೂತಯನ್ ಯಾದವೋ?
ದಕ್ಷೋ ದುಷ್ಕೃತಿಮರ್ದನಮಸ್ಯಚರಣೌ ಸಂಪೂಜಯನ್ ಭೂತಲೇ
ದೋರ್ದ್ದಂಡ ಪ್ರಬಲಾಸಿಘಾತನಿಹತೋ ಸಂಗ್ರಾಮ ರಾಮೇಣ
ಭುವಶ್ಯಕ್ರಃ ಆಹವಮಲ್ಲದೇವ ನೃಪತೇಃ ಪ್ರೌಢಾಂಕಕಾರೇಣ ಹಿ
ಶಶ್ವಲ್ಲಬ್ಧ ಸುಚಕ್ರವರ್ತಿಪದಕಾಲಂಕಾರಿಣಾ ರಾಜಸು
ಸಂಸಾರಸ್ಥಿತಿ ದ್ಯೋತಕೇನ ಗುಣಿನಾ ತೇನೋದ್ಭವರ್ದ್ಧರ್ಮಿಣಾ.

ಇದನ್ನು ಈ ರೀತಿ ಅರ್ಥ ಮಾಡಬಹುದು. ಆಹವಮಲ್ಲದೇವನ ಅನೇಕ ಶತ್ರುಗಳು ಸಂಗ್ರಾಮರಾಮನೆಂದು ಪ್ರಸಿದ್ಧನಾದ ಭಿಲ್ಲಮನ ಕತ್ತಿಯ ಹೊಡೆತದಿಂದ ಸ್ವರ್ಗವನ್ನು ಹೊಂದಿದರು. ಆದುದರಿಂದ ಇಂದ್ರಜಿಯವರ ಅಭಿಪ್ರಾಯವು ಸರಿಯಾದುದಲ್ಲ. ಅಷ್ಟೇ ಅಲ್ಲದೆ ಆಹವಮಲ್ಲದೇವನು ಸಲ್ಲೇಖನದಿಂದ ತುಂಗಭದ್ರೆಯಲ್ಲಿ ಕ್ರಿ.ಶ. 1068ರಲ್ಲಿ ತನ್ನ ತನುವನ್ನು ತ್ಯಜಿಸಿದನೆಂದು ವಿಕ್ರಮಾಂಕದೇವ ಚರಿತ್ರೆಯಿಂದ ಗೊತ್ತಾಗುತ್ತದೆ. ಭಿಲ್ಲಮನ ಕೊನೆಯ ಶಾಸನದ ಕಾಲ ಕ್ರಿ.ಶ. 1052. ಆದುದರಿಂದ ಭಿಲ್ಲಮನ ಮರಣಾನಂತರ ಹದಿನಾರು ವರ್ಷಗಳ ಕಾಲ ಆಹವಮಲ್ಲನು ಜೀವಿಸಿದ್ದನು.

ದೇವಲಾಲಿ ಶಾಸನದ ಪ್ರಕಾರ ಕೋಸುವ, ತ್ರಯೀ, ಪಿಪ್ಪಲಾಥ ಮತ್ತು ಮಂಗಳ ಕುಮ್ರಹಾರ ಎಂಬ ನಾಲ್ಕು ಹಳ್ಳಿಗಳನ್ನು ಶ್ರೀಧರ ಎಂಬ ಬ್ರಾಹ್ಮಣನಿಗೆ ಭಿಲ್ಲಮನು ದಾನವಾಗಿ ಕೊಟ್ಟನು. ಈ ಶ್ರೀಧರನ ತಾತ ಮತ್ತು ತಂದೆ, ಪರಮಾರರ ಆಶ್ರಯದಲ್ಲಿದ್ದವರು. ಶ್ರೀಧರನು ಮಾಳ್ವ ದೊರೆಯಾದ ಭೋಜನಿಂದ ಎಣಕ್ಕೈ ಎಂಬ ಕೋಟೆಗೆ ಅಧಿಕಾರಿಯಾಗಿ ನಿಯಮಿಸಲ್ಪಟ್ಟಿದ್ದನು. ಆದರೆ ಶ್ರೀಧರನು ಈ ಕೋಟೆಯನ್ನು ಮೂರನೆಯ ಭಿಲ್ಲಮನ ವಶಕ್ಕೆ ಒಪ್ಪಿಸಿಕೊಟ್ಟನು. ಇದರಿಂದ ಸಂತೋಷಗೊಂಡ ಭಿಲ್ಲಮನು ಅವನಿಗೆ ನಾಲ್ಕು ಹಳ್ಳಿಗಳನ್ನು ದಾನವಾಗಿ ಕೊಟ್ಟನು. ಶ್ರೀಧರನು ಸೇವುಣರ ಆಶ್ರಯದಲ್ಲಿ ದಂಡನಾಯಕನಾಗಿದ್ದನು. ಇದರಿಂದ ಭಿಲ್ಲಮನು ಮಾಳ್ವ ದೇಶಕ್ಕೆ ಹೋಗಿ ಪರಮಾರರ ಮೇಲೆ ಯುದ್ಧ ಮಾಡಿ, ಎಣಕ್ಕೈ ಎಂಬ ಕೋಟೆಯನ್ನು ವಶಮಾಡಿಕೊಂಡನೆಂದು ಹೇಳಬಹುದು. ಬಹುಶಃ ಈ ಯುದ್ಧವನ್ನು ಭಿಲ್ಲಮನು ಚಾಳುಕ್ಯ ಆಹವಮಲ್ಲನ ಹೆಸರಿನಲ್ಲಿ ಮಾಡಿರಬೇಕು.

ಮೂರನೆಯ ಭಿಲ್ಲಮನ ಮರಣಾನಂತರ ಸೇವುಣರ ಚರಿತ್ರೆಯು ಅಸ್ಪಷ್ಟ ವಾಗುತ್ತದೆ. ಇದಕ್ಕೆ ಆಂತರಿಕ ಕಲಹಗಳೇ ಕಾರಣ. ಶಾಸನಗಳ ಮಾಹಿತಿಯ ಪ್ರಕಾರ ಮೂರನೆಯ ಭಿಲ್ಲಮನ ಅನಂತರ ಎರಡನೆಯ ಸೇವುಣಚಂದ್ರನು ರಾಜನಾದನು. ಆದರೆ ಹೇಮಾದ್ರಿಯು ಇವರಿಬ್ಬರಿಗೂ ನಡುವೆ ಎರಡನೆಯ ವಾಡುಗಿ, ಎರಡನೆಯ ವೇಸುಗಿ ಮತ್ತು ನಾಲ್ಕನೆಯ ಭಿಲ್ಲಮ ಎಂಬುವರ ಹೆಸರನ್ನು ಹೇಳುತ್ತಾನೆ. ಈ ಮೂರು ರಾಜಕುಮಾರರ ಹೆಸರುಗಳು ಶಾಸನಗಳಲ್ಲಿ ಕಾಣಬರದೇ ಇರುವುದರಿಂದ, ನಿಜವಾಗಿಯೂ ಅವರು ರಾಜ್ಯವಾಳಿದರೇ ಎಂಬ ಶಂಕೆಯು ಬರುತ್ತದೆ. ನಾವು ಆಗಲೇ ಗಮನಿಸಿರುವಂತೆ ಮೂರನೆಯ ಭಿಲ್ಲಮನ ಕೊನೆಯ ಶಾಸನದ ಕಾಲ ಕ್ರಿ.ಶ. 1052. ಎರಡನೆಯ ಸೇವುಣಚಂದ್ರನ ಮೊದಲನೆಯ ಶಾಸನದ ಕಾಲ ಕ್ರಿ.ಶ. 1069. ಆದುದರಿಂದ ಹೇಮಾದ್ರಿಯು ಹೆಸರಿಸಿರುವ ಈ ಮೂವರು ರಾಜಕುಮಾರರು ಕ್ರಿ.ಶ. 1052-1069 ರ ಅವಧಿಯಲ್ಲಿ ಆಳಿರಬೇಕು. ಮೂವರು ರಾಜರು ಕೇವಲ ಹದಿನೇಳು ವರ್ಷಗಳ ಕಾಲದಲ್ಲಿ ತಮ್ಮ ರಾಜ್ಯಭಾರ ವನ್ನು ಮುಗಿಸಿರಬೇಕೆಂದರೆ, ಅದು ಆ ಕಾಲದಲ್ಲಿ ನಡೆದ ಅಂತರ್ಯುದ್ಧ ಗಳಿಂದ ಉಂಟಾಗಿರಬಹುದಾದ ಪರಿಸ್ಥಿತಿಯನ್ನು ಸೂಚಿಸುತ್ತದೆ. ದೇವಲಾಲಿ ತಾಮ್ರ ಶಾಸನವು ಎರಡನೆಯ ಸೇವುಣಚಂದ್ರನು ರಾಜನಾದುದನ್ನು ಈ ಮಾತುಗಳಲ್ಲಿ ವರ್ಣಿಸುತ್ತದೆ. ವರಾಹಾವತಾರವನ್ನು ಮಾಡಿ ಭೂಮಿಯನ್ನು ರಕ್ಷಿಸಿದಂತೆ, ಸೇವುಣಚಂದ್ರನು ಮುಳುಗಿಹೋಗುತ್ತಿದ್ದ ಸೇವುಣ ರಾಜ್ಯವನ್ನು ತನ್ನ ದಾಯಾದಿಗಳಿಂದ ರಕ್ಷಿಸಿದನು. ಇದರಿಂದ ವ್ಯಕ್ತವಾಗುವ ಸಂಗತಿಯೆಂದರೆ ಸೇವುಣ ಚಂದ್ರನು ತನ್ನ ದಾಯಾದಿಗಳೊಂದಿಗೆ ಯುದ್ಧಮಾಡಿ, ರಾಜ್ಯವನ್ನು ತನ್ನದನ್ನಾಗಿ ಮಾಡಿಕೊಂಡನೆಂಬುದು. ಹೇಮಾದ್ರಿಯು ಹೆಸರಿಸಿರುವ ಎರಡನೆಯ ವಾಡುಗಿ,

ಎರಡನೆಯ ವೇಸುಗಿ ಮತ್ತು ನಾಲ್ಕನೆಯ ಭಿಲ್ಲಮ, ಇವರುಗಳೇ ಸೇವುಣಚಂದ್ರನ ಆ ದಾಯಾದಿಗಳಿರಬೇಕು.


ಈ ಕಲಹಗಳಲ್ಲಿ ಚಾಳುಕ್ಯ ರಾಜನಾದ ಸೋಮೇಶ್ವರನು ಪ್ರವೇಶಿಸಿರಬೇಕು. ಕ್ರಿ.ಶ. 1058ರ ನಾಗೈ ಶಾಸನದಲ್ಲಿ, ಚಾಳುಕ್ಯ ಸೈನ್ಯಾಧಿಕಾರಿಯು ಸೇವುಣ ರಾಜನನ್ನು ಸೋಲಿಸಿದನೆಂದು ಹೇಳಿದೆ.[15] ಚಾಳುಕ್ಯರು ಸೇವುಣಚಂದ್ರನಿಗೆ ವಿರುದ್ಧವಾಗಿ, ನಾಲ್ಕನೆಯ ಭಿಲ್ಲಮನ ಪರವಾಗಿ ಸಹಾಯಮಾಡಿದರು. ಸೇವುಣ ಚಂದ್ರನು ನಾಲ್ಕನೆಯ ಭಿಲ್ಲಮನನ್ನು ಸೋಲಿಸಿ, ಸೆರೆಹಿಡಿದನು. ಕ್ರಿ.ಶ. 1069ರ ಗಂಡಹರಾದಿತ್ಯನ ಶಾಸನದಲ್ಲಿ, ಶಿಲಾಹಾರ ಭೋಜನು ಗೋವಿಂದನನ್ನು ಸೋಲಿಸಿ ಭಿಲ್ಲಮನನ್ನು ಸೆರೆಯಿಂದ ಬಿಡಿಸಿದನೆಂದು ಹೇಳಿದೆ.[16] ಈ ಗೋವಿಂದನು ಮೌರ್ಯ ವಂಶಕ್ಕೆ ಸೇರಿದವನು ಮತ್ತು ಸೇವುಣಚಂದ್ರನ ಮಿತ್ರ. ನಾಲ್ಕನೆಯ ಭಿಲ್ಲಮನು ಸೆರಿಯಿಂದ ಬಿಡಿಸಲ್ಪಟ್ಟರೂ, ರಾಜ್ಯವನ್ನು ಪಡೆಯಲಿಲ್ಲ. ಅಷ್ಟ ರಲ್ಲಿಯೇ ಸೇವುಣಚಂದ್ರನು ತನ್ನ ಮಿತ್ರ ಗೋವಿಂದರಾಜನ ಸಹಾಯದಿಂದ ತನ್ನ ಸ್ಥಾನವನ್ನು ಬಲಪಡಿಸಿಕೊಂಡನು. ಇಷ್ಟರಲ್ಲಿಯೇ ಚಾಳುಕ್ಯ ಇಮ್ಮಡಿ ಸೋಮೇಶ್ವರನಿಗೂ, ಆರನೆಯ ವಿಕ್ರಮಾದಿತ್ಯನಿಗೂ ಕಲಹಗಳು ನಡೆಯುತ್ತಿದ್ದುವು. ಸೇವುಣಚಂದ್ರನು ವಿಕ್ರಮಾದಿತ್ಯನ ಪಕ್ಷವನ್ನು ವಹಿಸಿದ್ದನು. ಅವನನ್ನು ಶಿಕ್ಷಿಸುವ ಸಲುವಾಗಿ ಸೋಮೇಶ್ವರನು 1074ರಲ್ಲಿ ತನ್ನ ಮಹಾಮಂಡಳೇಶ್ವರನಾದ ಚಿದ್ವಚೋಳನನ್ನು ಸೇವುಣಚಂದ್ರನ ಮೇಲೆ ಯುದ್ಧಕ್ಕೆ ಕಳುಹಿಸಿದನು. ಸೇವುಣ ಚಂದ್ರನು ಸೋಲಿಸಲ್ಪಟ್ಟನೆಂದು ಶಾಸನದಲ್ಲಿ ಹೇಳಿದ್ದರೂ, ಮತ್ತೆ ಎರಡೇ ವರ್ಷಗಳಲ್ಲಿ ಸೇವುಣಚಂದ್ರನು ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡನು. ಸೇವುಣಚಂದ್ರನು ಆರನೆಯ ವಿಕ್ರಮಾದಿತ್ಯನಿಗೆ ಸಹಾಯಮಾಡಿದ ವಿಷಯವನ್ನು ಹೇಮಾದ್ರಿಯೂ ಉಲ್ಲೇಖಿಸಿದ್ದಾನೆ. "ಸೇವುಣಚಂದ್ರನ ಬಾಹುಗಳು ಪರಮರ್ದಿ ದೇವನನ್ನು (ಆರನೆಯ ವಿಕ್ರಮಾದಿತ್ಯ) ಅವನ ಶತ್ರುಗಳಿಂದ ಕಾಪಾಡಿ, ಅವನನ್ನು ಕಲ್ಯಾಣದ ಸಿಂಹಾಸನದಲ್ಲಿ ಸ್ಥಾಪಿಸಿದವು" ಎಂದು ಹೇಮಾದ್ರಿಯು ಹೊಗಳಿದ್ದಾನೆ. ಇಷ್ಟೆಲ್ಲಾ ಸಹಾಯವನ್ನು ಮಾಡಿದ ಸೇವುಣಚಂದ್ರನಿಗೆ ಚಾಳುಕ್ಯ ವಿಕ್ರಮಾದಿತ್ಯನು ಮಹಾಮಂಡಳೇಶ್ವರ ಪದವಿಯನ್ನು ಕೊಟ್ಟನು. ಇದುವರೆವಿಗೂ, ಅವನ ಹಿಂದಿನವರು ಮಂಡಳಿಕರಾಗಿದ್ದರು.

ದೇವಲಾಲಿಯ ಶಾಸನ ಸೇವುಣಚಂದ್ರನು ಕೊಂಕಣದ ಗೌರವವನ್ನು ಕಾಪಾಡಿದನು ಎಂದು ತಿಳಿಸುತ್ತದೆ. ಆ ಕಾಲದಲ್ಲಿ ಕೊಂಕಣವನ್ನು ಆಳುತ್ತಿದ್ದವರು ಶಿಲಾಹಾರರು. ಚಿತ್ತರಾಜನ (ಕ್ರಿ.ಶ. 1025-40) ಮರಣಾನಂತರ, ಅವನ ಸಹೋದರನಾದ ಮುಮ್ಮುಣಿಯು (ಕ್ರಿ.ಶ. 1040-1070) ರಾಜ್ಯವಾಳುತ್ತಿದ್ದನು. ಇದಾದ ಸ್ವಲ್ಪ ಕಾಲಾನಂತರ ನಾಗಾರ್ಜುನನ ಮಗನಾದ ಅನಂತದೇವನು ಸಿಂಹಾಸನಕ್ಕೆ ಬಂದ ಹಾಗೂ ರಾಜ್ಯವನ್ನು ಆಳುತ್ತಿದ್ದನೆಂದು ಗೊತ್ತಾಗುತ್ತದೆ. ಅನಂತ ದೇವನ

ಖಾರೆಪಟಾನ್ ಶಾಸನವು ದಾಯಾದಿ ವೈರಿ ವ್ಯಸನವನ್ನು ಉಲ್ಲೇಖಿಸುತ್ತದೆ. ಬಹುಶಃ ಇದು ಮುಮ್ಮುಣಿ ಎಂಬುವವನಿಂದ ಉಂಟಾದ ತೊಂದರೆಯನ್ನು ಉಲ್ಲೇಖಿಸಬಹುದು. ಶಿಲಾಹಾರ ಗೊಂಕನೆಂಬುವನು ತಾನೇ ಕೊಂಕಣ ಚಕ್ರವರ್ತಿಯೆಂದು ಹೇಳಿಕೊಂಡಿದ್ದಾನೆ. ಬಹುಶಃ ಸೇವುಣ ಚಂದ್ರನು ಈ ವಿಷಯದಲ್ಲಿ ಪ್ರವೇಶಿಸಿ, ಅನಂತದೇವನಿಗೆ ಸಹಾಯಕನಾಗಿ ನಿಂತು, ಮುಮ್ಮುಣಿ ಮತ್ತು ಗೊಂಕ ಇವರುಗಳಿಂದ ಕೊಂಕಣರಾಜ್ಯಕ್ಕೆ ಒದಗಿದ್ದ ತೊಂದರೆ ಯನ್ನು ತಪ್ಪಿಸಿದನು. ಇದರಿಂದ ಅವನ ರಾಜ್ಯವೂ ವಿಸ್ತಾರವಾಯಿತು. ಥಾಣ ಜಿಲ್ಲೆಯ ಬಹುಭಾಗಗಳು ಇವನ ರಾಜ್ಯಕ್ಕೆ ಸೇರಿದವು.

ವರ್ಧಿಸುತ್ತಿದ್ದ ತನ್ನ ರಾಜ್ಯದ ಆಡಳಿತಕ್ಕೋಸ್ಕರ ಅನೇಕ ಅಧಿಕಾರಿಗಳನ್ನು ಸೇವುಣಚಂದ್ರನು ನಿಯಮಿಸಿದನು. ಬಸೇನ್ ಶಾಸನವು ಏಳು ಜನ ಹಿರಿಯ ಅಧಿಕಾರಿಗಳನ್ನು ಹೆಸರಿಸುತ್ತದೆ. ದಂಡನಾಯಕ ಶ್ರೀಧರ, ಮಹಾಮಾತ್ಯ ವಾಸುದೇವಯ್ಯ, ಮಹಾಪ್ರಧಾನ ನಾಯಕ ಭಾಭೀಯಕ, ಪಟಲಕರಣಿ, ರಾಜಾಧ್ಯಕ್ಷ, ಅಪ್ಪಾಯಿಕ, ಮಹತ್ತಮ ಮತ್ತು ಅಮಾದಿತ್ಯ ಇವರೇ ಆ ಅಧಿಕಾರಿ ಗಳು. ಸೇವುಣ ಚಂದ್ರನು ಶೈವಮತಾವಲಂಬಿಯಾಗಿದ್ದನು. ಸೋಮದೇವಾ ಚಾರ್ಯನ ಶಿಷ್ಯನಾದ ಸರ್ವದೇವಾಚಾರ್ಯನಿಗೆ ಇವನು ಕೊಟ್ಟ ದಾನಗಳನ್ನು ಬಸೇನ್ ಶಾಸನವು ಉಲ್ಲೇಖಿಸುತ್ತದೆ. ವಾಘುಲಿ ಶಾಸನದಲ್ಲಿ ಸೇವುಣಚಂದ್ರನು ಶೈವ ದೇವಾಲಯಕ್ಕೆ ಕೊಟ್ಟ ದತ್ತಿಯ ವಿಚಾರ ಉಲ್ಲೇಖಿತವಾಗಿದೆ. ಸೇವುಣ ವಂಶದ ಪೂರ್ವಜರಲ್ಲಿ ಎರಡನೆಯ ಸೇವುಣಚಂದ್ರನು ಮುಖ್ಯ ಸ್ಥಾನವನ್ನು ಅಲಂಕರಿಸಿದ್ದಾನೆ. ಇವನು ತನ್ನ ದಾಯಾದಿಗಳ ಪ್ರಯತ್ನಗಳನ್ನು ವಿಫಲಗೊಳಿಸಿ ಸಿಂಹಾಸನಕ್ಕೆ ಬಂದು, ಚಾಳುಕ್ಯರ ಆಶ್ರಯದಲ್ಲಿ ತನ್ನ ಸ್ಥಾನವನ್ನು ಬಲಪಡಿಸಿ ಕೊಂಡನು. ಇವನಿಂದ ಸೇವುಣರ ಸ್ಥಾನವು ಭದ್ರಪಡಿಸಲ್ಪಟ್ಟಿತು.

ಸೇವುಣಚಂದ್ರನ ಮರಣಾನಂತರ ಅವನ ಮಗನಾದ ಪರಮ್ಮದೇವನು ಸಿಂಹಾಸನಕ್ಕೆ ಬಂದನು. ಆಶ್ವಿ ತಾಮ್ರಶಾಸನದಲ್ಲಿ ಇವನ ಹೆಸರು ಐರಮದೇವ ಎಂದಿದೆ.[17] ಈ ತಾಮ್ರಶಾಸನವು ಅದೇ ರಾಜನದಾದುದರಿಂದ, ಐರಮದೇವ ಎಂಬ ಹೆಸರೇ ಸರಿಯಾದುದೆಂದು ಹೇಳಬಹುದು. ಆಶ್ವಿ ತಾಮ್ರಶಾಸನದ ಕಾಲ ಶಕ 1020 ವೈಶಾಖ, ಬಹುಳ 15, ಅಂದರೆ ಕ್ರಿ.ಶ. ಮೇ, 3, 1098. ಈ ಶಾಸನದಲ್ಲಿ ಐರಮದೇವನು ಭುವನೈಕಮಲ್ಲನನ್ನು (ಎರಡನೆಯ ಸೋಮೇಶ್ವರ) ಸೋಲಿಸಿ, ಪರಮಾರ್ದಿಗೆ ರಾಜ್ಯವನ್ನು ಕೊಡಿಸಿದನೆಂದು ಹೇಳಿದೆ. ನಾವು ಆಗಲೇ ಗಮನಿಸಿರು ವಂತೆ ಈ ಕಾರ್ಯವನ್ನು ಸೇವುಣಚಂದ್ರನು ಮಾಡಿದನೆಂದು ಗೊತ್ತಾಗುತ್ತದೆ. ತನ್ನ ತಂದೆಯ ಮಹತ್ಕಾರ್ಯವನ್ನು ಐರಮದೇವನು ಪ್ರಶಸ್ತಿಯಾಗಿ ಧರಿಸಿರಬೇಕು ಇಲ್ಲವೇ ಸೇವುಣಚಂದ್ರನ ಸಂಗಡ ಐರಮದೇವನೂ ಯುದ್ಧಕ್ಕೆ ಹೋಗಿ ಸೋಮೇಶ್ವರನನ್ನೂ ಸೋಲಿಸಿರಬೇಕು. ಐರಮದೇವನು ಆರನೆಯ ವಿಕ್ರಮಾದಿತ್ಯನ



ನಕ್ಷೆ ೧: ಸೇವುಣರು ಸ್ವತಂತ್ರರಾಗುವುದಕ್ಕೆ ಮುಂಚಿನ ಅವರ ರಾಜ್ಯ.

ಆಶ್ರಯದಲ್ಲಿ ಮಹಾಮಂಡಳೇಶ್ವರನಾಗಿದ್ದನು. ಇವನ ಪತ್ನಿಯ ಹೆಸರು ಯೋಗಲ್ಲಾ. ಇವನ ಆಶ್ವಿ ಶಾಸನವು, ರಾಜನು ನರ್ಮದಾ ನದಿಯ ತೀರದಲ್ಲಿರುವ ನರ್ಮದಾಪುರದಲ್ಲಿ ತಂಗಿದ್ದಾಗ ಇವನು ಕೊಟ್ಟ ದಾನಗಳನ್ನು ಉಲ್ಲೇಖಿಸುತ್ತದೆ. ಇದರಿಂದ ಕ್ರಿ.ಶ. 1098ರ ಸಮಯಕ್ಕೆ ಸೇವುಣ ರಾಜ್ಯವು ನರ್ಮದಾ ನದಿಯವರೆಗೂ ಹರಿಡಿದ್ದಿತೆಂದು ಹೇಳಬಹುದಾಗಿದೆ.

ಐರಮದೇವನ ಮರಣಾನಂತರ ಅವನ ಸಹೋದರನು ರಾಜ್ಯಕ್ಕೆ ಬಂದನು. ಇವನ ಹೆಸರು ಶಾಸನಗಳಲ್ಲಿ ಭಿನ್ನರೂಪಗಳಲ್ಲಿ ಕಾಣಬರುತ್ತದೆ. ಫೈಠಾಣ್ ಮತ್ತು ಕಾಳೆಗಾಂವ್ ಶಾಸನಗಳು ಅವನನ್ನು ಸಿಂಘಣ ಎಂದು ಕರೆಯುತ್ತವೆ. ಆದರೆ ಮೇಥಿ ಶಾಸನವು ಅವನನ್ನು ರಾಜ ಎಂದು ವ್ಯವಹರಿಸುತ್ತದೆ. ಗದಗ್ ಶಾಸನದಲ್ಲಿ ಅವನ ಹೆಸರು ಸೇವುಣದೇವ ಎಂದಿದೆ. ಹೇಮಾದ್ರಿಯು ಅವನನ್ನು ಸಿಂಹಿರಾಜ ಎಂದು ಕರೆದಿದ್ದಾನೆ. ಅಂಜನೇರಿಯಲ್ಲಿ ದೊರಕಿರುವ ಕ್ರಿ.ಶ. 1142 ರ ಶಾಸನದಲ್ಲಿ ಸೇವುಣ ದೇವ ಎಂದಿದೆ.[18] ಈ ಶಾಸನವು ಐರಮದೇವನ ಅನಂತರ ಪಟ್ಟಕ್ಕೆ ಬಂದ ರಾಜನಿಗೆ ಸೇರಿದ್ದು ಎಂದು ಸುಲಭವಾಗಿ ಹೇಳಬಹುದು. ಆದುದರಿಂದ ಸಿಂಹಿರಾಜ, ರಾಜ, ಸಿಂಘಣ ಮತ್ತು ಸೇವುಣದೇವ ಎಂಬ ವಿವಿಧ ಹೆಸರುಗಳೂ ಐರಮದೇವನ ಸಹೋದರನನ್ನೇ ಸೂಚಿಸುತ್ತವೆ ಎಂದು ತೀರ್ಮಾನಿಸಬಹುದಾಗಿದೆ. ಮೂರನೆಯ ಸೇವುಣದೇವನು ಚಾಳುಕ್ಯ ಆರನೆಯ ವಿಕ್ರಮಾದಿತ್ಯನ ಆಶ್ರಯ ದಲ್ಲಿದ್ದನು. ಇವನು ಲಂಜೀಪುರದಿಂದ ಕರ್ಪೂರತಿಲಕ ಎಂಬ ಆನೆಯನ್ನು ತಂದು ಪರಮರ್ದಿಯು ಕರ್ಪೂರ ವ್ರತವನ್ನು ಪೂರ್ಣಮಾಡಲು ಸಹಾಯಮಾಡಿದನೆಂದು ಹೇಳಿದೆ.[19] ಲಂಜೀಪುರ ಎನ್ನುವುದಕ್ಕೆ ತ್ರಂಜೀಪುರವೆಂಬ ಪಾಠಾಂತರವಿರಬೇಕೆಂದೂ, ಹಾಗಾದಲ್ಲಿ, ಆ ತ್ರಂಜೀಪುರವು ತಮಿಳುನಾಡಿನ ತಂಜಾವೂರು ಆಗಿರಬೇಕೆಂದೂ ಭಂಡಾರಕರ್ ವಾದಿಸಿದ್ದಾರೆ.[20] ಸೇವುಣರು ತಮಿಳುನಾಡಿನವರೆಗೂ ತಮ್ಮ ರಾಜ್ಯವನ್ನು ಹರಡಿದ್ದರು ಎಂಬುದಕ್ಕೆ ಯಾವ ವಿಧವಾದ ಮಾಹಿತಿಯೂ ದೊರಕಿಲ್ಲ ವಾದುದರಿಂದ, ಭಂಡಾರಕರ್‌ರವರ ಅಭಿಪ್ರಾಯವು ಸರಿಯಲ್ಲವೆಂದು ತಳ್ಳಿಹಾಕ ಬಹುದು. ಲಂಜೀಪುರವು ಜಂಜೀಪುರವಾದಲ್ಲಿ, ಅದು ಕೊಂಕಣದ ಬಂದರಾದ ಜಂಜೀರವಿರಬಹುದು. ಪ್ರಾಚೀನಕಾಲದಿಂದಲೂ ಜಂಜೀರವು ಮುಖ್ಯ ಬಂದರಾಗಿ ದ್ದಿತು. ಕರ್ಪೂರವ್ರತಕ್ಕೆ ಬೇಕಾದ ಕರ್ಪೂರವೂ ಈ ವ್ಯಾಪಾರ ಕೇಂದ್ರದಿಂದಲೇ ಬಂದಿರಬೇಕು. ಜಂಜೀರವು ಸೇವುಣರ ರಾಜ್ಯಕ್ಕೆ ಬಹು ಸಮೀಪದಲ್ಲಿರುವುದು ಗಮನಾರ್ಹವಾದ ಸಂಗತಿ. ಇತ್ತೀಚೆಗೆ ದೊರಕಿರುವ ಶಾಸನವೊಂದರಲ್ಲಿ ಮಹಾ ಕುಮಾರ ಸಿಂಘಣನ ಉಲ್ಲೇಖವಿದೆ.[21] ಈ ಶಾಸನದ ಕಾಲ ಕ್ರಿ.ಶ. 1140. ಶಾಸನ ಶಾಖೆಯವರು ಈ ಶಾಸನವು ಸೇವುಣ ದೇವನದು ಎಂದು ಊಹಿಸಿರುವುದು ಸರಿಯಾಗಿಯೇ ಇದೆ. ಇವನಿಗೆ ಈ ಶಾಸನದಲ್ಲಿರುವ ಮಹಾಕುಮಾರ ಎಂಬ ಬಿರುದು ಗಮನಾರ್ಹವಾದುದು.

ಸೇವುಣದೇವನ ಅನಂತರ ಅವನ ಮಗನಾದ ಮಲ್ಲುಗಿಯು ಪಟ್ಟಕ್ಕೆ ಬಂದನು. ಇವನು ಪರ್ಣಖೇಟವನ್ನು ತನ್ನ ಶತ್ರುಗಳಿಂದ ಗೆದ್ದುಕೊಂಡನು ಮತ್ತು ಉತ್ಕಲ ದೇಶದ ರಾಜನಿಂದ ಆನೆಗಳನ್ನು ಪಡೆದನು ಎಂದು ಹೇಮಾದ್ರಿಯು ಇವನ ವಿಜಯಗಳನ್ನು ವರ್ಣಿಸಿದ್ದಾನೆ.[22] ಪರ್ಣಖೇಟವು ಅಕೋಲ ಜಿಲ್ಲೆಯಲ್ಲಿರುವ ಪಾಟ್‌ಖೇಡ್ ಎಂಬ ಸ್ಥಳವೆಂದು ಊಹಿಸಿದ್ದಾರೆ. ಮಲ್ಲುಗಿಯ ಉತ್ತರಾಧಿಕಾರಿಯಾದ ಐದನೆಯ ಭಿಲ್ಲಮನ ಶಾಸನವೊಂದು ಅಲ್ಲಿ ದೊರಕಿರುರುವುದು ಈ ಮೇಲಿನ ಊಹೆಯನ್ನು ಸಮರ್ಥಿಸುತ್ತದೆ.[23] ಮಲ್ಲುಗಿಯು ಉತ್ಕಲ ದೇಶದ ಮೇಲೆ ಸಂಪಾದಿಸಿದ ವಿಜಯವನ್ನು ಸಮರ್ಥಿಸುವ ಆಧಾರಗಳು ದೊರಕಿಲ್ಲ. ಮಲ್ಲುಗಿಯ ಸಮಕಾಲೀನರಾದ ಅನಂತವರ್ಮ ಚೋಡಗಂಗ ಮತ್ತು ಕಾಮಾರ್ಣವ ಬಹಳ ಶಕ್ತರಾಗಿದ್ದು ಉತ್ಕಲವನ್ನು ಆಳುತ್ತಿದ್ದರು. ಅವನ ಶಾಸನಗಳಲ್ಲಿ ಸೇವುಣ ಮಲ್ಲುಗಿಯ ಹೆಸರು ಬರುವುದೂ ಇಲ್ಲ. ಜಲ್ಹಣನ 'ಸೂಕ್ತಿ ಮುಕ್ತಾವಲೀ' ಗ್ರಂಥವು ಮಲ್ಲುಗಿಯ ವಿಜಯಗಳನ್ನು ತಿಳಿಸುತ್ತದೆ. ದಾದ ಎಂಬ ಮಲ್ಲುಗಿಯ ಸೇನಾಧಿಪತಿಯು ವಿಜ್ಜಣನ ಸೈನ್ಯವನ್ನು ಹೊಡೆದೋಡಿಸಿದನು. ದಾದನ ಅನಂತರ ಬಂದ ಮಹೀಧರನು ವಿಜ್ಜಣನ ಸೈನ್ಯದಲ್ಲಿ ಭಯವನ್ನು ಹುಟ್ಟಿಸಿದನು ಎಂದು ಜಲ್ಹಣನು ವರ್ಣಿಸಿದ್ದಾನೆ.[24] ಈ ವಿಜ್ಜಣನು ಕಳಚೂರಿ ಬಿಜ್ಜಳನೇ ಹೊರತು ಮತ್ತಾರೂ ಅಲ್ಲ. ಇವನು ಮೂರನೆಯ ತೈಲಪನಿಂದ ರಾಜ್ಯವನ್ನು ಕಸಿದುಕೊಂಡನು. ಆದರೆ ಚಾಳುಕ್ಯರ ಆಶ್ರಯದಲ್ಲಿದ್ದ ಸೇವುಣ ಮಲ್ಲುಗಿಯು ಕಳಚೂರ್ಯ ರಾಜನನ್ನು ತನ್ನ ಒಡೆಯನನ್ನಾಗಿ ಪರಿಗಣಿಸಲು ಒಪ್ಪಲಿಲ್ಲ. ಇದರಿಂದ ಇಬ್ಬರಿಗೂ ಯುದ್ಧವಾಯಿತು. ಯುದ್ಧದಲ್ಲಿ ಸೇವುಣ ಸೇನಾಧಿಪತಿಯಾದ ಮಹೀಧರನು ಕೊಲ್ಲಲ್ಪಟ್ಟನು. ಮಲ್ಲುಗಿಗೆ ಏನಾಯಿತೆಂಬುದು ತಿಳಿದಿಲ್ಲ. ಬಹುಶಃ ಕಳಚೂರ್ಯರು ಸೇವುಣರನ್ನು ಸೋಲಿಸಿರಬೇಕು. ಹನುಮಕೊಂಡ ಶಾಸನದಲ್ಲಿ ಕಾಕತೀಯ ರುದ್ರನು ಮೈಲುಗಿ ಎಂಬ ರಾಜನನ್ನು ಸೋಲಿಸಿದನೆಂದು ಹೇಳಿದೆ. ಇವನು ಸೇವುಣ ಮಲ್ಲುಗಿಯೆಂದು ಕೆಲವರು ಅಭಿಪ್ರಾಯಪಟ್ಟಿದ್ದಾರೆ.[25] ಇದು ಸರಿಯಾದುದಲ್ಲ. ಏಕೆಂದರೆ ಹನುಮಕೊಂಡದ ಶಾಸನದಲ್ಲಿ ಉಲ್ಲೇಖಿತನಾಗಿರುವ ಮೈಲುಗಿಯು ಪೋಲವಸ ಎಂಬಲ್ಲಿ ರಾಜನಾಗಿದ್ದನು. ಇದು ಆಂಧ್ರದ ಕರೀಂನಗರ ಜಿಲ್ಲೆಯ ಜಗತ್ಯಾಲ್ ತಾಲ್ಲೂಕಿನಲ್ಲಿರುವ ಪ್ರದೇಶ. ಆದುದರಿಂದ ಅವನಿಗೂ ಸೇವುಣ ಮಲ್ಲುಗಿಗೂ ಯಾವ ವಿಧವಾದ ಸಂಬಂಧ ವಿಲ್ಲವೆಂದೂ ಹೇಳಬೇಕು. ಮಲ್ಲುಗಿಯು ರಾಜ್ಯವನ್ನು ಕಟ್ಟಲು ಆಮರ್ಧಕಪುರದ ರಟ್ಟವಂಶದ ರಾಜನಾದ ಬಲ್ಲಾಳನು ಸಹಾಯಮಾಡಿದನೆಂದು ತಿಳಿಯುತ್ತದೆ. ಬಲ್ಲಾಳನ ಬಿರುದುಗಳಲ್ಲಿ 'ಮೈಲುಗಿ ಮಂಡಲೀಕ ಪ್ರತಿಷ್ಠಾಚಾರ್ಯ' ಎಂಬುದು ಗಮನಾರ್ಹವಾದುದು.[26]

ಮಲ್ಲುಗಿಯ ಮರಣಾನಂತರ ಸೇವುಣವಂಶದಲ್ಲಿ ಕಲಹಗಳು ಪ್ರಾರಂಭವಾದವು. ಹೇಮಾದ್ರಿಯ ರಾಜಪ್ರಶಸ್ತಿಯಿಂದ ಮತ್ತು ಶಾಸನಗಳಿಂದ, ಸೇವುಣ ರಾಜ್ಯದಲ್ಲಿ ಅರಾಜಕತೆಯು ಉಂಟಾಯಿತೆಂದು ಗೊತ್ತಾಗುತ್ತದೆ. ಅಮರಮಲ್ಲುಗಿ, ಅಮರಗಾಂಗೇಯ, ಗೋವಿಂದರಾಜ, ಕಾಲಿಯ ಬಲ್ಲಾಳ ಮತ್ತು ಕರ್ಣ ಎಂಬ ರಾಜಕುಮಾರರ ಹೆಸರುಗಳು ಕಾಣಬರುತ್ತವೆ.[27] ಈ ಅರಾಜಕತೆಯನ್ನು ಹೋಗಲಾಡಿಸಿ ಸೇವುಣರ ಸ್ವಾತಂತ್ರ್ಯಕ್ಕೆ ಕಾರಣನಾದವನು ಐದನೆಯ ಭಿಲ್ಲಮ.

## ಟಿಪ್ಪಣಿಗಳು

1. EI. Vol. XXVIII, P. 312: IA. Vol. XII, P. 119 ಮತ್ತು JBBRAS, Vol. III, P. 189
2. EI. Vol. II, P. 212 ಮತ್ತು IA. Vol. XVII, P. 117
3. EI. Vol. II, P. 212
4. ಅದೇ
5. Journal of Indian History, Vol. XXX, P. 122
6. IA. Vol. XVII, P. 117
7. Bhandarkar : E.H.D. P. 110-11
8. E.I. Vol. II P. 212
9. ಯೇನಾಕಾರಿ ಪುರದ್ವಯಂ ಸಮಧಿಕಂ ತ್ರೈಲೋಕ್ಯರಮ್ಯಂ ಸದಾ
   ಏಕಂ ಗ್ರಾವಮಯಮ್ ಸುಕರ್ಮರಚಿತಂ ಗ್ರಾವೇಶ್ವರಂ ನಾಮತಃ
   ಅನ್ಯತ್ಕ್ಷಾಮಯಂ ಧರಾತ್ವಭಿನವಮ್ ಶ್ರೀಸೋಮನಾಥಾಹ್ವಯಂ...
10. I.A. Vol. XII, P. 119
11. Bhandarkar : E.H.D. P. 111
12. EC. Vol. III, ಮೈಸೂರು 35-37
13. IA. Vol. XVII, P. 117
14. ಅದೇ.
15. Hyderabad Archaeological Series, no. 8, P. 13
16. Khare : S.M.H.D. Vol. I. P. 33
17. EI. Vol. XXXVI, P. 249
18. IA. Vol. XII, P. 124
19. ಹೇಮಾದ್ರಿ, ಶ್ಲೋಕ 31
20. Bhandarkar: E.H.D. P. 113
21. B 333 of 1964-65
22. ಹೇಮಾದ್ರಿ, ಶ್ಲೋಕ 34
    ಅಸಾಧ್ಯಸದ್ಯಃ ಸ ನಿವಾಸಹೇತೋಃ ಶ್ರೀಪರ್ಣಖೇಟಂ ನಗರಂ ರಿಪುಭ್ಯಃ।
    ಆಹಾರಿ ಯೇನೋತ್ಕಲಭೂಮಿಪಾಲಾದುತ್ತುಂಗ ಮಾತಂಗಘಟಾ ಹಠೇನ॥

23. Hiralal: List of Inscriptions in Central Provinces and Berar.
24. C.W.B., Vol. II, P. 351
25. ರಾಮರಾವ್ : ಕಾಕತೀಯ ಸಂಚಿಕಾ (ತೆಲುಗು), ಪು. 26
26. Inscriptions from Nanded District, P. 87
27. ಹೇಮಾದ್ರಿ, ಶ್ಲೋಕ 35, 36.

ತಸ್ಮಾದಮರಗಾಂಗೇಯಃ ಸಂಬಭೂವ ಭುವಃ ಪತಿಃ|
ಅಥಾವಿಂದತ ಗೋವಿಂದರಾಜಃ ಸಾಮ್ರಾಜ್ಯಸಂಪದಮ್||
ತತೋಮಲ್ಲುಗಿ ಪುತ್ರೋಭೂತ್ ಭೂಪಾಲೋSಮರ ಮಲ್ಲುಗಿಃ|
ಅಥ ಕಾಲೀಯಬಲ್ಲಾಲಃ ಪಾಲಯಾಮಾಸ ಮೇದಿನೀಮ್||

* * *

ಅಧ್ಯಾಯ ೫

# ಐದನೆಯ ಭಿಲ್ಲಮ

(ಕ್ರಿ.ಶ. 1173-1192)

ಐದನೆಯ ಭಿಲ್ಲಮನು ಯಾರು ಎಂಬುದು ಚರ್ಚಾಸ್ಪದ ವಿಚಾರವಾಗಿಯೇ ಇದೆ. ಶಾಸನಗಳಿಂದ ಮತ್ತು ಹೇಮಾದ್ರಿಯಿಂದ ದೊರಕುವ ವಿರೋಧಾತ್ಮಕ ಮಾಹಿತಿಗಳೇ ಇದಕ್ಕೆ ಕಾರಣ. ಭಿಲ್ಲಮನು ಮಲ್ಲುಗಿಯ ಮಗನೆಂದು ಸ್ಪಷ್ಟವಾಗಿ ಹೇಳುತ್ತಾನೆ ಹೇಮಾದ್ರಿ.[1] ಅವನ ಪ್ರಕಾರ ಮಲ್ಲುಗಿಯ ಅನಂತರ ಅವನ ಮಗನಾದ ಅಮರಗಂಗೇಯನು ರಾಜನಾದನು. ಅನಂತರ ಅಮರಗಾಂಗೇಯನ ಮತ್ತೊಬ್ಬ ಮಗನಾದ ಅಮರ ಮಲ್ಲುಗಿಯೂ, ಅನಂತರ ಅವನ ಮಗನಾದ ಕಾಲಿಯ ಬಲ್ಲಾಳನೂ ರಾಜರಾದರು. ಆದರೆ ಯದುವಂಶಲಕ್ಷ್ಮೀಯು ಕಾಲಿಯ ಬಲ್ಲಾಳನನ್ನು ಬಿಟ್ಟು ಅವನ ಚಿಕ್ಕಪ್ಪನಾದ ಭಿಲ್ಲಮನನ್ನು ವರಿಸಿತು. ಇದರಿಂದ ಭಿಲ್ಲಮನು ಮಲ್ಲುಗಿಯ ಪುತ್ರನೂ, ಅಮರಮಲ್ಲುಗಿ ಮತ್ತು ಅಮರಗಾಂಗೇಯ, ಇವರ ಸಹೋದರನೂ ಆಗಿದ್ದನೆಂದೂ ಗೊತ್ತಾಗುತ್ತದೆ. ಆದರೆ ಶಾಸನಗಳ ಮಾಹಿತಿಯು ಇದಕ್ಕೆ ವಿರೋಧವಾಗಿದೆ. ಭಿಲ್ಲಮನಿಂದಲೇ ಹೊರಡಿಸಲ್ಪಟ್ಟ ಕ್ರಿ.ಶ. 1191ರ ಗದಗ್ ಶಾಸನವು ಅವನದೇ ಆದುದರಿಂದ ನಂಬಿಕೆಗೆ ಅರ್ಹವಾದುದು.[2] ಇದರ ಪ್ರಕಾರ ಮಲ್ಲುಗಿಯ ಮಗನೇ ಅಮರಗಾಂಗೇಯ. ಅಮರಗಾಂಗೇಯನ ಸಹೋದರನೇ ಕರ್ಣ. ಕರ್ಣನ ಮಗನೇ ಭಿಲ್ಲಮ. ಇದರಿಂದ ಭಿಲ್ಲಮನ ತಂದೆಯು ಕರ್ಣನೆಂದೂ, ತಾತನು ಮಲ್ಲುಗಿಯೆಂದೂ ಸ್ಪಷ್ಟವಾಗುತ್ತದೆ.

ಭಿಲ್ಲಮನು ಶಾಂತಿಯುತ ರೀತಿಯಲ್ಲಿ ಪಟ್ಟಕ್ಕೆ ಬರಲಿಲ್ಲವೆಂದೂ, ತನ್ನ ದಾಯಾದಿಗಳನ್ನು ಸೋಲಿಸಿ ರಾಜ್ಯವನ್ನು ತನ್ನದನ್ನಾಗಿ ಮಾಡಿಕೊಂಡಿರಬೇಕೆಂದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಸೇನಾಧಿಪತಿ ಜಲ್ಹನು, ಭಿಲ್ಲಮನು ರಾಜ್ಯವನ್ನು ಆಕ್ರಮಿಸಿಕೊಳ್ಳಲು ಬಹಳ ಸಹಾಯಮಾಡಿದನು ಎಂಬ ಜಲ್ಹಣನ ಮಾತನ್ನು ಇಲ್ಲಿ ಜ್ಞಾಪಿಸಿಕೊಳ್ಳಬಹುದು.[3] ಶೂರನೂ, ಧೀರನೂ ಆದ ಭಿಲ್ಲಮನು ತನ್ನ ದಾಯಾದಿಗಳನ್ನು ಸದೆಬಡಿದು ರಾಜ್ಯಕ್ಕೆ ತಾನೇ ದೊರೆಯಾಗಿ ಸೇವುಣರ ಚರಿತ್ರೆಯಲ್ಲಿ ಒಂದು ಹೊಸ ಅಧ್ಯಾಯವನ್ನೇ ಪ್ರಾರಂಭಿಸಿದನು. ಕ್ರಿ.ಶ. 1173ರ ಹೊತ್ತಿಗೆ ಭಿಲ್ಲಮನು ತನ್ನ ರಾಜ್ಯವನ್ನು ಸಂಪಾದಿಸಿರಬೇಕು. ಏಕೆಂದರೆ ಆ ತೇದಿಯ ಶಾಸನವೊಂದು ಭಿಲ್ಲಮನನ್ನು ಹೆಸರಿಸುತ್ತದೆ.[4] ಈ ಸಮಯದಲ್ಲಿ ಕಲ್ಯಾಣದ

ಚಾಳುಕ್ಯರನ್ನು ಸೋಲಿಸಿ ಕಳಚೂರಿ ಬಿಜ್ಜಳನು ಬಹು ಪ್ರಭಾವಿತನಾದ ದೊರೆಯೆನಿಸಿಕೊಂಡಿದ್ದನು. ಚಾಳುಕ್ಯರ ಸಾಮಂತರಾಗಿ ಆಳುತ್ತಿದ್ದ ಸಣ್ಣ ಸಣ್ಣ ರಾಜರುಗಳಲ್ಲಿ ಕಳಚೂರಿಗಳ ಸಾಮಂತರಾಗಿ ಕೆಲವರು ಮುಂದುವರಿದರು. ಭಿಲ್ಲಮನ ತಾತನಾದ ಮಲ್ಲುಗಿಯು ಕಳಚೂರ್ಯರ ಮೇಲೆ ಯುದ್ಧವನ್ನು ಮಾಡಿದ್ದನು. ಆದರೆ ಈಗ ರಾಜಕೀಯ ಪರಿಸ್ಥಿತಿ ಬದಲಾಗಿದ್ದುದರಿಂದ, ಭಿಲ್ಲಮನು ಚಾಳುಕ್ಯರನ್ನು ತ್ಯಜಿಸಿ ಕಳಚೂರ್ಯರ ಅಧೀನನಾದನು. ಕ್ರಿ.ಶ.1173ರ ಕಳಚೂರಿ ಸಂಕಮನ ಶಾಸನದಲ್ಲಿ ಭಿಲ್ಲಮನ ಮಂತ್ರಿ ಮಾಯಿದೇವನು ದೇವಾಲಯಕ್ಕೆ ಕೊಟ್ಟ ದತ್ತಿಗಳ ವಿಚಾರ ಉಲ್ಲೇಖಿತವಾಗಿದೆ. ಇದರಲ್ಲಿ ಭಿಲ್ಲಮನಿಗೆ ಚಕ್ರವರ್ತಿಸೂಚಕವಾದ ಯಾವ ಬಿರುದುಗಳೂ ಇಲ್ಲದೆ, 'ಯಾದವನಾರಾಯಣ ಶ್ರೀ ಭಿಲ್ಲಮ' ಎಂದಿರುವುದು ಗಮನಾರ್ಹವಾದುದು. ಅಂದರೆ ಅವನು ಕಳಚೂರ್ಯರ ಅಧೀನದಲ್ಲಿ ಸಾಮಂತನಾಗಿದ್ದನೆಂದೂ ಸ್ಪಷ್ಟವಾಗುತ್ತದೆ.

ಕಳಚೂರಿ ವೀರಬಿಜ್ಜಳನ ಮರಣಾನಂತರ, ಕಳಚೂರ್ಯ ರಾಜ್ಯಕ್ಕೆ ಎಲ್ಲೆಡೆಯಲ್ಲಿಯೂ ವಿರೋಧ ಹೆಚ್ಚಿತು. ಇದನ್ನು ಗಮನಿಸಿದ ಭಿಲ್ಲಮನು, ಅವರೊಡನೆ ಕಲಹಗಳನ್ನು ಪ್ರಾರಂಭಿಸಿದನು. ಭಿಲ್ಲಮನು ಮೈಲುಗಿಯ ಸೈನ್ಯವನ್ನು ಸೋಲಿಸಿದನೆಂದು ಶಾಸನವೊಂದು ತಿಳಿಸುತ್ತದೆ. ಈ ಮೈಲುಗಿಯು ವೀರಬಿಜ್ಜಳನ ಮಗ. ಇವನು ಕ್ರಿ.ಶ. 1175-76ರಲ್ಲಿ ಮಾಸನೂರಿನಿಂದ ರಾಜ್ಯವಾಳುತ್ತಿದ್ದನು. ಭಿಲ್ಲಮನು ಇವನ ಮೇಲೆ ದಂಡೆತ್ತಿ ಹೋಗಿ ಅವನನ್ನು ಸೋಲಿಸಿರಬೇಕು. ಈ ಮಧ್ಯದಲ್ಲಿ ಚಾಳುಕ್ಯ ನಾಲ್ಕನೆಯ ಸೋಮೇಶ್ವರನು ತನ್ನ ರಾಜ್ಯವನ್ನು ವಶಮಾಡಿಕೊಳ್ಳಲು ಪ್ರಯತ್ನಗಳನ್ನು ನಡೆಸುತ್ತಿದ್ದನು. ಸುಮಾರು ಕ್ರಿ.ಶ 1180ರ ಹೊತ್ತಿಗೆ ಕಳಚೂರಿಗಳು ಸೋಲಿಸಲ್ಪಟ್ಟು ಚಾಳುಕ್ಯ ನಾಲ್ಕನೆಯ ಸೋಮೇಶ್ವರನು ಮತ್ತೆ ರಾಜನಾದನು. ಕಳಚೂರಿಗಳು ಇಲ್ಲಿಂದ ಓಡಿ ಹೋಗಿ ಪಂಢರಾಪುರದ ಸಮೀಪದಲ್ಲಿರುವ ಮಂಗಳವಾಡದಲ್ಲಿ ರಾಜ್ಯವಾಳಲು ಪ್ರಾರಂಭಿಸಿದರು.

ಭಿಲ್ಲಮನು ಮಂಗಳವೇಷ್ಟಕದ ರಾಜನಾದ ಬಿಲ್ಲಣನನ್ನು ಕೊಂದನು ಎಂದು ಹೇಮಾದ್ರಿಯ ರಾಜಪ್ರಶಸ್ತಿಯಿಂದ ತಿಳಿದುಬರುತ್ತದೆ. ಈ ಬಿಲ್ಲಣನು ಕಳಚೂರಿ ರಾಜವಂಶದ ರಾಯಮುರಾರಿ ಸೋವಿದೇವನ ಮಗನಾದ ವೀರಬಿಜ್ಜಳ . ಈ ವೀರಬಿಜ್ಜಳನು ಮಂಗಳವೇಷ್ಟಕ ಅಥವಾ ಮಂಗಳವಾಡದಲ್ಲಿ ಕ್ರಿ.ಶ 1192 ರವರೆಗೂ ಆಳುತ್ತಿದ್ದನು. ಹೇಮಾದ್ರಿಯು 'ಶ್ರೀ ಬಿಲ್ಲಣಂ ಜಘ್ನಿವಾನ್' ಎಂದು ಹೇಳಿದ್ದಾನೆ. ಈ ವೀರಬಿಜ್ಜಳನು ಭಿಲ್ಲಮನ ಮರಣಾನಂತರವೂ ಬದುಕಿದ್ದನೆಂದು ಕಾಣುತ್ತದೆ. 'ಜಘ್ನಿವಾನ್' ಎಂಬ ಪದವನ್ನು ಹೇಮಾದ್ರಿಯು, ಸೋಲಿಸಿದನು ಎಂಬ ಅರ್ಥದಲ್ಲಿ ಉಪಯೋಗಿಸಿರಬೇಕು. ಈ ಬಿಲ್ಲಣನು ಕಳಚೂರಿ ವಿಜ್ಜಣ ಎಂಬ ವಾದವನ್ನು ತಳ್ಳಿಹಾಕಬೇಕು. ಏಕೆಂದರೆ ವಿಜ್ಜಣನು ಭಿಲ್ಲಮನ ತಾತನಾದ ಮೈಲುಗಿಯ ಸಮಕಾಲೀನನಾಗಿದ್ದನು.

ಭಿಲ್ಲಮನು ಅಂಸಲ ರಾಜ್ಯದ ರಾಜನನ್ನು ಸೋಲಿಸಿ ಅವನಿಂದ ಶ್ರೀವರ್ಧನವೆಂಬ ನಗರವನ್ನು ವಶಪಡಿಸಿಕೊಂಡನೆಂದು ಹೇಮಾದ್ರಿಯಿಂದ ತಿಳಿದುಬರುತ್ತದೆ.[5] ಈ ಅಂಸಲ ರಾಜ್ಯವಾವುದು ಮತ್ತು ಶ್ರೀವರ್ಧನ ನಗರ ಯಾವುದು ಎಂದು ಹೇಳಲು ಸಾಧ್ಯವಿಲ್ಲ. ಈಗಿನ ಜಂಜೀರಕ್ಕೆ ಸಮೀಪವಾಗಿ, ಕೊಂಕಣದಲ್ಲಿ ಶ್ರೀ ವರ್ಧನವೆಂಬ ನಗರವಿದೆ. ಪೂನಾ ನಗರಕ್ಕೆ ಸಮೀಪದಲ್ಲಿ ಮತ್ತೊಂದು ಇದೇ ಹೆಸರಿನ ನಗರವಿದೆ. ಕ್ರಿ.ಶ.1194ರ ಹೊಯ್ಸಳ ಇಮ್ಮಡಿ ಬಲ್ಲಾಳನ ಶಾಸನದಲ್ಲಿ, ಅವನು ಸೇವುಣರಿಂದ ವೀರವರ್ಧನವೆಂಬ ನಗರವನ್ನು ವಶಮಾಡಿಕೊಂಡನೆಂದು ಹೇಳಿದೆ.[6] ಇದೇ ಶ್ರೀವರ್ಧನವಿರಬಹುದೇ ಎಂಬ ಸಂದೇಹ ಮೂಡುತ್ತದೆ. ಹಾಗಾದಲ್ಲಿ ಶ್ರೀವರ್ಧನವು ಭಿಲ್ಲಮನ ಆಳ್ವಿಕೆಗೆ ಬಹುಕಾಲ ಒಳಪಟ್ಟಿರಲಿಲ್ಲವೆಂದು ಹೇಳಬೇಕಾಗುತ್ತದೆ.

ಭಿಲ್ಲಮನು ಪ್ರತ್ಯಾಂಡಕ ರಾಜನ ಮೇಲೆ ವಿಜಯವನ್ನು ಸಂಪಾದಿಸಿದನೆಂದು ಹೇಮಾದ್ರಿಯು ಹೇಳಿದ್ದಾನೆ. ಪ್ರತ್ಯಾಂಡಕ ಎಂಬುದಕ್ಕೆ ಪ್ರತ್ಯಂಟಗಡ ಎಂಬ ಪಾಠಾಂತರವಿರಬಹುದೆಂದೂ, ಅದು ಭೋರ್ ರಾಜ್ಯದ ಪ್ರಚ್ಛಂಡಗಡ ಅಥವಾ ತೋರಣವಿರಬೇಕೆಂದು ಆಲ್ತೇಕರರು ಅಭಿಪ್ರಾಯಪಡುತ್ತಾರೆ. ಆದರೆ ಇದನ್ನು ಸಮರ್ಥಿಸಲು ಯಾವ ಆಧಾರಗಳೂ ದೊರಕಿಲ್ಲ.

ಅನಂತರ ಭಿಲ್ಲಮನು ತನ್ನ ದೃಷ್ಟಿಯನ್ನು ಉತ್ತರದ ಕಡೆಗೆ ಹರಿಸಿದನು. ಪರಮಾರ ರಾಜವಂಶದವರ ಅವನತಿಯು ಪ್ರಾರಂಭವಾಗಿ, ವಿಂಧ್ಯವರ್ಮನು ರಾಜ್ಯವಾಳುತ್ತಿದ್ದನು. ಇದನ್ನು ಗಮನಿಸಿದ ಭಿಲ್ಲಮನು ಮಾಳ್ವದೇಶಕ್ಕೆ ನುಗ್ಗಿದನು. 'ಮಾಳವ ಮಸ್ತಕ ಪ್ರಬಳ ಶೂಲಾನುದಗ್ರ', 'ಮಾಳ್ವಮಲ್ಲ' ಮೊದಲಾದ ವಿಶೇಷಣಗಳು ಭಿಲ್ಲಮನ ಶಾಸನಗಳಲ್ಲಿ ಕಾಣಬರುತ್ತವೆ. ' ಸೂಕ್ತಿಮುಕ್ತಾವಲೀ' ಗ್ರಂಥದಲ್ಲಿ ಇದರ ವಿವರಗಳು ದೊರೆಯುತ್ತವೆ. ಭಿಲ್ಲಮನ ಕರಿವೃಂದಸಾಥನಾದ ಜಲ್ಹನು ಆನೆಗಳೊಡನೆ ನುಗ್ಗಿ ಮಾಳ್ವರಾಜನ ಸೈನ್ಯದಲ್ಲಿ ಅಧೈರ್ಯವನ್ನುಂಟು ಮಾಡಿ, ಅವನ ರಾಜ್ಯವನ್ನು ಗೆದ್ದುಕೊಂಡನೆಂದು ಹೇಳಿದೆ. ವಿಂಧ್ಯವರ್ಮನು ಸೋತು ಶರಣಾಗತನಾಗಿರಬೇಕು. ಅಲ್ಲಿಂದ ಮುಂದೆ ಭಿಲ್ಲಮನು ಗುಜರಾತಿನ ಚೌಳುಕ್ಯರ ಮೇಲೆ ನುಗ್ಗಿದನು. ಚೌಳುಕ್ಯ ಎರಡನೆಯ ಭೀಮನು ಸೋಲಿಸಲ್ಪಟ್ಟನು. ಈ ಯುದ್ಧದಲ್ಲಿಯೂ ಜಲ್ಹನು ಭಿಲ್ಲಮನ ವಿಜಯಕ್ಕೆ ಕಾರಣನಾದನು. ಈ ಎರಡು ವಿಜಯಗಳಿಂದ ಉತ್ಸಾಹಿತನಾದ ಭಿಲ್ಲಮನು ಮಾರವಾರದೇಶಕ್ಕೆ ಮುನ್ನುಗ್ಗಿದನು. ನಡ್ಡೋಲದಲ್ಲಿ ಆಳುತ್ತಿದ್ದ ಚಾಹಮಾನ ವಂಶದ ಕೆಲ್ಹಣನು ಭಿಲ್ಲಮನನ್ನು ತಡೆದನು. ಸುಂಡ ಶಾಸನದಲ್ಲಿ ಕೆಲ್ಹಣನು ಭಿಲಿಮ ಎಂಬ ದಕ್ಷಿಣದ ರಾಜನನ್ನು ಸೋಲಿಸಿದನೆಂದು ಹೇಳಿದೆ. ಈ ಭಿಲಿಮನು ಸೇವುಣ ಭಿಲ್ಲಮನೇ ಇರಬೇಕು. ಕೆಲ್ಹಣನಿಂದ ಪರಾಜಿತನಾದ ಭಿಲ್ಲಮನು ಹಿಂದಿರುಗಿದನು. ಈ ಉತ್ತರದ ದಂಡಯಾತ್ರೆಗಳಿಂದ ಭಿಲ್ಲಮನಿಗೆ ಯಾವ ವಿಧವಾದ ಉಪಯೋಗವೂ

ಆಗಲಿಲ್ಲ. ಅವನ ರಾಜ್ಯವಿಸ್ತರಣೆಯೂ ಆಗಲಿಲ್ಲ. ಗುಜರಾತಿನ ಚೌಳುಕ್ಯರಾಗಲೀ ಅಥವಾ ಪರಮಾರರಾಗಲೀ ಭಿಲ್ಲಮನ ಆಳ್ವಿಕೆಗೆ ಒಳಪಡಲಿಲ್ಲ. ಆದರೆ ಇದರಿಂದ ಭಿಲ್ಲಮನಲ್ಲಿ ಹೊಸ ಉತ್ಸಾಹ ಮೂಡಿ ರಾಜ್ಯವಿಸ್ತರಣೆ ಮಾಡುವ ಆಕಾಂಕ್ಷೆ ಬಲವಾಯಿತು.

ಈ ರೀತಿ ಭಿಲ್ಲಮನು ತನ್ನ ಉತ್ತರದೇಶದ ಯುದ್ಧಗಳಲ್ಲಿ ನಿರತನಾಗಿದ್ದಾಗ, ದಕ್ಷಿಣದಲ್ಲಿ ಬಹು ಪ್ರಮುಖವಾದ ರಾಜಕೀಯ ಬದಲಾವಣೆಗಳು ಆಗುತ್ತಿದ್ದವು. ಚಾಳುಕ್ಯ ನಾಲ್ಕನೆಯ ಸೋಮೇಶ್ವರನ ಪ್ರಾಬಲ್ಯ ಕಡಿಮೆಯಾಗುತ್ತಿದ್ದಿತು. ಇದೇ ಸಮಯವನ್ನು ಸಾಧಿಸುತ್ತಿದ್ದ ಹೊಯ್ಸಳರು ಸ್ವತಂತ್ರರಾಗಲು ಹವಣಿಸುತ್ತಿದ್ದರು. ಕ್ರಿ.ಶ. 1184-86ರಲ್ಲಿ ಚಾಳುಕ್ಯ ನಾಲ್ಕನೆಯ ಸೋಮೇಶ್ವರನು ತನ್ನ ರಾಜಧಾನಿ ಯನ್ನು ಬಿಟ್ಟು ಜಯಂತಿಪುರಕ್ಕೆ ಓಡಿಹೋಗಬೇಕಾಯಿತು. ಇದನ್ನೆಲ್ಲಾ ಗಮನಿಸಿದ ಭಿಲ್ಲಮನು ಕಲ್ಯಾಣನಗರವನ್ನು ಆಕ್ರಮಿಸಿಕೊಳ್ಳುವ ಉದ್ದೇಶದಿಂದ ಆ ಕಡೆ ಮುನ್ನುಗ್ಗುತ್ತಿದ್ದನು. ಗುಲ್ಬರ್ಗ ಜಿಲ್ಲೆಯ ಕುಪ್ಪ ಎಂಬಲ್ಲಿ ಭಿಲ್ಲಮನನ್ನು ಚಾಳುಕ್ಯ ಸೋಮೇಶ್ವರನು ತಡೆದನು. ಇಬ್ಬರಿಗೂ ಯುದ್ಧವಾಯಿತು. ಅದರಲ್ಲಿ ಸೋಮೇಶ್ವರನದೇ ಮೇಲುಗೈ ಆಯಿತು. ಈ ರೀತಿ ಇವರಿಬ್ಬರೂ ಯುದ್ದ ನಿರತ ರಾಗಿದ್ದುದನ್ನು ನೋಡಿ ಹೊಯ್ಸಳ ಬಲ್ಲಾಳನು ಇದೇ ತಕ್ಕ ಸಮಯವೆಂದು ಕಲ್ಯಾಣ ನಗರದ ಕಡೆಗೆ ನುಗ್ಗಿದನು. ಚಾಳುಕ್ಯರ ಕಡೆಯಿಂದ ಬಂದ ಸೈನಿಕರನ್ನು ಸೋಲಿಸಿ ಇಮ್ಮಡಿ ಬಲ್ಲಾಳನು ಕಲ್ಯಾಣವನ್ನು ತನ್ನ ವಶಮಾಡಿಕೊಂಡನು. ಆದರೆ ಭಿಲ್ಲಮನು ಕೂಡಲೇ ಕಲ್ಯಾಣಕ್ಕೆ ಬಂದು ಬಲ್ಲಾಳನ ಮೇಲೆ ಯುದ್ಧ ಮಾಡಿದನು. ಈ ಯುದ್ಧ ಎಲ್ಲಿ ನಡೆಯಿತು ಎಂಬುದು ಗೊತ್ತಿಲ್ಲ. ಕಲ್ಯಾಣದಲ್ಲಿಯೋ ಅಥವಾ ಅದರ ಸಮೀಪದಲ್ಲಿಯೋ ನಡೆದಿರಬೇಕು. ಹೇಮಾದ್ರಿಯ ರಾಜಪ್ರಶಸ್ತಿಯಿಂದ ಭಿಲ್ಲಮನು ಹೊಯ್ಸಳ ರಾಜನನ್ನು ಸೋಲಿಸಿ ಕಲ್ಯಾಣ ಲಕ್ಷ್ಮಿಯನ್ನು ಪಡೆದನೆಂದು ತಿಳಿದುಬರುತ್ತದೆ.[7] ಬಲ್ಲಾಳನು ಸೋತು ಹಿಂದಿರುಗಲು ಪ್ರಾರಂಭಿಸಿದನು. ಕೂಡಲೇ ಭಿಲ್ಲಮನು ಅವನನ್ನುಬೆನ್ನಟ್ಟಿದನು. ಭಿಲ್ಲಮನು ಮಾರ್ಗದಲ್ಲಿ ತರ್ದವಾಡಿ, ಬೆಳ್ವೊಲ, ಎಡೆದೊರೆನಾಡು ಮತ್ತು ಕುಂತಳ ಪ್ರದೇಶಗಳನ್ನು ತನ್ನ ವಶಮಾಡಿ ಕೊಂಡನು. ಸುಮಾರು ಕ್ರಿ.ಶ. 1187-88 ರಲ್ಲಿ ಭಿಲ್ಲಮನು ಬಿಜಾಪುರಕ್ಕೆ ಹಿಂದಿರುಗಿ ದನು. ಇದರಿಂದ ಹೊಯ್ಸಳ ರಾಜ್ಯದ ಬಹುಭಾಗಗಳು ಭಿಲ್ಲಮನ ವಶವಾಗಿ, ಅವನೇ ದಕ್ಷಿಣಾಪಥದ ರಾಜನಾಗುತ್ತಾನೆಯೋ ಎನ್ನುವ ರೀತಿಯಲ್ಲಿದ್ದಿತು. ಹೇಮಾದ್ರಿಯು ಭಿಲ್ಲಮನು ಬಲ್ಲಾಳವನ್ನು ಕೊಂದನು (ವ್ಯಸು) ಎಂದು ಹೇಳಿ ದ್ದಾನೆ. ಆದರೆ ಇದು ಸತ್ಯವಲ್ಲದಿದ್ದರೂ ಬಲ್ಲಾಳನ ಅಪಜಯವನ್ನು ವರ್ಣಿಸಲು ಸಮಂಜಸವಾಗಿಯೇ ಇದೆಯೆಂದು ಹೇಳಬಹುದು.

ಸುಮಾರು ಕ್ರಿ.ಶ. 1189ರ ಸಮಯಕ್ಕೆ ಭಿಲ್ಲಮನು ಕರ್ನಾಟಕ ರಾಜ್ಯ ಲಕ್ಷ್ಮಿಯ ಕೃಪಾಕಟಾಕ್ಷಕ್ಕೆ ಪಾತ್ರನಾದ ರಾಜ ಎಂಬ ಬಿರುದನ್ನು ಧರಿಸಿದನು.

ಇದರಿಂದ ಬಲ್ಲಾಳನಿಗೆ ಸಾಕಷ್ಟು ಅವಮಾನವೇ ಆಗಿರಬೇಕು. ಕ್ರಿ.ಶ.1191ರ ವೇಳೆಗೆ ಭಿಲ್ಲಮನು ಯುದ್ಧಸನ್ನದ್ಧನಾಗಿ ಗದಗ್‌ಗೆ ಆರು ಮೈಲಿ ಸಮೀಪದಲ್ಲಿರುವ ಹೇರೂರ ಎಂಬಲ್ಲಿ ತಂಗಿದನು.[8] ಹೊಯ್ಸಳ ಬಲ್ಲಾಳನು ತಕ್ಕ ಸಿದ್ಧತೆಗಳನ್ನು ಮಾಡಿಕೊಂಡು ಕ್ರಿ.ಶ.1191ರಲ್ಲಿ ಭಿಲ್ಲಮನ ಮೇಲೆ ಸೊರಟೂರು ಎಂಬಲ್ಲಿ ಯುದ್ಧ ಮಾಡಿದನು. ಭಿಲ್ಲಮನ ಸೈನ್ಯವು 200,000 ಕಾಲಾಳುಗಳಿಂದಲೂ 12,000 ಅಶ್ವದಳದವರಿಂದಲೂ ಕೂಡಿದ್ದಿತು. ಹರಿಹರದ ಮತ್ತು ಆನೆಕೆರೆಯ ಶಾಸನಗಳು ಈ ಯುದ್ಧವನ್ನು ಚೆನ್ನಾಗಿ ವರ್ಣಿಸುತ್ತವೆ.[9]

> ಇಂನುಂ ಬೀರದತೋರ ಬಿತ್ತನಗೆ ವೊಯ್ದುಂ ತೀರ್ಪುದಾರೂಢ ಸಂಪಂನಂ
> ದಕ್ಷಿಣ ಚಕ್ರಿಗೆಲ್ದ ಸೊರಟೂರಿಂ ಬೆಳ್ವೊಲಂ ಮುಟ್ಟೆ ಸಂಭನೋದ್ಧೃಷ್ಟ
> ಕೃಷೀವಳಾವಳೀ ಹಳಿಪ್ರಾಗ್ಭಾಗನಿಃಕೀಲಿತೋತ್ಪನ್ನಂ ಸೇವುಣಸೈನ್ಯ
> ಸದ್ಭಟಕರೋಟೀ ಕೋಟಿಸಂಘಟ್ಟನಂ

ಎಂದು ಆನೆಕೆರೆಯ ಶಾಸನವು ತಿಳಿಸುತ್ತದೆ.

ಹೊಯ್ಸಳ ಸೈನ್ಯವು ವಿಜಯವನ್ನು ಸಂಪಾದಿಸಿತು. ಭಿಲ್ಲಮನ ಸೈನ್ಯವು ಸೋತು ಲೊಕ್ಕಿಗುಂಡಿ ಎಂಬ ಕೋಟೆಗೆ ಓಡಿಹೋಯಿತು.[10] ಜೈತ್ರಸಿಂಹನ ನೇತೃತ್ವದಲ್ಲಿ ಲೊಕ್ಕಿಗುಂಡಿಯಲ್ಲಿ ಬಹಳ ಕಾಲ ಸೇವುಣ ಸೈನ್ಯವು ಇರಲಾಗಲಿಲ್ಲ. ಹೊಯ್ಸಳ ಸೈನ್ಯವು ಬಲ್ಲಾಳನ ಮುಂದಾಳತ್ವದಲ್ಲಿ ಕ್ರಿ.ಶ. 1192ರಲ್ಲಿ ಲೊಕ್ಕಿಗುಂಡಿಯನ್ನು ತನ್ನ ವಶಮಾಡಿಕೊಂಡಿತು. ಈ ವಿಜಯದಿಂದ ಕುಂತಳ ರಾಜ್ಯಕ್ಕೆ ಬಲ್ಲಾಳನೇ ಒಡೆಯನಾದನು. ವೀರರಾಜನಗರ, ಕುರುಗೋಡು, ಮಾತಂಗ, ದೊರವಾಡಿ, ಗುತ್ತಿ, ಬಳ್ಳಾರೆ, ಸೊರಟೂರು, ಈರುಂಬರ್ಗೆ ಮುಂತಾದ ಕೋಟೆಗಳು ಬಲ್ಲಾಳನ ವಶವಾದವು. ಭಿಲ್ಲಮನ ಗತಿ ಏನಾಯಿತು ಎಂದು ತಿಳಿಯುವುದು ಕಷ್ಟ. ರಾಜಾದಿತ್ಯನ ವ್ಯವಹಾರ ಗಣಿತವೆಂಬ ಗ್ರಂಥದಲ್ಲಿ ಸೊರಟೂರು ಯುದ್ಧದ ಉಲ್ಲೇಖವಿದೆ.[11] ಸೇವುಣರಾಜನ ಸೈನ್ಯದ ಐದು ಭಾಗಗಳು ನೀರಿನಲ್ಲಿ ಮುಳುಗಿ ಹೋದವು; ಆರು ಭಾಗಗಳು ಹೆದರಿ ಓಡಿಹೋದವು; ನಾಲ್ಕು ಭಾಗಗಳು ಕೊಲ್ಲಲ್ಪಟ್ಟವು; ಮತ್ತೆ ನಾಲ್ಕು ಭಾಗಗಳು ಹಿಂದಿರುಗಿ ಓಡಿಹೋದವು; ಭಿಲ್ಲಮರಾಜನು ಮಿಕ್ಕ ಆರುನೂರು ಸೈನಿಕರೊಡನೆ ಓಡಿಹೋದನು ಎಂದು ರಾಜಾದಿತ್ಯನು ಉಲ್ಲೇಖಿಸಿದ್ದಾನೆ. ಇದರಿಂದ ಭಿಲ್ಲಮನು ಸೊರಟೂರು ಯುದ್ಧದಲ್ಲಿಯಾಗಲೀ ಅನಂತರದ ಲೊಕ್ಕಿಗುಂಡಿಯ ಮುತ್ತಿಗೆಯಲ್ಲಾಗಲೀ ಮಡಿಯಲಿಲ್ಲವೆಂಬುದು ವ್ಯಕ್ತವಾಗುತ್ತದೆ. ಆದರೆ ಕ್ರಿ.ಶ.1198ರ ಬೇಲೂರಿನ ಹೊಯ್ಸಳ ಶಾಸನದಲ್ಲಿ[12] ಬಲ್ಲಾಳನು

> ಅಸುಹ್ರಿ ತು ಪಾಂಡ್ಯ ನೃಪಾಳ ರಕ್ತಜಳದಿಂ
> ನೀರುಡಿಸುರ್ರೆಂಬಿನಂ ಮಸೆದಂ ಭಿಲ್ಲಮ ಮಸೆದಂ ಭಿಲ್ಲಮ ಮಸ್ತಶಾಣದೊಳು
> ಘೋರೆಂಬಿನಂ ಜೈತುಗೀ....

ಎಂದು ಹೇಳಿದೆ. ಆದರೆ ಲೊಕ್ಕಿಗುಂಡಿ ಯುದ್ಧ ನಡೆದ ವರ್ಷವೇ ಅಂದರೆ ಕ್ರಿ.ಶ. 1192ರಲ್ಲಿ ಬರೆಸಲಾದ ಹೊಯ್ಸಳ ಶಾಸನದಲ್ಲಿ ಭಿಲ್ಲಮನ ಮರಣದ ವಿಚಾರವಾಗಿ ಏನೂ ಹೇಳಿಲ್ಲ. ಭಿಲ್ಲಮನ ಬಲಗೈಯಂತಿದ್ದ ಜೈತ್ರಸಿಂಹನು ಕೊಲ್ಲಲ್ಪಟ್ಟನು ಎಂದು ಮಾತ್ರ ಲೊಕ್ಕಿಗುಂಡಿ ಶಾಸನದಲ್ಲಿ ಹೇಳಿದೆ. ಇನ್ನೆರಡು ವರ್ಷಗಳ ಆನಂತರದ, ಅಂದರೆ ಕ್ರಿ.ಶ.1194ರ ಶಾಸನದಲ್ಲಿಯೂ ಭಿಲ್ಲಮನ ಮರಣ ಉಲ್ಲೇಖಿತವಾಗಿಲ್ಲ. ಹಾಗಾದರೆ ಬಲ್ಲಾಳನು ಈ ವಿಚಾರವನ್ನು ತಿಳಿಸಲು ಕ್ರಿ.ಶ.1198ರವರೆಗೆ ಏಕೆ ಕಾಯಬೇಕಾಯಿತು ಎನ್ನುವ ಪ್ರಶ್ನೆ ಬರುತ್ತದೆ. ಯುದ್ಧ ನಡೆದಲ್ಲಿಯೇ ಬರೆಸಲಾದ ಶಾಸನದಲ್ಲಿ ಭಿಲ್ಲಮನ ಬಲಗೈಯಂತಿದ್ದ ಜೈತ್ರ ಸಿಂಹನ ಮರಣ ಮಾತ್ರ ಉಲ್ಲೇಖಿತವಾಗಿರುವುದು ಬಹು ಗಮನಾರ್ಹವಾದುದು. ಭಿಲ್ಲಮನೂ ಮರಣಹೊಂದಿದ್ದರೆ ಆ ವಿಚಾರವನ್ನು ಹೊಯ್ಸಳ ಕವಿಯು ತನ್ನ ಶಾಸನದಲ್ಲಿ ಸೇರಿಸದೇ ಇರುತ್ತಿರಲಿಲ್ಲ. ಅಷ್ಟೇ ಅಲ್ಲದೆ ಸಮಕಾಲೀನ ಕವಿಯಾದ ರಾಜಾದಿತ್ಯನು ಭಿಲ್ಲಮನು ಓಡಿಹೋದನು ಎಂದು ಹೇಳಿದ್ದಾನೆ. ಆದುದರಿಂದ ಭಿಲ್ಲಮನು ಸೊರಟೂರು ಯುದ್ಧದಲ್ಲಿ ಮಡಿಯಲಿಲ್ಲ ವೆಂದು ಖಚಿತವಾಗಿ ಹೇಳ ಬಹುದು. ಭಿಲ್ಲಮನ ದಕ್ಷಿಣ ದಂಡಯಾತ್ರೆಯು ಮೊದಲು ಸಫಲಕಾರಿಯಾದರೂ ಕೊನೆ ಕೊನೆಗೆ ವಿಫಲವಾಯಿತು.

ಭಿಲ್ಲಮನ ರಾಜ್ಯವು ಸ್ವಲ್ಪ ಕಾಲ ಕುಂತಳ ರಾಜ್ಯದ ಬಹುಭಾಗವನ್ನು ಒಳ ಗೊಂಡಿದ್ದಿತು. ಸ್ವಲ್ಪ ಕಾಲದ ಅನಂತರ ಅವನಿಗೆ ಬೆಳವೊಲ ಮತ್ತು ಎಡೆದೊರೆ ನಾಡುಗಳು ನಷ್ಟವಾದವು. ಗುತ್ತಿಯಪಾಂಡ್ಯರು, ಸೌಂದತ್ತಿಯ ರಟ್ಟರು ಮತ್ತು ಕದಂಬರು ಭಿಲ್ಲಮನ ಆಳ್ವಿಕೆಗೆ ಸೇರಿರಲಿಲ್ಲ. ಆದರೆ ಆಮರ್ದಕಪುರದಲ್ಲಿ ಆಳುತ್ತಿದ್ದ ರಟ್ಟವಂಶದ ರಾಜನಾದ ಬಲ್ಲಾಳನು ಇವನ ಸಾಮಂತನಾಗಿದ್ದನು.[19] ಭಿಲ್ಲಮನ ರಾಜ್ಯವು ಬಿಜಾಪುರ, ಶೋಲಾಪುರ, ಗುಲ್ಬರ್ಗ, ರಾಯಚೂರು ಜಿಲ್ಲೆಗಳನ್ನೂ ಮತ್ತು ಜಾತ್, ಭೋರ್ ರಾಜ್ಯಗಳನ್ನೂ ಮತ್ತು ಸೇವುಣ ದೇಶವನ್ನು ಒಳಗೊಂಡಿದ್ದಿತು.

ಭಿಲ್ಲಮನು ದೇವಗಿರಿ ನಗರವನ್ನು ನಿರ್ಮಿಸಿದನೆಂದು ಹೇಮಾದ್ರಿಯು ಹೇಳಿದ್ದಾನೆ. ಶಾಸನಗಳಲ್ಲಿಯೂ ಇದು ಉಕ್ತವಾಗಿದೆ. ಕಳಚೂರಿ ಮತ್ತು ಚಾಳುಕ್ಯರಿಂದ ಸ್ವತಂತ್ರನಾದ ಅನಂತರ, ಭಿಲ್ಲಮನು ತನ್ನ ರಾಜಧಾನಿಯನ್ನು ದೇವಗಿರಿಗೆ ಬದಲಾಯಿಸಿರಬೇಕು. ಇವನು ಶೈವ ದೇವಾಲಯಗಳಿಗೆ ಅನೇಕ ದತ್ತಿಗಳನ್ನು ಬಿಟ್ಟುಕೊಟ್ಟಿದ್ದನು.

ಐದನೆಯ ಭಿಲ್ಲಮನು ಶೂರನೂ, ಧೀರನೂ, ಸಾಹಸಿಯೂ ಆಗಿದ್ದನು. ಸಾಮಂತರಾಗಿದ್ದ, ಸೇವುಣರನ್ನು ಸ್ವತಂತ್ರರನ್ನಾಗಿ ಮಾಡಿದ ಕೀರ್ತಿಯು ಭಿಲ್ಲಮನಿಗೆ ಸೇರುತ್ತದೆ. ರಾಜ್ಯಕ್ಕೆ ದೊರೆಯಾದ ಸಮಯದಿಂದ, ತನ್ನ ಮರಣ ದವರೆಗೂ ಸತತವಾಗಿ ಯುದ್ಧಗಳನ್ನು ಮಾಡಿ, ಸೇವುಣ ವಂಶದ ಪ್ರಾಬಲ್ಯವನ್ನೂ

ಮತ್ತು ಘನತೆಯನ್ನೂ ತನ್ನ ಶಕ್ತಿ ಸಾಮರ್ಥ್ಯಗಳಿಂದಲೇ ಹೆಚ್ಚಿಸಿದನು. ಒಂದು ದೃಷ್ಟಿಯಲ್ಲಿ ನೋಡುವುದಾದರೆ ಐದನೆಯ ಭಿಲ್ಲಮನೇ ಸೇವುಣ ವಂಶದ ನಿಜಸ್ಥಾಪಕನೆನ್ನಬಹುದು.

## ಟಿಪ್ಪಣಿಗಳು

1. ಹೇಮಾದ್ರಿ. ಶ್ಲೋಕ 37
   ಮಹೀಪತೇಸ್ತಸ್ಯ ವಿಹಾಯಪುತ್ರಾನ್ ಗುಣಾನುರಕ್ತಾ ಯದುವಂಶಲಕ್ಷ್ಮೀಃ|
   ಶ್ರೀ ಭಿಲ್ಲಮಂ ತಸ್ಯ ತತಃ ಪಿತೃವ್ಯಮವ್ಯಾತ್ರರಾಜದ್ಭುಜಮಾಜಗಾಮ||
2. EI. Vol. III, P. 217
3. ನಿನಾಯ ಭಿಲ್ಲಮಂ ರಾಜ್ಯೇ ಜಲ್ಲೋರಾಜತಂ ಕ್ಷಯವರ್ಜಿತಂ
4. EI. Vol. XV, P. 322
5. ಹೇಮಾದ್ರಿ. ಶ್ಲೋಕ 38.
   ಯಃ ಶ್ರೀವರ್ಧನಮಾಸಸಾದ ನಗರಂ ಕ್ಷೋಣೀಪತೇರಂಸಲಾತ್
   ಯಃ ಪ್ರತ್ಯಂಡಕ ಭೂಭೃತಂ ಚ ಸಮರೇ ದುಷ್ಟಂ ತ್ಯಜಕ್ಷಣಾತ್|
   ಯೋವಾ ಮಂಗಲವೇಷ್ಟಕಂ ಕ್ಷಿತಿಪತಿಂ ಶ್ರೀ ವಜ್ರಿಣಂ ಜಘ್ನಿವಾನ್
   ಕಲ್ಯಾಣಶ್ರಿಯಮಪ್ಯವಾಪ್ಯ ವಿದಧೇ ಯೋ ಹೋಸಳೇಸಂ ವ್ಯಸು||
6. MAR, 1907-08, Para 45
7. ಕಲ್ಯಾಣಶ್ರಿಯಮಪ್ಯವಾಪ್ಯ ವಿದಧೇ ಯೋ ಹೊಯ್ಸಳೇಶಂ ವ್ಯಸು
8. EI. Vol. III. P. 217
9. EC. Vol. V. ಚನ್ನರಾಯಪಟ್ಟಣ 179 ಮತ್ತು Vol. XI. ದಾವಣಗೆರೆ 25
10. EC. Vol. V, ಅರಸೀಕೆರೆ 5
11. Indian Historical Quarterly, Vol. VI, P. 125
12. EC. Vol. V, ಬೇಲೂರು 55
13. Inscriptions from Nanded District, Inscription 40

* * *

ಅಧ್ಯಾಯ ೬

# ಜೈತುಗಿ

(ಕ್ರಿ.ಶ. 1192-1200)

ಕ್ರಿ.ಶ.1192ರಲ್ಲಿ ಐದನೆಯ ಭಿಲ್ಲಮನು ಮರಣಹೊಂದಲು ಅವನ ಮಗನಾದ ಜೈತುಗಿಯು ದೊರೆಯಾದನು. ಇವನ ಅತ್ಯಂತ ಪ್ರಾಚೀನ ಶಾಸನವು ಕಡ್ಲೆವಾಡದಲ್ಲಿ ದೊರಕಿದೆ.[1] ಇದರ ಕಾಲ ಶಕ 1114, ಪರೀಧಾವಿ, ಪುಷ್ಯ10, ಭಾನುವಾರ. ಅಂದರೆ ಕ್ರಿ.ಶ.1192, ಡಿಸೆಂಬರ್ 25. ಶಾಸನಗಳಲ್ಲಿ ಇವನ ಹೆಸರು ಜೈತ್ರಪಾಲ, ಜೈತ್ರಸಿಂಹ ಮುಂತಾದ ರೂಪದಲ್ಲಿಯೂ ದೊರಕುತ್ತದೆ. ಬಲ್ಲಾಳ-ಭಿಲ್ಲಮರ ಲೊಕ್ಕಿಗುಂಡಿ ಯುದ್ಧದಲ್ಲಿ ಪಾಲ್ಗೊಂಡ ಭಿಲ್ಲಮನ ಬಲಗೈಯಂತಿದ್ದ ಜೈತ್ರಸಿಂಹನು ಇವನೇ ಎಂದು ಕೆಲವರು ಅಭಿಪ್ರಾಯಪಡುತ್ತಾರೆ. ಆದರೆ ಬಲ್ಲಾಳನ ಗದಗ್ ಶಾಸನದಲ್ಲಿ ಬಲ್ಲಾಳನು ಜೈತ್ರಸಿಂಹನನ್ನು ಯುದ್ಧದಲ್ಲಿ ಕೊಂದನು ಎಂದು ಹೇಳಿದೆ. ಆದುದರಿಂದ ಈ ಜೈತ್ರಸಿಂಹನು ಭಿಲ್ಲಮನ ಮಗನಲ್ಲ ವೆಂದೂ, ಲೊಕ್ಕಿಗುಂಡಿ ಯುದ್ಧದಲ್ಲಿ ಪಾಲ್ಗೊಂಡ ಒಬ್ಬ ಸೇನಾಧಿಪತಿಯೆಂದೂ ಸ್ಪಷ್ಟವಾಗಿ ಹೇಳಬೇಕಾಗುತ್ತದೆ.

ಜೈತುಗಿಯು ಅಧಿಕಾರ ಸೂತ್ರವನ್ನು ವಹಿಸಿಕೊಂಡ ಕ್ರಿ.ಶ. 1192 ನೆಯ ವರ್ಷವು ಸೇವುಣರಲ್ಲಿ ವಿಷಮ ಪರಿಸ್ಥಿತಿಯನ್ನು ತಂದೊಡ್ಡಿದ್ದಿತು. ಸೇವುಣರಾಜನಿಗೆ ಯಾವ ವಿಧವಾದ ಸಮರ್ಪಕ ಸ್ಥಿತಿಯೂ ಕಾಣಬರುತ್ತಿರಲಿಲ್ಲ. ಆಗ ತಾನೇ ಲೊಕ್ಕಿಗುಂಡಿಯಲ್ಲಿ ಸೇವುಣರನ್ನು ಸದೆಬಡಿದ ಹೊಯ್ಸಳರು ವಿಜಯಗಳಿಂದ ಮೆರೆಯುತ್ತಿದ್ದರು. ಆದರೂ ಜೈತುಗಿಯು ಕ್ರಿ.ಶ. 1193 ರಲ್ಲಿ ಅದೋನಿಯ ಚಿನ್ನ ತುಂಬಲಂ ಗ್ರಾಮದವರೆಗೂ ಬಂದನು. ಅಷ್ಟರಲ್ಲಿಯೇ ಈ ಭಾಗವು ಬಲ್ಲಾಳನ ಆಳ್ವಿಕೆಗೆ ಒಳಪಟ್ಟಿದ್ದಿತು. ಇದನ್ನು ಕಂಡ ಜೈತುಗಿಯು ಕೂಡಲೇ ತನ್ನ ರಾಜಧಾನಿಯಾದ ದೇವಗಿರಿಗೆ ಹಿಂದಿರುಗಿದನು. ಮತ್ತೆ ಜೈತುಗಿಯು ಹೊಯ್ಸಳರ ಮೇಲೆ ಯುದ್ಧಮಾಡಲಿಲ್ಲ. ಬಹುಶಃ ಇದು ಉಪಯೋಗವಿಲ್ಲ ವೆಂದು ಜೈತುಗಿಯು ಸುಮ್ಮನಾಗಿರಬೇಕು.

ಆದರೆ ಜೈತುಗಿಯು ತನ್ನ ರಾಜ್ಯವನ್ನು ಇತರ ಕಡೆಗಳಲ್ಲಿ ವಿಸ್ತರಿಸುವ ದೃಷ್ಟಿಯಿಂದ ಕಾಕತೀಯರ ಮೇಲೆ ಯುದ್ಧ ಮಾಡಿದನು. ಸೇವುಣರಿಗೂ ಕಾಕತೀಯರಿಗೂ ಯುದ್ಧ ನಡೆಯಲು ಕಾರಣಗಳೇನು ಎಂದು ತಿಳಿದಿಲ್ಲವಾದರೂ,

ಜೈತುಗಿಯ ರಾಜ್ಯವಿಸ್ತರಣಾಕಾಂಕ್ಷೆಯೇ ಇದಕ್ಕೆ ಮುಖ್ಯ ಕಾರಣವಿರಬೇಕು. ಜೈತುಗಿಯು ಯುದ್ಧಭೂಮಿಯಲ್ಲಿ ತೈಲಿಂಗರಾಜ ರೌದ್ರನನ್ನು ಬಲಿಯಾಗಿ ಅರ್ಪಿಸಿದನೆಂದು ಹೇಮಾದ್ರಿಯು ವರ್ಣಿಸಿದ್ದಾನೆ.[2] ರೌದ್ರ ಎನ್ನುವ ಪದವು ರುದ್ರ ಎಂದಿರಬೇಕೆಂದೂ ಅವನು ಕಾಕತೀಯ ರಾಜ ರುದ್ರನೆಂದೂ ಎಲ್ಲಾ ವಿದ್ವಾಂಸರೂ ಒಪ್ಪಿಕೊಂಡಿದ್ದಾರೆ. ಮಹಾದೇವನ ಕಾಳೆಗಾಂವ್[3] ಶಾಸನ ಮತ್ತು ರಾಮಚಂದ್ರನ ಫೈಠಾಣ್ ಶಾಸನದಲ್ಲಿ[4] ಜೈತುಗಿಯು ತೆಲುಗು ದೇಶದ ರಾಜನೊಬ್ಬನನ್ನು ಕೊಂದು ಗಣಪತಿರಾಜನನ್ನು ಸೆರೆಹಿಡಿದು, ಅನಂತರ ಅವನನ್ನು ಸೆರೆಯಿಂದ ಬಿಡಿಸಿ, ತೆಲುಗು ರಾಜನನ್ನಾಗಿ ಮಾಡಿದನೆಂದು ಹೇಳಿದೆ. ಜೈತುಗಿಯ ಈ ಸಾಧನೆಗಳು ಎಷ್ಟೊಂದು ಪ್ರಮುಖವಾಗಿದ್ದುವೆಂದರೆ, ಅವನ ಅನಂತರ ಬಂದ ಎಲ್ಲ ರಾಜರೂ 'ತೈಲುಂಗ ರಾಯ ಶಿರಃಕಮಲಮೂಲೋತ್ಪಾಟನ' ಮತ್ತು 'ತೆಲುಂಗರಾಯ ಸ್ಥಾಪನಾಚಾರ್ಯ' ಎಂಬ ಎರಡು ಬಿರುದುಗಳನ್ನು ಧರಿಸಿದರು. ಆದರೆ ಈ ಶಾಸನಗಳಲ್ಲಿ ಜೈತುಗಿಯು ನಿರ್ಮೂಲಮಾಡಿದ ಆಂಧ್ರರಾಜನಾರು ಮತ್ತು ಸಿಂಹಾಸನದಲ್ಲಿ ಸ್ಥಾಪಿಸಿದ ರಾಜನಾರು ಎಂಬ ವಿಚಾರ ಮಾತ್ರ ಸ್ಪಷ್ಟವಾಗಿ ಉಕ್ತವಾಗಿಲ್ಲ. ಈ ಸಮಯದಲ್ಲಿ ಆಂಧ್ರದೇಶದ ಕಾಕತೀಯ ವಂಶದಲ್ಲಿ ರುದ್ರ (ಕ್ರಿ.ಶಃ 1150-1196), ಮಹಾದೇವ (ಕ್ರಿ.ಶ. 1196-99) ಮತ್ತು ಗಣಪತಿ (1199-1261) ಎಂಬ ಮೂವರು ರಾಜರು ಆಳುತ್ತಿದ್ದರು. ಹೇಮಾದ್ರಿಯು, ಯುದ್ಧದಲ್ಲಿ ಕೊಲ್ಲಲ್ಪಟ್ಟವನು ರುದ್ರ ಎಂಬುದಾಗಿ ಹೇಳಿರುವುದರಿಂದ, ಇವನು ಕಾಕತೀಯ ರುದ್ರನೆಂಬುವುದು ಗೊತ್ತಾಗುತ್ತದೆ. ಆದರೆ ಕಾಳೆಗಾಂವ್, ಫೈಠಾಣ್ ಮೊದಲಾದ ಶಾಸನಗಳಲ್ಲಿ ಹೇಳಿರುವುದನ್ನು ಗಮನಿಸಿದರೆ, ಜೈತುಗಿಯು ಒಬ್ಬ ತೆಲುಗು ರಾಜನನ್ನು ಕೊಂದು ಮತ್ತೊಬ್ಬ ರಾಜನನ್ನು ಅವನ ಜಾಗದಲ್ಲಿ ರಾಜನನ್ನಾಗಿ ಮಾಡಿದನು ಎನ್ನುವ ಊಹೆಗೆ ಅವಕಾಶವಾಗುತ್ತದೆ. ಕಾಕತೀಯ ರುದ್ರನು ಕೊಲ್ಲಲ್ಪಟ್ಟಿದ್ದರೆ, ಕೂಡಲೇ ಗಣಪತಿಯನ್ನು ರಾಜನನ್ನಾಗಿ ಮಾಡಿರಲು ಸಾಧ್ಯವಿಲ್ಲ. ಏಕೆಂದರೆ ರುದ್ರನ ಅನಂತರ ಮಹಾದೇವನು ರಾಜನಾದನು. ಈ ವಿಷಯದಲ್ಲಿ ಸಿದ್ಧೇಶ್ವರ ಚರಿತ್ರೆ ಎಂಬ ತೆಲುಗು ಗ್ರಂಥವು ಮಾಹಿತಿಯನ್ನು ಒದಗಿಸುತ್ತದೆ.[5] ಅದರ ಪ್ರಕಾರ ಮಹಾದೇವನು ತನ್ನ ಸಹೋದರ ರುದ್ರನನ್ನು ಕೊಂದು ಅವನ ರಾಜ್ಯವನ್ನು ತಾನು ಆಕ್ರಮಿಸಿಕೊಂಡನು. ಇದನ್ನು ನೋಡಿದ ಪ್ರಜೆಗಳು ಮತ್ತು ಮಂತ್ರಿಗಳು ಅವನು ರಾಜನಾಗಿ ಮುಂದುವರಿಯುವುದನ್ನು ಖಂಡಿಸಿದರು. ಮಹಾದೇವನು ಪ್ರಜಾಭಿಪ್ರಾಯಕ್ಕೆ ತಲೆಬಾಗಿ ತನ್ನ ಮಗನಾದ ಗಣಪತಿಯನ್ನು ರಾಜನನ್ನಾಗಿ ಮಾಡಿದನು. ಅನಂತರ ಇವನು ದೇವಗಿರಿಯ ರಾಜನ ಮೇಲೆ ಯುದ್ಧ ಮಾಡಲು ಹೊರಟು, ಆ ಯುದ್ಧದಲ್ಲಿ ಕೊಲ್ಲಲ್ಪಟ್ಟನು. ಈ ಗ್ರಂಥದ ಪ್ರಕಾರ ಮಹಾದೇವನು ಸೇವುಣರ ಮೇಲಿನ ಯುದ್ಧದಲ್ಲಿ ಕೊಲ್ಲಲ್ಪಟ್ಟನು ಎಂದು ಗೊತ್ತಾಗುತ್ತದೆ. ಹಾಗಾದರೆ ಜೈತುಗಿಯು ರುದ್ರನ ಜೊತೆಗೆ ಮಹಾದೇವನನ್ನೂ ಕೊಂದನೆ ಎಂಬ ಪ್ರಶ್ನೆ ಏಳುತ್ತದೆ. ಕಾಕತೀಯ

ಶಾಸನಗಳಿಂದ, ಮಹಾದೇವನು ಯುದ್ಧದಲ್ಲಿ ಕೊಲ್ಲಲ್ಪಟ್ಟನು ಎಂದು ಗೊತ್ತಾಗುತ್ತದೆ.[6] ಕ್ರಿ.ಶ. 1249-50 ರ ಶಾಸನವೊಂದರಲ್ಲಿ ಮಹಾದೇವನು ಯುದ್ಧದಲ್ಲಿ ಮಡಿದ ವಿಚಾರವು ಪ್ರಸ್ತಾಪಿತವಾಗಿದೆ. ಆದರೆ ಈ ಯುದ್ಧ ಯಾವುದು ಎನ್ನುವುದು ಮಾತ್ರ ಹೇಳಿಲ್ಲ. ಮಹಾದೇವನು ಕೇವಲ ಮೂರು ವರ್ಷಗಳ ಕಾಲ ರಾಜನಾಗಿದ್ದುದನ್ನು ಇಲ್ಲಿ ಸ್ಮರಿಸಿಕೊಳ್ಳಬೇಕು. ಬಹುಶಃ ಯುದ್ಧದಲ್ಲಿ ಮರಣ ಹೊಂದಿದುದರಿಂದ ಅವನ ರಾಜ್ಯಭಾರವು ಕೇವಲ ಮೂರು ವರ್ಷಗಳಿಗೇ ಕುಂಠಿತವಾಗಿರಬೇಕು. ಮಹಾದೇವನು ತನ್ನ ಮಗನಾದ ಗಣಪತಿ ಯೊಂದಿಗೆ ಈಗ ಸೇವುಣರ ಮೇಲೆ ಯುದ್ಧ ಮಾಡಿರಬೇಕು. ಈ ಯುದ್ಧದಲ್ಲಿ ಮಹಾದೇವನು ಮರಣಹೊಂದಿ, ಗಣಪತಿಯು ಸೆರೆಸಿಕ್ಕಿರಬೇಕು. ಜೈತುಗಿಯು ಇವನನ್ನು ಸೆರೆಯಿಂದ ಬಿಡಿಸಿ, ಕಾಕತೀಯ ರಾಜ ನನ್ನಾಗಿ ಮಾಡಿರಬೇಕು.

ಕಾಕತೀಯರ ಮೇಲೆ ವಿಜಯವನ್ನು ಸಂಪಾದಿಸಿದ ಜೈತುಗಿಯು ಉತ್ತರದ ಕಡೆಗೆ ತಿರುಗಿದನು. ಮಾಳ್ವ ಮತ್ತು ಗುಜರಾತ್‌ಗಳಲ್ಲಿ ಸ್ಥಿತಿಯು ಅಷ್ಟೇನೂ ಸಮರ್ಪಕವಾಗಿರಲಿಲ್ಲ. ಆಗ ತಾನೇ, ಅಂದರೆ ಕ್ರಿ.ಶ. 1194ರಲ್ಲಿ ಕುತ್ಬ್-ದೀನ್-ಐಬಕ್ ದಂಡಯಾತ್ರೆ ನಡೆಸಿ ಲಾಟ ರಾಜ್ಯವನ್ನು ತನ್ನ ವಶಕ್ಕೆ ತೆಗೆದುಕೊಂಡಿದ್ದನು. ನಂತರ ಸುಭಟವರ್ಮನು ಚಾಳುಕ್ಯರ ರಾಜಧಾನಿಯಾದ ಅನಹಿಲ್‌ವಾಡಕ್ಕೆ ಮುತ್ತಿಗೆ ಹಾಕಿದನು. ಆದರೆ ಎರಡನೆಯ ಭೀಮನ ಸೇನಾಧಿಪತಿಯಾದ ಶ್ರೀಧರನು ಸುಭಟವರ್ಮನನ್ನು ಓಡಿಸಿದನು. ಇಂತಹ ಪರಿಸ್ಥಿತಿಯಲ್ಲಿ ಜೈತುಗಿಯು ಅಲ್ಲಿಯ ರಾಜಕೀಯದಲ್ಲಿ ಕೈಹಾಕಿದನು. ಇವನು ಮಾಳ್ವಕ್ಕೆ ನುಗ್ಗಿ ಸುಭಟವರ್ಮನನ್ನು ಸೋಲಿಸಿದನು. ಈ ಯುದ್ಧದಲ್ಲಿ ಜೈತುಗಿಯ ಸೇನಾಧಿಪತಿಯಾದ ಸಹದೇವನು ಬಹುಧೈರ್ಯದಿಂದ ಹೋರಾಡಿ, ಸೇವುಣರ ಜಯಕ್ಕೆ ಕಾರಣನಾದನು.[7]

ಜೈತುಗಿಯ ರಾಜ್ಯವು ಅವನು ಪಟ್ಟಕ್ಕೆ ಬಂದಾಗ ವಿಸ್ತಾರವಾಗಿದ್ದಷ್ಟೇ ಇದ್ದಿತು. ಇವನು ಸಂಪಾದಿಸಿದ ಕಾಕತೀಯರ ಮತ್ತು ಪರಮಾರರ ವಿಜಯಗಳಿಂದ ರಾಜ್ಯವಿಸ್ತರಣೆಯೇನೂ ಆಗಲಿಲ್ಲ. ಜೈತುಗಿಯ ಶಾಸನಗಳು ಶೈವ, ವೈಷ್ಣವ ಮತ್ತು ಕಾಳಾಮುಖ ದೇವಾಲಯಗಳಿಗೆ ಅವನು ಕೊಟ್ಟ ದತ್ತಿಗಳ ವಿಚಾರವನ್ನು ತಿಳಿಸುತ್ತವೆ. ಜೈತುಗಿಯ ಆಳ್ವಿಕೆಯು ಐದನೆಯ ಭಿಲ್ಲಮನ ಆಳ್ವಿಕೆಯಷ್ಟು ಅಥವಾ ಅವನ ಅನಂತರ ಬಂದ ಸಿಂಘಣನ ಆಳ್ವಿಕೆಯಷ್ಟು ಮಹತ್ವದಿಂದ ಕೂಡಿರಲಿಲ್ಲ. ತನಗೆ ಬಂದ ರಾಜ್ಯವನ್ನು ತನ್ನ ಸ್ವಂತ ಶಕ್ತಿಯಿಂದ ಕಾಪಾಡಿ, ಸಿಂಘಣನಿಗೆ ಕೊಟ್ಟ ಕೀರ್ತಿಯು ಜೈತುಗಿಯದು. ಕ್ರಿ.ಶ. 1200 ರಲ್ಲಿ ಜೈತುಗಿಯು ಮರಣಹೊಂದಲು ಅವನ ಮಗನಾದ ಸಿಂಘಣನು ರಾಜನಾದನು.

## ಟಿಪ್ಪಣಿಗಳು

1. BK 43 of 1936-37
2. ಹೇಮಾದ್ರಿ. ಶ್ಲೋಕ 41

   ದೀಕ್ಷಿತ್ವಾ ರಣರಂಗದೇವ ಯಜನೇ ಪ್ರೋದಸ್ತ ಶಸ್ತ್ರಸ್ರುವಃ
   ಶ್ರೇಣೀಭಿರ್ಜಗತೀನ್ ಹುತವತಾ ಯೇನ ಪ್ರತಾಪಾನಲೇ|
   ತೈಲಿಂಗಾಧಿಪತೇಃ ಪಶೋರ್ವಿಶಸನಂ ರೌದ್ರಸ್ಯ ರೌದ್ರಾಕೃತೇಃ
   ಕೃತ್ವಾ ಪುರುಷಮೇಧಯಜ್ಞವಿಧಿನಾ ಲಬ್ಧಾಸ್ತ್ರಿಲೋಕೀ ಜಯಃ |
3. EI. Vol. XXXII, P. 31
4. IA. Vol. XIV, P. 316
5. ಸಿದ್ಧೇಶ್ವರ ಚರಿತ್ರಮು (ತೆಲುಗು), ಪು. 109-112
6. EI. Vol. III, P. 101
7. ಅದೇ. Vol. V. P. 28

* * *

## ಅಧ್ಯಾಯ ೭

# ಸಿಂಘಣ

(ಕ್ರಿ.ಶ. 1200 - 1247)

ಸಿಂಘಣನು ತನ್ನ ತಂದೆ ಜೈತುಗಿಯ ಮರಣಾನಂತರ ಕ್ರಿ.ಶ. 1200 ರಲ್ಲಿ ರಾಜನಾದನು. ಅವನ ಹೆಸರು ಸಿಂಹಣ. ಸಿಂಗಳ, ಸಿಂಗ್ಗಣ್ಣ ಮುಂತಾದ ವಿವಿಧ ರೂಪಗಳಲ್ಲಿ ಕಾಣಬರುತ್ತದೆ. ಸಿಂಘಣನು ನಾರಸಿಂಹೀ ದೇವತೆಯ ಕೃಪೆಯಿಂದ ಹುಟ್ಟಿದವನೆಂದು ಶಾಸನಗಳಲ್ಲಿ ಹೇಳಿದೆ. ಸಿಂಘಣನಿಗೆ ಕಾಂಚಲದೇವಿ ಎಂಬ ರಾಣಿ ಇದ್ದಳೆಂದು ಒಂದು ನಾಣ್ಯದಿಂದ ತಿಳಿದು ಬಂದಿದೆ.

ಜೈತುಗಿಯ ಕಾಲದಲ್ಲಿ ಹೊಯ್ಸಳರಿಗೂ ಸೇವುಣರಿಗೂ ಯಾವ ವಿಧವಾದ ಘರ್ಷಣೆಗಳೂ ಉಂಟಾಗಲಿಲ್ಲ. ಕೃಷ್ಣಾ-ಮಲಪ್ರಭಾ ನದಿಗಳು ಅವರ ಎಲ್ಲೆಗಳಾಗಿದ್ದವು. ಆದರೆ ಸಿಂಘಣನು ಸುಮ್ಮನೆ ಕೂರಲಿಲ್ಲ. ದಕ್ಷಿಣದ ಕಡೆಗೆ ದಂಡೆತ್ತಿ ಹೋಗಲು ಪ್ರಾರಂಭಿಸಿದನು. ತರ್ದವಾಡಿ ನಾಡಿನಿಂದ ಕುಂತಳಕ್ಕೆ ಹೋಗಿ ಅನೇಕ ಹಳ್ಳಿಗಳನ್ನು ಆಕ್ರಮಿಸಿಕೊಂಡನು. ಆದೋನಿ, ಧಾರ್ವಾಡ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಸಿಂಘಣನ ಶಾಸನಗಳು ಈ ಕಾಲದಲ್ಲಿ ಕಾಣಬರುತ್ತವೆ. ಪರಿಸ್ಥಿತಿಗಳು ಹೊಯ್ಸಳ ಬಲ್ಲಾಳನಿಗೆ ಅಷ್ಟೇನೂ ಅನುಕೂಲವಾಗಿರಲಿಲ್ಲ. ಕ್ರಿ.ಶ. 1206 ರ ಹೊತ್ತಿಗೆ ಸಿಂಘಣನು ಧಾರ್ವಾಡದವರೆಗೂ ತಡೆಯಿಲ್ಲದೆ ಮುನ್ನುಗ್ಗಿದನು. ಅಲ್ಲಿಂದ ಎಡೆದೊರೆನಾಡಿಗೆ ತಿರುಗಿದನು. ಅಲ್ಲಿಂದ ಬಳ್ಳಾರಿಯ ಕಡೆಗೆ ಮುಂದುವರಿದನು. ಹೊಯ್ಸಳ ಇಮ್ಮಡಿ ಬಲ್ಲಾಳನು ಸಿಂಘಣನನ್ನು ತಡೆದನು. ಆದರೆ ಇದರಿಂದ ಏನೂ ಪ್ರಯೋಜನವಾಗಲಿಲ್ಲ. ಸಿಂಘಣನ ಸೈನ್ಯವು ಯಾವ ತಡೆಯೂ ಇಲ್ಲದೆ ಹೊಯ್ಸಳ ನಾಡಿನ ಅನೇಕ ಭಾಗಗಳನ್ನು ಆಕ್ರಮಿಸಿಕೊಂಡಿತು. ಕ್ರಿ.ಶ. 1212ರ ಶಾಸನ ವೊಂದರಲ್ಲಿ ಸಿಂಘಣನ ಸೈನ್ಯವು ಬಂದಣಿಕೆಯನ್ನು ಲೂಟಿಮಾಡಿತೆಂದು ಹೇಳಿದೆ.[1] ಬಲ್ಲಾಳನು ಬೆಳಗುತ್ತಿಗೆ ಹೋಗಿ ಸಿಂಘಣನಿಗೆ ಮಿತ್ರರಾಗಿದ್ದ ಸಿಂದರನ್ನು ಶಿಕ್ಷಿಸಲು ಯೋಚಿಸಿದನು. ಆದರೆ ಸೇವುಣ ಸೇನಾಧಿಪತಿಯಾದ ಬೊಮ್ಮಿದೇರಸನು ಕ್ರಿ.ಶ. 1217ರಲ್ಲಿ ಬಲ್ಲಾಳನ ಸೈನ್ಯವನ್ನು ಸೋಲಿಸಿ ಓಡಿಸಿದನು.[2] ಇದರಿಂದ ಉತ್ತೇಜಿತರಾದ ಸೇವುಣ ಸೈನಿಕರು ಸೊರಬ, ಹೊನ್ನಾಳಿ, ಶಿವಮೊಗ್ಗ ತಾಲ್ಲೂಕುಗಳನ್ನು ತಮ್ಮ ವಶಮಾಡಿಕೊಂಡು ನುಗ್ಗುತ್ತಿದ್ದರು. ಇತ್ತ ಕಡೆ ಸಿಂಘಣನ ಸೈನ್ಯಾಧಿಕಾರಿಗಳು ರಾಯಚೂರು, ಗುಲ್ಬರ್ಗ, ಬೆಳಗಾಂ, ಜಿಲ್ಲೆ

ಗಳನ್ನು 1220 ರ ಸಮಯಕ್ಕೆ ತಮ್ಮದನ್ನಾಗಿ ಮಾಡಿಕೊಂಡರು. ಸಿಂಘಣನು ಹೊಯ್ಸಳರ ಮೇಲಿನ ವಿಜಯ ಸೂಚಕವಾದ ಬಿರುದುಗಳನ್ನು ಧರಿಸಿದನು. ಅನೇಕ ದೇವಾಲಯಗಳಿಗೆ ದತ್ತಿಗಳು ಕೊಡಲ್ಪಟ್ಟವು. ಒಟ್ಟಿನಲ್ಲಿ ಸಿಂಘಣನು ಹೊಯ್ಸಳರನ್ನು ಸದೆ ಬಡಿದು ಬಲಯುತನಾದನು.

ಇಷ್ಟರಲ್ಲಿಯೇ ಬಲ್ಲಾಳನು ಮೃತನಾದನು. ಇದರಿಂದ ಸೇವುಣರಿಗೆ ಇನ್ನೂ ಉತ್ತೇಜನ ದೊರಕಿದಂತಾಯಿತು. ಬಲ್ಲಾಳನ ಅನಂತರ ರಾಜನಾದ ನಾರಸಿಂಹನು ಸೇವುಣರ ಮೇಲೆ ಯುದ್ಧವನ್ನು ಪ್ರಾರಂಭಿಸಿದನು. ವಿಕ್ರಮಪಾಲ ಮತ್ತು ಪವುಷ ಎಂಬ ಸೇವುಣ ದಂಡನಾಯಕರು ನಾರಸಿಂಹನಿಂದ ಸೋಲಿಸಲ್ಪಟ್ಟರು. ಹೊಯ್ಸಳರ ಶಾಸನವೊಂದು ವರ್ಣಿಸುವಂತೆ ನಾರಸಿಂಹನು ತುಂಗಭದ್ರಾನದಿಯ ನೀರನ್ನು ರಕ್ತಮಯ ಮಾಡಿದನು. ವಿಕ್ರಮಪಾಲ ಮತ್ತು ಪವುಷರ ರುಂಡಗಳು ನಾರಸಿಂಹನು ಕುಳಿತಿದ್ದ ಅಂಬಾರಿಯ ತುದಿಯಲ್ಲಿ ನೇತಾಡುತ್ತಿದ್ದು, ಹೊಯ್ಸಳರ ಸಾಹಸವನ್ನು ಮೆಚ್ಚಿ ತಲೆಯನ್ನು ಅಲ್ಲಾಡಿಸುತ್ತಿವೆಯೋ ಎಂಬಂತಿದ್ದಿತು. [3] ಹೊಯ್ಸಳರ ಶಾಸನ ಗಳು ಈ ರೀತಿ ವರ್ಣನೆ ಮಾಡಿದ್ದರೂ ಕೂಡ, ಇದರಿಂದ ಸೇವುಣರ ಪ್ರಭಾವಕ್ಕೆ ವಿಶೇಷ ಧಕ್ಕೆಯಾಗಲಿಲ್ಲವೆಂದು ತೋರುತ್ತದೆ. ಏಕೆಂದರೆ ಸೇವುಣರು ಹೊಯ್ಸಳ ನಾಡಿನಿಂದ ಓಡಿಹೋಗದೆ ಉತ್ತರಭಾಗಗಳನ್ನು ತಮ್ಮ ವಶದಲ್ಲಿಯೇ ಇಟ್ಟು ಕೊಂಡಿದ್ದರು. ಕ್ರಿ.ಶ.1225 ರಿಂದ 1231 ರವರೆಗೆ ಶಿವಮೊಗ್ಗದಲ್ಲಿ ಸೇವುಣರ ಶಾಸನಗಳು ವಿರಳವಾಗುತ್ತವೆ. ಕ್ರಿ.ಶ.1231 ರಿಂದ ಮತ್ತೆ ಅವುಗಳ ಸಂಖ್ಯೆ ಹೆಚ್ಚುತ್ತವೆ. ಅಂದರೆ ಕ್ರಿ.ಶ. 1231 ರಿಂದ ಸೇವುಣರು ಮತ್ತೆ ಹೊಯ್ಸಳ ನಾಡನ್ನು ಆಕ್ರಮಿಸಿಕೊಳ್ಳಲು ಪ್ರಾರಂಭಿಸಿದರು. ನಾರಸಿಂಹನು ಪಾಂಡ್ಯ ಮತ್ತು ಚೋಳರ ಮೇಲೆ ಯುದ್ಧಮಾಡುವುದರಲ್ಲಿ ನಿರತನಾಗಿದ್ದನು. ಇದನ್ನು ಗಮನಿಸಿದ ಸೇವುಣ ಸೈನ್ಯವು ಸಿಂಘಣನ ಮೊಮ್ಮಗ ಕೃಷ್ಣನ ನೇತೃತ್ವದಲ್ಲಿ ಹೊಯ್ಸಳನಾಡಿನ ಬಹುಭಾಗ ಗಳನ್ನು ತಮ್ಮ ವಶಮಾಡಿಕೊಂಡಿತು.

ನಾರಸಿಂಹನ ಮರಣಾನಂತರ ಸೋಮೇಶ್ವರನು ಹೊಯ್ಸಳ ರಾಜನಾದನು. ಸೇವುಣರನ್ನು ಹೊಯ್ಸಳ ನಾಡಿನಿಂದ ಓಡಿಸುವ ದೃಷ್ಟಿಯಿಂದ ಅವನು ಭೀಮಾ ನದಿಯ ತೀರದ ಪಂಡರಾಪುರದವರೆಗೂ ಹೋದನು. ಆದರೆ ಹೊನ್ನಬೊಮ್ಮಿ ಸೆಟ್ಟಿಯ ಮುಂದಾಳತ್ವದಲ್ಲಿ ಸೇವುಣ ಸೈನ್ಯವು ಕ್ರಿ.ಶ. 1239 ರಿಂದ 1247 ರ ವರೆಗೆ ಶಿವಮೊಗ್ಗ ಜಿಲ್ಲೆಯ ಬಹುಭಾಗಗಳನ್ನು ತಮ್ಮ ವಶಮಾಡಿಕೊಂಡಿತು. ಈ ರೀತಿಯಲ್ಲಿ ಸಿಂಘಣನು ಕ್ರಿ.ಶ. 1202 ರಿಂದ ಹೊಯ್ಸಳರ ಮೇಲೆ ದಂಡೆತ್ತಿ ಹೋಗಿ ತನ್ನ ಕೊನೆಯವರೆಗೂ ಅವರನ್ನು ತಡೆಹಿಡಿದಿಟ್ಟಿದ್ದನು.

ಕ್ರಿ.ಶ. 1210 ರ ಸಮಯಕ್ಕೆ ಸಿಂಘಣನು ಹೊಯ್ಸಳರ ಮೇಲೆ ಜಯವನ್ನು ಸಂಪಾದಿಸುತ್ತಿದ್ದಾಗ ಅದೇ ಸಮಯದಲ್ಲಿ ಉತ್ತರ ಭಾರತದ ಕಡೆಗೆ ಒಂದು ವಿಜಯಯಾತ್ರೆಯನ್ನು ನಡೆಸಲು ತಕ್ಕ ಏರ್ಪಾಡುಗಳನ್ನು ಮಾಡಿದನು.

ಮೊದಲನೆಯದಾಗಿ ಅವನು ಮಾಳ್ವ ದೇಶಕ್ಕೆ ನುಗ್ಗಿ ಪರಮಾರ ರಾಜ ಸುಭಟವರ್ಮನನ್ನು ಕೊಂದನು.[4] ಅನಂತರ ಸುಭಟವರ್ಮನ ಮಗನಾದ ಅರ್ಜುನವರ್ಮನು ಸಿಂಘಣನ ಮೇಲೆ ಯುದ್ಧವನ್ನು ಮುಂದುವರಿಸಿದನು. ಆದರೆ ಅರ್ಜುನವರ್ಮನು ಸೋತನು.[5] ಸಿಂಘಣನು ಅರ್ಜುನವರ್ಮನನ್ನು ಕೊಂದನು ಎಂದು ಹೇಳಿರುವ ಹೇಮಾದ್ರಿಯ ಮಾಹಿತಿಯು ನಿಜವಲ್ಲ. ಏಕೆಂದರೆ ಅರ್ಜುನವರ್ಮನು ಕ್ರಿ.ಶ. 1218ರ ವರೆಗೆ ಪರಮಾರ ರಾಜನಾಗಿದ್ದನು.

ಪರಮಾರ ದೊರೆಗಳ ಅಪಜಯವು, ಚಾಹಮಾನ ರಾಜನೂ, ಪರಮಾರರ ಸಾಮಂತನೂ ಆದ ಸಿಂಹನಿಗೆ ಅಪ್ರಿಯವಾಗಿ ತೋರಿತು. ಇಷ್ಟರಲ್ಲಿಯೇ ಸಿಂಘಣನು ಲಾಟ ರಾಜ್ಯದ ಮೇಲೆ ಮುಂದುವರಿದನು. ಚಾಹಮಾನ ಸಿಂಹನು ಸಿಂಘಣನ ಮೇಲೆ ಯುದ್ಧ ಮಾಡಲು ಗುಜರಾತಿನ ಚೌಳುಕ್ಯರ ಸಹಾಯವನ್ನು ಕೋರಿದನು. ಕೂಡಲೇ ಚೌಳುಕ್ಯ ಇಮ್ಮಡಿ ಭೀಮನು ಸಿಂಹನಿಗೆ ಸಹಾಯವನ್ನು ಕಳುಹಿಸಿದನು. ಸಿಂಹ ಮತ್ತು ಅವನ ಬಂಧುವಾದ ಶಂಖ ಮತ್ತು ಚೌಳುಕ್ಯ ಭೀಮನ ಸೈನ್ಯಗಳು ಸೇರಿ ಸಿಂಘಣನನ್ನು ಎದುರಿಸಿದವು. 'ಹಮ್ಮೀರಮದಮರ್ದನ' ಮತ್ತು 'ವಸಂತ ವಿಲಾಸ' ಗ್ರಂಥಗಳ ಮಾಹಿತಿಯ ಪ್ರಕಾರ ಸಿಂಘಣನಿಗೆ ಜಯವಾಗಲಿಲ್ಲವೆಂದು ತೋರುತ್ತದೆ. ಅವನು ಉತ್ತರದಿಂದ ಹಿಂದಿರುಗಿದನು.

ಸುಮಾರು ಕ್ರಿ.ಶ. 1213 ರಲ್ಲಿ ಸಿಂಘಣನ ಸೈನ್ಯಕ್ಕೂ ಶಿಲಾಹಾರರಿಗೂ ಘರ್ಷಣೆಗಳುಂಟಾದವು.[6] ಶಿಲಾಹಾರ ಎರಡನೆಯ ಭೋಜರಾಜನು ಸೋತು ಕೊಲ್ಲಾಪುರದಿಂದ 12 ಮೈಲಿ ದೂರದಲ್ಲಿರುವ ಪನ್ಹಾಲ ಎಂಬಲ್ಲಿಗೆ ಓಡಿ ಹೋದನು. ಸಿಂಘಣನ ಸೈನ್ಯವು ಅವನನ್ನು ಅಟ್ಟಿಸಿಕೊಂಡು ಹೋಗಿ, ಪನ್ಹಾಲದ ಕೋಟೆಯಿಂದ ಭೋಜನನ್ನು ಓಡಿಸಿತು. ಸಿಂಘಣನ ರಾಜ್ಯದಲ್ಲಿ ಕೊಲ್ಲಾಪುರವು ಸೇರಿಹೋಯಿತು. ಸಿಂಘಣನ ಪುಷ್ಪಗಿರಿ ಮತ್ತು ಗೋರಂಟ್ಲ ಶಾಸನಗಳಲ್ಲಿ ಭೋಜನನ್ನು ಸಿಂಘಣನು ಸೋಲಿಸಿದ ವಿಷಯವು ಹೇಳಲ್ಪಟ್ಟಿದೆ.[7] ಖೇದ್ರಾಪುರ ಶಾಸನವು ಕ್ರಿ.ಶ. 1213 ನೆಯ ವರ್ಷಕ್ಕೆ ಸೇರಿದ್ದಾದರೂ ಅಲ್ಲಿ ಸೇವುಣರ ಅಧಿಪತ್ಯ ಇದ್ದಂತೆ ತೋರುವುದಿಲ್ಲ. ಆದುದರಿಂದ ಸೇವುಣರು ಶಿಲಾಹಾರ ಭೋಜನನ್ನು ಕ್ರಿ.ಶ. 1216 ರಲ್ಲಿ ಸೋಲಿಸಿರಬೇಕೆಂದು ತರ್ಕಿಸಬಹುದಾಗಿದೆ.

ಕೊಲ್ಲಾಪುರದಿಂದ ಸಿಂಘಣನ ಸೈನ್ಯವು ಉತ್ತರ ಕೊಂಕಣ ರಾಜ್ಯದ ಕಡೆಗೆ ತಿರುಗಿತು. ಅಲ್ಲಿ ಕೇಶಿರಾಜನು ಆಳುತ್ತಿದ್ದನು. (ಕ್ರಿ.ಶ. 1196-1240). ಕೇಶಿ ರಾಜನು ಸೋತು ಸಿಂಘಣನ ಸಾಮಂತನಾದನು.[8] ಸಿಂಘಣನು ಅವನ ರಾಜ್ಯವನ್ನು ಅವನಿಗೇ ಹಿಂದಿರುಗಿಸಿದನು.

ಇಷ್ಟೆಲ್ಲಾ ವಿಜಯಗಳನ್ನು ಸಂಪಾದಿಸಿದ ಸಿಂಘಣನು ಈಗ ಲಾಟರಾಜ್ಯದ ಮೇಲೆ ಮತ್ತೆ ದಂಡೆತ್ತಿ ಹೋಗಿ, ಹಿಂದೆ ತನಗಾಗಿದ್ದ ಅವಮಾನಕ್ಕೆ ತಕ್ಕ ಪ್ರತೀಕಾರವನ್ನು ಮಾಡಬೇಕೆಂದು ಯೋಚಿಸಿದನು. ಇದಕ್ಕ ಬೇಕಾದ ಎಲ್ಲಾ ಸಿದ್ಧತೆಗಳನ್ನೂ

ಮಾಡಿಕೊಂಡು, ಅತ್ಯಂತ ಸಮರ್ಥನಾದ ಖೋಲೇಶ್ವರ ಎಂಬ ದಂಡನಾಯಕನ ಮುಂದಾಳತ್ವದಲ್ಲಿ ಲಾಟ ರಾಜ್ಯದ ಮೇಲೆ ಸೇವುಣ ಸೈನ್ಯವು ನುಗ್ಗಿತು.[9] ಲಾಟ ರಾಜ್ಯದ ದೊರೆಯಾದ ಸಿಂಹನಿಗೆ ಈ ಸಾರಿ ಚೌಳುಕ್ಯರ ಸಹಾಯವು ದೊರಕಲಿಲ್ಲ. ಏಕೆಂದರೆ ಗುಜರಾತಿನ ಚೌಳುಕ್ಯರು ಮುಸ್ಲಿಮರ ಮೇಲೆ ಮತ್ತು ಮಾರ್ವಾಡದ ದೊರೆಗಳ ಮೇಲೆ ಯುದ್ಧಮಾಡುವುದರಲ್ಲಿ ನಿರತರಾಗಿದ್ದರು. ಯುದ್ಧದಲ್ಲಿ ಸಿಂಹನೂ ಮತ್ತು ಅವನ ಸಹೋದರನಾದ ಸಿಂಧುರಾಜನೂ ಕೊಲ್ಲಲ್ಪಟ್ಟರು. ಶಂಖನು ಸೆರೆ ಸಿಕ್ಕಿದನು. ಖೋಲೇಶ್ವರನು ಬ್ರೋಚ್ ನಗರವನ್ನು ತನ್ನ ವಶಮಾಡಿ ಕೊಂಡು ಸಮುದ್ರ ತೀರದಲ್ಲಿ ವಿಜಯಸ್ತಂಭವನ್ನು ಸ್ಥಾಪಿಸಿದನು. ಸಿಂಘಣನು ಶಂಖನನ್ನು ಸೆರೆಯಿಂದ ಬಿಡಿಸಿ ಅವನಿಗೆ ರಾಜ್ಯವನ್ನು ಹಿಂದಿರುಗಿಸಿ ಅವನು ವಿಧೇಯನಾಗಿರುವಂತೆ ಮಾಡಿದನು. ಅಲ್ಲಿಂದ ಸಿಂಘಣನು ಗುಜರಾತಿಗೆ ನುಗ್ಗಿ ಚೌಳುಕ್ಯರನ್ನು ಶಿಕ್ಷಿಸಲು ಯೋಚಿಸಿದನು. ಗುಜರಾತಿನ ಮೇಲೆ ಮುಸ್ಲಿಮರು ದಾಳಿಮಾಡುತ್ತಿದ್ದುದರಿಂದ, ಸಿಂಘಣನಿಗೆ ಇದೇ ತಕ್ಕ ಸಮಯವೆಂದು ಅನಿಸಿತು. ಲವಣಪ್ರಸಾದನ ಮಗನಾದ ವೀರಧವಳನು ಮುಸ್ಲಿಮರ ಮೇಲೆ ಯುದ್ಧಮಾಡಲು ತೆರಳಿ, ಮಂತ್ರಿಯಾದ ವಾಸ್ತುಪಾಲನನ್ನು ತನ್ನ ರಾಜಧಾನಿಯಲ್ಲಿ ಇರಿಸಿದನು. ಇತ್ತ ಕಡೆ ಶಂಖನು, ಮಾಳ್ವದೊರೆ ದೇವಪಾಲನ ಸಹಾಯವನ್ನು ಪಡೆದುಕೊಂಡು ಸಿಂಘಣನಿಗೆ ಚೌಳುಕ್ಯರ ಮೇಲೆ ಯುದ್ಧ ಮಾಡಲು ಸಹಾಯ ಮಾಡುವುದಾಗಿ ಮಾತುಕೊಟ್ಟನು. ಇಷ್ಟೊಂದು ದೊಡ್ಡ ಸೈನ್ಯವನ್ನು ನೋಡಿದ ವಾಸ್ತುಪಾಲನು ಹೆದರಿ, ಏನಾದರೂ ಉಪಾಯ ಮಾಡಬೇಕೆಂದು ಯೋಚಿಸಿದನು. ತೇಜಪಾಲನ ಮಗನಾದ ಲಾವಣ್ಯಸಿಂಹನ ಸಹಾಯವನ್ನು ವಾಸ್ತುಪಾಲನು ಕೋರಿದನು. ಲಾವಣ್ಯಸಿಂಹನು ನಿಪುಣಕ ಮತ್ತು ಸುವೇಗ ಎಂಬ ಇಬ್ಬರು ಗೂಢಚಾರರನ್ನು ನಿಯಮಿಸಿದನು. ನಿಪುಣಕನು ಮಾಳ್ವದೊರೆ ದೇವಪಾಲನ ಸ್ನೇಹವನ್ನು ಬೆಳೆಸಿದನು. ಸುವೇಗನು ಸಿಂಘಣನಿಗೆ ಮಿತ್ರನಾದನು. ಈ ಸಮಯದಲ್ಲಿ ನಿಪುಣಕನು ದೇವಪಾಲನ ಕುದುರೆಯೊಂದನ್ನು ಅಪಹರಿಸಿ, ಅದನ್ನು ಶಂಖನಿಗೆ ಬಳುವಳಿಯಾಗಿ ಕಳುಹಿಸಿಕೊಟ್ಟನು. ಒಂದು ನಕಲು ಕಾಗದವನ್ನು ತಯಾರಿಸಿ ಸಿಂಘಣನ ಸೈನ್ಯವನ್ನು ನಾಶ ಮಾಡುವಂತೆ ಹುರಿದುಂಬಿಸಿದನು. ಈ ಪತ್ರವು ಸಿಂಘಣನ ಗಮನಕ್ಕೆ ಬಂದಕೂಡಲೆ, ಅವನಿಗೆ ದೇವಪಾಲ ಮತ್ತು ಶಂಖನ ವಿಷಯದಲ್ಲಿ ಅಪನಂಬಿಕೆ ಯುಂಟಾಯಿತು. ಇದಕ್ಕೆಲ್ಲಾ ದೇವಪಾಲನೇ ಕಾರಣನೆಂದು ಸಿಂಘಣನು ದೇವಪಾಲನ ಮೇಲೆ ಯುದ್ಧಮಾಡಿ, ಅವನನ್ನು ಸೋಲಿಸಿದನು. ಅನಂತರ ಸಿಂಘಣನು ಗುಜರಾತಿನಮೇಲೆ ಯುದ್ಧವನ್ನು ಮುಂದುವರೆಸಿದನು. ಸೇವುಣ ಸೈನ್ಯವು ಗುಜರಾತಿನ ಹಳ್ಳಿ ಹಳ್ಳಿಗೂ ಬೆಂಕಿ ಹಾಕಿ, ಸಾಕಷ್ಟು ಕಷ್ಟನಷ್ಟಗಳನ್ನುಂಟು ಮಾಡಿತು. ಬಹುಶಃ ಲವಣಪ್ರಸಾದನು ಶರಣಾಗತನಾಗಿರಬೇಕು. ಲವಣ ಪ್ರಸಾದನಿಗೂ, ಸಿಂಘಣನಿಗೂ ಒಂದು ಸಂಧಿ ಏರ್ಪಟ್ಟಿತೆಂದು 'ಲೇಖಪದ್ಧತಿ'



ಸಿಂಘಣನ ಕಾಲದ ಸೇವುಣ ಸಾಮ್ರಾಜ್ಯ

ಎಂಬ ಗ್ರಂಥದಿಂದ ತಿಳಿದುಬರುತ್ತದೆ. ಈ ಸಂಧಿಯ ಅನಂತರ ಸಿಂಘಣನು ಹಿಂದಿರುಗಿದನು.

ಸಿಂಘಣನು ಹೊಯ್ಸಳರ ಮೇಲೆ ಯುದ್ಧ ಮಾಡಬೇಕಾಗಿ ಬಂದ ಸಮಯದಲ್ಲಿ ಕದಂಬರ ಮೇಲೂ ಯುದ್ಧಮಾಡಬೇಕಾಯಿತು. ಕ್ರಿ.ಶ. 1231ರ ಶಾಸನದಲ್ಲಿ ಸಿಂಘಣನ ಅಧಿಕಾರಿಗಳು ಬನವಾಸಿ ನಾಡನ್ನು ಮುತ್ತಿಗೆ ಹಾಕಿದ ಸಂಗತಿ ಇದೆ.[10] ಕ್ರಿ.ಶ. 1239ರ ರಟ್ಟಿಹಳ್ಳಿ ಶಾಸನದಲ್ಲಿ, ಸಿಂಘಣನ ಸೈನಿಕರು ಕದಂಬರನ್ನು ಸೋಲಿಸಿದರೆಂದು ಹೇಳಿದೆ.[11] ಅದೇ ವರ್ಷದಲ್ಲಿ ಕದಂಬ ಚಕ್ರವರ್ತಿ ಮಲ್ಲಿದೇವನು ಮಹಾಮಂಡಳೇಶ್ವರ ಮಲ್ಲಿದೇವನಾದನು. ಅನಂತರ ಕದಂಬರು ಸಿಂಘಣನಿಗೆ ವಿಧೇಯರಾಗಿದ್ದರು.

ಇದೇ ರೀತಿಯಲ್ಲಿ ಸಿಂಘಣನು ಕರ್ಣಾಟಕದ ಅನೇಕ ಸಣ್ಣ ರಾಜಮನೆತನಗಳೊಂದಿಗೆ ಯುದ್ಧಮಾಡಬೇಕಾಗಿ ಬಂದಿತು. ಕ್ರಿ.ಶ. 1233ರವರೆಗೆ ಗುತ್ತರಾಜ ಎರಡನೆಯ ವಿಕ್ರಮಾದಿತ್ಯನು ಸ್ವತಂತ್ರವಾಗಿ ಆಳುತ್ತಿದ್ದನು. ಕ್ರಿ.ಶ. 1238ರ ಶಾಸನದಲ್ಲಿ ಗುತ್ತ ದೊರೆ ಎರಡನೆಯ ಜೋಯಿದೇವನು ಸೇವುಣರ ಸಾಮಂತನಾಗಿದ್ದನೆಂದು ತಿಳಿಸುತ್ತದೆ[12] ಆದುದರಿಂದ ಕ್ರಿ.ಶ. 1233-38ರ ಕಾಲಾವಧಿಯಲ್ಲಿ ಗುತ್ತರು ಸೇವುಣರ ಅಧೀನರಾಗಿರಬೇಕು.

ಸಿಂಘಣನು ಶಿಲಾಹಾರ ಭೋಜನನ್ನು ಸೋಲಿಸಿದ್ದನ್ನು ನೋಡಿದ ಸೌಂದತ್ತಿಯ ರಟ್ಟರು ಭಯಭ್ರಾಂತರಾದರು. ರಟ್ಟರಾಜನಾದ ಎರಡನೆಯ ಲಕ್ಷ್ಮೀದೇವನು ಯುದ್ಧಮಾಡದೆ ಶರಣಾಗತನಾದನು. ಆದರೆ ಸಿಂಘಣನು ಉತ್ತರದ ಕಡೆ ಯುದ್ಧಗಳಲ್ಲಿ ನಿರತನಾಗಿದ್ದುದನ್ನು ಗಮನಿಸಿ ಲಕ್ಷ್ಮೀದೇವನು ಸ್ವತಂತ್ರನಾಗಲು ಹವಣಿಸಿದನು. ಸಿಂಘಣನ ಹೆಸರಿಲ್ಲದೆ ತನ್ನ ಸ್ವಂತ ಹೆಸರಿನ ಶಾಸನಗಳನ್ನೂ ಅವನು ಬರೆಸಿದನು. ಬಹುಶಃ ಇದಕ್ಕೆ ಅವನ ಗುರುವಾದ ಮುನಿಚಂದ್ರನೇ ಕಾರಣನಿರಬೇಕು. ಕೋಪಗೊಂಡ ಸಿಂಘಣನು ತನ್ನ ದಕ್ಷಿಣ ಭುಜದಂತಿದ್ದ ಬೀಚಣನನ್ನು ರಟ್ಟ ರಾಜ್ಯದ ಕಡೆಗೆ ಕಳುಹಿಸಿದನು. ಕ್ರಿ.ಶ 1238ರ ತಿಳಿವಳ್ಳಿ ಶಾಸನದಲ್ಲಿ ಸಿಂಘಣನು ಲಕ್ಷ್ಮೀದೇವನ ಕುಲವನ್ನೇ ನಾಶಮಾಡಿದನೆಂದು ಹೇಳಿದೆ.[13] ರಟ್ಟರಾಜ್ಯವು ಸೇವುಣ ರಾಜ್ಯದಲ್ಲಿ ಲೀನವಾಗಿ ಹೋಯಿತು ಮತ್ತು ಸಿಂಘಣನ ರಾಜ್ಯಪಾಲರ ಆಳ್ವಿಕೆಗೆ ಸೇರಿಹೋಯಿತು.

ಸಿಂಘಣನು ಹೊಯ್ಸಳರನ್ನು ಸೋಲಿಸಿದುದನ್ನು ನೋಡಿದ ಬೆಳಗುತ್ತಿಯ ಸಿಂದರು ಬಹಳ ಸಂತೋಷಗೊಂಡರು. ಏಕೆಂದರೆ ಅವರು ಮೊದಲಿನಿಂದಲೂ ಹೊಯ್ಸಳರ ಶತ್ರುಗಳಾಗಿದ್ದರು. ಸಿಂದರಾಜ ಮೂರನೆಯ ಈಶ್ವರದೇವನು ಹೊಯ್ಸಳ ರಾಣಿ ಉಮಾದೇವಿಯ ಕಾಟವನ್ನು ತಡೆಯಲಾರದೆ ತೊಳಲುತ್ತಿದ್ದನು. ಆದರೆ ಅವನು ಅಸಹಾಯಕನಾಗಿದ್ದನು. ಸಿಂಘಣನು ಹೊಯ್ಸಳರ ಮೇಲೆ ಯುದ್ಧ ಮಾಡಿದ್ದುದನ್ನು ನೋಡಿದ ಇವನು, ಕೂಡಲೇ ಸಿಂಘಣನಿಗೆ ಶರಣಾಗತನಾದನು.

ಕ್ರಿ.ಶ. 1215ರಿಂದ ಅವನು ಬರೆಸಿದ ಶಾಸನಗಳಲ್ಲಿ ಅವನು ಸಿಂಘಣನ ಪಾದ ಪದ್ಮೋಪಜೀವಿಯೆಂದು ಹೇಳಿಕೊಂಡಿದ್ದಾನೆ.[14] ಆದರೆ ಎರಡು ವರ್ಷಗಳ ಅನಂತರ ಈ ಸ್ನೇಹದಲ್ಲಿ ಒಡಕುಂಟಾಯಿತು. ಸಿಂಘಣನು ಬೊಮ್ಮಿದೇವರಸನೆಂಬ ರಾಜ್ಯಪಾಲನನ್ನು ಸಿಂದರಾಜ್ಯಕ್ಕೆ ಅಧಿಕಾರಿಯನ್ನಾಗಿ ನಿಯಮಿಸಿದ್ದನು.[15] ಬೊಮ್ಮಿ ದೇವರಸನಿಗೂ ಈಶ್ವರದೇವನಿಗೂ ಅನೇಕ ಯುದ್ಧಗಳು ನಡೆದವು. ಅವುಗಳಲ್ಲಿ ಈಶ್ವರದೇವನು ಸೋತು ಮರಣಹೊಂದಿದನು. ಅನಂತರ ಬಂದ ಕೇಶವದೇವನು ಯುದ್ಧವನ್ನೇ ಮುಂದುವರಿಸಿದನು. ಕ್ರಿ.ಶ. 1244ರವರೆಗೆ ಕೇಶವದೇವನು ಸ್ವತಂತ್ರನಾಗಿಯೇ ಇದ್ದನು. ಅನಂತರ ಬಂದ ಬೀರದೇವನು ಸೇವುಣ ಮಂತ್ರಿ ಲಕ್ಷ್ಮೀಪಾಲನ ಮೇಲೆ ಯುದ್ಧಮಾಡಬೇಕಾಗಿ ಬಂದಿತು. ಈ ಯುದ್ಧದಲ್ಲಿ ಬೀರದೇವನು ಬಹಳ ಶೌರ್ಯದಿಂದ ಕಾದಿ ಮಡಿದನು. [16] ಕೂಡಲಿಯು ಸಿಂಘಣನ ವಶವಾಯಿತು. ಯೆಲ್ಬುರ್ಗದ ಸಿಂದರೂ ಸಿಂಘಣನ ಆಶ್ರಯವನ್ನು ಒಪ್ಪಿ ಕೊಂಡಿದ್ದರು. ಮಹಾ ಮಂಡಳೇಶ್ವರ ವಿಕ್ರಮಾದಿತ್ಯನ ಅನಂತರ ಅವನ ರಾಜ್ಯವು ಸಿಂಘಣನ ರಾಜ್ಯಪಾಲರ ಆಳ್ವಿಕೆಗೇ ಸೇರಿಹೋಯಿತು. ಕ್ರಿ.ಶ. 1230 ರಿಂದ ಸಿಂಘಣನ ಮಂತ್ರಿ ಮಹಾಪ್ರಧಾನ ವಾಸುದೇವನಾಯಕನು ಯೆಲ್ಬುರ್ಗವನ್ನು ಆಳುತ್ತಿದ್ದನೆಂದು ಶಾಸನಗಳಿಂದ ತಿಳಿದುಬರುತ್ತದೆ.[17]

ತನ್ನ ರಾಜ್ಯವನ್ನು ಪೂರ್ವದಿಕ್ಕಿನಲ್ಲಿ ವಿಸ್ತರಿಸುವ ಆಕಾಂಕ್ಷೆಯಿಂದ ಸಿಂಘಣನು ತೆಲುಗು ಚೋಳರ ಮೇಲೆ ಯುದ್ಧಮಾಡಬೇಕಾಗಿ ಬಂದಿತು. ಅನಂತಪುರ, ಕರ್ನೂಲ್, ಮತ್ತು ಕಡಪ ಜಿಲ್ಲೆಗಳು ಕ್ರಿ.ಶ 1202 ರಿಂದ 1227 ರವರೆಗೆ ಸೇವುಣರ ಆಳ್ವಿಕೆಗೆ ಸೇರಿದ್ದವು ಎಂಬುದು ಅಲ್ಲಿ ದೊರಕಿರುವ ಸೇವುಣರ ಶಾಸನಗಳಿಂದ ವ್ಯಕ್ತವಾಗುತ್ತದೆ.[18] ಸುಮಾರು ಕ್ರಿ.ಶ. 1227ರಲ್ಲಿ ತೆಲುಗು ಚೋಳ ರಾಜನಾದ ತಿಕ್ಕನು ಈ ಪ್ರದೇಶಗಳನ್ನು ತನ್ನ ವಶಕ್ಕೆ ತೆಗೆದುಕೊಂಡನು.[19] ತಿಕ್ಕನ ಶಾಸನ ವೊಂದರಲ್ಲಿ ಇವನು ಸೇವುಣರನ್ನು ಸೋಲಿಸಿ ಇವರಿಗೆ ಅವಮಾನವನ್ನು ಮಾಡಿದ ನೆಂದು ಹೇಳಿದೆ. ಕೇತನನ 'ದಶಕುಮಾರಚರಿತಮು' ಎಂಬ ತೆಲುಗು ಗ್ರಂಥದಲ್ಲಿ ಇದೇ ಸಂಗತಿಯು ಹೇಳಲ್ಪಟ್ಟಿದೆ.[20] ತಿಕ್ಕನನ 'ನಿರ್ವಚನೋತ್ತರ ರಾಮಾಯಣ' ಎಂಬ ತೆಲುಗು ಗ್ರಂಥದಲ್ಲಿ ಕುರುಮಲೂರು ಎಂಬಲ್ಲಿ ನಡೆದ ಯುದ್ಧದಲ್ಲಿ ಸೇವುಣರು ಸೋತರು ಎಂದು ಹೇಳಲಾಗಿದೆ. [22] ಇದನ್ನು ಪುಷ್ಟೀಕರಿಸುವಂತೆ ಸೇವುಣರ ಶಾಸನಗಳು ಕ್ರಿ.ಶ. 1217ರಿಂದ 1231ರವರೆಗೆ ಈ ಪ್ರದೇಶದಲ್ಲಿ ದೊರಕುವುದೂ ಇಲ್ಲ. ಆದರೆ ಮತ್ತೆ ಕ್ರಿ.ಶ. 1231 ರಿಂದ ಸೇವುಣರ ಶಾಸನಗಳು ತೆಲುಗು ಚೋಳರ ರಾಜ್ಯದಲ್ಲಿ ದೊರೆಯುತ್ತವೆ. ಮೊದಲು ಅಪಜಯವನ್ನನು ಭವಿಸಿದ ಸೇವುಣರು ನಾಲ್ಕು ವರ್ಷಗಳ ಅನಂತರ ಮತ್ತೆ ಯುದ್ಧಮಾಡಿ ವಿಜಯವನ್ನು ಸಂಪಾದಿಸಿರಬೇಕು.

ಕಾಕತೀಯ ಗಣಪತಿಯೂ ಸೇವುಣ ಸಿಂಘಣನೂ ಸ್ನೇಹದಿಂದಿದ್ದರು. ತೆಲುಂಗರಾಯಸ್ಥಾಪನಾಚಾರ್ಯ ಎಂಬ ತನ್ನ ತಂದೆಯ ಬಿರುದನ್ನು ಸಿಂಘಣನೂ ಧರಿಸಿದನು. ಆದರೆ ಕ್ರಿ.ಶ. 1231ರ ಸಮಯಕ್ಕೆ ಇವರಿಬ್ಬರಿಗೂ ಇದ್ದ ಮೈತ್ರಿಯು ಮಾಯವಾಯಿತು. ಕ್ರಿ.ಶ. 1231ರ ಶಾಸನವೊಂದರಲ್ಲಿ ಮೊಟ್ಟ ಮೊದಲನೆಯ ಬಾರಿಗೆ ಸೇವುಣರಿಗೂ ಕಾಕತೀಯರಿಗೂ ಆದ ಘರ್ಷಣೆಗಳ ವಿಷಯವು ಪ್ರಸ್ತಾಪಿತವಾಗಿದೆ.[22] ಬಹುಶಃ ತಮ್ಮ ಅನುಯಾಯಿಯಾದ ತೆಲುಗು ಚೋಳ ತಿಕ್ಕರಾಜನ ಮೇಲೆ ಸೇವುಣರು ಯುದ್ಧಮಾಡಿದುದನ್ನು ಸಹಿಸದ ಕಾಕತೀಯ ಗಣಪತಿಯು, ಸೇವುಣರ ಮೇಲೆ ಯುದ್ಧಮಾಡಿರಬೇಕು. ಸಿಂಘಣನು ಮರಣ ಹೊಂದಿದ ಎರಡು ವರ್ಷಗಳ ಅನಂತರ ಕಾಕತೀಯ ಶಾಸನದಲ್ಲಿ ಗಣಪತಿಯು ಸೇವುಣ ರಾಜನನ್ನು ಕೊಂದನೆಂದು ಹೇಳಿದೆ. 'ಸಿದ್ಧೇಶ್ವರಚರಿತ್ರಮು' ಎಂಬ ತೆಲುಗು ಗ್ರಂಥದಲ್ಲಿ, ಗಣಪತಿಯು ಸೇವುಣ ರಾಜನನ್ನು ಕೊಂದು ಆತನ ಮಗಳಾದ ರುದ್ರದೇವಿಯನ್ನು ವಿವಾಹವಾದನೆಂದು ಹೇಳಿದೆ. [23] ಇವೆರಡೂ ನಂಬಲರ್ಹ ವಾದುವಲ್ಲ. ಸಿಂಘಣನಿಗೆ ರುದ್ರದೇವಿ ಎಂಬ ಮಗಳು ಇದ್ದ ವಿಚಾರ ಶಾಸನ ಗಳಿಂದ ತಿಳಿದು ಬಂದಿಲ್ಲ. ಸೇವುಣರಿಗೂ ಕಾಕತೀಯರಿಗೂ ಯುದ್ಧ ನಡೆದಿರಬೇಕು ಮತ್ತು ಸೇವುಣರ ಶಾಸನಗಳು ರಾಯಲಸೀಮೆಯಲ್ಲಿ ಹೇರಳವಾಗಿ ದೊರಕುವು ದರಿಂದ ಸೇವುಣರಿಗೆ ಜಯವಾಗಿರಬೇಕು ಎಂದು ಮಾತ್ರ ಹೇಳಬಹುದಾಗಿದೆ.

ಸುಮಾರು ಕ್ರಿ.ಶ. 1240ರ ಸಮಯಕ್ಕೆ ಸೇವುಣರ ಉತ್ತರ ಗಡಿಯಲ್ಲಿ ತೊಂದರೆಗಳು ಪ್ರಾರಂಭವಾದವು. ಸಿಂಘಣನ ಅಂಬೆ ಶಾಸನದಿಂದ ಇದರ ವಿವರ ಗಳು ತಿಳಿಯುತ್ತವೆ.[24] ಖೋಲೇಶ್ವರನು ಮರಣ ಹೊಂದಿ ಅವನ ಮಗನಾದ ರಾಮನು ಸೈನ್ಯಾಧಿಕಾರಿಯಾಗಿದ್ದನು. ಈ ಸೈನ್ಯಾಧಿಕಾರಿಯು ನರ್ಮದಾ ನದಿ ಯನ್ನು ದಾಟಿ, ಸೇವುಣರ ಸೈನ್ಯದೊಂದಿಗೆ ಮುನ್ನುಗ್ಗಿದನು. ಅವನನ್ನು ವೀರಧವಳನ ಮಗನಾದ ವೀಸಲದೇವನು ತಡೆದನು. ಘೋರ ಯುದ್ಧ ನಡೆಯಿತು. ಯುದ್ಧದಲ್ಲಿರಾಮನು ಕಾದಾಡಿ ಮರಣ ಹೊಂದಿದನು. ಯುದ್ಧದ ಫಲಿತಾಂಶ ವೇನಾಯಿತು ಎಂದು ಶಾಸನದಲ್ಲಿ ಹೇಳಿಲ್ಲ. ಬಹುಶಃ ರಾಮನ ಮರಣಾನಂತರ ಸೇವುಣ ಸೈನ್ಯವು ಹೆದರಿ ಹಿಂದಿರುಗಿರಬೇಕು. ವೀಸಲದೇವನ ಕಾಡಿ ಶಾಸನದಲ್ಲಿ ಇವನು ಸೇವುಣರನ್ನು ಭಯಭ್ರಾಂತರನ್ನಾಗಿ ಮಾಡಿದನೆಂದು ಹೇಳಿರುವುದು ಇಲ್ಲಿ ಗಮನಾರ್ಹ.[25] ಈ ಯುದ್ಧದ ವಿವರಗಳನ್ನು ತಿಳಿಸುವ ಅಂಬೆ ಶಾಸನದ ಕಾಲ ಕ್ರಿ.ಶ. 1240. ರಾಮನ ಸಹೋದರಿಯು ಅದೇ ವರ್ಷದಲ್ಲಿ ರಾಮನ ಸ್ಮರಣಾರ್ಥವಾಗಿ ದೇವಾಲಯವನ್ನು ಕಟ್ಟಿಸಿದಳೆಂದು ಶಾಸನದಲ್ಲಿ ಹೇಳಿದೆ. ಆದುದರಿಂದ ಈ ಯುದ್ಧ ಕ್ರಿ.ಶ. 1240ರಲ್ಲಿಯೇ ಆಗಿರಬೇಕು.

ಸಿಂಘಣನು ಕಕ್ಕುಲ ಎಂಬ ರಾಜನನ್ನು ಸೋಲಿಸಿದನೆಂದು ಹೇಮಾದ್ರಿಯ ಪ್ರಶಸ್ತಿಯಿಂದ ತಿಳಿದು ಬರುತ್ತದೆ.[26] ಸಿಂಘಣನ ತಿಳಿವಳ್ಳಿ ಶಾಸನದಿಂದ ಕಕ್ಕುಲನು

ವರಾಟ ದೇಶದವನೆಂದು ಗೊತ್ತಾಗುತ್ತದೆ.[27] ಅಲ್ತೇಕರ್‌ರವರು ವರಾಟ ದೇಶವು ವಿದರ್ಭದಲ್ಲಿದೆಯೆಂದೂ, ಕಕ್ಕುಲನು ಕೊಕ್ಕಲ ರಾಜನ ಮನೆತನದವನೆಂದೂ ಅಭಿಪ್ರಾಯಪಟ್ಟಿದ್ದಾರೆ. ಆದರೆ ಇದು ಸರಿಯೆನಿಸುವುದಿಲ್ಲ. ತ್ರಿಪುರಿಯ ಕೊಕ್ಕಲನು ಸಿಂಘಣನಿಗಿಂತ ಕೊನೆಯಪಕ್ಷ ಇನ್ನೂರು ವರ್ಷಗಳಿಗೆ ಮುಂಚೆ ಜೀವಿಸಿದ್ದವನು. ಸೊರಬ ತಾಲ್ಲೂಕಿನ ಉದ್ದರಿ ಎಂಬಲ್ಲಿ ದೊರಕಿರುವ ಶಾಸನದಿಂದ ಕಕ್ಕಲ ಎಂಬ ರಾಜನು ವರಾಟ ದೇಶದಲ್ಲಿದ್ದನೆಂದು ತಿಳಿದುಬರುತ್ತದೆ.[28] ಈ ವರಾಟದೇಶವು ಶಿವಮೊಗ್ಗ ಜಿಲ್ಲೆಯ ಹತ್ತಿರದ ಒಂದು ಸ್ಥಳವಿರಬೇಕೆಂದು ಊಹಿಸಬಹುದು. ಆದುದರಿಂದ ಸಂಘಣನು ಸೋಲಿಸಿದ ಕಕ್ಕಲನು ಕರ್ನಾಟಕದ ಒಬ್ಬ ಸಾಮಂತ ರಾಜನೇ ಹೊರತು, ಚತ್ತೀಸ್‌ಗಢದ ರಾಜನಲ್ಲವೆಂದು ಹೇಳಬೇಕು.

ಹೇಮಾದ್ರಿಯ ಪ್ರಶಸ್ತಿಯಿಂದ, ಸಿಂಘಣನು ಜಜ್ಜಲ ಎಂಬ ರಾಜನ ಆನೆಗಳನ್ನು ಕಿತ್ತುಕೊಂಡನೆಂದು ಗೊತ್ತಾಗುತ್ತದೆ.[29] ಈ ಜಜ್ಜಲನು ಚತ್ತೀಸ್ ಗಢನಲ್ಲಿ ಆಳುತ್ತಿದ್ದ ರಾಜನೆಂದು ಅಲ್ಲೇಕರರು ಅಭಿಪ್ರಾಯಪಡುತ್ತಾರೆ. ಚತ್ತೀಸ್ ಗಢದಲ್ಲಿ ಜಜ್ಜಲ ಎಂಬ ಹೆಸರಿನ ಇಬ್ಬರು ರಾಜರಿದ್ದರು. ಇವರಲ್ಲಿ ಎರಡನೆಯ ಜಜ್ಜನೂ ಸಿಂಘಣನಿಗಿಂತ ಅನೇಕ ದಶಕಗಳ ಮೊದಲಿದ್ದವನು. ಆದುದರಿಂದ ಅವರಿಬ್ಬರೂ ಸಿಂಘಣನ ಸಮಕಾಲೀನರಾಗಿರಲು ಸಾಧ್ಯವೇ ಇಲ್ಲ. ಚಿತ್ರದುರ್ಗ ಜಿಲ್ಲೆಯ ಕಲ್ಲೇದೇವರಪುರದಲ್ಲಿ ದೊರಕಿರುವ ಸೇವುಣ ರಾಮಚಂದ್ರನ ಶಾಸನ ದಿಂದ ಶ್ರೀರಂಗದಲ್ಲಿ ಜಜ್ಜಲ್ಲನೆಂಬ ರಾಜನು ಇದ್ದುದು ಗೊತ್ತಾಗುತ್ತದೆ.[30] ಈ ಶ್ರೀರಂಗವು ಈಗಿನ ಶ್ರೀರಂಗಪಟ್ಟಣವಿರಬೇಕು. ಸಿಂಘಣನ ಮಂತ್ರಿಯಾದ ಬೀಚಣನು ಶ್ರೀರಂಗಪಟ್ಟಣದವರೆಗೂ ತಾನು ಹೋದುದಾಗಿ ಒಂದು ಶಾಸನದಲ್ಲಿ ಹೇಳಿಕೊಂಡಿದ್ದಾನೆ. ಅಷ್ಟೇ ಅಲ್ಲದೆ ಸಿಂಘಣನ ಶಾಸನವೊಂದು ಶ್ರೀರಂಗಪಟ್ಟಣಕ್ಕೆ ಎಂಟು ಮೈಲಿ ದೂರದಲ್ಲಿರುವ ಎಲವಾಲ ಎಂಬಲ್ಲಿ ದೊರಕಿದೆ. ಈ ಎಲ್ಲ ಮಾಹಿತಿಗಳಿಂದ, ಸಿಂಘಣನು ಸೋಲಿಸಿದ ಜಜ್ಜಲನು ಶ್ರೀರಂಗಪಟ್ಟಣದ ಬಳಿ ಆಳುತ್ತಿದ್ದ ಸಾಮಂತ ರಾಜನಿರಬೇಕೆಂದು ಹೇಳಬಹುದು.

ಸಿಂಘಣನ ತಿಳಿವಳ್ಳಿ ಶಾಸನದಿಂದ, ಇವನು ಆಭೀರರಾಜ ಲಕ್ಷ್ಮೀದೇವನ ಕುಲವನ್ನೇ ನಾಶಮಾಡಿದನೆಂದು ತಿಳಿಯುತ್ತದೆ.[31] ಅಂಬೆ ಶಾಸನದಲ್ಲಿ ಸಿಂಘಣನು ಭಂಭಗಿರಿಯ ಲಕ್ಷ್ಮೀದೇವನನ್ನು ಸೋಲಿಸಿದನೆಂದು ಹೇಳಿದೆ.[32] ಹೇಮಾದ್ರಿಯೂ ಭಂಭಗಿರಿಯ ಲಕ್ಷ್ಮೀದೇವನ ಮೇಲಿನ ವಿಜಯವನ್ನು ಉಲ್ಲೇಖಿಸಿದ್ದಾನೆ.[33] ಭಂಭಗಿರಿಯ ಲಕ್ಷ್ಮೀದೇವನೇ ಆಭೀರ ರಾಜನಿರಬೇಕು. ಈ ಭಂಭಗಿರಿಯು ಅಹಮದ್‌ನಗರ ಜಿಲ್ಲೆಯಲ್ಲಿರಬೇಕೆಂದು ಖರೆಯವರು ಅಭಿಪ್ರಾಯಪಡುತ್ತಾರೆ. ಆದರೆ ಅಲ್ಲಿ ಆಭೀರ ರಾಜರಿಗೆ ಸಂಬಂಧಿಸಿದ ಯಾವ ಅವಶೇಷಗಳೂ ದೊರಕಿಲ್ಲ. ಪಶ್ಚಿಮ ಖಾಂದೇಶದ ಪಿಂಪಲ್‌ನೇರ್ ತಾಲ್ಲೂಕಿನಲ್ಲಿರುವ ಭಾಮೇರ್ ಎಂಬುದು ಆಭೀರ ಕೇಂದ್ರವಾಗಿದ್ದಿತು. ಅಲ್ಲಿ ಇಂದಿಗೂ ಆ ಕಾಲದ ಕೋಟೆಯ ಅವಶೇಷಗಳು

ಕಾಣಬರುತ್ತವೆ. ಆದುದರಿಂದ ಭಂಭಗಿರಿಯು ಪಶ್ಚಿಮ ಖಾಂದೇಶದ ಭಾಮೇರ್ ಇರಬೇಕೆಂದು ವಾದಿಸಬಹುದು. ಸಿಂಘಣನ ಮಂತ್ರಿಯಾದ ಖೋಲೇಶ್ವರನು ಚಾಹಂದದ ಪರಮಾರ ರಾಜ ಭೋಜನನ್ನು ಸೋಲಿಸಿದನೆಂದು ಅಂಬೆ ಶಾಸನವು ತಿಳಿಸುತ್ತದೆ.[34] ಈ ಚಾಹಂದವು ಮಹಾರಾಷ್ಟ್ರದಲ್ಲಿರುವ ಈಗಿನ ಚಾಂದ. ಇಲ್ಲಿಗೆ ಹತ್ತು ಮೈಲಿ ಸಮೀಪದಲ್ಲಿರುವ ಭಾಂಡಕ್ ಎಂಬುದು ಕೆಲವು ಕಾಲ ಪರಮಾರರ ಆಳ್ವಿಕೆಯಲ್ಲಿದ್ದಿತು. ಆದುದರಿಂದ ಸಿಂಘಣನು ಚಾಂದದಲ್ಲಿ ಆಳುತ್ತಿದ್ದ ಪರಮಾರ ಕುಲದ ಭೋಜ ಎಂಬುವನನ್ನು ಸೋಲಿಸಿರಬೇಕು. ಇದೇ ಅಂಬೆ ಶಾಸನದಿಂದ ಖೋಲೇಶ್ವರನು ಕಾಶಿಯ ರಾಮಪಾಲನನ್ನು, ನಾಗಣ್ಣ ಮತ್ತು ಕರುವೇಮ ಎಂಬ ರಾಜರನ್ನು ಸೋಲಿಸಿದುದಾಗಿ ಹೇಳಿದೆ. ಈ ರಾಜರ ವಿಚಾರದಲ್ಲಿ ಖಚಿತವಾದ ಮಾಹಿತಿ ತಿಳಿದುಬಂದಿಲ್ಲ.

ಸಿಂಘಣನ ರಾಜ್ಯವು ದಕ್ಷಿಣಾಪಥದ ಬಹುಭಾಗಗಳನ್ನು ಒಳಗೊಂಡಿದ್ದಿತು. ಉತ್ತರದಲ್ಲಿ ನರ್ಮದಾನದಿಯ ತೀರದವರೆಗೂ, ಮತ್ತು, ದಕ್ಷಿಣದಲ್ಲಿ ಕಾವೇರಿಯ ತೀರದವರೆಗೂ ಅವನು ವಿಜಯಯಾತ್ರೆಗಳನ್ನು ಕೈಕೊಂಡಿದ್ದನು. ಪೂರ್ವದಲ್ಲಿ ಚಾಂದದವರೆಗೆ ಅವನ ರಾಜ್ಯ ಹಬ್ಬಿದ್ದಿತು. ಆಂಧ್ರದ ಪಶ್ಚಿಮಭಾಗ ಎರಡು ದಶಕಗಳ ಕಾಲ ಇವನ ಆಳ್ವಿಕೆಗೆ ಸೇರಿದ್ದಿತು. ಒಟ್ಟಿನಲ್ಲಿ ಅವನ ರಾಜ್ಯ ಬಹು ವಿಸ್ತಾರವಾಗಿದ್ದಿತು.

ಸಿಂಘಣನು ರಾಜ್ಯವಿಸ್ತರಣೆಯಲ್ಲಿ ಎಷ್ಟು ಶ್ರದ್ಧೆವಹಿಸಿದ್ದನೋ ಅಷ್ಟೇ ಆಸಕ್ತಿಯಿಂದ ಸಾಹಿತ್ಯ ಮತ್ತು ಸಂಗೀತ ಕಲೆಯನ್ನು ಬೆಳೆಸಿಕೊಂಡು ಬಂದನು. ಖ್ಯಾತ ಸಂಗೀತಶಾಸ್ತ್ರಜ್ಞನಾದ ಶಾರ್ಙ್ಗದೇವನು ಸಿಂಘಣನ ಆಶ್ರಯದಲ್ಲಿದ್ದು, 'ಸಂಗೀತ ರತ್ನಾಕರ'ವೆಂಬ ಗ್ರಂಥವನ್ನು ರಚಿಸಿದನು. 'ಶಾಂತೀಶ್ವರಪುರಾಣ'ದ ಕರ್ತೃವಾದ ಕಮಲಭವನು ಸಿಂಘಣನ ಆಸ್ಥಾನಕವಿಯಾಗಿದ್ದನು. ಚಂಗದೇವ ಮತ್ತು ಅನಂತದೇವ ಎಂಬ ಖಗೋಳಶಾಸ್ತ್ರಜ್ಞರಿಗೆ ಸಿಂಘಣನು ಆಶ್ರಯದಾತ ನಾಗಿದ್ದನು. ಸಿಂಘಣನು ಧಾರ್ಮಿಕ ವಿಷಯಗಳಲ್ಲಿ ಶ್ರದ್ಧೆವಹಿಸಿದ್ದ ನೆಂಬುದಕ್ಕೆ ಅವನು ಅನೇಕ ದೇವಾಲಯಗಳಿಗೆ ಕೊಟ್ಟ ದತ್ತಿಗಳೇ ಸಾಕ್ಷಿ. ವೈಷ್ಣವ, ಶೈವ ಮತ್ತು ಜೈನ ಆಲಯಗಳಿಗೆ ಭೇದವಿಲ್ಲದೆ ಆಶ್ರಯವನ್ನು ಕೊಟ್ಟಿದ್ದನು. ಒಟ್ಟಿನಲ್ಲಿ ಹೇಳುವುದಾದರೆ, ಸಿಂಘಣನು ಸೇವುಣವಂಶದಲ್ಲಿ ಅತ್ಯಂತ ಪ್ರತಿಭಾವಂತನಾದ ರಾಜ. ತನ್ನ ಧೈರ್ಯ ಮತ್ತು ಪರಾಕ್ರಮದಿಂದ ಸೇವುಣ ರಾಜ್ಯಕ್ಕೆ ಸಮಕಾಲೀನ ದಕ್ಷಿಣಾ ಪಥದಲ್ಲಿ ಒಂದು ವಿಶಿಷ್ಟ ಸ್ಥಾನವನ್ನು ಸಂಪಾದಿಸಿಕೊಟ್ಟನು. ಇದರಿಂದ ಈ ವಂಶದ ಕೀರ್ತಿ ಬೆಳಗಿತು.

ಸಿಂಘಣನಿಗೆ ಜೈತುಗಿ ಎಂಬ ಮಗನಿದ್ದನು. ಆದರೆ ಜೈತುಗಿಯು ಸಿಂಘಣನಿ ಗಿಂತ ಮುಂಚೆಯೇ ಮರಣಹೊಂದಿದನು. ಅದುದರಿಂದ ಸಿಂಘಣನ ಮರಣಾ ನಂತರ, ಕ್ರಿ.ಶ. 1247 ರಲ್ಲಿ ಇವನ ಮೊಮ್ಮಗನೂ, ಜೈತುಗಿಯ ಮಗನೂ ಆದ ಕೃಷ್ಣನು ಸೇವುಣ ದೊರೆಯಾದನು.

## ಟಿಪ್ಪಣಿಗಳು

1 EC, Vol. VIII, ಸೊರಬ 309
2 B 572 of 1958 -59
3 EC, Vol. XI ದಾವಣಗೆರೆ 25
4 G.H. Khare : S.M.H.D. Vol. P. 55
5 ಫ್ಲೀಟ್‌ರವರು ಈ ಅರ್ಜುನವರ್ಮನು ವಾಘೇಲರಾಜ ವೀಸಲದೇವನ ಉತ್ತರಾಧಿಕಾರಿಯೆಂದು ಅಭಿಪ್ರಾಯಪಟ್ಟಿದ್ದಾರೆ. ಆದರೆ ಭಂಡಾರಕರ್‌ರವರು ಈ ಅರ್ಜುನವರ್ಮನು ಪರಮಾರ ದೊರೆಯೆಂದಿದ್ದಾರೆ. ಶಿವಮೊಗ್ಗ ಜಿಲ್ಲೆಯ ಶಾಸನವೊಂದರಲ್ಲಿ (MAR 929, P. 143) ಅರ್ಜುನವರ್ಮನು ಪರಮಾರವಂಶದವನೆಂದು ಸ್ಪಷ್ಟವಾಗಿ ಹೇಳಿದೆ. ಆದುದರಿಂದ ಫ್ಲೀಟ್‌ರವರ ಅಭಿಪ್ರಾಯ ಸರಿಯಾದುದಲ್ಲ.
6 JBBRAS, Vol. XII, P.I
7 EI, Vol. XXX, P. 32
8 JBBRAS, Vol. XII, P.1
9 G.H. Khare : SMHD, Vol. I, P. 55
10 EC, Vol. VIII, ಸೊರಬ 221
11 ಅದೇ, ಸೊರಬ 319
12 JBBRAS, Vol. XV, P. 384
13 ಕರ್ನಾಟಕ ಸಾಹಿತ್ಯ ಪರಿಷತ್ ಪತ್ರಿಕೆ, ಸಂ. 28. ಪು.1
14 EC, Vol. VII. H1 20
15 B 572 of 1958-59
16 EC, Vol, VII, H1 43
17 SII, Vol. XV, no. 165
18 ಅದೇ Part i, no. 363
19 ಅದೇ Vol. Iv, no. 847
20 ದಶಕುಮಾರ ಚರಿತಮು: ಸರ್ಗ 1, ಶ್ಲೋಕ 66 - 79
21 ನಿರ್ವಚನೋತ್ತರ ರಾಮಾಯಣಮು :ಸರ್ಗ 1, ಶ್ಲೋಕ 33
22 EI, Vol. III, P. 87
23 ಸಿದ್ಧೇಶ್ವರ ಚರಿತ್ರಮು, ಪು. 109-112
24 Archaeological Survey of Western India, Report, Vol. III, P. 85
25 IA, Vol. IV, P. 212
26 ಹೇಮಾದ್ರಿ. ಶ್ಲೋಕ 43
ಯೇನಾನೀಯತ ಮತ್ತವಾರಣಘಟಾ ಯಜ್ಜಲ್ಲಭೂಮಿಭೃತಃ
ಕಕ್ಕೂಲಾದವನೀಪತೇರಹೃತಾ ಯೇನಾಧಿರಾಢ್ಯಶ್ರೀಯಃ ।

27 ಕರ್ನಾಟಕ ಸಾಹಿತ್ಯ ಪರಿಷತ್ ಪತ್ರಿಕೆ, ಸಂ. 28, ಪು. 1

28 MAR, 1929, P. 142

29 ಹೇಮಾದ್ರಿ. ಶ್ಲೋಕ 43

ನೋಡಿ : ಮೇಲಿನ ಟಿಪ್ಪಣಿ 26

30 EC, Vol. XI ಜಗಳೂರು 30

31 ಕರ್ನಾಟಕ ಸಾಹಿತ್ಯ ಪರಿಷತ್ ಪತ್ರಿಕೆ, ಸಂ. 28, ಪು.1

32 G.H. Khare, SMHD, Vol. I. P. 55

33 ಹೇಮಾದ್ರಿ ಶ್ಲೋಕ 44

34 G.H. Khare: SMHD, Vol. I, P. 55

* * *

ಅಧ್ಯಾಯ ೮

# ಕೃಷ್ಣ

(ಕ್ರಿ.ಶ. 1247-1261)

ಸೇವುಣ ದೊರೆ ಕೃಷ್ಣನ ಹೆಸರು ಶಾಸನಗಳಲ್ಲಿ, ಕನ್ನ, ಕನ್ನಪ, ಕನ್ಹಾರ, ಕಂಧಾರ, ಕೃಷ್ಣ ಮುಂತಾದ ವಿವಿಧ ರೂಪಗಳಲ್ಲಿ ಕಾಣಬರುತ್ತದೆ. ರಾಜನಾದ ಕೃಷ್ಣನು ತನ್ನ ಅಜ್ಜನಂತೆ ರಾಜ್ಯ ವಿಸ್ತಾರಣಾ ಕಾರ್ಯದ ಕಡೆಗೆ ಹೆಚ್ಚು ಗಮನವನ್ನು ಕೊಟ್ಟನು. ಇವನು ಉತ್ತರಾಪಥದ ಕಡೆಗೆ ತನ್ನ ಗಮನವನ್ನು ಹರಿಸಿದನು. ಕ್ರಿ.ಶ. 1250ರ ಶಾಸನವೊಂದು ಕೃಷ್ಣನು ಮಾಳ್ವವನ್ನು ಗೆದ್ದನೆಂದು ತಿಳಿಸುತ್ತದೆ. [1] ಕ್ರಿ.ಶ. 1252ರ ಮುನೋಲಿ ಶಾಸನ ಮತ್ತು ಬೇಹಟ್ಟಿ ಶಾಸನಗಳು ಕೃಷ್ಣನು ಮಾಳ್ವರನ್ನು ಮತ್ತು ಗೂರ್ಜರರನ್ನು ಜಯಿಸಿದನೆಂದು ತಿಳಿಸುತ್ತದೆ. [2] ಕೃಷ್ಣನು ಸಮಕಾಲೀನ ಮಾಳ್ವರಾಜನಾದ ಜೈತುಗಿ ದೇವನನ್ನು ಸೋಲಿಸಿರಬೇಕು. ಇದರಿಂದ ಉತ್ಸಾಹಿತ ನಾದ ಕೃಷ್ಣನು ಗುಜರಾತಿಗೆ ನಡೆದನು. ಅಲ್ಲಿ ವೀರಧವಳನ ಮಗನಾದ ವೀಸಲ ದೇವನು ರಾಜನಾಗಿದ್ದನು. ಹೇಮಾದ್ರಿಯ ರಾಜಪ್ರಶಸ್ತಿಯಿಂದ ಕೃಷ್ಣನು ವೀಸಲ ದೇವನ ಸೈನ್ಯವನ್ನು ಸೋಲಿಸಿದನೆಂದು ಗೊತ್ತಾಗುತ್ತದೆ. [3] ಮುನೋಲಿ, ಮಮಡಾ ಪುರ ಮತ್ತು ಪೈಠಾಣ ಶಾಸನಗಳಿಂದ ಈ ವಿಷಯ ಸ್ಪಷ್ಟವಾಗುತ್ತದೆ. ಈ ಯುದ್ಧದಲ್ಲಿ ಕೃಷ್ಣನು ಜಯಶಾಲಿಯಾದರೂ, ಯಾವ ವಿಧವಾದ ರಾಜ್ಯ ವಿಸ್ತರಣೆಯೂ ಆಗಲಿಲ್ಲ. ಮಾಳ್ವ ಮತ್ತು ಗುಜರಾತಿನ ವಿಜಯಗಳು ಕ್ರಿ.ಶ. 1250ರ ಕೃಷ್ಣನ ಶಾಸನದಲ್ಲಿ ಉಲ್ಲೇಖಿತವಾಗಿರುವುದರಿಂದ, ಕೃಷ್ಣನು ಪಟ್ಟಕ್ಕೆ ಬಂದ ಕೂಡಲೇ ಈ ಯುದ್ಧಗಳಲ್ಲಿ ನಿರತನಾಗಿದ್ದಿರಬೇಕೆಂದು ಹೇಳಬಹುದು.

ಉತ್ತರದಿಂದ ಹಿಂದಿರುಗಿದ ಕೃಷ್ಣನು ಹೊಯ್ಸಳರ ಮೇಲೆ ಯುದ್ಧಗಳನ್ನು ಮಾಡಿದನು. ಸಮಕಾಲೀನ ಹೊಯ್ಸಳ ರಾಜನಾದ ಸೋಮೇಶ್ವರನು ಕೃಷ್ಣನನ್ನು ಎದುರಿಸಿದನು. ಕೃಷ್ಣನ ಶಾಸನಗಳು ಚಿತ್ರದುರ್ಗ ಜಿಲ್ಲೆಯಲ್ಲಿ ಮೊಟ್ಟಮೊದಲ ಬಾರಿಗೆ ದೊರಕುತ್ತವೆ. ಕೃಷ್ಣನ ಮಂತ್ರಿಯಾದ ಚಾವುಂಡರಸನು ಕುಕ್ಕನೂರಿನಲ್ಲಿ ತನ್ನ ವಿಜಯ ಕೇಂದ್ರವನ್ನು ಸ್ಥಾಪಿಸಿದ್ದನು. ಇದೇ ಸಮಯದಲ್ಲಿ ಹೊಯ್ಸಳರಿಗೆ ವಿಪತ್ತುಗಳು ಬಂದೊದಗಿದ್ದವು. ಪಾಂಡ್ಯರು ಕಣ್ಣಾನೂರಿನವರೆಗೂ ದಾಳಿ ನಡೆಸಿದ್ದರು. ಹೊಯ್ಸಳ ಸೋಮೇಶ್ವರನು ಏಕಕಾಲದಲ್ಲಿ ಸೇವುಣ ಮತ್ತು ಪಾಂಡ್ಯರ ದಾಳಿಗಳನ್ನು ಎದುರಿಸಲು ಅಸಮರ್ಥನಾಗಿದ್ದನು. ಆದುದರಿಂದ ಅವನು ತನ್ನ

ರಾಜ್ಯವನ್ನು ಎರಡು ಭಾಗಗಳನ್ನಾಗಿ ಮಾಡಿ, ರಾಜ್ಯದ ಉತ್ತರಭಾಗವನ್ನು ನಾರಸಿಂಹನಿಗೆ ವಹಿಸಿಕೊಟ್ಟು, ತಾನು ಪಾಂಡ್ಯರನ್ನು ಎದುರಿಸಲು ದಕ್ಷಿಣದ ಕಡೆಗೆ ಹೊರಟನು. ಆದರೆ ನಾರಸಿಂಹನು ಸೇವುಣರನ್ನು ಸೋಲಿಸುವಷ್ಟು ಸಮರ್ಥನಾಗಿರ ಲಿಲ್ಲ. ಸೇವುಣರು ಮುಂದುವರಿದು ಹೊಯ್ಸಳನಾಡಿನ ಬಹು ಭಾಗವನ್ನು ಆಕ್ರಮಿಸಿ ಕೊಂಡರು. ಸೇವುಣ ಸೇನಾಧಿಪತಿ ಚಾವುಂಡನು ಕಾವೇರಿ ನದಿಯ ತೀರದವರೆಗೂ ದಾಳಿಯನ್ನು ನಡೆಸಿ ಬಂದನು. ಕೃಷ್ಣನು ಹೊಯ್ಸಳ ಸೋಮೇಶ್ವರನೊಡನೆ ಸಂಧಿ ಯನ್ನು ಮಾಡಿಕೊಂಡನೆಂದು ಕೊಯೆಲ್ಹೊ ಎಂಬ ವಿದ್ವಾಂಸರು ಅಭಿಪ್ರಾಯ ಪಟ್ಟರು.[4] ಅದರ ಆಧಾರವಾಗಿ ಅವರು ಅರಸೀಕೆರೆಯ ಶಾಸನವೊಂದನ್ನು ಉದಾ ಹರಿಸಿದ್ದಾರೆ. ಅದರೆ ಅವರು ಈ ಶಾಸನವನ್ನು ಸರಿಯಾಗಿ ಅರ್ಥ ಮಾಡಿ ಕೊಂಡಿಲ್ಲ.[5]

ಕೃಷ್ಣನ ಸೈನ್ಯಾಧಿಕಾರಿಗಳಾದ ಚಂದ್ರದೇವ ಮತ್ತು ಕೇಶವದೇವ ಇಬ್ಬರೂ ಕದಂಬರನ್ನು ಸೋಲಿಸಿದರೆಂದು ತಾಸ್‌ಗಾಂವ್ ಶಾಸನದಿಂದ ತಿಳಿಯುತ್ತದೆ. [6] ಗೋವೆಯ ಕದಂಬರ ರಾಜ್ಯದಲ್ಲಿ ಈ ಕಾಲದಲ್ಲಿ ಮೂರನೆಯ ಷಷ್ಠದೇವನು ರಾಜನಾಗಿದ್ದನು. ಸಿಂಘಣನು ಇವನನ್ನು ಸೋಲಿಸಿದ್ದರೂ, ಸಿಂಘಣನ ಮರಣಾ ನಂತರ ಗೋವೆಯ ಕದಂಬರು ಸ್ವತಂತ್ರರಾದರು. ಷಷ್ಠದೇವನು ಸ್ವತಂತ್ರನಾಗಲು ಕಾಮದೇವ ಮತ್ತು ಲಕ್ಷ್ಮೀದೇವ ಅವನಿಗೆ ಸಹಾಯ ಮಾಡಿದರು. ಕೃಷ್ಣನು ಇದನ್ನು ಗಮನಿಸಿ, ತನ್ನ ಸೈನ್ಯಾಧಿಕಾರಿಗಳಾದ ಚಂದ್ರದೇವ ಮತ್ತ ಕೇಶವ ದೇವರನ್ನು ಷಷ್ಠದೇವನ ಮೇಲೆ ಕಳುಹಿಸಿದನು. ಷಷ್ಠದೇವನು ಸೋತು ಕೃಷ್ಣನ ಸಾಮಂತ ನಾದನು. ಹಾನುಗಲ್ಲಿನ ಕದಂಬರು ಸಿಂಘಣನ ಕಾಲದಲ್ಲಿಯೇ ನಾಶವಾಗಿ, ಅವರ ರಾಜ್ಯವು ಸಿಂಘಣನ ಮಂತ್ರಿಗಳ ವಶದಲ್ಲಿದ್ದಿತು. ಇದೇ ವ್ಯವಸ್ಥೆಯೇ ಕೃಷ್ಣನ ಕಾಲದಲ್ಲಿಯೂ ಮುಂದುವರಿಯಿತು.

ಸಿಂಘಣನಿಗೆ ಸಾಮಂತರಾಗಿದ್ದ ಗುತ್ತವೊಳಲಿನ ಗುತ್ತರು ಕೃಷ್ಣನಮೇಲೆ ದಂಗೆ ಎದ್ದರು. ಸಿಂಘಣನ ಸಾಮಂತನಾಗಿದ್ದ ಎರಡನೆಯ ಜೋಯಿದೇವನ ಅನಂತರ ಬಂದ ಮೂರನೆಯ ವಿಕ್ರಮಾದಿತ್ಯನು ಕ್ರಿ.ಶ. 1248ರವರೆಗೆ ಕೃಷ್ಣನ ಅಧೀನದಲ್ಲಿ ದ್ದನು. ಆದರೆ ಅನಂತರ ಬಂದ ಮೂರನೆಯ ಗುತ್ತನು ಕೃಷ್ಣನೊಡನೆ ಯುದ್ಧ ಮಾಡಿದನು. ಯುದ್ಧದಲ್ಲಿ ಪರಾಜಿತನಾಗಿ ಗುತ್ತನು ಕೃಷ್ಣನ ಸಾಮಂತನಾದನು. ಕ್ರಿ.ಶ. 1259ರ ಶಾಸನದಲ್ಲಿಯೂ, ಮೂರನೆಯ ಗುತ್ತನು ಸಾಮಂತನಾಗಿ ಆಳುತ್ತಿದ್ದುದು ಗೊತ್ತಾಗುತ್ತದೆ.

ಸಿಂಘಣನಿಗೂ ಸಿಂದರಿಗೂ ಯುದ್ಧಗಳು ನಡೆಯುತ್ತಲೇ ಇದ್ದವು. ಕ್ರಿ.ಶ. 1247ರಲ್ಲಿ ನೇಮತ್ತಿ ಎಂಬಲ್ಲಿ ನಡೆದ ಯುದ್ಧದಲ್ಲಿ ಸಿಂದರು ಪೂರ್ಣವಾಗಿ ಸೋತರು. ಸಿಂದರಾಜ ಬೀರದೇವನು ಮರಣಹೊಂದಿದನು. ಸಿಂದರ ರಾಜ್ಯವು ಸೇವುಣರ ರಾಜ್ಯದಲ್ಲಿ ಲೀನವಾಗಿ ಹೋಯಿತು.

ಸೌಂದತ್ತಿಯ ರಟ್ಟರೂ, ಸಿಂಘಣನ ಮರಣಾನಂತರ ಸ್ವತಂತ್ರರಾಗಲು ಹವಣಿಸಿದರು. ರಟ್ಟರಾಜ ಲಕ್ಷ್ಮೀದೇವನು ತಾನು ಸ್ವತಂತ್ರನಾದುದೇ ಅಲ್ಲದೆ ಗೋವೆಯ ಕದಂಬ ಷಷ್ಠದೇವನೂ ಸ್ವತಂತ್ರನಾಗಲು ಸಹಾಯ ಮಾಡಿದನು. ಕೃಷ್ಣನ ಮಹಾ ಪ್ರಧಾನನಾದ ನಾಗರಸನು ಸೌಂದತ್ತಿಗೆ ಹೋಗಿ ರಟ್ಟರನ್ನು ಸೋಲಿಸಿ, ಸೇವುಣರ ಅಧೀನರನ್ನಾಗಿ ಮಾಡಿದನು.

ಕೃಷ್ಣನು ತೆಲುಂಗರಾಯ ಸ್ಥಾಪನಾಚಾರ್ಯ ಎಂಬ ಬಿರುದನ್ನು ಧರಿಸಿದರೂ, ಕೃಷ್ಣನಿಗೂ ಕಾಕತೀಯರಿಗೂ ಯಾವ ವಿಧವಾದ ಘರ್ಷಣೆಗಳೂ ನಡೆಯಲಿಲ್ಲವೆಂದು ಹೇಳಬಹುದು. ತನ್ನ ಅಜ್ಜನಾದ ಸಿಂಘಣನು ಧರಿಸಿದ ಬಿರುದನ್ನು ಇವನೂ ಧರಿಸಿದನು. ತೆಲುಗು ಚೋಳರಾಜ ತಿಕ್ಕನು ಪಾಂಡ್ಯರ ಮೇಲೆ ಯುದ್ಧ ಮಾಡಲು ಕಾಕತೀಯರ ಮತ್ತು ಸೇವುಣರ ಸಹಾಯವನ್ನು ಕೋರಿದನು. ಅದರಂತೆ ಕೃಷ್ಣನು ಸೈನ್ಯಸಹಾಯವನ್ನು ಕಳುಹಿಸಿಕೊಟ್ಟನು.[8] ಆದುದರಿಂದ ಸೇವುಣರೂ ಕಾಕತೀಯರೂ ಮಿತ್ರರಾಗಿದ್ದರೆಂದು ಗೊತ್ತಾಗುತ್ತದೆ.

ಕೃಷ್ಣನ ಶಾಸನಗಳು ಬಿರಾರ್, ಚಾಂದ ಮತ್ತು ಅಮ್ರೋಟ ಜಿಲ್ಲೆಗಳಲ್ಲಿ ದೊರಕಿವೆ. ಆದುದರಿಂದ ಅವನ ರಾಜ್ಯದಲ್ಲಿ ಈ ಪ್ರದೇಶಗಳು ಸೇರಿದ್ದವೆಂದು ಹೇಳಬಹುದು. ರಾಮಚಂದ್ರನ ಶಾಸನವೊಂದರಿಂದ, ಕೃಷ್ಣನು ಕೋಸಲ ರಾಜ್ಯವನ್ನೂ ಗೆದ್ದಿದ್ದನೆಂದು ತಿಳಿಯುತ್ತದೆ. ಆದರೆ ಕೃಷ್ಣನಿಂದ ಪರಾಜಿತನಾದ ಆ ರಾಜನಾರು ಎಂದು ತಿಳಿದಿಲ್ಲ. ಬಹುಶಃ ಆ ರಾಜನು ಸಮಕಾಲೀನ ರತ್ನಪುರಿಯ ಕಳಚೂರಿ ರಾಜನಿರಬೇಕು. 'ಲೀಲಾಚರಿತ' ಎಂಬ ಗ್ರಂಥವು ಕ್ರಿ.ಶ. 1256ರಲ್ಲಿ, ಚಕ್ರಧರ ಸ್ವಾಮಿಯು ಕೋಸಲದಲ್ಲಿದ್ದಾಗ ಕೃಷ್ಣನು ಅಲ್ಲಿಗೆ ಹೋಗಿಈ ಸ್ವಾಮಿಗಳಿಗೆ ಪೂಜೆಯನ್ನು ಸಲ್ಲಿಸಿದನೆಂದು ತಿಳಿಸುತ್ತದೆ. [9] ಆದುದರಿಂದ ಚತ್ತೀಸ್‌ಘಡ ಪ್ರದೇಶವು ಕೃಷ್ಣನ ರಾಜ್ಯಕ್ಕೆ ಒಳಪಟ್ಟಿದ್ದಿತೆಂದು ಹೇಳಬಹುದು.

ರಾಮಚಂದ್ರನ ಪುರುಷೋತ್ತಮಪುರಿ ಶಾಸನದಲ್ಲಿ, ಕೃಷ್ಣನು ಕಾಮಪಾಲನೆಂಬ ರಾಜನನ್ನು ಸೋಲಿಸಿ, ಗೋಪಾಲಕರಿಗೆ ಬಹು ಸಂತೋಷವನ್ನುಂಟು ಮಾಡಿದನೆಂದು ಹೇಳಿದೆ. [10] ಬಹುಶಃ ಈ ಕಾಮಪಾಲನು ಅಭೀರ ರಾಜನಿರಬೇಕು. ಸಿಂಘಣನಿಂದ ಪರಾಜಿತನಾಗಿದ್ದ ಲಕ್ಷ್ಮೀದೇವನ ಮಗನಿರಬೇಕು. ಕೃಷ್ಣನ ಶಾಸನಗಳು ಅಭೀರರ ಮುಖ್ಯ ಕೇಂದ್ರವಾದ ಖಾಂದೇಶ ಜಿಲ್ಲೆಯಲ್ಲಿ ದೊರಕಿರುವುದು, ಕಾಮಪಾಲನು ಆಭೀರನೆಂಬುದನ್ನು ಪುಷ್ಟೀಕರಿಸುತ್ತದೆ.

ಕೃಷ್ಣನ ರಾಜ್ಯವು ಬಹು ವಿಸ್ತಾರವಾಗಿದ್ದಿತು. ವಾಸ್ತವವಾಗಿ ಅವನ ರಾಜ್ಯ ಅಜ್ಜ ಸಿಂಘಣನ ರಾಜ್ಯವನ್ನೂ ವಿಸ್ತಾರದಲ್ಲಿ ಮೀರಿಸಿದ್ದಿತು. ದಕ್ಷಿಣದಲ್ಲಿ ನೊಳಂಬವಾಡಿ ಪ್ರದೇಶವು ಸೇರಿಸಲ್ಪಟ್ಟಿದ್ದಿತು. ಪೂರ್ವದಲ್ಲಿ ಚತ್ತೀಸ್‌ಘಡ ಪ್ರದೇಶವು ಇವನ ಆಳ್ವಿಕೆಗೆ ಸೇರಿದ್ದಿತು. ಕೃಷ್ಣನು ಯುದ್ಧಾಸಕ್ತನಾಗಿದ್ದರೂ ಕವಿಗಳಿಗೆ ಆಶ್ರಯದಾತ ನಾಗಿದ್ದನು. ಅವನ ಸೈನ್ಯದಲ್ಲಿ ಮುಖ್ಯಾಧಿಕಾರಿಯಾಗಿದ್ದ

ಜಲ್ಹಣನು 'ಸೂಕ್ತಿ ಮುಕ್ತಾವಳಿ' ಎಂಬ ಸಂಸ್ಕೃತ ಪದ್ಯ ಗ್ರಂಥವನ್ನು ರಚಿಸಿದನು. ಅಮಲಾನಂದನೆಂಬ ಪಂಡಿತನು 'ಕಲ್ಪತರು' ಎಂಬ ಗ್ರಂಥವನ್ನು ರಚಿಸಿದನು. ಕೃಷ್ಣನು ಜೈನ, ಬ್ರಾಹ್ಮಣ, ವೀರಶೈವ, ಕಾಳಾಮುಖ ಮೊದಲಾದ ವಿವಿಧ ಮತಗಳ ಅನುಯಾಯಿಗಳಿಗೆ ದತ್ತಿಗಳನ್ನು ಕೊಟ್ಟಿದ್ದನು. ವಿದ್ಯಾಭ್ಯಾಸಕ್ಕೋಸ್ಕರ ಅನೇಕ ಅಗ್ರಹಾರಗಳನ್ನು ನಿರ್ಮಿಸಿದನು. ಆ ಕಾಲದಲ್ಲಿ ಬೆಳೆಯುತ್ತಿದ್ದ ಮಹಾನುಭಾವ ಪಂಥಕ್ಕೂ ಪ್ರೋತ್ಸಾಹ ನೀಡಿದ್ದನು. ಮಹಾನುಭಾವರ ಗುರುವಾದ ಚಕ್ರಧರನನ್ನು ಸಂದರ್ಶಿಸಿ, ಅವನಿಂದ ಉಪದೇಶವನ್ನೂ ಪಡೆದನು.

ಕೃಷ್ಣನ ರಾಜ್ಯಭಾರ ಕಾಲ ಕೇವಲ ಹದಿನಾಲ್ಕು ವರ್ಷಗಳು. ಇವನ ಕಾಲದಲ್ಲಿ ಮಹಾನ್ ಯುದ್ಧಗಳೇನೂ ನಡೆಯಲಿಲ್ಲ. ಆದರೂ ಇವನ ರಾಜ್ಯವು ವಿಸ್ತಾರವಾಗಿಯೇ ಇದ್ದಿತು. ಒಟ್ಟಿನಲ್ಲಿ ಹೇಳುವುದಾದರೆ, ತನ್ನ ತಾತ ಸಿಂಘಣನಿಗೆ ತಕ್ಕ ಮೊಮ್ಮಗನಾಗಿ ರಾಜ್ಯವಾಳಿದನು. ಇವನು ಕ್ರಿ.ಶ. 1261ರಲ್ಲಿ ಮರಣ ಹೊಂದಿದನು.

## ಟಿಪ್ಪಣಿಗಳು

1 EL. Vol. XIX, p. 23

2 ಅದೇ ಮತ್ತು JBBRAS, Vol, XII, P. 34

3 ಹೇಮಾದ್ರಿ, ಶ್ಲೋಕ 46

ಯೇನಾಕಾರಿವಿಶಾತ್ವವಿಲಚಮೂಸಂಹಾರಕಾಲಾನಲೇ

ಹತೋನ್ಮೂಲಿತ ಮೂಲರಾಜಸಮರೇ ನಿರ್ವೀರ ಮುರ್ವೀತಲೇ |

4 Coelho: Hoysala Vamsa P. 194

5 ಈ ಶಾಸನದ ಕಾಲವೇನೋ ಕ್ರಿ.ಶ. 1255. ಆದರೆ ಇದರಲ್ಲಿ ಉಲ್ಲೇಖಿತವಾಗಿರುವ ಕುಂಜುನಂಬಿಯು ಈ ಕಾಲಕ್ಕಿಂತ ಎರಡು ತಲೆಮಾರು ಹಿಂದಿನವನು. ದಾನ ಕೊಟ್ಟನೆಂದು ಹೇಳಲಾದ ಭಂಡಿನಂಬಿಯು ಕಂಡನಂಬಿಯ ಅಳಿಯ. ಈ ಕಂಡನಂಬಿಯು ಕುಂಜುನಂಬಿಯ ಅಳಿಯ. ಈ ಕುಂಜುನಂಬಿಯು ಬಲ್ಲಹರಾಜನಿಗೆ ಸಂಧಿಮಾಡಿಸಿದನೆಂದು ಹೇಳಿದೆ. ಈ ಬಲ್ಲಹನು ಸೇವುಣ ಕೃಷ್ಣನಲ್ಲ.

6 El. Vol. XXVII, P. 208

7 Journal of Karnataka University, Vol, II, P. 66

8 El. Vol. XiX, P. 19

9 Journal of Indian History, Vol. V, P. 199

10 El. Vol. XXV, P. 199

* * *

ಅಧ್ಯಾಯ ೯

# ಮಹಾದೇವ

(ಕ್ರಿ.ಶ. 1261-1270)

ಕೃಷ್ಣನ ಮರಣಾನಂತರ ಅವನ ತಮ್ಮನಾದ ಮಹಾದೇವನು ಕ್ರಿ.ಶ. 1261ರಲ್ಲಿ ರಾಜನಾದನು. ಮಹಾದೇವನು, ಕೃಷ್ಣನು ರಾಜನಾಗಿದ್ದಾಗಲೇ ಯುವರಾಜನಾಗಿದ್ದನು. ಕೃಷ್ಣನ ಮಗನಾದ ರಾಮಚಂದ್ರನು ಪಟ್ಟಕ್ಕೆ ಬರದೆ, ಮಹಾದೇವನು ಪಟ್ಟಕ್ಕೆ ಬರಲು ಕಾರಣಗಳೇನು ಎಂಬುದು ಗೊತ್ತಿಲ್ಲ. ಬಹುಶಃ ರಾಮಚಂದ್ರನು ಇನ್ನೂ ಪ್ರಾಪ್ತವಯಸ್ಕನಾಗದೆ ಇದ್ದುದರಿಂದ ಅವನ ಚಿಕ್ಕಪ್ಪನಾದ ಮಹಾದೇನು ಪಟ್ಟಕ್ಕೆ ಬಂದಿರಬಹುದು.

ರಾಜನಾದ ಕೂಡಲೆ ಮಹಾದೇವನು ಉತ್ತರ ಕೊಂಕಣದಲ್ಲಿ ಆಳುತ್ತಿದ್ದ ಶಿಲಾಹಾರ ರಾಜ ಸೋಮೇಶ್ವರನ ಮೇಲೆ ಯುದ್ಧ ಮಾಡಿದನು. [1] ಸೋಮೇಶ್ವರನು ಯುದ್ಧದಲ್ಲಿ ಸೋತು ಸಮುದ್ರದ ಮೂಲಕ ತಪ್ಪಿಸಿಕೊಳ್ಳಲು ಪ್ರಯತ್ನಿಸಿದನು. ಆದರೆ ಮಹಾದೇವನು ತನ್ನ ನೌಕಾಬಲದಿಂದ ಅವನನ್ನು ಹಿಂಬಾಲಿಸಿದನು. ಸೋಮೇಶ್ವರನು ನೀರಿನಲ್ಲಿ ಮುಳುಗಿ ಸತ್ತನು. ಬೊಂಬಾಯಿಯ ಸಮೀಪದಲ್ಲಿ ಬೋರಿವಿಲಿ ಎಂಬಲ್ಲಿ ದೊರಕಿರುವ ಅನೇಕ ವೀರಗಲ್ಲುಗಳು ಈ ಯುದ್ಧದಲ್ಲಿ ಮಡಿದವರ ಸ್ಮರಣಾರ್ಥ ಶಾಸನಗಳಿರಬೇಕು [2] ಅವುಗಳಲ್ಲಿ ನೌಕಾಯುದ್ಧದ ಚಿತ್ರವು ಚೆನ್ನಾಗಿ ರೂಪಿತವಾಗಿದೆ. ಉತ್ತರ ಕೊಂಕಣವು ಸೇವುಣರ ರಾಜ್ಯದಲ್ಲಿ ವಿಲೀನವಾಗಿ ಹೋಯಿತು.

ಇದೇ ಸಮಯದಲ್ಲಿ ಕೊಂಕಣದ ನೆರೆಹೊರೆಯ ಪ್ರದೇಶಗಳು ಗುರ್ಜರರ ಆಳ್ವಿಕೆಗೆ ಸೇರಿದ್ದವು. ಮಹಾದೇವನು ಕೊಂಕಣದ ರಾಜನನ್ನು ಸೋಲಿಸಿದ ಕೂಡಲೆ ಗುಜರಾತಿನ ವೀಸಲದೇವನು ಮಹಾದೇವನ ಮೇಲೆ ಸೈನ್ಯವೊಂದನ್ನು ಕಳುಹಿಸಿದನು. ಮಹಾದೇವನು ಈ ಯುದ್ಧದಲ್ಲಿಯೂ ಜಯಶಾಲಿಯಾದನು.[3] ವೀಸಲದೇವನು ಕ್ರಿ.ಶ. 1262ರಲ್ಲಿ ಮರಣಹೊಂದಿದುದರಿಂದ ಈ ಯುದ್ಧವು ಅದಕ್ಕೆ ಮುಂಚೆಯೇ ನಡೆದಿರಬೇಕು.

ಕಾಕತೀಯ ಗಣಪತಿಯೂ, ಸೇವುಣ ಕೃಷ್ಣನು ಸ್ನೇಹಿತರಾಗಿದ್ದರೆಂಬುದನ್ನು ಆಗಲೇ ನೋಡಿದ್ದೇವೆ. ಆದರೆ, ಈ ಎರಡು ವಂಶಗಳ ರಾಜರುಗಳು ಮರಣ ಹೊಂದಿದುದರಿಂದ ಇವರ ಅನಂತರ ಈ ಎರಡು ರಾಜವಂಶಗಳಿಗೆ ಘರ್ಷಣೆಗಳು

ಉಂಟಾದವು. ಕಾಕತೀಯ ಗಣಪತಿಯ ಅನಂತರ ಕಾಕತೀಯ ರಾಜ್ಯಕ್ಕೆ ರುದ್ರಮ ದೇವಿ ರಾಣಿಯಾದಳು. ಸ್ತ್ರೀಯೊಬ್ಬಳು ಪಟ್ಟಕ್ಕೆ ಬಂದುದನ್ನು ಸಹಿಸಲಾರದೆ ಕಾಕತೀಯ ರಾಜ್ಯದಲ್ಲಿ ಅನೇಕರು ದಂಗೆಯೆದ್ದರು. ಈ ದಂಗೆಗಳನ್ನು ಅಡಗಿಸುವು ದರಲ್ಲಿ ರುದ್ರಮದೇವಿಯು ನಿರತಳಾಗಿದ್ದಾಗ, ಮಹಾದೇವನು ಕಾಕತೀಯ ರಾಜ್ಯದ ಮೇಲೆ ದಂಡೆತ್ತಿ ಹೋಗಿರಬೇಕು. ಮಹಾದೇವನು ಸ್ತ್ರೀಯನ್ನು ಕೊಲ್ಲುವುದಿಲ್ಲ ವೆಂಬುದನ್ನು ತಿಳಿದ ಆಂಧ್ರರು ರುದ್ರಮದೇವಿಯನ್ನು ತಮ್ಮ ರಾಣಿಯನ್ನಾಗಿ ಮಾಡಿದರು ಎಂಬ ಹೇಮಾದ್ರಿಯ ಮಾತಿನಲ್ಲಿ ಸತ್ಯವೇನೂ ಇಲ್ಲ.[4] ಆದರೆ ರುದ್ರಮದೇವಿಗೂ ಮಹಾದೇವನಿಗೂ ಯುದ್ಧವಾದುದು ಮಾತ್ರ ನಿಜ. 'ಸಿದ್ದೇಶ್ವರ ಚರಿತಮು' ಎಂಬ ತೆಲುಗು ಗ್ರಂಥವು ರುದ್ರಮದೇವಿಯು ಮಹಾ ದೇವನನ್ನು ಸೋಲಿಸಿ ಅವನಿಂದ ಕಪ್ಪಕಾಣಿಕೆಗಳನ್ನು ವಸೂಲು ಮಾಡಿದಳೆಂದು ತಿಳಿಸುತ್ತದೆ.[5] ಆದರೆ ರುದ್ರಮ ದೇವಿಯ ಒಂದು ಶಾಸನದಲ್ಲಿಯೂ ಆಕೆಯು ಸೇವುಣರ ಮೇಲೆ ಸಂಪಾದಿಸಿದ ವಿಜಯದ ಉಲ್ಲೇಖವಿಲ್ಲದಿರುವುದು ಗಮನಾರ್ಹ. ಅವುಗಳ ಮೌನದಿಂದ ನಮಗೆ ರುದ್ರಮದೇವಿಯ ವಿಜಯದ ವಿಚಾರದಲ್ಲಿ ಸಂಶಯ ಮೂಡುತ್ತದೆ. ಆದರೆ ಡಾ.ಎನ್. ವೆಂಕಟರಮಣಯ್ಯನವರು, ಸಿದ್ಧೇಶ್ವರ ಚರಿತ್ರೆಯ ಆಧಾರದ ಮೇಲೆ ರುದ್ರಮದೇವಿಯು ಮಹಾದೇವನನ್ನು ಸೋಲಿಸಿದ ಅಭಿಪ್ರಾಯವನ್ನು ಸ್ಪಷ್ಟೀಕರಿಸಲು ಪ್ರಯತ್ನಿಸಿದ್ದಾರೆ.[6] ಆಂಧ್ರದ ರಾಚಪಟ್ಟಣಂ ಎಂಬಲ್ಲಿ ಸೇವುಣರನಾಣ್ಯಗಳು ದೊರಕಿವೆ. ಈ ನಾಣ್ಯಗಳು ಮಹಾದೇವನು ರುದ್ರಮದೇವಿಗೆ ಕೊಟ್ಟ ಕಪ್ಪಕಾಣಿಕೆಗಳಿರಬೇಕೆಂದು ಅವರು ಹೇಳಿದ್ದಾರೆ. ಆದರೆ ಈ ನಾಣ್ಯಗಳಲ್ಲಿ ಮಹಾದೇವನ ಅನಂತರ ಆಳಿದ ರಾಮಚಂದ್ರನ ನಾಣ್ಯವೂ ಸೇರಿದೆ. ಆದುದರಿಂದ ಈ ನಾಣ್ಯಗಳು ಆಂಧ್ರಕ್ಕೆ ರಾಮಚಂದ್ರನ ಕಾಲದಲ್ಲಿ ಹೋಗಿರಬೇಕೇ ಹೊರತು ಅದಕ್ಕಿಂತ ಮುಂಚೆ ಮಾತ್ರ ಅಲ್ಲ. ಅಷ್ಟೇ ಅಲ್ಲದೆ ಸಿದ್ಧೇಶ್ವರ ಚರಿತ್ರೆಯು ನಂಬಲರ್ಹವಾದ ಚಾರಿತ್ರಿಕ ಗ್ರಂಥವೂ ಅಲ್ಲ. ಈ ಎಲ್ಲ ಅಂಶಗಳನ್ನೂ ಗಮನಿಸಿದರೆ ಡಾ. ಎನ್.ವೆಂಕಟರಮಣಯ್ಯನವರ ಅಭಿಪ್ರಾಯವು ಸರಿಯಾದುದಲ್ಲವೆಂದು ಸುಲಭವಾಗಿ ಗೊತ್ತಾಗುತ್ತದೆ.[7] ಒಟ್ಟಿನಲ್ಲಿ ರುದ್ರಮ ದೇವಿಗೂ ಮಹಾದೇವನಿಗೂ ಯುದ್ಧವಾಗಿರಬೇಕು. ಆದರೆ ನಿರ್ಣಾಯಕ ವಿಜಯವು ಇಬ್ಬರಿಗೂ ಲಭಿಸಿರಲಿಕ್ಕಿಲ್ಲ. ಯಾರಾದರೂ ವಿಜಯಿಗಳಾಗಿದ್ದರೆ ಸಮಕಾಲೀನ ಶಾಸನಗಳಲ್ಲಿ ಅದರ ಉಲ್ಲೇಖವಿಲ್ಲದೇ ಇರುತ್ತಿರಲಿಲ್ಲ.

ಅನಂತರ ಮಹಾದೇವನು ಕದಂಬರ ಮೇಲೆ ಯುದ್ಧ ಮಾಡಿದನು. ಕದಂಬ ಮಲ್ಲಿದೇವನು ಸೇವುಣರ ಸಾಮಂತನಾಗಿದ್ದನು. ಆದರೆ ಅವನ ಉತ್ತರಾಧಿಕಾರಿ ಯಾದ ಕಾಮದೇವನು ಸೇವುಣರ ಅಧಿಕಾರವನ್ನು ಧಿಕ್ಕರಿಸಿದನು. ಕೂಡಲೇ ಮಹಾದೇವನು ಸೈನ್ಯವನ್ನು ಕಾಮದೇವನ ಮೇಲೆ ಕಳುಹಿಸಿ, ಅವನನ್ನು ಸೋಲಿಸಿ ದನು.[8] ಕಾಮದೇವನು ಮಹಾದೇವನ ಸಾಮಂತನಾದನು. ಮಹಾದೇವನು ಇನ್ನೂ

ದಕ್ಷಿಣಕ್ಕೆ ಹೋಗಿ ಸಾಂತರ ರಾಜ ಬೊಮ್ಮರಸನ ಮೇಲೆ ಯುದ್ಧ ಮಾಡಿದನು. ಇದರಿಂದ ಉಪಯೋಗವೇನೂ ಆಗಲಿಲ್ಲ. [9] ಅಲ್ಲಿಂದ ಮುಂದೆ ಮಹಾದೇವನು ಕ್ರಿ.ಶ. 1271ರಲ್ಲಿ ಹೊಯ್ಸಳರ ಮೇಲೆ ಯುದ್ಧ ಮಾಡಿದನು. ಅದೇ ವರ್ಷದ ಹೊಯ್ಸಳ ಶಾಸನವೊಂದು ಹೇಳುವಂತೆ ಮಹಾದೇವನು ಬಹುಧೈರ್ಯದಿಂದ ಆನೆಯ ಮೇಲೆ ಕುಳಿತು ಯುದ್ಧವನ್ನು ಆರಂಭಿಸಿದನು.[10] ಆದರೆ ಆನೆಯು ನೆಲಕ್ಕೆ ಉರುಳಿದ ಮೇಲೆ, ಮಹಾದೇವನು ಕುದುರೆಯ ಮೇಲೆ ಹತ್ತಿ ಯುದ್ಧ ಮಾಡಿದನು. ಅದೂ ಮಡಿಯಲು ಪಲಾಯನವೇ ಸರ್ವೋತ್ಕೃಷ್ಟವೆಂದು ಮಹಾದೇವನು ಓಡಿಹೋದನು. ಪೆರುಮಾಳದೇವನೆಂಬ ಹೊಯ್ಸಳ ದಂಡ ನಾಯಕನು ಸೇವುಣ ಸೈನ್ಯಾಧಿಪತಿಯಾದ ರತ್ನಪಾಲನನ್ನು ಕೊಂದನೆಂದು ಮತ್ತೊಂದು ಶಾಸನವು ತಿಳಿಸುತ್ತದೆ.[11] ನಿಜವಾಗಿಯೂ ಹೊಯ್ಸಳರು ಜಯಶಾಲಿಗಳಾಗಿದ್ದರೆ ಸೇವುಣರು ಚಿತ್ರದುರ್ಗ ಜಿಲ್ಲೆಯನ್ನು ತಮ್ಮ ವಶಮಾಡಿಕೊಳ್ಳಲು ಅವಕಾಶವನ್ನೇಕೆ ಕೊಟ್ಟರು ಎನ್ನುವ ಪ್ರಶ್ನೆಗೆ ಉತ್ತರ ಹೇಳುವುದು ಕಷ್ಟ. ಒಟ್ಟಿನಲ್ಲಿ ಸೇವುಣರು ಹೊಯ್ಸಳ ನಾಡಿನ ಅನೇಕ ಭಾಗಗಳನ್ನು ತಮ್ಮ ವಶದಲ್ಲಿಯೇ ಇಟ್ಟುಕೊಂಡಿದ್ದರೆಂಬುದು ಅಲ್ಲಿ ದೊರಕಿರುವ ಶಾಸನಗಳಿಂದ ತಿಳಿದುಬರುತ್ತದೆ.

ಗುತ್ತವೊಳಲಿನ ಮೂರನೆಯ ಗುತ್ತರಾಜನು ಮಹಾದೇವನ ಸಾಮಂತನಾಗಿದ್ದನು. ಮಹಾದೇವನ ಸೈನ್ಯಾಧಿಕಾರಿಯಾದ ಸಾಳುವ ತಿಕ್ಕಮನು ಗುತ್ತವೊಳಲಿನಲ್ಲಿ ತಂಗಿ, ಹೊಯ್ಸಳರ ಮೇಲೆ ಮತ್ತೆ ಯುದ್ಧ ಮಾಡಲು ತಕ್ಕ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದನು. ರಟ್ಟರು ಮತ್ತು ಸಿಂದರು ಮಹಾದೇವನ ಸಾಮಂತರಾಗಿ ಆಳುತ್ತಿದ್ದರು.

ಮಹಾದೇವನ ರಾಜ್ಯದಲ್ಲಿ ಬಿಜಾಪುರ, ಧಾರ್ವಾಡ, ಬೆಳಗಾಂ ಜಿಲ್ಲೆಗಳೂ, ಶಿವಮೊಗ್ಗ, ಚಿತ್ರದುರ್ಗ, ಬಳ್ಳಾರಿ, ಕೊಲ್ಹಾಪುರ ಜಿಲ್ಲೆಗಳ ಭಾಗಗಳೂ ಸೇರಿದ್ದವು. ಚತ್ತೀಸ್‌ಗಢ ಪ್ರದೇಶವೂ ಅವನ ರಾಜ್ಯಕ್ಕೆ ಸೇರಿದ್ದಿತು. ಉತ್ತರ ಮತ್ತು ದಕ್ಷಿಣ ಕೊಂಕಣಗಳೂ ಅವನ ಅಧೀನದಲ್ಲಿದ್ದವು.

ಮಹಾದೇವನು ಕ್ರಿ.ಶ. 1270ರಲ್ಲಿ ಮರಣಹೊಂದಲು ಅವನ ಮಗನಾದ ಆಮಣ ದೊರೆಯಾದನು. ಈ ಆಮಣನ ಯಾವ ಶಾಸನವೂ ಇದುವರೆವಿಗೆ ದೊರಕಲಿಲ್ಲ. ಅವನು ರಾಜನಾಗಿ ಕೇವಲ ಒಂದು ವರ್ಷದೊಳಗೇ ಕೊಲ್ಲಲ್ಪಟ್ಟನು. ನಮಗೆ ದೊರಕುವ ವಿರೋಧಾತ್ಮಕ ಮಾಹಿತಿಗಳಿಂದ, ಆಮಣನ ಮರಣದ ವಿಚಾರವಾಗಿ ಖಚಿತವಾದ ವಿಷಯವು ತಿಳಿಯುವುದಿಲ್ಲ. 'ಲೀಲಾಚರಿತ' ಎಂಬ ಮಹಾನುಭಾವ ಗ್ರಂಥದ ಪ್ರಕಾರ ರಾಮಚಂದ್ರನು ಅಮಣನನ್ನು ಪದಚ್ಯುತನನ್ನಾಗಿ ಮಾಡಿ ಅವನ ಕಣ್ಣುಗಳನ್ನು ಕೀಳಿಸಿದನು. [12] ಪರಶುರಾಮವ್ಯಾಸನ 'ಸ್ಮೃತಿಸ್ಥಲ' ದಲ್ಲಿ, ರಾಮಚಂದ್ರನು ತನ್ನ ಸಹೋದರನನ್ನು ಕೊಲ್ಲಿಸಿದನೆಂದು ಹೇಳಿದೆ.[13] 'ಭಾನುವಿಲಾಸ' ಎಂಬ ಗ್ರಂಥವು, ರಾಮಚಂದ್ರನೂ, ಆಮಣನೂ ಬೇಟೆಯಾಡು

ತ್ತಿದ್ದಾಗ, ರಾಮಚಂದ್ರನು ಅವನನ್ನು ತನ್ನ ಸೈನಿಕರ ಸಹಾಯದಿಂದ ಸೆರೆ ಹಿಡಿಸಿದನೆಂದು ತಿಳಿಸುತ್ತದೆ. ರಾಮಚಂದ್ರನಿಂದ ಬರೆಸಲ್ಪಟ್ಟ ಪುರುಷೋತ್ತಮಪುರಿ ಶಾಸನದ ಪ್ರಕಾರ ಆಮಣನು ದೇವಗಿರಿಯಲ್ಲಿ ರಾಜ್ಯವಾಳುತ್ತಿರಲು, ರಾಮಚಂದ್ರನು ರಾಜ್ಯವನ್ನು ತನ್ನ ವಶಮಾಡಿಕೊಳ್ಳುವ ಉದ್ದೇಶದಿಂದ, ನೆಪವೊಂದನ್ನು ಹೂಡಿದನು.[14] ಅವನ ಅನುಯಾಯಿಗಳು ಅವನ ಸಹಾಯಕ್ಕೆ ನಿಂತು, ನರ್ತಕಿಯರ ವೇಷವನ್ನು ಹಾಕಿಕೊಂಡು ಅರಮನೆಯನ್ನು ಪ್ರವೇಶಿಸಿ, ಹಟಾತ್ತನೆ ಆಮಣನ ಮೇಲೆ ಬಿದ್ದು ಅವನನ್ನು ಸೆರೆಹಿಡಿದರು. ರಾಮಚಂದ್ರನು ರಾಜ್ಯವನ್ನು ತನ್ನದನ್ನಾಗಿ ಮಾಡಿಕೊಂಡನು. ಇದು ರಾಮಚಂದ್ರನ ಶಾಸನದಲ್ಲಿ ದೊರೆಯುವ ಮಾಹಿತಿ. ಒಟ್ಟಿನಲ್ಲಿ ಮಹಾದೇವನ ಅನಂತರ, ಕೇವಲ ಒಂದು ವರ್ಷ ರಾಜನಾಗಿದ್ದ ಆಮಣನ ಅನಂತರ ಕ್ರಿ.ಶ.1271ರಲ್ಲಿ ರಾಮಚಂದ್ರನು ಸೇವುಣ ರಾಜನಾದನು.

## ಟಿಪ್ಪಣಿಗಳು

1 EI. Vo. XXXII, P. 31 ಮತ್ತು XXV, P. 199
2 Cousens : Medieval Temples of the Deccan, P. 21
3 IA. Vol. XIV, P. 314
4 ಹೇಮಾದ್ರಿ (ರಾಜಪ್ರಶಸ್ತಿ ೨) ಶ್ಲೋಕ 14
ಅಯಂ ಶಿಶು ಸ್ತ್ರೀಶರಣಾಗತಾನಾಂ ಹನ್ತಾ ಮಹಾದೇವನೃಪೋಜಾತು |
ಇತ್ಥಂ ವಿನಿಶ್ಚಿತ್ಯ ತತೋತಿಭೇತ್ರೈರಾಂಧ್ರ್ಯೈಃ ಪುರಂಧ್ರೀ ನಿಹಿತಾ ನೃಪತ್ವೇ ||
5 ಸಿದ್ಧೇಶ್ವರ ಚರಿತ್ರಮು, ಪು. 133-34
6 EHD.(Ed) Yazdani, P. 626
7 A.V. Narasimha Murthy : Journal of the Numismatic Society of India : Vol. XXVIII.
8 EC. Vo. XI, ದಾವಣಗೆರೆ 79
9 ಅದೇ, Vol. VIII, ಸಾಗರ 137-140
10 ಅದೇ, Vol. IV, Ng 39
11 ಅದೇ, ಚನ್ನರಾಯಪಟ್ಟಣ 269
12 Journal of Indian Hisotry : Vol. V, P. 198
13 EI. Vol. XXV. P. 199
14 ಅದೇ

* * *


ಅಧ್ಯಾಯ ೧೦

# ರಾಮಚಂದ್ರ

(ಕ್ರಿ.ಶ. 1271-1312)

ಆಮಣನನ್ನು ಪದಚ್ಯುತನನ್ನಾಗಿ ಮಾಡಿದ ರಾಮಚಂದ್ರನು ಕ್ರಿ.ಶ. 1271ರಲ್ಲಿ ರಾಜನಾದನು. ಕೂಡಲೇ ಇವನು ಮಾಳ್ವ ಮತ್ತು ಗುಜರಾತಿನ ಮೇಲೆ ದಂಡೆತ್ತಿ ಹೋದನು. ರಾಮಚಂದ್ರನ ಥಾಣ ಶಾಸನದಲ್ಲಿ ಇವನು ಮಾಳ್ವ ಮತ್ತು ಗುರ್ಜರ ರಾಜರನ್ನು ಸೋಲಿಸಿದನೆಂದು ಹೇಳಿದೆ.[1] ಮಾಳ್ವ ದೇಶದಲ್ಲಿ ಪರಮಾರ ಅರ್ಜುನವರ್ಮನು ರಾಜ್ಯವಾಳುತ್ತಿದ್ದನು. ಇವನನ್ನು ಸೋಲಿಸಿ, ರಾಮಚಂದ್ರನು ಗುಜರಾತಿಗೆ ಮುಂದುವರಿದನು. ಅಲ್ಲಿ ವಾಘೇಲ ರಾಜ ಅರ್ಜುನನು ಸೋಲಿಸಲ್ಪಟ್ಟನು. ಕ್ರಿ.ಶ. 1272ರ ಶಾಸನದಲ್ಲಿ ರಾಮಚಂದ್ರನ ಈ ಎರಡು ವಿಜಯಗಳೂ ಉಲ್ಲೇಖಿತವಾಗಿರುವುದರಿಂದ, ರಾಮಚಂದ್ರನ ಆಳ್ವಿಕೆಯ ಮೊದಲ ವರ್ಷವು ಈ ಯುದ್ಧಗಳಲ್ಲಿ ಕಳೆದಿರಬೇಕು.

ಅನಂತರ ರಾಮಚಂದ್ರನು ದಕ್ಷಿಣದ ಕಡೆಗೆ ತಿರುಗಿದನು. ಇದೇ ಸಮಯದಲ್ಲಿ ಹೊಯ್ಸಳರು ಸೇವುಣರ ಸಾಮಂತನಾಗಿದ್ದ ಕದಂಬ ಕಾಮದೇವನ ಮೇಲೆ ಯುದ್ಧ ಮಾಡಿದರು. ಕೂಡಲೇ ರಾಮಚಂದ್ರನು ತನ್ನ ಸೇನಾಧಿಪತಿ ಸಾಳುವ ತಿಕ್ಕಮನನ್ನು ಹೊಯ್ಸಳರ ಮೇಲೆ ಯುದ್ಧಕ್ಕೆ ಕಳುಹಿಸಿದನು. ಸಾಳುವ ತಿಕ್ಕಮನು ಹೊಯ್ಸಳರನ್ನು ಸೋಲಿಸಿ ಕದಂಬರಿಗೆ ಒದಗಿದ್ದ ವಿಪತ್ತನ್ನು ತಪ್ಪಿಸಿದನು. [12] ಕದಂಬ ಸ್ಥಾಪನಾಚಾರ್ಯ ಎಂಬ ಬಿರುದನ್ನೂ ಧರಿಸಿದನು. ಈ ವಿಜಯದಿಂದ ಉತ್ತೇಜಿತಗೊಂಡ ಸಾಳುವ ತಿಕ್ಕಮನು ಮುಂದುವರಿದು ಕ್ರಿ.ಶ. 1276ರಲ್ಲಿ ಸಾಂತರ ಬೊಮ್ಮರಸನ ಮೇಲೆ ಯುದ್ಧ ಮಾಡಿದನು. ಬೊಮ್ಮರಸನು ಸೋತು, ರಾಮಚಂದ್ರನ ಸಾಮಂತನಾಗಿ ಹೊಸಗುಂದದಲ್ಲಿ ರಾಜ್ಯವಾಳಲು ಆರಂಭಿಸಿದನು.[3] ಅನಂತರ ಸಾಳುವ ತಿಕ್ಕಮನು ಗುತ್ತವೊಳಲಿಗೆ ಹೋದನು. ಅಲ್ಲಿ ಮೂರನೆಯ ಗುತ್ತರಾಜನು ಅವನನ್ನು ಬರಮಾಡಿಕೊಂಡು ಅವನಿಗೆ ಬೇಕಾದ ಸಹಾಯವನ್ನು ಒದಗಿಸಿದನು.[4] ಇರುಂಗೋಳ ರಾಜನು ಸಾಳುವ ತಿಕ್ಕಮನ ಅಧೀನನಾಗಿ ಸಹಾಯಕ್ಕೆ ಸಿದ್ಧನಾದನು. [15] ಗುತ್ತವಂಶದ ಹರಿಪಾಲ ಮತ್ತು ಜೋಯಿದೇವ ಮತ್ತು ಮಹಾಮಂಡಳೇಶ್ವರ ಇಮ್ಮಡಿ ಬಲಹದೇವರಸ ಇವರೆಲ್ಲರೂ ತಿಕ್ಕಮನಿಗೆ ಸಹಾಯಕರಾಗಿ ನಿಂತರು. [6] ಇಷ್ಟೊಂದು ದೊಡ್ಡ ಸೈನ್ಯದೊಂದಿಗೆ ತಿಕ್ಕಮನು



ಮುಸ್ಲಿಮರ ದಾಳಿಗೆ ತುತ್ತಾಗುವ ಮುಂಚೆ ಇದ್ದ ಸೇವುಣ ಸಾಮ್ರಾಜ್ಯ

ಬೆಳವಾಡಿಗೆ ಹೋಗಿ ಕೋಟೆಗೆ ಮುತ್ತಿಗೆ ಹಾಕಿದನು.[7] ಬೆಳವಾಡಿಯು ಹೊಯ್ಸಳ ರಾಜಧಾನಿ ದ್ವಾರಸಮುದ್ರಕ್ಕೆ ಕೇವಲ ನಾಲ್ಕು ಮೈಲಿ ದೂರದಲ್ಲಿದ್ದುದರಿಂದ ಹೊಯ್ಸಳರಿಗೆ ಇದೊಂದು ದೊಡ್ಡ ಪ್ರಶ್ನೆಯಾಯಿತು. ಏನಾದರೂ ಮಾಡಿ ತಿಕ್ಕಮ ನನ್ನು ಸೋಲಿಸದೆ ಹೋದರೆ ಹೊಯ್ಸಳರು ನಿರ್ನಾಮರಾಗಿ ಹೋಗುವ ಸಂಭವ ವಿದ್ದಿತು. ಆದುದರಿಂದ ಚಿಕ್ಕಕೇತಯ್ಯ ನಾಯಕನ ಮುಂದಾಳತ್ವದಲ್ಲಿ ಹೊಯ್ಸಳ ಸೈನ್ಯವು ಅತ್ಯಂತ ಧೈರ್ಯದಿಂದ ಕಾದಾಡಿ ಸೇವುಣ ಸೈನ್ಯವನ್ನು ಸೋಲಿಸಿತು. ಹೊಯ್ಸಳ ಸೇನಾಧಿಪತಿ ಅಂಕದೇವನೂ ಸೇವುಣ ಸೈನ್ಯವನ್ನು ದುಮ್ಮೆಯವರೆಗೂ ಹೊಡೆದಟ್ಟಿದನು. ನಂಜಯ್ಯ ಮತ್ತು ಗುಲ್ಲಯ್ಯ ಎಂಬ ಸೈನಿಕರು ಸಾಳುವ ತಿಕ್ಕಮ ನನ್ನು ಗಾಯಗೊಳಿಸಿದರು. ತಿಕ್ಕಮನು ಓಡಿಹೋದನು. ಇವಿಷ್ಟೂ ಹೊಯ್ಸಳರ ಶಾಸನಗಳಿಂದ ತಿಳಿದು ಬರುವ ಮಾಹಿತಿ.[8] ಸೇವುಣರ ಶಾಸನಗಳ ಪ್ರಕಾರ ರಾಮಚಂದ್ರನಿಗೆ ಜಯವಾಯಿತೆಂದು ತೋರುತ್ತದೆ. ತಿಕ್ಕಮನು ದೋರಸಮುದ್ರ ದವರೆಗೂ ನುಗ್ಗಿ ನಗರವನ್ನು ಲೂಟಿ ಮಾಡಿದನು. ಹರಿಹರದಲ್ಲಿ ಈ ವಿಜಯದ ಜ್ಞಾಪಕಾರ್ಥವಾಗಿ ಲಕ್ಷ್ಮೀನಾರಾಯಣ ದೇವಾಲಯವನ್ನೂ ಸ್ಥಾಪಿಸಿದನು. [9] ಕ್ರಿ.ಶ. 1276ರ ಅನಂತರ ರಾಮಚಂದ್ರನ ಶಾಸನಗಳು ಮೊಟ್ಟ ಮೊದಲಬಾರಿಗೆ ಶಿವಮೊಗ್ಗ, ಚನ್ನಗಿರಿ, ಸಾಗರ, ತಾಳಗುಂದ ತಾಲ್ಲೂಕುಗಳಲ್ಲಿ ದೊರಕುತ್ತವೆ. ಸೊರಬ, ಹೊನ್ನಾಳಿ ಮತ್ತು ಶಿಕಾರಿಪುರ ತಾಲ್ಲೂಕುಗಳಲ್ಲಿ ರಾಮಚಂದ್ರನ ಶಾಸನಗಳು ಕಂಡು ಬರುತ್ತವೆ. ಅಂದರೆ ಈ ಯುದ್ಧವಾದ ಮೇಲೂ ಹೊಯ್ಸಳ ನಾಡಿನಲ್ಲಿ ರಾಮಚಂದ್ರನ ಆಳ್ವಿಕೆಯು ನಡೆಯುತ್ತಾ ಇದ್ದುದು ಗಮನಾರ್ಹವಾದ ಸಂಗತಿ. ಒಟ್ಟಿನಲ್ಲಿ ಹೇಳುವುದಾದರೆ, ಹೊಯ್ಸಳರಿಗೂ ಸೇವುಣರಿಗೂ ನಡೆದ ಯುದ್ಧದಲ್ಲಿ ಬಹುಶಃ ಸೇವುಣರದೇ ಮೇಲುಗೈಯಾಗಿರಬೇಕು.

ರಾಮಚಂದ್ರನು ಕಾಕತೀಯರೊಡನೆಯೂ ಯುದ್ಧಮಾಡಬೇಕಾಗಿ ಬಂದಿತು. ಕಾಯಸ್ಥ ಮುಖಂಡನಾದ ಅಂಬದೇವನು ಕಾಕತೀಯ ರಾಣಿ ರುದ್ರಮದೇವಿಗೆ ಶತ್ರುವಾಗಿದ್ದನು. ಬಹುಶಃ, ಅವನಿಗೆ ರಾಮಚಂದ್ರನು ಸಹಾಯಮಾಡಿರಬೇಕು. ಇದರಿಂದ ಕೋಪಗೊಂಡ ರುದ್ರಮದೇವಿಯು ತನ್ನ ಸೇನಾಧಿಪತಿಗಳಾದ ಗೋನ ವಿಠಲ, ಗಂಡ ಗೋಪಾಲ ಮತ್ತು ಪ್ರೋಲನಾಯಕ, ಇವರುಗಳ ನೇತೃತ್ವದಲ್ಲಿ ಸೇವುಣ ರಾಮಚಂದ್ರನ ಮೇಲೆ ಒಂದು ಸೈನ್ಯವನ್ನು ಕಳುಹಿಸಿದಳು. ಕಾಕತೀಯ ಸೈನ್ಯವು ರಾಯಚೂರಿನ ಹಾಲುವೆ ಮತ್ತು ಮಾನುವೆ ಕೋಟೆಗಳನ್ನು ತಮ್ಮ ವಶಮಾಡಿಕೊಂಡು ಸೇವುಣರನ್ನು ಸೋಲಿಸಿತು.[10] ಈ ಯುದ್ಧವು ಕ್ರಿ.ಶ. 1296ರಲ್ಲಿ ಆಗಿದ್ದರೂ, ಸೇವುಣರ ಆಳ್ವಿಕೆಗೆ ಈ ಪ್ರದೇಶಗಳು ಸೇರಿದ್ದವೆಂದು, ಅಲ್ಲಿ ದೊರಕಿರುವ ಶಾಸನಗಳಿಂದ ಗೊತ್ತಾಗುತ್ತದೆ.

ಈ ರೀತಿ ರಾಮಚಂದ್ರನು ಕಾಕತೀಯರ ಮೇಲಿನ ಯುದ್ಧದಲ್ಲಿ ನಿರತನಾಗಿ ದ್ದಾಗ, ದೇವಗಿರಿಗೆ ಒಂದು ದೊಡ್ಡ ವಿಪತ್ತು ಬಂದು ಒದಗಿತು. ಅಲ್ಲಾವುದ್ದೀನನು

ರಾಮಚಂದ್ರನ ಐಶ್ವರ್ಯದ ವಿಚಾರವನ್ನು ಕೇಳಿದ್ದನು. ಈ ಐಶ್ವರ್ಯದ ಆಸೆಯಿಂದ ದೆಹಲಿ ಸುಲ್ತಾನನ ಅನುಮತಿಯನ್ನು ಸಹ ಪಡೆಯದೆ, ಅಲ್ಲಾವುದ್ದೀನನು ದೇವಗಿರಿಗೆ ಮುತ್ತಿಗೆ ಹಾಕಲು ಯೋಚಿಸಿದನು. ಆ ಸಮಯದಲ್ಲಿ ರಾಮಚಂದ್ರನ ಸೈನ್ಯವು ಬೇರೆ ಎಲ್ಲಿಯೋ ಯುದ್ಧಕ್ಕೆ ಹೋಗಿರುವುದೆಂದು ತಿಳಿದು, ಅಲ್ಲಾವುದ್ದೀನನು ಸಂತೋಷಗೊಂಡು ರಬಿಯುಲೌ ಅಖಿರ್ 19, ಹಿಜಿರಾ 695, ಅಂದರೆ ಫೆಬ್ರುವರಿ 26, 1296, ಈ ದಿನ ದೇವಗಿರಿಯನ್ನು ತಲುಪಿದನು. [11] ದೇವಗಿರಿಗೆ ಹನ್ನೆರಡು ಮೈಲಿ ದೂರದಲ್ಲಿ, ರಾಮಚಂದ್ರನ ಸಾಮಂತನಾದ ಕರ್ಣನು ಅಲ್ಲಾವುದ್ದೀನನನ್ನು ಎದುರಿಸಿ ಸೋತನು. ಅನಂತರ ದೆಹಲಿಯ ಸೈನ್ಯವು ದೇವಗಿರಿ ಕೋಟೆಯನ್ನು ಸಮೀಪಿಸಿತು. ಇದನ್ನು ನೋಡಿದ ರಾಮಚಂದ್ರನು ಆಶ್ಚರ್ಯ ಮತ್ತು ಅಸಹಾಯಕತೆಯಿಂದ ಕೋಟೆಯ ಒಳಗೆ ಸೇರಿಕೊಂಡನು. ಮುಸ್ಲಿಮರು ಕೋಟೆಯನ್ನು ಲೂಟಿ ಮಾಡಿದರು. ಫಿರಿಷ್ಟನ ಬರವಣಿಗೆಯ ಪ್ರಕಾರ, ರಾಮಚಂದ್ರನು ಯುದ್ಧ ಮಾಡಿ ಸೋತು ಕೋಟೆಗೆ ಹಿಂದಿರುಗಿದನೆಂದು ಗೊತ್ತಾಗುತ್ತದೆ. ರಾಮಚಂದ್ರನು ಕೋಟೆಯೊಳಗೆ ಬಹುಕಾಲ ಇರಲು ಸಾಧ್ಯವಾಗಲಿಲ್ಲ. ಏಕೆಂದರೆ ಒಳಗಿದ್ದ ಆಹಾರ ಪದಾರ್ಥಗಳು ಮುಗಿಯುತ್ತ ಬಂದಿದ್ದವು. ಈ ಮಧ್ಯದಲ್ಲಿ ಅಲ್ಲಾವುದ್ದೀನನು ಒಂದು ಸುಳ್ಳು ವರ್ತಮಾನವನ್ನು ಹಬ್ಬಿಸಿದನು. ಅದೇನೆಂದರೆ, ತನ್ನ ಸೈನ್ಯವು ಕೇವಲ ಒಂದು ತುಕಡಿಯೆಂದೂ, ಇಪ್ಪತ್ತು ಸಾವಿರದ ಸೈನ್ಯವು ಹಿಂದೆ ಬರುತ್ತಿದೆಯೆಂದೂ ಸುದ್ದಿಯನ್ನು ಹಬ್ಬಿಸಿದನು. ಇದನ್ನು ಕೇಳಿದ ರಾಮಚಂದ್ರನು ಮುಸ್ಲಿಮರ ಸೈನ್ಯವು ಬಹು ದೊಡ್ಡದಾಗಿರುವುದರಿಂದ ಅದನ್ನು ಎದುರಿಸಿ ಪ್ರಯೋಜನವಿಲ್ಲವೆಂದುಕೊಂಡು, ಅಲ್ಲಾವುದ್ದೀನನೊಡನೆ ಸಂಧಿಯನ್ನು ಪ್ರಾರಂಭಿಸಿದನು. ಫಿರಿಷ್ಟನ ಪ್ರಕಾರ, ರಾಮಚಂದ್ರನು ಅಲ್ಲಾವುದ್ದೀನನಿಗೆ ಪತ್ರವೊಂದನ್ನು ಬರೆದನು : 'ನೀನು ನಿನ್ನ ದಂಡಯಾತ್ರೆಯಿಂದ ಹಿಂದಿರುಗುವಾಗ ದಕ್ಷಿಣಾಪಥದ ರಾಜರುಗಳು ನಿನ್ನನ್ನು ಸುಮ್ಮನೆ ಬಿಟ್ಟಾರೆಯೆ? ಪ್ರತಿಯೊಬ್ಬರ ಹತ್ತಿರವೂ ನಲವತ್ತು ಸಾವಿರಕ್ಕೂ ಹೆಚ್ಚು ಸೈನ್ಯವಿದೆಯೆನ್ನುವುದನ್ನು ನೀನು ಬಲ್ಲೆಯಾ? ಆದುದರಿಂದ ನೀನು ಆಗಲೇ ಲೂಟಿ ಹೊಡೆದು ಸಂಪಾದಿಸಿದ ಐಶ್ವರ್ಯದ ಜೊತೆಗೆ ನಾನು ಕೊಡುವಷ್ಟು ಹಣವನ್ನು ತೆಗೆದುಕೊಂಡು ಹಿಂದಿರುಗು.' ಇದನ್ನು ಓದಿದ ಅಲ್ಲಾವುದ್ದೀನನು ಹಿಂದಿರುಗಲು ಒಪ್ಪಿಕೊಂಡನು. [12]

ಅನಂತರ ಏನಾಯಿತು ಎಂಬ ವಿಚಾರದಲ್ಲಿ ಮುಸ್ಲಿಂ ಚರಿತ್ರಕಾರರಲ್ಲಿ ಒಮ್ಮತವಿಲ್ಲ. ಇಸಾಮಿಯ ಪ್ರಕಾರ, ರಾಮಚಂದ್ರನ ಮಗನಾದ ಸಿಂಘಣನು ರಾಜಧಾನಿಗೆ ಬಂದು ಅಲ್ಲಾವುದ್ದೀನನಿಗೆ ಶರಣಾಗತನಾದನು. ಏಕೆಂದರೆ, ತಾನು ರಾಮಚಂದ್ರನನ್ನು ಮೊದಲು ಕೊಂದು ಅನಂತರ ಸಿಂಘಣನ ಮೇಲೆ ಯುದ್ಧ ಮಾಡುವುದಾಗಿ ಅಲ್ಲಾವುದ್ದೀನನು, ಸಿಂಘಣನನ್ನು ಹೆದರಿಸಿದ್ದನು. ಅದರಿಂದ ಹೆದರಿದ ಸಿಂಘಣನು ಶರಣಾಗತನಾದನು. ರಾಮಚಂದ್ರನಿಗೂ, ಅಲ್ಲಾವುದ್ದೀನ

ನಿಗೂ ಮೈತ್ರಿ ಏರ್ಪಟ್ಟಿತ್ತು.[13] ಆದರೆ ಫಿರಿಷ್ಟನು, ಸಮಕಾಲೀನ ಮಾಹಿತಿಗಳಾದ 'ಮೂಲಿಖಾತ್' ಮತ್ತು 'ತಬಾಕಾ -ಇ- ನಾಸಿರೀತ್' ಗ್ರಂಥಗಳ ಆಧಾರದ ಮೇಲೆ, ಇನ್ನೊಂದು ವಿಧವಾದ ಮಾಹಿತಿಯನ್ನು ಒದಗಿಸುತ್ತಾನೆ. ಸಿಂಘಣನು ರಾಜಧಾನಿಗೆ ಹಿಂದಿರುಗಿ ತನ್ನ ತಂದೆಯ ಮಾತನ್ನು ನಿರಾಕರಿಸಿ ಅಲ್ಲಾವುದ್ದೀನನಿಗೆ ಈ ರೀತಿ ಕಾಗದವನ್ನು ಬರೆದನು : 'ನಿನಗೆ ಪ್ರಾಣದ ಮೇಲೆ ಆಸೆಯಿದ್ದರೆ, ನೀನು ಲೂಟಿ ಮಾಡಿರುವುದೆಲ್ಲವನ್ನು ಹಿಂದಿರುಗಿಸಿ, ತಪ್ಪಿಸಿಕೊಂಡು ಓಡಿಹೋಗುವುದು ನಿನ್ನ ಅದೃಷ್ಟವೆಂದು ಭಾವಿಸು'.

ಕೋಪಗೊಂಡ ಅಲ್ಲಾವುದ್ದೀನನು ಸಿಂಘಣನ ಮೇಲೆ ಯುದ್ಧ ಮಾಡಿದನು. ರಾಮಚಂದ್ರನ ಸೈನ್ಯವು ಕೋಟೆಯಲ್ಲಿ ಬಹುಕಾಲ ಇರಲಾರದೆ, ಕೊನೆಗೆ ಅವನು ಸಂಧಿ ಪ್ರಯತ್ನವನ್ನು ಮಾಡಿದನು. ಈಗ ಅಲ್ಲಾವುದ್ದೀನನು ಸಂಧಿಗೆ ಕೆಲವು ಷರತ್ತುಗಳನ್ನು ವಿಧಿಸಿದನು. ಅದರ ಪ್ರಕಾರ 600 ಮಣ ಮುತ್ತುಗಳು, 1 ಮಣ ವಜ್ರಗಳು, ಒಂದು ಸಾವಿರ ಮಣ ಬೆಳ್ಳಿ, ನಾಲ್ಕು ಸಾವಿರ ರೇಷ್ಮೆ ಬಟ್ಟೆ ಮತ್ತು ಎಲಿಚ್‌ಪುರ ಪ್ರಾಂತ್ಯದ ವಾರ್ಷಿಕ ಆದಾಯ, ಇವೆಲ್ಲವೂ ಅಲ್ಲಾವುದ್ದೀನನು ತನಗೆ ಸಲ್ಲತಕ್ಕದ್ದೆಂದು ವಿಧಿಸಿದನು. ಇದೆಲ್ಲವನ್ನೂ ತೆಗೆದುಕೊಂಡು ಅಲ್ಲಾವುದ್ದೀನನು ದೇವಗಿರಿಯಿಂದ ಹೊರಟು ಹೋದನು. ರಾಮಚಂದ್ರನು ಅಲ್ಲಾವುದ್ದೀನನ ಅಧೀನನಾದನು.[14] ಈ ಎರಡು ವಿರೋಧಾತ್ಮಕ ಮಾಹಿತಿಗಳಲ್ಲಿ ನಿಜವಾದುದು ಯಾವುದು ಎಂಬುದನ್ನು ಹೇಳಲು ಸಾಧ್ಯವಿಲ್ಲ.

ಇಷ್ಟಾದರೂ ರಾಮಚಂದ್ರನು ನೀತಿಯನ್ನು ಕಲಿತುಕೊಂಡಿರಲಿಲ್ಲ. ಮುಸ್ಲಿಮರನ್ನು ಸೋಲಿಸಲು ತನ್ನ ಸೈನ್ಯವನ್ನು ಬಲಪಡಿಸುವುದನ್ನು ಬಿಟ್ಟು, ಹೊಯ್ಸಳರ ಮೇಲೆ ದ್ವೇಷವನ್ನು ತೀರಿಸಿಕೊಳ್ಳಲು ನಿಂತನು. ಕ್ರಿ.ಶ. 1303ರಲ್ಲಿ ಸೇವುಣ ಸೈನ್ಯವು ಹೊಯ್ಸಳ ನಾಡಿಗೆ ಯುದ್ಧಕ್ಕಾಗಿ ಹೊರಟಿತು.[15] ಸೇವುಣರಿಗೂ ಹೊಯ್ಸಳರಿಗೂ ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ಎಂಬಲ್ಲಿ ಯುದ್ಧವಾಯಿತು. ಹೊಯ್ಸಳ ಮೂರನೆಯ ಬಲ್ಲಾಳನು ಈ ಯುದ್ಧದಲ್ಲಿ ಪಾಲ್ಗೊಂಡಿದ್ದನು. ಅವನ ಶಾಸನದಲ್ಲಿ ಹೊಯ್ಸಳರು ನಾಕ್ಕಿಗುಂಡಿ ಕೋಟೆಯನ್ನು ತಮ್ಮ ವಶಮಾಡಿಕೊಂಡು ಸೇವುಣರನ್ನು ಸೋಲಿಸಿದರೆಂದು ಹೇಳಿದೆ.[16] ಆದರೆ ಸೇವುಣರ ಶಾಸನಗಳಲ್ಲಿ ತಮಗೆ ಜಯವಾಯಿತೆಂದು ಉಲ್ಲೇಖಿತವಾಗಿದೆ.[17] ಇದೇ ಈ ಎರಡು ರಾಜಮನೆ ತನಗಳಿಗೂ ನಡೆದ ಕೊನೆಯ ಯುದ್ಧ. ಈ ಯುದ್ಧದಲ್ಲಿಯೂ ಸೇವುಣರು ಜಯಶೀಲರಾಗಲಿಲ್ಲ.

ಸ್ವಲ್ಪ ಕಾಲದವರೆಗೆ ರಾಮಚಂದ್ರನು ಅಲ್ಲಾವುದ್ದೀನನಿಗೆ ವಿಧೇಯನಾಗಿ ನಡೆದುಕೊಂಡನು. ಸುಮಾರು ಕ್ರಿ.ಶ. 1306ರ ವೇಳೆಗೆ ತಾನು ಕಳುಹಿಸಬೇಕಾಗಿದ್ದ ವಾರ್ಷಿಕ ಕಾಣಿಕೆಯನ್ನು ನಿಲ್ಲಿಸಿದನು.[18] ಇದು ಅಮೀರ್ ಖುಸ್ರುವಿನ ಅಭಿಪ್ರಾಯ. ಇಸಾಮಿಯ ಬರವಣಿಗೆಯಂತೆ, ರಾಮಚಂದ್ರನ ಮಗನಾದ ಸಿಂಘಣನು ತನ್ನ

ತಂದೆಯ ಕಾಣಿಕೆಯನ್ನು ಸುಲ್ತಾನನಿಗೆ ಕಳುಹಿಸಿಕೊಡುವುದನ್ನು ತಡೆಹಿಡಿದನೆಂದೂ, ಕೂಡಲೆ ರಾಮಚಂದ್ರನು ಸುಲ್ತಾನನಿಗೆ ಈ ವಿಚಾರವನ್ನು ತಿಳಿಸಿ, ತನ್ನ ಮಗನ ಮೇಲೆ ಸುಲ್ತಾನನು ಯಾವ ರೀತಿಯ ಕ್ರಮವನ್ನಾದರೂ ಕೈಗೊಳ್ಳಬಹುದೆಂದೂ ಸೂಚಿಸಿದನೆಂದು ಗೊತ್ತಾಗುತ್ತದೆ. [19] ಕೂಡಲೇ, ಅಲ್ಲಾವುದ್ದೀನನು ಮಲ್ಲಿಕ್ ಕಾಫೂರನನ್ನು ದೇವಗಿರಿಗೆ ಕಳುಹಿಸಿದನು. ಆಲ್ಫ್‌ಖಾನನ ಸಹಾಯದಿಂದ ಮಲ್ಲಿಕ್ ಕಾಫೂರನು ಹಿಂದೂ ಸೈನ್ಯವನ್ನು ಸೋಲಿಸಿದನು. ರಾಮಚಂದ್ರನು ಶರಣಾಗತ ನಾದನು. ಅವನ ಮಕ್ಕಳು ಓಡಿ ಹೋದರು. ಈ ಯುದ್ಧವು ಹಿಜಿರಾ 706, ರಂಜಾನ್ 19ನೆಯ ದಿನ ಅಂದರೆ 24, ಮಾರ್ಚಿ 1307ರಂದು ನಡೆಯಿತು. [20] ರಾಮಚಂದ್ರನು ಖೈದಿಯಂತೆ ದೆಹಲಿಗೆ ಒಯ್ಯಲ್ಪಟ್ಟನು. ಅಲ್ಲಾವುದ್ದೀನನು ರಾಮ ಚಂದ್ರನನ್ನು ಬಹು ಮರ್ಯಾದೆಯಿಂದೆ ಬರಮಾಡಿಕೊಂಡು, ತನ್ನ ಅತಿಥಿಯಾಗಿ ಆರು ತಿಂಗಳು ದೆಹಲಿಯಲ್ಲಿ ಇರಿಸಿಕೊಂಡಿದ್ದನು. ನೌಸಾರಿ ಜಿಲ್ಲೆಯನ್ನೂ ಮತ್ತು ತನ್ನ ಪ್ರಯಾಣದ ಖರ್ಚಿಗಾಗಿ ಒಂದು ಸಾವಿರ ಚಿನ್ನದ ಟಂಕೆಗಳನ್ನೂ ರಾಮ ಚಂದ್ರನು ಸುಲ್ತಾನನಿಂದ ಪಡೆದನು. [21] ರಾಮಚಂದ್ರನನ್ನು ಸ್ನೇಹಿತನನ್ನಾಗಿ ಮಾಡಿ ಕೊಂಡು ದಕ್ಷಿಣದ ರಾಜ್ಯಗಳನ್ನು ತನ್ನ ವಶಮಾಡಿಕೊಳ್ಳಲು ಅಲ್ಲಾವುದ್ದೀನನು ಯೋಚಿಸಿರಬೇಕು.

ಈ ರೀತಿ ರಾಮಚಂದ್ರನು ದೇವಗಿರಿಯನ್ನು ಬಿಟ್ಟು ದೆಹಲಿಗೆ ಹೋದುದನ್ನು ಗಮನಿಸಿದ ಕೆಲವು ರಾಜರು ಸೇವುಣ ರಾಜ್ಯದಿಂದ ಸ್ವತಂತ್ರರಾದರು. ರಾಮಚಂದ್ರನ ಸೇನಾಧಿಪತಿಗಳು ವೈರಘುಡ, ಭಾಂಡಗಾರ, ಮಾಹಿಮ್, ಸಂಗಮೇಶ್ವರ್ ಮತ್ತು ಖೇಟ ರಾಜ್ಯಗಳನ್ನು ತಮ್ಮ ಅರಸನ ಪರವಾಗಿ ವಶಕ್ಕೆ ತೆಗೆದುಕೊಂಡರು.[22]

ಕ್ರಿ.ಶ. 1309ರಲ್ಲಿ ಅಲ್ಲಾವುದ್ದೀನ್ ಸೈನ್ಯವು ಓರಂಗಲ್ಲಿಗೆ ಹೋಗುವ ಮಾರ್ಗದಲ್ಲಿ ದೇವಗಿರಿಯಲ್ಲಿ ತಂಗಿತು. ರಾಮಚಂದ್ರನು ಈ ಸೈನ್ಯಕ್ಕೆ ಸ್ವಾಗತವನ್ನು ಬಯಸಿ, ತಕ್ಕ ಅನುಕೂಲತೆಗಳನ್ನು ಮಾಡಿಕೊಟ್ಟನು. [23] ಇದೇ ರೀತಿ ತನ್ನ ಮರಣ ಪರ್ಯಂತ ರಾಮಚಂದ್ರನು ಅಲ್ಲಾವುದ್ದೀನನಿಗೆ ವಿಧೇಯನಾಗಿದ್ದನು.

ರಾಮಚಂದ್ರನು ವಿಶಾಲವಾದ ರಾಜ್ಯಕ್ಕೆ ಒಡೆಯನಾಗಿದ್ದನು. ಇವನು ಮರಾಠಿ ಸಾಹಿತ್ಯಕ್ಕೆ ವಿಶೇಷ ಪ್ರೋತ್ಸಾಹಕೊಟ್ಟನು. ಮಹಾನುಭಾವ ಪಂಥದ ಅನೇಕ ಗ್ರಂಥಗಳು ಇವನ ಕಾಲದಲ್ಲಿ ರಚಿತವಾದವು. ಇವನೇ ಸೇವುಣ ವಂಶದ ಕೊನೆಯ ಸಮರ್ಥ ದೊರೆ. ಮುಸ್ಲಿಮರನ್ನು ಸೋಲಿಸಲು ತಕ್ಕ ಏರ್ಪಾಡುಗಳನ್ನು ಮಾಡಿ ಕೊಳ್ಳದೆ, ನೆರೆಹೊರೆಯ ಅರಸರೊಡನೆ ಇವನು ಹಗೆತನ ಬೆಳೆಸಿಕೊಂಡು ಬಂದನು. ಇದರಿಂದ ದಕ್ಷಿಣಾಪಥವೇ ದೆಹಲಿಯ ಸುಲ್ತಾನರ ವಶವಾಯಿತು.

ರಾಮಚಂದ್ರನಿಗೆ ಸಿಂಘಣ, ಭಿಲ್ಲಮ, ಪ್ರತಾಪಶ ಮತ್ತು ಬಿಂಬ ಎಂಬ ನಾಲ್ಕು ಮಕ್ಕಳಿದ್ದರು. ಮೊದಲನೆಯ ಇಬ್ಬರು ದೇವಗಿರಿಯಲ್ಲಿದ್ದರು. ಬಿಂಬನು ಉದಯಪುರದಲ್ಲಿಯೂ, ಮತ್ತು ಪ್ರತಾಪಶನು ಅಲಂದಪುರದಲ್ಲಿಯೂ

ರಾಜ್ಯಪಾಲರಾಗಿ ಆಳುತ್ತಿದ್ದರು. ರಾಮಚಂದ್ರನು ಕ್ರಿ.ಶ.1312ರಲ್ಲಿ ಮರಣ ಹೊಂದಲು ಅವನ ಮಗ ಸಿಂಘಣನು ರಾಜನಾದನು.

## ಟಿಪ್ಪಣಿಗಳು

1 EI. Vo. XIII, P. 198

2 Rice : Mysore Inscriptions, No. 26

3 EC. Vol. VIII ಸಾಗರ 69-70

4 ಅದೇ, Vol. V. Cn 269

5 ಅದೇ, ಬೇಲೂರು 176

6 ಅದೇ, Vol. VIII, Nr 9

7 ಅದೇ, Vol. XI ದಾವಣಗೆರೆ 59

8 ಅದೇ, Vol. V ಬೇಲೂರು 164-65

9 ಅದೇ, Vol. XI ದಾವಣಗೆರೆ 59

10 ಕಾಕತೀಯ ಸಂಚಿಕೆ (ತೆಲುಗು) : ಪು. 84

11 ಫಿರಷ್ಟನ ಬರವಣಿಗೆಯ ಪ್ರಕಾರ ಕ್ರಿ.ಶ. 1294ರಲ್ಲಿ ಅಲ್ಲಾವುದ್ದೀನನು ದೇವಗಿರಿಯನ್ನು ತಲುಪಿದನೆಂದು ಗೊತ್ತಾಗುತ್ತದೆ. ಇದನ್ನೇ ಫ್ಲೀಟ್, ಭಂಡಾರಕರ್ ಮತ್ತು ಆಲ್ಟೇಕರ್‌ರವರು ಅನುಮೋದಿಸಿದ್ದಾರೆ. ಆದರೆ ಸಮಕಾಲೀನ ಲೇಖಕನಾದ ಅಮೀರ್ ಖುಸ್ರುವು ಆ ದಿನದ ವಿವರಗಳನ್ನು ಒದಗಿಸಿದ್ದಾನೆ. ಇದೇ ಸರಿಯಾದುದೆಂದು ಹೇಳಬಹುದು.

12 ಫಿರಿಷ್ಟ ನಂ. 2 ಪು. 308

13 Elliott : Vol. III, P. 40

14 ಫಿರಿಷ್ಟ. ಸಂ. 2ಪು. 307

15 EC. Vol. VIII. ಸಾಗರ 156

16 ಅದೇ, Vol IX, Bn 53

17 ಅದೇ, Vol. XI, Jl 30

18 Elliott, Vol. III, P. 200

19 Isami, P. 274

20 ಖಜಾಇನ್ - ಉಲ್ - ಪುತುಹ್, (Journal of Indian History, Vol. VIII, P. 374)

21 ಫಿರಿಷ್ಟ, ಸಂ. 2 ಪು. 369

22 EI. Vol. XXXV. P. 50

23 ಫಿರಿಷ್ಟ, ಸಂ. 2, ಪು. 373

24 ಖಜಾಇನ್ - ಉಲ್ - ಪುತುಹ್, (Journal of Indian History, Vol. IX, P. 53-54)

* * *

—

## ಅಧ್ಯಾಯ ೧೧

# ಸೇವುಣರ ಅವನತಿ

ರಾಮಚಂದ್ರನ ಜ್ಯೇಷ್ಠ ಪುತ್ರನಾದ ಸಿಂಘಣನು ತನ್ನ ತಂದೆಯ ಮರಣಾನಂತರ ರಾಜನಾದನು. ಇವನ ಹೆಸರನ್ನು ಸಂಗಮ ಮತ್ತು ಶಂಕರ ಎಂದು ಕೆಲವರು ಹೇಳುತ್ತಾರೆ.[1] ಆದರೆ ಸಮಕಾಲೀನ ಅಮೀರ್ ಖುಸ್ರುವು 'ಸಿಂಖನ್' ಎಂದು ಬರೆದಿದ್ದಾನೆ. ಮತ್ತೊಬ್ಬ ಮಗನಿಗೆ ಭಿಲ್ಲಮ ಎಂಬ ಹೆಸರಿದ್ದುದರಿಂದ, ಮೊದಲನೆಯ ಮಗನಿಗೆ ಸಿಂಘಣ ಎಂಬ ಹೆಸರಿದ್ದಿರಬೇಕು. ಪರಶುರಾಮವ್ಯಾಸನ 'ನಾಗದೇವಾಚಾರ್ಯ ಚರಿತ' ಎಂಬ ಗ್ರಂಥದಲ್ಲಿ ಜ್ಯೇಷ್ಠ ಪುತ್ರನ ಹೆಸರು ಸಿಂಘಣ ಎಂದಿದೆ.[2] ಆದುದರಿಂದ ಇವನ ಹೆಸರು ಸಿಂಘಣ ಎಂಬುದೇ ಹೊರತು, ಸಂಗಮ ಮತ್ತು ಶಂಕರ ಎಂದಲ್ಲವೆಂದು ಖಚಿತವಾಗಿ ಹೇಳಬಹುದು.

ಸಿಂಘಣನು ಕ್ರಿ.ಶ. 1296ರಿಂದಲೇ ಯುವರಾಜನಾಗಿ ತನ್ನ ತಂದೆಯೊಡನೆ ರಾಜ್ಯಭಾರದಲ್ಲಿ ಸಹಕರಿಸುತ್ತಿದ್ದನು. ಸಮಕಾಲೀನ ಚರಿತ್ರಕಾರ ಅಮೀರ್ ಖುಸ್ರುವು ಸಿಂಘಣನಿಗೂ ದೇವಲದೇವಿಗೂ ಇದ್ದ ಪ್ರೇಮದ ವಿಚಾರವಾಗಿ ಒಂದು ಕಾವ್ಯವನ್ನೇ ಬರೆದಿದ್ದಾನೆ.[3] ಇದು ಎಷ್ಟರಮಟ್ಟಿಗೆ ಚರಿತ್ರಾರ್ಹವೆಂಬುದು ಸಮಸ್ಯೆಯಾಗಿಯೇ ಉಳಿದಿದೆ. ಈ ಕಾವ್ಯದ ಪ್ರಕಾರ, ವಾಘೇಲ ರಾಜ ಕರ್ಣನ ಮಗಳಾದ ದೇವಲ ದೇವಿಯನ್ನು ಸಿಂಘಣನು ಪ್ರೇಮಿಸಿದಳು. ಆದರೆ ಕರ್ಣನು, ತನ್ನ ಮಗಳಾದ ದೇವಲರಾಣಿಯನ್ನು ಸಿಂಘಣನಿಗೆ ಕೊಡಲು ಒಪ್ಪಲಿಲ್ಲ; ಏಕೆಂದರೆ ಸಿಂಘಣನು ಕ್ಷತ್ರಿಯ ವಂಶಜನಾಗಿರಲಿಲ್ಲ. ಹೀಗಿರುವಾಗ ಅಲ್ಲಾವುದ್ದೀನನು ಕರ್ಣನನ್ನು ಸೋಲಿಸಿ, ಅವನ ಪತ್ನಿಯಾದ ಕಮಲಾದೇವಿಯನ್ನು ತನ್ನ ಅಂತಃಪುರಕ್ಕೆ ಕೊಂಡೊಯ್ದನು. ಆಕೆಯು ತನ್ನ ಮಗಳಾದ ದೇವಲದೇವಿಯೂ ತನ್ನ ಸಂಗಡ ವಿರಬೇಕೆಂಬ ಆಶಯವನ್ನು ವ್ಯಕ್ತಪಡಿಸಿದನು. ಕೂಡಲೆ ಸುಲ್ತಾನನು ಸೈನ್ಯವನ್ನು ಗುಜರಾತಿಗೆ ಕಳುಹಿಸಿ, ದೇವಲದೇವಿಯನ್ನು ಕರೆತರಲು ಅಪ್ಪಣೆ ಮಾಡಿ ದನು. ಈ ಪೇಚಿಗೆ ಸಿಕ್ಕಿದ ಕರ್ಣನು, ತನ್ನ ಮಗಳನ್ನು ಅಲ್ಲಾವುದ್ದೀನನಿಗೆ ಒಪ್ಪಿಸುವುದಕ್ಕಿಂತ, ಸಿಂಘಣನಿಗೆ ಮದುವೆಮಾಡಿ ಕೊಡುವುದೇ ಲೇಸೆಂದು, ಆಕೆಯನ್ನು ದೇವಗಿರಿಗೆ ಕಳುಹಿಸಿಕೊಟ್ಟನು. ಆದರೆ ಮಾರ್ಗಮಧ್ಯದಲ್ಲಿ ಆಕೆಯು ಸುಲ್ತಾನನ ಸೈನಿಕರ ವಶವಾದಳು. ಅವರು ಆಕೆಯನ್ನು ದೆಹಲಿಗೆ ಕಳುಹಿಸಿಕೊಟ್ಟರು. ಬಹುಶಃ

ಇದರಿಂದ ಸಿಂಘಣನಿಗೆ ಕೋಪಬಂದು, ಅಲ್ಲಾವುದ್ದೀನನ ಮೇಲೆ ದ್ವೇಷ ಸಾಧಿಸಿರಬೇಕು.

ಸಿಂಘಣನು ಅಲ್ಲಾವುದ್ದೀನನ ಸೈನ್ಯವನ್ನು ಎದುರಿಸಿ ಪರಾಜಿತನಾದುದನ್ನು ಆಗಲೇ ಗಮನಿಸಿದ್ದೇವೆ. ಇದಾದ ಅನಂತರ ಅವನು ಅಲ್ಲಲ್ಲಿ ದಂಗೆಗಳನ್ನು ನಡೆಸುವುದರಲ್ಲಿ ನಿರತನಾಗಿದ್ದನು. ಅಷ್ಟೇ ಅಲ್ಲದೆ ಅಲ್ಲಾವುದ್ದೀನನಿಗೆ ಕೊಡಬೇಕಾಗಿದ್ದ ಕಪ್ಪಕಾಣಿಕೆಗಳನ್ನೂ ನಿಲ್ಲಿಸಿದನು. ಇವನನ್ನು ಹತೋಟಿಗೆ ತರಲು ಸುಲ್ತಾನನು ಮಲ್ಲಿಕ್ ಕಾಫೂರನನ್ನು ದೇವಗಿರಿಗೆ ಕಳುಹಿಸಿದನು. ಫಿರಿಷ್ಟನ ಪ್ರಕಾರ ಎರಡು ಸೈನ್ಯಗಳಿಗೂ ಘೋರ ಯುದ್ಧವಾಯಿತು. ಸೋತ ಸಿಂಘಣನನ್ನು ಮಲ್ಲಿಕ್ ಕಾಫೂರನು ಅಮಾನುಷ ರೀತಿಯಲ್ಲಿ ಕೊಲ್ಲಿಸಿದನು.[4] ದೇವಗಿರಿಯು ಮಹಮ್ಮದೀಯರ ವಶವಾಯಿತು. ಇಷ್ಟರಲ್ಲಿಯೇ ಅಲ್ಲಾವುದ್ದೀನನು ಅಸ್ವಸ್ಥನಾಗಿರುವನೆಂಬ ವಾರ್ತೆಯನ್ನು ಕೇಳಿದ ಮಲ್ಲಿಕ್ ಕಾಫೂರನು ಕ್ರಿ.ಶ. 1315ರಲ್ಲಿ ದೇವಗಿರಿಯನ್ನು ಐನ್ ಉಲ್ ಮುಲ್ಕ್‌ನಿಗೆ ವಹಿಸಿ, ತಾನು ದೆಹಲಿಗೆ ಹಿಂದಿರುಗಿದನು. ಅಲ್ಲಾವುದ್ದೀನನು ಕ್ರಿ.ಶ.1316ರಲ್ಲಿ ಮರಣ ಹೊಂದಲು, ಅನೇಕ ಹಿಂದೂ ರಾಜರು ಸ್ವತಂತ್ರರಾದರು. ಮಲ್ಲಿಕ್ ಕಾಫೂರನು ಐನ್ ಉಲ್ ಮುಲ್ಕನನ್ನು ದೇವಗಿರಿಯಿಂದ ವಾಪಸ್ಸು ಕರೆಸಿಕೊಂಡನು. ದೇವಗಿರಿಯಲ್ಲಿ ಮುಸ್ಲಿಂ ರಾಜ್ಯಪಾಲರು ಯಾರೂ ಇಲ್ಲದಿರುವುದನ್ನು ಗಮನಿಸಿದ, ರಾಮಚಂದ್ರನ ಅಳಿಯನಾದ ಹರಪಾಲದೇವನು, ತನ್ನ ಮಂತ್ರಿ ರಾಘವನ ಸಹಾಯದಿಂದ ಸ್ವತಂತ್ರನಾಗಿ ದೇವಗಿರಿಯನ್ನು ತನ್ನ ವಶ ಮಾಡಿಕೊಂಡನು. ಇದನ್ನು ನೋಡಿದ ಖುಸ್ರುಖಾನನು ಕೂಡಲೇ ದೇವಗಿರಿಗೆ ಬಂದು ರಾಘವನನ್ನು ಸೋಲಿಸಿದನು. ಹರಪಾಲದೇವನು ಓಡಿಹೋದನು. ಖುಸ್ರುಖಾನನು ಯುದ್ಧದಿಂದ ಹಿಂದಿರುಗುತ್ತಿದ್ದಾಗ, ಹರಪಾಲನು ಬೆಟ್ಟಗುಡ್ಡಗಳಲ್ಲಿ ಅಡಗಿಕೊಂಡು ದೊಡ್ಡ ಸೈನ್ಯವನ್ನು ಕಟ್ಟುತ್ತಿದ್ದಾನೆಂಬ ಸುದ್ದಿಯು ಬಂದಿತು. ಕೂಡಲೆ ಖುಸ್ರುಖಾನನು ಅವನನ್ನು ಹಿಂಬಾಲಿಸಿಕೊಂಡು ಹೋದನು. ಇಬ್ಬರಿಗೂ ಯುದ್ಧವಾಯಿತು. ಯುದ್ಧದಲ್ಲಿ ಹರಪಾಲನು ಗಾಯಗೊಂಡನು. ಮುಸ್ಲಿಂ ಸೈನಿಕರು ಅವನನ್ನು ಖುಸ್ರುಖಾನನಿಗೆ ತಂದೊಪ್ಪಿಸಿದರು. ಫಿರಿಷ್ಟನ ಪ್ರಕಾರ ಖುಸ್ರುಖಾನನು ಅವನನ್ನು ಜೀವಸಹಿತ ಸುಟ್ಟು, ಅವನ ತಲೆಬುರುಡೆಯನ್ನು ದೇವಗಿರಿಯ ಕೋಟೆಯ ಮೇಲೆ ನೇತುಹಾಕಿಸಿದನು.[5] ಈ ಘಟನೆ ಕ್ರಿ.ಶ. 1318ರಲ್ಲಿ ನಡೆಯಿತು. ಮಲ್ಲಿಕ್ ಯಾಖ್‌ಲಾಖಿ ಎಂಬುವನು ದೇವಗಿರಿಯ ರಾಜ್ಯಪಾಲನಾಗಿ ನಿಯಮಿಸಲ್ಪಟ್ಟನು.

ಇತ್ತೀಚೆಗೆ ದೊರೆತಿರುವ ಶಾಸನವೊಂದರಲ್ಲಿ ಸೇವುಣ ವಂಶದ ಮೇಲುಗಿದೇವ ಎಂಬುವನ ವಿಷಯವಿದೆ. ಇವನು ಸಿಂಘಣನ ಪುತ್ರನಾಗಿದ್ದನೆಂದೂ, ಮಹಮೂದನ ಅಧೀನದಲ್ಲಿ ಆಳುತ್ತಿದ್ದನೆಂದೂ ಶಾಸನದಲ್ಲಿ ಹೇಳಿದೆ. [6] ಈ ಶಾಸನವು ಕ್ರಿ.ಶ. 1333-34ರ ವರ್ಷಕ್ಕೆ ಸೇರಬಹುದೆಂದು ಹೇಳಲಾಗಿದೆ. ಆ

ಕಾಲದಲ್ಲಿ ಮಹಮದ್ ಬಿನ್ ತುಗಲಕ್ಕನು ದೆಹಲಿಯ ಸುಲ್ತಾನನಾಗಿದ್ದನು. ಶಾಸನದಲ್ಲಿ ಹೇಳಿರುವ ಮಹಮೂದನು ಅದೇ ಸುಲ್ತಾನನಾಗಿರಬೇಕು. ಹಾಗಾದಲ್ಲಿ ಕ್ರಿ.ಶ. 1318ರಲ್ಲಿ ಹರಪಾಲನು ಮರಣಹೊಂದಿದ ನಂತರ, ಮೇಲುಗಿ ದೇವನು ಮುಸ್ಲಿಮರ ಅಧೀನದಲ್ಲಿ ಆಳುತ್ತಿದ್ದನೆಂದು ಹೇಳಬಹುದು. ಅನಂತರ ಸೇವುಣರ ರಾಜರ ವಿಚಾರ ತಿಳಿದುಬರುವುದಿಲ್ಲ. ಬಹುಶಃ ದೇವಗಿರಿಯ ಪತನದೊಂದಿಗೆ ಈ ರಾಜವಂಶವು ನಾಶವಾಗಿರಬೇಕು.

## ಟಿಪ್ಪಣಿಗಳು

1 ಫ್ಲೀಟ್, ಭಂಡಾರ್‌ಕರ್ ಮತ್ತು ಆಲ್ಟೇಕರ್‌ರವರು ಇವನ ಹೆಸರನ್ನು ಶಂಕರ ಎಂದು ಉಲ್ಲೇಖಿಸಿದ್ದಾರೆ. ಆದರೆ ವೆಂಕಟರಮಣಯ್ಯನವರು ಸಂಗಮ ಎಂದು ಹೇಳಿದ್ದಾರೆ. (Early Muslim Expansion in South India. P. 17)

2 ಮಹಾನುಭಾವೀಯ ಮರಾಠಿ ವಾಙ್ಮಯ : P. 123. ರಾಮದೇವ ರಾಯಚೇನೀ ಜೇಷ್ಠ ಪುತ್ರೇನ್ ಸಿಂಘಣರಾಯೇನ್ ಭಣಿತಾಲೇಂ.

3 ದೇವಲ್‌ರಾಣೀ -ವ-ಖಿಸ್ರ್‌ಖಾನ್

4 ಫಿರಿಷ್ಟ, ಸಂ. 1ಪು. 378

5 ಫಿರಿಷ್ಟ, ಸಂ. 1, ಪು. 389

6 B 745 of 1962-62

* * *

ಅಧ್ಯಾಯ ೧೨

# ರಾಜ್ಯಭಾರ ಕ್ರಮ

ಸೇವುಣರು ರಾಷ್ಟ್ರಕೂಟರ ಮತ್ತು ಕಲ್ಯಾಣದ ಚಾಳುಕ್ಯರ ಸಾಮಂತರಾಗಿ ಪ್ರವರ್ಧಮಾನಕ್ಕೆ ಬಂದವರು. ಆದುದರಿಂದ ಸೇವುಣರು ಈ ಮನೆತನಗಳ ರಾಜ್ಯ ಭಾರಕ್ರಮದ ನಿಕಟ ಪರಿಚಯವನ್ನು ಮಾಡಿಕೊಂಡಿದ್ದರು. ತಾವು ಸ್ವತಂತ್ರರಾದ ಮೇಲೆ ಅದೇ ಕ್ರಮವನ್ನು ಸೂಕ್ತ ಬದಲಾವಣೆಗಳೊಡನೆ ಮುಂದುವರಿಸಿಕೊಂಡು ಬಂದರು. ಸೇವುಣರ ರಾಜ್ಯಭಾರಕ್ರಮವನ್ನು ತಿಳಿಯಲು ಶಾಸನಗಳೇ ಮುಖ್ಯಾ ಧಾರಗಳಾಗಿವೆ.

ನಿರಂಕುಶ ಪ್ರಭುತ್ವವೇ ಸೇವುಣರ ಆಡಳಿತ ಕ್ರಮ. ರಾಜನು ರಾಜ್ಯದ ಮುಖ್ಯನಾಗಿದ್ದು, ಅದರ ಕೇಂದ್ರದಂತಿದ್ದನು. ಸಾಮಾನ್ಯವಾಗಿ ರಾಜನ ಹಿರಿಯ ಮಗನೇ ರಾಜ್ಯಕ್ಕೆ ಹಕ್ಕು ದಾರನಾಗುತ್ತಿದ್ದನು. ರಾಜ್ಯಕ್ಕೋಸ್ಕರ ದಾಯಾದಿಗಳಲ್ಲಿ ಕಲಹಗಳು ಸಾಮಾನ್ಯವಾಗಿ ನಡೆಯುತ್ತಿದ್ದವು. ಮಲ್ಲುಗಿಯ ಮೊಮ್ಮಗನಾದ ಐದನೆಯ ಭಿಲ್ಲಮನು, ಮಲ್ಲುಗಿಯ ಮಕ್ಕಳು ಅಸಮರ್ಥರಾಗಿದ್ದುದರಿಂದ ಅವರನ್ನು ಸೋಲಿಸಿ ತಾನೇ ರಾಜನಾದನು. ಸಿಂಘಣನ ಅನಂತರ ಅವನ ಮೊಮ್ಮಗನಾದ ಕೃಷ್ಣನು ಪಟ್ಟಕ್ಕೆ ಬಂದನು. ಕೃಷ್ಣನ ಅನಂತರ ಆತನ ತಮ್ಮನಾದ ಮಹಾದೇವನು ರಾಜನಾದನು.

ಸೇವುಣರಾಜರು ಬಿರುದುಗಳನ್ನು ಧರಿಸುತ್ತಿದ್ದರು. ಸಾಮಾನ್ಯವಾಗಿ ಎಲ್ಲ ಸ್ವತಂತ್ರ ರಾಜರೂ ಪೃಥ್ವೀವಲ್ಲಭ, ಸಮಸ್ತಭುವನಾಶ್ರಯ, ಮಹಾರಾಜಾಧಿರಾಜ, ಪರಮೇಶ್ವರ, ಪರಮಭಟ್ಟಾರಕ, ದ್ವಾರಾವತೀಪುರವರಾಧೀಶ್ವರ, ಯಾವದ ಕುಲ ಕಮಲ ಕಲಿಕಾವಿಕಾಸಭಾಸ್ಕರ, ಯಾವದನಾರಾಯಣ, ಪ್ರೌಢಪ್ರತಾಪ ಚಕ್ರವರ್ತಿ, ಸೇವುಣ ಚಕ್ರವರ್ತಿ ಮುಂತಾದ ಬಿರುದುಗಳನ್ನು ಧರಿಸುತ್ತಿದ್ದರು. ಸೇವುಣ ರಾಜರು ತಮ್ಮದೇ ಆದ ರಾಜಲಾಂಛನವನ್ನು ಹೊಂದಿದ್ದರು. ಕೈಜೋಡಿಸಿರುವ ಗರುಡ ಮತ್ತು ಅದರ ಎರಡು ಕಡೆಗಳಲ್ಲಿಯೂ ಶಂಖದ ಲಾಂಛನವು ಬಹು ಸಾಮಾನ್ಯ ವಾಗಿತ್ತು. ಅಪರೂಪವಾಗಿ ಒರೆ ಮತ್ತು ಕತ್ತಿಯ ಲಾಂಛನವನ್ನೂ ಬಳಸುತ್ತಿದ್ದರು. ಸೇವುಣರು ತಮ್ಮದೇ ಆದ ನಾಣ್ಯಗಳನ್ನೂ ಅಚ್ಚುಹಾಕಿಸುತ್ತಿದ್ದರು.

ರಾಜರ ಕರ್ತವ್ಯಗಳಲ್ಲಿ ಮುಖ್ಯವಾದುದು ಯುದ್ಧಗಳನ್ನು ಮಾಡುವುದು ಎಂಬ ಅಭಿಪ್ರಾಯವು ಕೆಲವು ಸೇವುಣ ಶಾಸನಗಳಲ್ಲಿ ಬರುತ್ತದೆ. ಸಾಮಾನ್ಯವಾಗಿ

ಅವರು ಸೈನ್ಯದ ಮುಂದಾಳತ್ವವನ್ನು ವಹಿಸುತ್ತಿದ್ದರು. ಭಿಲ್ಲಮನು ಹೊಯ್ಸಳರ ಮೇಲೂ, ಜೈತುಗಿಯು ಕಾಕತೀಯರ ಮೇಲೂ, ಸಿಂಘಣನು ಗುರ್ಜರರ ಮೇಲೂ ಸ್ವತಃ ಯುದ್ಧಗಳನ್ನು ಮಾಡಿದರೆಂಬುದನ್ನು ಆಗಲೇ ತಿಳಿಸಲಾಗಿದೆ. ನ್ಯಾಯ ಕಾರ್ಯ ನಿರ್ವಹಣೆ, ಮಂತ್ರಿಗಳನ್ನು ಮತ್ತು ವರಿಷ್ಠ ಅಧಿಕಾರಿಗಳನ್ನು ಆರಿಸುವುದು, ನಿಯಮಿಸುವುದು ಮತ್ತು ಧಾರ್ಮಿಕ ಸಂಸ್ಥೆಗಳಿಗೆ ಭೇಟಿ ಕೊಡುವುದು ಅವರ ಇತರ ಕರ್ತವ್ಯಗಳಾಗಿದ್ದವು. ಒಟ್ಟಿನಲ್ಲಿ ದುಷ್ಟನಿಗ್ರಹ ಮತ್ತು ಶಿಷ್ಟ ರಕ್ಷಣೆಯೇ ಅವರ ಮುಖ್ಯಗುರಿಯಾಗಿದ್ದಿತು.

**ಯುವರಾಜ :** ರಾಜನು ಜ್ಯೇಷ್ಠ ಪುತ್ರನನ್ನು ಯುವರಾಜನನ್ನಾಗಿ ನಿಯಮಿಸುತ್ತಿದ್ದನು. ಯುವರಾಜನು ರಾಜ್ಯಭಾರದಲ್ಲಿ ಪಾಲ್ಗೊಂಡು ಅನುಭವವನ್ನು ಗಳಿಸುತ್ತಿದ್ದನು. ಸಿಂಘಣನ ಮಗನಾದ ಜೈತುಗಿಯು ಯುವರಾಜನಾಗಿದ್ದನು ಮತ್ತು ಇವನ ಮಗನಾದ ಕೃಷ್ಣನೂ ಯುವರಾಜನಾಗಿದ್ದು ರಾಜ್ಯಭಾರದಲ್ಲಿ ನೆರವಾಗಿದ್ದನು. ಸಾಮಾನ್ಯವಾಗಿ ಯುವರಾಜನು ಯುದ್ಧಗಳಲ್ಲಿ ಭಾಗವಹಿಸುತ್ತಿದ್ದನು. ರಾಜ ಕುಮಾರರಿಗೆ ಯುದ್ಧ ವಿದ್ಯೆಯಲ್ಲಿ ಶಿಕ್ಷಣಕೊಡಿಸುವ ಪದ್ಧತಿ ಇದ್ದಿತು. ಸಿಂಘಣನು ಜನಾರ್ಧನನಿಂದ ಯುದ್ಧವಿದ್ಯೆಯಲ್ಲಿ ಶಿಕ್ಷಣಪಡೆದನೆಂದು 'ಸೂಕ್ತಿಮುಕ್ತಾವಳೀ' ಗ್ರಂಥದಿಂದ ತಿಳಿಯುತ್ತದೆ.

**ಮಂತ್ರಿಗಳು :** ರಾಜನ ಸಹಾಯಕ್ಕೋಸ್ಕರ ಮಂತ್ರಿಗಳು ಮತ್ತು ವರಿಷ್ಠ ಅಧಿಕಾರಿಗಳು ಇರುತ್ತಿದ್ದರು. ಕೃಷ್ಣನ ಬೆಂಡಿಗೇರಿ ಶಾಸನದಲ್ಲಿ, ಅಮಾತ್ಯ ಮಲ್ಲಿಸೆಟ್ಟಿಯು ರಾಜನ ಸಾಲಿಗೆ ಮತ್ತು ಬಲಗೈಯಂತಿದ್ದನು ಎಂದು ಹೇಳಿದೆ. [1] ಸಾಮಾನ್ಯವಾಗಿ ರಾಜನು ಮುಖ್ಯವಾದ ನಿರ್ಧಾರಗಳನ್ನು ತನ್ನ ಮಂತ್ರಿಗಳೊಂದಿಗೆ ಸಮಾಲೋಚಿಸಿ, ತೆಗೆದುಕೊಳ್ಳುತ್ತಿದ್ದನು. ರಾಜನು ಒಂದು ಹಳ್ಳಿಯನ್ನು ದತ್ತಿಕೊಡುವ ಮುಂಚೆ ತನ್ನ ಮಂತ್ರಿಗಳ ಒಪ್ಪಿಗೆಯನ್ನು ಪಡೆಯುತ್ತಿದ್ದನು ಎಂದು ಸೇವುಣರ ಶಾಸನವೊಂದು ತಿಳಿಸುತ್ತದೆ. [2] ರಾಜ್ಯದ ಅಭಿವೃದ್ಧಿಯು ಉತ್ತಮ ಮಂತ್ರಿಗಳನ್ನು ಅವಲಂಬಿಸಿದೆ ಎಂದು ಮತ್ತೊಂದು ಶಾಸನವು ತಿಳಿಸುತ್ತದೆ. [3] ಚಂಗದೇವನು ಮಹಾಪ್ರಧಾನನಾಗಿದ್ದುದರಿಂದ, ರಾಜ್ಯದಲ್ಲಿ ಎಲ್ಲೆಲ್ಲೂ ಸುಭಿಕ್ಷ ವಿದ್ದಿತೆಂದುಶಾಸನವೊಂದು ನಿರೂಪಿಸುತ್ತದೆ. ಸೇವುಣ ರಾಜ್ಯದಲ್ಲಿ ಎಷ್ಟುಜನ ಮಂತ್ರಿಗಳಿದ್ದರೆಂದು ಖಚಿತವಾಗಿ ಹೇಳಲಾಗುವುದಿಲ್ಲ. ಸೇವುಣರು ಇನ್ನೂ ಸಾಮಂತರಾಗಿದ್ದಾಗ ಅವರಲ್ಲಿ ಕೇವಲ ಏಳು ಮಂತ್ರಿಗಳಿದ್ದರೆಂದು ಬಸೇನ್ ಶಾಸನವು ತಿಳಿಸುತ್ತದೆ. [4] ಕಾಲಕ್ರಮದಲ್ಲಿ ರಾಜ್ಯವು ವಿಸ್ತಾರವಾದಂತೆ, ಮಂತ್ರಿಗಳ ಸಂಖ್ಯೆಯೂ ಹೆಚ್ಚಿತು.

ಮಹಾಪ್ರಧಾನ ಮಂತ್ರಿಗಳಲ್ಲಿ ಮುಖ್ಯನಾದವನು. ಸಾಮಾನ್ಯವಾಗಿ ಮಹಾಪ್ರಧಾನರು ಜಿಲ್ಲೆ ಅಥವಾ ಜಿಲ್ಲೆಗಳ ಮುಖ್ಯಾಧಿಕಾರಿಗಳಾಗಿರುತ್ತಿದ್ದರು. ಮಹಾಪ್ರಧಾನ ದೇವರಾಜನು ಮಹಾದೇವನ ದಕ್ಷಿಣ ರಾಜ್ಯಕ್ಕೆ ಒಡೆಯನಾಗಿದ್ದನು. [5]

ಆದರೆ, ಮಹಾಪ್ರಧಾನ ರಂಗನಾಥನು ಕರಹಡ ಜಿಲ್ಲೆಯನ್ನು ಆಳುತ್ತಿದ್ದನು. ಮಹಾಪ್ರಧಾನ ಹುದ್ದೆಯ ಜೊತೆಗೆ ಅವರು ಸರ್ವಾಧಿಕಾರಿ, ಮಹಾಮಾತ್ಯ, ಸೇನಾಪತಿ ಮುಂತಾದ ಹುದ್ದೆಗಳನ್ನು ನೋಡಿಕೊಳ್ಳುತ್ತಿದ್ದರು. ಆಲ್ಟೇಕರ್ ಮತ್ತು ದಿನಕರ ದೇಸಾಯಿಯವರು ಮಹಾಪ್ರಧಾನನನ್ನು, ಪ್ರಧಾನಮಂತ್ರಿಯೆಂದು ಕರೆದಿದ್ದಾರೆ. ಆದರೆ ಮಹಾಪ್ರಧಾನ ಎಂಬುದು ಹುದ್ದೆಯ ಹೆಸರಿಗಿಂತ ಉತ್ತಮ ದರ್ಜೆಯ ಅಧಿಕಾರಿಗಳೆಲ್ಲರಿಗೂ ಇರುತ್ತಿದ್ದ ಅಧಿಕಾರದ ಹೆಸರು ಎಂದು ಹೇಳಿದರೆ ಸಮರ್ಪಕವಾಗಿ ಕಾಣುತ್ತದೆ. ಸಾಮಾನ್ಯವಾಗಿ ಮಹಾಪ್ರಧಾನರು ಸಾಮಂತ ರಾಜರು ಆಳುತ್ತಿದ್ದ ರಾಜಧಾನಿಗಳಲ್ಲಿ ಅಧಿಕಾರಿಗಳಾಗಿದ್ದು ರಾಜನಿಗೂ ಸಾಮಂತರಿಗೂ ಸಂಪರ್ಕವನ್ನು ಕಲ್ಪಿಸುತ್ತಿದ್ದರು. ಕೆಲವು ಮಹಾಪ್ರಧಾನರಿಗೆ ಸಾಮಂತರ ಬಿರುದುಗಳೂ ಇದ್ದವು. ಮಹಾಪ್ರಧಾನ ಮಲ್ಲಿಸೆಟ್ಟಿಗೆ ಮಹಾಸಾಮಂತಾಧಿಪ ಎಂಬ ಬಿರುದು ಇದ್ದಿತು. ಸಾಮಾನ್ಯವಾಗಿ ಸಾಮಂತರು ದತ್ತಿಗಳನ್ನು ಕೊಟ್ಟಾಗ, ಸಾಕ್ಷಿಗಳಾಗಿ ಮಹಾಪ್ರಧಾನರು ಇದ್ದುದು ಕಂಡುಬರುತ್ತದೆ.

ಸರ್ವಾಧಿಕಾರಿ ಎಂಬ ವರಿಷ್ಠ ದರ್ಜೆಯ ಅಧಿಕಾರಿಗಳು ಸೇವುಣರ ಕಾಲದಲ್ಲಿದ್ದರು. ಈ ಅಧಿಕಾರದ ವ್ಯಾಪ್ತಿ ಏನೆಂಬುದು ಖಚಿತವಾಗಿ ತಿಳಿದಿಲ್ಲ. ದಿನಕರ ದೇಸಾಯಿಯವರು ಸರ್ವಾಧಿಕಾರಿಯು ಆರ್ಥಿಕ ಸಚಿವನೆಂದು ಹೇಳಿದ್ದಾರೆ.[6] ಆಲ್ಟೇಕರರು ಅವನು ಎಲ್ಲ ಶಾಖೆಗಳ ಮೇಲ್ವಿಚಾರಣಾ ಅಧಿಕಾರವನ್ನು ಹೊಂದಿದ್ದವನು ಎಂದು ಅರ್ಥಮಾಡಿದ್ದಾರೆ. [7]

ಸೇನಾಧಿಪತಿ ಮತ್ತು ದಂಡನಾಯಕರ ಹೆಸರುಗಳು ಸೇವುಣರ ಶಾಸನಗಳಲ್ಲಿ ವಿಶೇಷವಾಗಿ ಕಾಣುತ್ತವೆ. ಇವರು ಸೈನ್ಯಾಧಿಕಾರಿಗಳು ಮಾತ್ರವಲ್ಲದೆ, ರಾಜ್ಯದ ವಿವಿಧ ಶಾಖೆಗಳಲ್ಲಿ ಹಿರಿಯ ಅಧಿಕಾರಿಗಳಾಗಿ ಕೆಲಸ ನಿರ್ವಹಿಸುತ್ತಿದ್ದರು. ಸೇನಾಧಿಪತಿ ವಂಕದೇವನು ಬನವಾಸಿ, ಬೆಳ್ವೊಲ ಮತ್ತು ಪುಲಿಗೆರೆಗಳ ಮುಖ್ಯ ಆಡಳಿತಾಧಿಕಾರಿಯಾಗಿದ್ದನು. ಸೇನಾಧಿಪತಿ ದಾಮೋದರನು ಕರಡಿಕಲ್ಲಿನ ಆಡಳಿತಾಧಿಕಾರಿಯಾಗಿದ್ದನು. ಪ್ರಾಚೀನ ಕಾಲದಲ್ಲಿ ಸೈನ್ಯದ ಅಧಿಕಾರಿಗಳಿಗೂ, ಆಡಳಿತದ ಅಧಿಕಾರಿಗಳಿಗೂ ಅಷ್ಟೇನೂ ವ್ಯತ್ಯಾಸವಿರಲಿಲ್ಲವೆಂದು ಮಹಾಲಿಂಗಂ ಅವರು ಹೇಳಿದ್ದಾರೆ. [8] ದಂಡನಾಯಕ, ಮಹಾಪ್ರಚಂಡ ದಂಡನಾಯಕ, ದಂಡನಾಥ ಮುಂತಾದ ಅಧಿಕಾರಿಗಳು ಆಡಳಿತಾಧಿಕಾರಿಗಳಾಗಿದ್ದುದು ಕಾಣಬರುತ್ತದೆ.

ಮಹಾಮಾತ್ಯನೆಂಬ ಮಂತ್ರಿಯ ಹೆಸರು ಸೇವುಣರ ಶಾಸನಗಳಲ್ಲಿ ಕಂಡುಬರುತ್ತದೆ. 'ಶುಕ್ರನೀತಿಸಾರ'ದ ಆಧಾರದ ಮೇಲೆ ಹೇಳುವುದಾದರೆ, ಇವನು ಕಂದಾಯ ಮಂತ್ರಿ ಎಂದು ಹೇಳಬೇಕಾಗುತ್ತದೆ. [9] ಸಂಧಿವಿಗ್ರಹಿಯು ವಿದೇಶಾಂಗ ವ್ಯವಹಾರಗಳ ಮಂತ್ರಿ. ಕೋಶಾಧ್ಯಕ್ಷ ಅಥವಾ ಕೋಶಾಧಿಕಾರಿಯು, ಪದವೇ ಸೂಚಿಸುವಂತೆ ಬೊಕ್ಕಸದ ಅಧಿಕಾರಿಯಾಗಿದ್ದನು. ಅನಂತ ಭಟ್ಟನು ಕೃಷ್ಣನ ಕೋಶಾಧಿಕಾರಿಯಾಗಿದ್ದನು. ಶ್ರೀಕರಣಾಧಿಪ ಅಥವಾ ಶ್ರೀಕರಣಪ್ರಭು ಎಂಬುವನು

ಖರ್ಚಿನ ಲೆಕ್ಕಗಳನ್ನು ಪರಿಶೀಲಿಸುವ ಮಂತ್ರಿ. ಹೇಮಾದ್ರಿಯು ಮಹಾದೇವ ಮತ್ತು ರಾಮಚಂದ್ರರ ಕಾಲದಲ್ಲಿ ಶ್ರೀಕರಣಾಧಿಪನಾಗಿದ್ದನು. ಬಾಹತ್ತರನಿಯೋಗಾಧಿಪತಿ ಎಂಬ ಅಧಿಕಾರಿಯು ಸೇವುಣರ ಶಾಸನಗಳಲ್ಲಿ ಪದೇ ಪದೇ ಕಾಣಬರುತ್ತಾನೆ. ಈ ಅಧಿಕಾರದ ನಿಜವಾದ ಅರ್ಥ ತಿಳಿದಿಲ್ಲವೆಂದೇ ಹೇಳಬೇಕು. ಬಾಹತ್ತರ ಎನ್ನುವ ಪದಕ್ಕೆ ಎಪ್ಪತ್ತೆರಡು ಎಂದು ಅರ್ಥಮಾಡಿದರೆ, ಈ ಅಧಿಕಾರಿಯು ಎಪ್ಪತ್ತೆರಡು ನಿಯೋಗ ಅಥವ ಶಾಖೆಗಳನ್ನು ನೋಡಿಕೊಳ್ಳುತ್ತಿದ್ದನು ಎಂದು ಅರ್ಥವಾಗುತ್ತದೆ. ಆ ಎಪ್ಪತ್ತೆರಡು ನಿಯೋಗಗಳು ಯಾವುವು ಎಂದು ಹೇಳಲು ಸಾಧ್ಯವಿಲ್ಲ. ಬಹುಶಃ ಎಪ್ಪತ್ತೆರಡು ಎನ್ನುವುದು ಬಹು ಸಂಖ್ಯೆಯ ಎನ್ನುವ ಅರ್ಥದಲ್ಲಿ ಬಳಸಿರಬೇಕು. ಸರ್ವಾಧಿಕಾರಿಗಳಾದ ಲಕ್ಷ್ಮೀದೇವ ಮತ್ತು ಬಸವರಸ, ಇವರಿಬ್ಬರೂ ಬಾಹತ್ತರ ನಿಯೋಗಾಧಿಪತಿಗಳಾಗಿದ್ದರು. ಮಹತ್ತಮ, ರಾಜಾಧ್ಯಕ್ಷ ಮತ್ತು ಅಪಾಯಿಕ ಎಂಬ ಅಧಿಕಾರಿಗಳ ಕೆಲಸವೇನೆಂಬುದು ಗೊತ್ತಾಗಿಲ್ಲ. ಪಟಲಕರಣಿಯು ದಾಖಲೆಗಳನ್ನು, ಶಾಸನಗಳನ್ನು ಪರಿಶೀಲಿಸುವ ಅಧಿಕಾರಿ. ಪರಮವಿಶ್ವಾಸಿ ಮತ್ತು ಮಹಾಪರಮ ವಿಶ್ವಾಸಿಗಳು ಖಾಸಾ ಕಾರ್ಯದರ್ಶಿಗಳು. ಮೇಲಾಲಿಕೆ ಅಧಿಕಾರಿಯು, ಎಲ್ಲ ವಿಷಯಗಳಲ್ಲೂ ಮೇಲ್ವಿಚಾರಣೆಯನ್ನು ನಡೆಸುವ ಅಧಿಕಾರಿಯಾಗಿದ್ದಿರಬೇಕು. ರಾಜಗುರುವು ಧಾರ್ಮಿಕ ಮತ್ತು ಮತೀಯ ವಿಷಯಗಳಲ್ಲಿ ರಾಜನಿಗೆ ಸಲಹೆಗಳನ್ನು ಕೊಟ್ಟು, ಮಾರ್ಗದರ್ಶನ ಮಾಡುತ್ತಿದ್ದನು.

ಈ ಮೇಲೆ ಹೇಳಿದ ಎಲ್ಲ ಅಧಿಕಾರಿಗಳೂ ರಾಜನಿಂದಲೇ ಆರಿಸಲ್ಪಡುತ್ತಿದ್ದರೂ, ಬಹುವೇಳೆ ಈ ಅಧಿಕಾರಗಳು ಅನುವಂಶಿಕವಾಗಿ ದೊರಕುತ್ತಿದ್ದವು. ಸಿಂಘಣನ ಸೇನಾಧಿಪತಿ ಖೋಲೇಶ್ವರನ ಮರಣಾನಂತರ ಖೋಲೇಶ್ವರನ ಮಗನಾದ ರಾಮನು ಆ ಸ್ಥಾನಕ್ಕೆ ಬಂದನು. ಮಲ್ಲಿಸೆಟ್ಟಿ, ಮುಂತಾದವರು ಆನುವಂಶಿಕವಾಗಿ ಮಂತ್ರಿಗಳಾಗಿದ್ದರು. ಜಲ್ಹಣನ ಪೂರ್ವಜರು, ಮಲ್ಲುಗಿಯ ಕಾಲದಿಂದ ಸಿಂಘಣನ ಕಾಲದವರೆಗೆ ಕರಿವೃಂದನಾಥರಾಗಿದ್ದರು.

ಸೇವುಣರ ರಾಜ್ಯದಲ್ಲಿ ಅನೇಕ ಸಾಮಂತರು ಆಳುತ್ತಿದ್ದರು. ಸಾಮಾನ್ಯವಾಗಿ ಯುದ್ಧದಲ್ಲಿ ಪರಾಜಿತರಾದ ಅರಸುಗಳು ಇಲ್ಲವೇ ಅವರ ವಂಶಜರು ಸೇವುಣರ ಅಧೀನದಲ್ಲಿ ಆಳುತ್ತಿದ್ದರು. ಪರಾಜಿತ ವಂಶದ ಅರಸುಗಳು ಇಲ್ಲದೇ ಹೋದಲ್ಲಿ ರಾಜನು ತನ್ನ ಮಂತ್ರಿಗಳಲ್ಲೊಬ್ಬನನ್ನು ಸಾಮಂತನನ್ನಾಗಿ ನೇಮಕಮಾಡುತ್ತಿದ್ದನು. ವಿಕ್ರಮನ ಅನಂತರ ಸಿಂದವಂಶದ ಅರಸುಗಳು ಇಲ್ಲದೇ ಹೋದುದರಿಂದ ಸಿಂಘಣನು ತನ್ನ ಮಂತ್ರಿಯಾದ ವಾಸುದೇವನಾಯಕನನ್ನು, ಸಿಂದರಾಜ್ಯದ ಸಾಮಂತನನ್ನಾಗಿ ನಿಯಮಿಸಿದನು.[10] ಕುಹುಂಡಿಯ ರಟ್ಟರಾಜ್ಯಕ್ಕೂ ಇದೇ ಪರಿಸ್ಥಿತಿಯೊದಗಿತು.

ಸಾಮಂತರಿಗೂ ಸೇವುಣ ಚಕ್ರವರ್ತಿಗಳಿಗೂ ಇದ್ದ ಬಾಂಧವ್ಯ ಹಕ್ಕು ಬಾಧ್ಯತೆಗಳ ವಿಚಾರದಲ್ಲಿ ಸೇವುಣ ಶಾಸನಗಳು ಉತ್ತಮ ಮಾಹಿತಿಯನ್ನೇನೂ

ಒದಗಿಸುವುದಿಲ್ಲ. ಬಹುಶಃ ಸಾಮಂತರು ಚಕ್ರವರ್ತಿಗೆ ವಾರ್ಷಿಕ ಕಪ್ಪ ಕಾಣಿಕೆಗಳನ್ನು ಕೊಡುವುದು, ಯುದ್ಧ ಸಮಯದಲ್ಲಿ ಸೈನ್ಯ ಸಹಾಯವನ್ನು ಒದಗಿಸುವುದು, ಚಕ್ರವರ್ತಿಯ ಹೆಸರಿನಲ್ಲಿ ಪಾದಪದ್ಮೋಪಜೀವಿ ಎಂದು ಶಾಸನಗಳನ್ನು ಬರೆಯಿಸುವುದು ಮುಂತಾದವುಗಳನ್ನು ಮಾಡಬೇಕಾಗಿದ್ದಿತು. ಸಾಮಂತರ ಮೇಲೆ ಯಾರಾದರೂ ಯುದ್ಧವನ್ನು ಮಾಡಿದರೆ ಚಕ್ರವರ್ತಿಯು ಅವರ ಸಹಾಯಕ್ಕೆ ಸೈನ್ಯವನ್ನು ಕಳುಹಿಸುತ್ತಿದ್ದನು. ಮಹಾಪ್ರಧಾನನು ಸಾಮಾನ್ಯವಾಗಿ ಸಾಮಂತರಿಗೂ ಚಕ್ರವರ್ತಿಗೂ ಮಧ್ಯೆ ಸಂಪರ್ಕಾಧಿಕಾರಿಯಾಗಿರುತ್ತಿದ್ದನು. ಮಹಾಪ್ರಧಾನನು ಸಾಮಂತರ ರಾಜಧಾನಿಯಲ್ಲಿದ್ದು ಸಾಮಂತರ ರಾಜಕೀಯ ಚಟುವಟಿಕೆಗಳನ್ನು ಗಮನಿಸುತ್ತಿದ್ದನು. ಸಾಮಂತರಿಗೆ ಭೂಮಿಯ ಒಡೆತನವಿರುತ್ತಿರಲಿಲ್ಲ. ಭೂಮಿಯನ್ನು ದಾನಮಾಡಲು ಅವರು ಚಕ್ರವರ್ತಿಯ ಅಪ್ಪಣೆ ಪಡೆಯಬೇಕಾಗಿದ್ದಿತು. ಕದಂಬ ಸಾಮಂತ ಮಲ್ಲಪ್ಪನ ಹೆಂಡತಿ ಪದ್ಮಲದೇವಿಯು ಆಳುವ ದೊರೆ ಸಿಂಘಣನ ಅನುಮತಿಯನ್ನು ಪಡೆದು ಭೂಮಿಯನ್ನು ಬ್ರಹ್ಮಪುರಿಗೋಸ್ಕರ ದಾನ ಕೊಟ್ಟಳೆಂದು ಶಾಸನವೊಂದು ತಿಳಿಸುತ್ತದೆ.[11] ಮತ್ತೊಬ್ಬ ಸಾಮಂತನಾದ ಪುರುಷೋತ್ತಮನು ರಾಜನ ಅಪ್ಪಣೆಯನ್ನು ಪಡೆದು ಭೂಮಿಯನ್ನು ದಾನವಾಗಿ ಕೊಟ್ಟನೆಂದು ಮತ್ತೊಂದು ಶಾಸನದಿಂದ ಗೊತ್ತಾಗುತ್ತದೆ.[12]

ಸೇವುಣರ ಶಾಸನಗಳು ಮಹಾಮಂಡಲೇಶ್ವರ, ಸಾಮಂತ ಮತ್ತು ಮಹಾಸಾಮಂತ ಎಂಬ ವಿವಿಧ ದರ್ಜೆಯ ಸಾಮಂತರನ್ನು ಹೆಸರಿಸುತ್ತವೆ. ಡಾ. ಮಹಾಲಿಂಗಂರವರು ಮಹಾಮಂಡಲೇಶ್ವರರಿಗೂ, ಮಹಾಸಾಮಂತರಿಗೂ ಯಾವ ವಿಧವಾದ ವ್ಯತ್ಯಾಸವು ಇಲ್ಲವೆಂದಿದ್ದಾರೆ.[13] ಆದರೆ ಮಹಾಮಂಡಲೇಶ್ವರರು ಮಹಾಸಾಮಂತರಿಗಿಂತಲೂ ಶ್ರೇಷ್ಠರೆಂದು ಗೊತ್ತಾಗುತ್ತದೆ. ಮಲ್ಲಿದೇವರಸನ ಪೂರ್ವಜರು ಮಹಾಸಾಮಂತರಾಗಿದ್ದರು. ಆದರೆ ಮಲ್ಲಿದೇವನು ಸಿಂಘಣನ ಕಾಲದಲ್ಲಿ ಮಹಾಮಂಡಲೇಶ್ವರನಾದನು.[14]

ರಾಜ್ಯವು ವಿಷಯ ಅಥವಾ ಪ್ರಾಂತ್ಯಗಳಾಗಿ ವಿಭಾಗಿಸಲ್ಪಟ್ಟಿದ್ದಿತು. ಸೇವುಣ ರಾಜ್ಯದಲ್ಲಿ ಎಷ್ಟು ಪ್ರಾಂತ್ಯಗಳಿದ್ದವೆಂದು ಖಚಿತವಾಗಿ ಹೇಳಲು ಸಾಧ್ಯವಿಲ್ಲ. ಕೊನೆಯಪಕ್ಷ ಎಂಟು ಪ್ರಾಂತ್ಯಗಳಿದ್ದವೆಂದು ಹೇಳಬಹುದು. ತರ್ದವಾಡಿ, ಬನವಾಸಿ, ಕರ್ನಾಟ, ನಾಲ್ವಡಿ, ನೊಳಂಬವಾಡಿ ಮುಂತಾದವು ಶಾಸನಗಳಲ್ಲಿ ಕಾಣಸಿಗುತ್ತವೆ. ರಾಷ್ಟ್ರವೆಂಬ ವಿಭಾಗವು ಸೇವುಣರ ಕಾಲದಲ್ಲಿದ್ದಂತೆ ತೋರುವುದಿಲ್ಲ. ವಿಷಯಗಳನ್ನು ನಾಡು ಮತ್ತು ಕಂಪನಗಳಾಗಿ ವಿಭಾಗಿಸಿದ್ದರು. ನಾಡು ಮತ್ತು ಕಂಪನಗಳಿಗೆ ಇದ್ದ ವ್ಯತ್ಯಾಸಗಳೇನು ಎಂದು ತಿಳಿದುಬಂದಿಲ್ಲ. ನಾಡುಗಳನ್ನು ಉಲ್ಲೇಖಿಸುವಾಗ ಸಾಮಾನ್ಯವಾಗಿ ಸಂಖ್ಯೆಗಳನ್ನು ಬಳಸುತ್ತಿದ್ದರು. ಈ ಸಂಖ್ಯೆಗಳ ಅರ್ಥವೇನೆಂಬುದು ವಿವಾದಾಸ್ಪದ ವಿಷಯವಾಗಿದೆ. ಡಾ. ಜಿ.ಎಸ್. ದೀಕ್ಷಿತರವರು, ಒಂದು ಸಾವಿರದವರೆಗಿನ ಸಂಖ್ಯೆಗಳು ನಾಡಿನಲ್ಲಿದ್ದ ಹಳ್ಳಿಯನ್ನು

ಸೂಚಿಸುತ್ತವೆಯೆಂದು ಅಭಿಪ್ರಾಯ ಪಟ್ಟಿದ್ದಾರೆ.[15] ಕಲ್ಯಾಣದ ಚಾಳುಕ್ಯರ ಶಾಸನವೊಂದರಿಂದ ಇದು ಸ್ಪಷ್ಟವಾಗುತ್ತದೆ. ಪೊನ್ನನಾಡು ಎಂಬ ಗ್ರಾಮವು ಬಾಗೆ - 50 ಎಂಬುದರ ಭಾಗವಾಗಿದ್ದಿತೆಂದೂ, ಬಾಗೆ - 50 ಎಂಬುದು ತರ್ದವಾಡಿಯ ಆರುನೂರು ಹಳ್ಳಿಗಳ ನಾಡಿನ ಭಾಗವಾಗಿದ್ದಿತೆಂದೂ ತಿಳಿಸುತ್ತದೆ.[16] ಆದರೆ ನೊಳಂಬವಾಡಿ 32,000 ಬನವಾಸಿ 12,000 ಮುಂತಾದ ಸಂಖ್ಯೆಗಳಲ್ಲಿ ಸಾವಿರ ಎಂಬುದು ನಾಡು ಎನ್ನುವ ಪದವನ್ನು ಸೂಚಿಸುತ್ತದೆಯೆಂಬ ರೈಸ್‌ರವರ ಅಭಿಪ್ರಾಯವನ್ನು ದೀಕ್ಷಿತರು ಒಪ್ಪುತ್ತಾರೆ. ಅಂದರೆ ನೊಳಂಬವಾಡಿ ಪ್ರಾಂತ್ಯದಲ್ಲಿ 32 ನಾಡುಗಳಿದ್ದವೆಂದು ಅರ್ಥವಾಗುತ್ತದೆ. ಈ ದಿಶೆಯಲ್ಲಿ ಹೊಸ ಶಾಸನಗಳು ಬೆಳಕು ಬೀರಬಲ್ಲವು ಎಂಬುದನ್ನು ಮಾತ್ರ ಹೇಳಬೇಕಾಗಿದೆ.

ನಾಡಿನ ಆಡಳಿತವನ್ನು ನೋಡಿಕೊಳ್ಳಲು ನಾಡಗೌಡ, ನಾಡಪ್ರಭು, ನಾಡ ಹೆಗ್ಗಡೆ ಎಂಬ ಅಧಿಕಾರಿಗಳಿದ್ದರು. ಸಾಮಾನ್ಯವಾಗಿ ಇದು ಆನುವಂಶಿಕಹುದ್ದೆ. ಇವನಿಗೆ ಸಹಾಯಕ್ಕಾಗಿ ಸೇನಬೋವನೇ ಮುಂತಾದ ಅಧಿಕಾರಿಗಳಿರುತ್ತಿದ್ದರು. ನಾಡುಗಳಲ್ಲಿ ನಾಡು, ಮಹಾನಾಡು ಮತ್ತು ಪೃಥ್ವೀನಾಡು ಎಂಬ ಸ್ಥಳೀಯ ಸಂಘಗಳಿದ್ದವು. ರಾಮಚಂದ್ರನ ಶಾಸನವೊಂದರಲ್ಲಿ ನಾಡು ಸಂಘದ ಎಂಟುಮಂದಿ ಪ್ರತಿನಿಧಿಗಳಿಂದಲೂ, ಮಹಾನಾಡು ಸಂಘದ ಹದಿನಾರು ಮಂದಿ ಪ್ರತಿನಿಧಿ ಗಳಿಂದಲೂ, ದಾನವೊಂದು ಕೊಡಲ್ಪಟ್ಟಿದೆಯೆಂದು ಉಲ್ಲೇಖಿತವಾಗಿದೆ. ನಾಡು ಎಂಬುದು ನಾಡು ವಿಭಾಗದ ಎಲ್ಲ ಜನಗಳಿಂದಲೂ ಚುನಾಯಿತರಾದ ಪ್ರತಿನಿಧಿಗಳ ಸಂಘವೆಂದೂ, ಮಹಾನಾಡು ನಾಡು ವಿಭಾಗದ ವ್ಯಾಪಾರಿಗಳ ಸಂಘದ ಚುನಾಯಿತ ಪ್ರತಿನಿಧಿಗಳ ಸಂಘವೆಂದೂ ದೀಕ್ಷಿತ್‌ರವರು ಅಭಿಪ್ರಾಯಪಡುತ್ತಾರೆ. ಸಿಂಘಣನ ಶಾಸನವೊಂದರಿಂದ, ಮಹಾನಾಡು ಸಂಘದಲ್ಲಿ ಅಯ್ಯಾವೊಳೆಯ ಐನೂರು ಸ್ವಾಮಿಗಳೂ, ನಾನಾದೇಶಿಗಳೂ ಇದ್ದರೆಂದು ತಿಳಿದುಬರುತ್ತದೆ. ಈ ಮಹಾನಾಡು ಸಂಘವು ವ್ಯಾಪಾರದ ವಿಷಯದಲ್ಲಿ ಕೆಲವು ನಿಯಮಗಳನ್ನು ಮಾಡಿತೆಂದೂ ಇದೇ ಶಾಸನದಲ್ಲಿ ಹೇಳಿದೆ. ಸಿಂಘಣನ ಮತ್ತೊಂದು ಶಾಸನದಲ್ಲಿಯೂ ಇದೇ ರೀತಿಯ ವ್ಯವಸ್ಥೆಯು ಕಂಡುಬರುತ್ತದೆ. ರಾಮಚಂದ್ರನ ಶಾಸನವೊಂದರಲ್ಲಿ ನಗರಖಂಡ ನಾಡುವಿನ ಪೃಥ್ವೀನಾಡು ಸಂಘದಲ್ಲಿ ವೀರನೊಬ್ಬನು ಮಡಿದ ವಿಚಾರವು ಉಲ್ಲೇಖಿತವಾಗಿದೆ.[17] ಪೃಥ್ವೀನಾಡುವಿನ ಸ್ವರೂಪವೇನೆಂಬುದು ಅಲ್ಲಿ ಹೇಳ ಲ್ಪಟ್ಟಿಲ್ಲ.

ನಾಡಿನಲ್ಲಿ ಪಟ್ಟಣಗಳು ಮತ್ತು ಗ್ರಾಮಗಳು ಇರುತ್ತಿದ್ದವು. ಪಟ್ಟಣ ಸ್ವಾಮಿಯೇ ಪಟ್ಟಣದ ಒಡೆಯನಾಗಿದ್ದನು. ಪಟ್ಟಣಗಳಲ್ಲಿ ನಗರಸಿಂಹ ಎಂಬ ಸಂಘವಿದ್ದಿತು. ವಿವಿಧ ವಾಣಿಜ್ಯಸಂಘಗಳ ಪ್ರತಿನಿಧಿಗಳು ಈ ಸಭೆಯಲ್ಲಿ ಭಾಗವಹಿಸುತ್ತಿದ್ದರು. ನಗರ ಜಿನಾಲಯ, ನಗರದೇವಾಲಯ ಮುಂತಾದ ಧಾರ್ಮಿಕ ಕೆಲಸಗಳನ್ನೂ ಅವರು ನೆರವೇರಿಸುತ್ತಿದ್ದರು.

ಗ್ರಾಮವೇ ರಾಜ್ಯದ ಅತ್ಯಂತ ಸಣ್ಣ ಭಾಗವಾಗಿದ್ದಿತು. ಗೌಡ ಅಥವಾ ಗೌಂಡ, ಪ್ರಭು, ಹೆಗ್ಗಡೆ ಮಂತಾದ ಹೆಸರುಗಳು ಗ್ರಾಮದ ಒಡೆಯನಿಗೆ ಇರುತ್ತಿದ್ದವು. ಅಗ್ರಹಾರದ ಹಳ್ಳಿಗಳಲ್ಲಿ ಅವನನ್ನು ಊರೊಡೆಯನೆಂದೂ ವ್ಯವಹರಿಸುತ್ತಿದ್ದರು. ಗೌಡನನ್ನು ಸರ್ಕಾರ ಇಲ್ಲವೇ ಗ್ರಾಮಸಭೆಯೇ ನಿಯಮಿಸುತ್ತಿದ್ದಿತು. ಕೆಲವು ಹಳ್ಳಿಗಳಲ್ಲಿ ಅನೇಕ ಗೌಡರಿರುತ್ತಿದ್ದರು. ಭೈರವಡಗಿ ಗ್ರಾಮದಲ್ಲಿ ಅನೇಕ ಪ್ರಭುಗಳಿದ್ದರೆಂದೂ, ಪಶ್ಚಿಮಭಾಗಕ್ಕೆ ಕಲ್ಲರಸನು ಪ್ರಭುವಾಗಿದ್ದನೆಂದೂ ಶಾಸನ ವೊಂದು ತಿಳಿಸುತ್ತದೆ. [18] ಗೌಡನಿಗೆ ಆತನ ಕೆಲಸಕ್ಕೋಸ್ಕರ ವೇತನವು ಕೊಡಲ್ಪಡುತ್ತಿದ್ದಿತು. ತಳಗವಳ್ಳಿ ಎಂಬ ಗ್ರಾಮದ ಗೌಡನಿಗೆ ಐದು ಮತ್ತರು ಭೂಮಿಯನ್ನು ವೇತನಕ್ಕೆ ಬದಲಾಗಿ ಕೊಡಲಾಗಿದ್ದಿತು.[19] ಆದರೆ ವಾಸೇಯ ನಾಯಕನೆಂಬ ಗೌಡನಿಗೆ ವೇತನವು ಹಣ ರೂಪದಲ್ಲಿಯೇ ದೊರಕುತ್ತಿದ್ದಿತು.[20]

ಗ್ರಾಮ ಸಭೆಗಳಲ್ಲಿ ಒಕ್ಕಲು, ಪ್ರಜೆ, ಸಮಯ, ಚೌಗಾವೆ ಮುಂತಾದವು ಶಾಸನಗಳಲ್ಲಿ ಹೆಸರಿಸಲ್ಪಟ್ಟಿವೆ. ಇವುಗಳ ಸ್ವರೂಪವೇನೆಂಬುದನ್ನು ತಿಳಿಯಲು ಸೇವುಣರ ಶಾಸನಗಳು ಸಹಕಾರಿಯಾಗಿಲ್ಲ. ಚೌಗಾವೆ ಎಂಬುದು ಅಂತರಗ್ರಾಮ ಸಂಸ್ಥೆಯಾಗಿದ್ದಿತು. ಮಹಾಜನಗಳ ಸಂಸ್ಥೆಯೇ ಗ್ರಾಮಗಳಲ್ಲಿನ ಬಹುಪ್ರಮುಖ ವಾದ ಸಂಸ್ಥೆಯಾಗಿದ್ದಿತು. ಅಗ್ರಹಾರ ಗ್ರಾಮದ ಎಲ್ಲ ಗೃಹಸ್ಥರೂ ಮಹಾಜನ ರೆಂದು ಪರಿಗಣಿಸಲ್ಪಡುತ್ತಿದ್ದರು. ಶಾಸನಗಳು ಗ್ರಾಮದ ಮಹಾಜನಗಳ ವಿದ್ಯೆ, ಪಾಂಡಿತ್ಯ ಮುಂತಾದವುಗಳನ್ನು ವಿಶದವಾಗಿ ವರ್ಣಿಸುತ್ತವೆ. ಸಾಮಾನ್ಯವಾಗಿ ಮಹಾಜನಗಳು ಬ್ರಾಹ್ಮಣರು. ಅವರು ಯಮ, ನಿಯಮ, ಸ್ವಾಧ್ಯಾಯ, ಧ್ಯಾನ, ಮೌನ, ಅನುಷ್ಠಾನ, ಜಪ, ಸಮಾಧಿ ಮುಂತಾದವುಗಳಲ್ಲಿ ಪರಿಣತರಾಗಿರುತ್ತಿ ದ್ದರು. ಊರೊಡೆಯನು ಮಹಾಜನರ ಸಂಘದ ಮುಖಂಡ. ಸಾಮಾನ್ಯವಾಗಿ ಮಹಾಜನಗಳ ಸಭೆಯು ಮತೀಯ ಮತ್ತು ಧಾರ್ಮಿಕ ಕಾರ್ಯಗಳನ್ನು ನೋಡಿ ಕೊಳ್ಳುತ್ತಿದ್ದಿತು. ಅಗ್ರಹಾರ ಗ್ರಾಮದಲ್ಲಿ ಯಾವ ಮುಖ್ಯ ಕಾರ್ಯ ನಡೆದರೂ, ಅದು ಮಹಾಜನಗಳ ಸಮ್ಮುಖದಲ್ಲಿ ನಡೆಯುತ್ತಿದ್ದಿತು. ದೇವಾಲಯಕ್ಕೆ ಅಥವಾ ಇನ್ಯಾವುದಾದರೂ ಒಳ್ಳೆಯ ಕಾರ್ಯಕ್ಕೆ ಭೂಮಿಯನ್ನೋ ಹಣವನ್ನೋ ದಾನ ಮಾಡಿದರೆ, ಅದನ್ನು ಮಹಾಜನರು ಸ್ವೀಕರಿಸಿ ಅದನ್ನು ರಕ್ಷಿಸಿ ಅದು ಸದ್ವಿ ನಿಯೋಗವಾಗುವಂತೆ ಮಾಡುವುದೂ ಮಹಾಜನಗಳ ಕರ್ತವ್ಯವಾಗಿದ್ದಿತು. ಕೆರೆಕಟ್ಟೆಗಳನ್ನು ಕಟ್ಟಿಸುವುದು, ಬಾವಿ ತೋಡಿಸುವುದು ಮುಂತಾದ ಕಾರ್ಯಗಳನ್ನು ಮಹಾಜನಗಳು ನೋಡಿಕೊಳ್ಳುತ್ತಿದ್ದರು. ಗ್ರಾಮದ ನ್ಯಾಯಾಡಳಿತದಲ್ಲಿಯೂ ಮಹಾಜನರು ವಿಶೇಷ ಪಾತ್ರವನ್ನು ವಹಿಸುತ್ತಿದ್ದರು. ಗ್ರಾಮದ ಇಬ್ಬರಿಗೆ ಭೂಮಿಯ ಕ್ರಯದ ವಿಚಾರದಲ್ಲಿ ವಿವಾದವು ಪ್ರಾರಂಭವಾದಾಗ, ಅದನ್ನು ಮಹಾ ಜನಗಳು ವಿಚಾರಿಸಿ ತೀರ್ಮಾನಿಸಿದರೆಂದು, ಶಿವಮೊಗ್ಗದ ಶಾಸನವೊಂದು ತಿಳಿಸು ತ್ತದೆ. [21] ಈ ರೀತಿ ಮಹಾಜನಗಳು ಗ್ರಾಮದಲ್ಲಿ ಸುಗಮವಾದ ಸಾಮಾಜಿಕ ಮತ್ತು ಧಾರ್ಮಿಕ ಸ್ಥಿತಿಗಳು ಬೆಳೆಯಲು ಸಹಾಯಕರಾಗಿದ್ದರು.

ಸೇವುಣರು ಸೈನ್ಯಾಡಳಿತವನ್ನು ಸುವ್ಯವಸ್ಥಿತ ರೀತಿಯಲ್ಲಿ ರೂಢಿಸಿದ್ದರು. ಅಕ್ಕಪಕ್ಕದ ರಾಜ್ಯಗಳ ಮೇಲೆ ಯುದ್ಧ ಮಾಡುವುದು ಆ ಕಾಲದ ಪದ್ಧತಿಯಾಗಿದ್ದುದರಿಂದ ಶ್ರೇಷ್ಠ ಸೈನ್ಯವನ್ನಿಟ್ಟುಕೊಳ್ಳುವುದು ಬಹು ಅವಶ್ಯವಾಗಿದ್ದಿತು. ರಾಜನೇ ಸೈನ್ಯದ ಉಚ್ಚ ಅಧಿಕಾರಿಯಾಗಿದ್ದನು. ಭಿಲ್ಲಮ, ಜೈತುಗಿ, ಸಿಂಘಣ, ಮಹಾದೇವ ಮುಂತಾದ ಸೇವುಣ ರಾಜರು ತಾವೇ ಸ್ವತಃ ಯುದ್ಧದಲ್ಲಿ ಭಾಗವಹಿಸುತ್ತಿದ್ದರೆಂಬುದನ್ನು ನೋಡಿದ್ದೇವೆ. ಶ್ರೇಷ್ಠ ಮಟ್ಟದ ಸೈನ್ಯಾಧಿಕಾರಿಗಳನ್ನು ರಾಜನು ನಿಯಮಿಸಿ, ಅವರುಗಳನ್ನು ರಾಜ್ಯದ ವಿವಿಧ ಭಾಗಗಳಲ್ಲಿ ಇರಿಸುತ್ತಿದ್ದನು. ಸಾಮಾನ್ಯವಾಗಿ ಎಲ್ಲ ಮಂತ್ರಿಗಳಿಗೂ ಸೈನ್ಯದ ಆಡಳಿತ ಮತ್ತು ಯುದ್ಧದ ವಿದ್ಯೆಯಲ್ಲಿ ಪರಿಶ್ರಮವಿರುತ್ತಿದ್ದಿತು. ಹೇಮಾದ್ರಿ, ಜಲ್ಹಣ, ಚಾವುಂಡಶೆಟ್ಟಿ ಮುಂತಾದ ಮಂತ್ರಿಗಳೂ ಯುದ್ಧಕಲೆಯಲ್ಲಿ ಪರಿಣತರಾಗಿದ್ದು ಸಮಯದಲ್ಲಿ ಯುದ್ಧವನ್ನು ಮಾಡಿ ಜಯಶಾಲಿಗಳಾಗಿದ್ದರು. ಸೇನಾಧಿಪತಿ, ಸಕಲ ಸೈನ್ಯಾಧಿಪತಿ, ರಾಹುತ, ದಳವಾಯಿ ಮುಂತಾದ ಅಧಿಕಾರಿಗಳು ಶಾಸನಗಳಲ್ಲಿ ಉಲ್ಲೇಖಿತರಾಗಿದ್ದಾರೆ. ಸೈನ್ಯದಲ್ಲಿ ಎಲ್ಲ ಜಾತಿಯವರಿಗೂ ಪ್ರವೇಶವಿರುತ್ತಿದ್ದಿತು. ಸಿಂಘಣನ ಮುಖ್ಯ ಸೇನಾಧಿಪತಿಗಳಾಗಿದ್ದ ಖೋಲೇಶ್ವರ ಮತ್ತು ರಾಮ, ಬ್ರಾಹ್ಮಣರು; ವಂಕದೇವ ಮತ್ತು ಸಾವಂತ ಠಕ್ಕೂರರು ಕ್ಷತ್ರಿಯರು ; ಮಲ್ಲಿಸೆಟ್ಟಿ, ಕಲ್ಲಿಸೆಟ್ಟಿ ಮೊದಲಾದವರು ವೈಶ್ಯರು.

ಸೇವುಣ ಸೈನ್ಯ ಬಲವು ಎಷ್ಟಿತ್ತೆಂಬುದು ತಿಳಿದಿಲ್ಲ. ಹರಿಹರದ ಶಾಸನವೊಂದರಲ್ಲಿ, ಭಿಲ್ಲಮನ ಸೈನ್ಯದಲ್ಲಿ 200,000 ಸೈನಿಕರೂ ಮತ್ತು 12,000 ಅಶ್ವದಳದವರೂ ಇದ್ದರೆಂದು ಹೇಳಿದೆ.[22] ಮತ್ತೊಂದು ಶಾಸನದ ಪ್ರಕಾರ ಸಿಂಘಣನ ಸೈನ್ಯದಲ್ಲಿ 30,0000 ಅಶ್ವದಳದವರಿದ್ದರೆಂದು ಗೊತ್ತಾಗುತ್ತದೆ.[23] ಬಹುಶಃ ಇದರಲ್ಲಿ ಅತಿಶಯೋಕ್ತಿ ಇರಬಹುದು. ಏಕೆಂದರೆ ಅಲ್ಲಾವುದ್ದೀನನು ದೇವಗಿರಿಯನ್ನು ಮುತ್ತಿದಾಗ, ರಾಮಚಂದ್ರನು ಕೇವಲ 4,000 ಸೈನಿಕರನ್ನು ಮಾತ್ರ ಹೊಂದಿದ್ದನೆಂದು ಗೊತ್ತಾಗುತ್ತದೆ.

ಶಾಸನಗಳಿಂದ ತಿಳಿದು ಬರುವಂತೆ ಈ ಕಾಲದ ಯುದ್ಧಗಳು ಬಹು ಘೋರವಾಗಿರುತ್ತಿದ್ದವು. ಎದುರಾಳಿಯ ಸೈನ್ಯವನ್ನು ಪೂರ್ಣವಾಗಿ ನಾಶಮಾಡುವುದು ಬಹು ಸಾಮಾನ್ಯವಾಗಿದ್ದಿತು. ಸೋಲಿಗಿಂತ ವೀರ ಸ್ವರ್ಗವು ಮೇಲು ಎಂಬ ಭಾವನೆ ಅನೇಕ ಸೇವುಣರ ಶಾಸನಗಳಲ್ಲಿ ಕಾಣಬರುತ್ತದೆ. ಆದುದರಿಂದ ಈ ಕಾಲದ ಸೈನಿಕರು ಶಕ್ತಿಮೀರಿ ಹೋರಾಡಿ ಪ್ರಾಣಾರ್ಪಣೆ ಮಾಡಿ, ವೀರಸ್ವರ್ಗವನ್ನು ಪಡೆಯುತ್ತಿದ್ದರು. ಅಂತಹ ವೀರರಿಗೆ ಗೌರವವು ದೊರಕುತ್ತಿದ್ದಿತು. ಅವರ ಸ್ಮರಣೆಗಾಗಿ ವೀರಗಲ್ಲುಗಳನ್ನು ನೆಡಿಸುತ್ತಿದ್ದರು ಮತ್ತು ಅವರ ಕುಟುಂಬದವರಿ ಗೋಸ್ಕರ ಭೂಮಿಯ ದಾನವನ್ನೂ ಕೊಡುತ್ತಿದ್ದರು. ಶಾಸನಗಳಲ್ಲಿ ಕಾಣಬರುವ ಯುದ್ಧದ ವರ್ಣನೆಗಳು ಅತಿಶಯೋಕ್ತಿಯಿಂದ ಕೂಡಿದ್ದರೂ, ಅವುಗಳಿಂದ ಆ ಕಾಲದ

ಯುದ್ಧದ ಬಗೆಗೆ ಸ್ವಲ್ಪ ಮಾಹಿತಿ ದೊರಕುತ್ತದೆ. ಸೊರಟೂರಿನಿಂದ ಬೆಳ್ವೊಲದ ವರೆಗಿನ ಭೂಮಿಯನ್ನು ಹೊಯ್ಸಳ ರಾಜನು ಉತ್ತು ಸೇವುಣ ಸೈನ್ಯದ ವೀರರ ದೇಹಗಳನ್ನೇ ಗೊಬ್ಬರವಾಗಿ ಚೆಲ್ಲಿಸಿದನೆಂದು ಒಂದು ಶಾಸನವು ಹೇಳುತ್ತದೆ. [24] ಭೂಮಿ ದೇವಿಯು ಕುಡಿಯಲಾರದಷ್ಟು ರಕ್ತವನ್ನು ಯುದ್ಧದಲ್ಲಿ ಚೆಲ್ಲಿಸಿದನೆಂದೂ, ಮಾರ್ಗಗಳು ಮುಂಡಗಳಿಂದ ತುಂಬಿಹೋಗಿ ದಾರಿಯೇ ಕಾಣುತ್ತಿರಲಿಲ್ಲವೆಂದೂ ಮತ್ತೊಂದು ಶಾಸನವು ವರ್ಣಿಸುತ್ತದೆ. [25] ಸೇವುಣ ಸೈನ್ಯಾಧಿಪತಿಗಳ ರುಂಡಗಳನ್ನು ಅಂಬಾರಿಯ ಮೇಲಿನ ಎರಡು ಕಡೆ ನೇತು ಹಾಕಿದ್ದರೆಂದು ಮತ್ತೊಂದು ಶಾಸನದಿಂದ ಗೊತ್ತಾಗುತ್ತದೆ. [26]

ಯುದ್ಧದ ನೈತಿಕ ತತ್ತ್ವಗಳು ಪ್ರತಿಪಾದಿಸಲ್ಪಟ್ಟಿದ್ದರೂ, ಅವುಗಳನ್ನು ಯಾರೂ ಪರಿಪಾಲಿಸುತ್ತಿದ್ದಂತೆ ತೋರುವುದಿಲ್ಲ. ಶತ್ರುವಿನ ಸೇನೆ, ರಾಜ್ಯ ಮತ್ತು ಬೆಳೆಗಳನ್ನು ನಾಶಮಾಡಲು ಯುದ್ಧವು ಒಂದು ಸಾಧನವಾಗಿದ್ದಿತು. ಸಿಂಘಣನು ಗುತ್ತಿಯ ಮೇಲೆ ನಡೆಸಿದ ಯುದ್ಧವನ್ನು ಶಾಸನವೊಂದು ಬಣ್ಣಿಸುತ್ತದೆ. ಸಿಂಘಣನ ಸೈನಿಕರು ಗುತ್ತಿಯ ರಾಜನನ್ನು ಸೋಲಿಸಿ ನಾಡಿಗೆ ಬೆಂಕಿಹಚ್ಚಿ, ತಾವು ಲೂಟಿ ಮಾಡಿದ ವಸ್ತುಗಳನ್ನು ಮುಚ್ಚುಮರೆಯಿಲ್ಲದೆ ಮೆರವಣಿಗೆ ಮಾಡಿಕೊಂಡು ಹೋದರು.[27] ಬಂಡನಿಕೆಯ ಮೇಲಿನ ಯುದ್ಧದಲ್ಲಿ, ಸೈನ್ಯವು ಜನಗಳನ್ನು ಹಿಂಸಿಸಿ, ದವಸ ಧಾನ್ಯಗಳ ಶೇಖರಣಾ ಸ್ಥಳಗಳನ್ನು ಮುತ್ತಿದರು. 'ಕೀರ್ತಿಕೌಮುದಿ'ಯಲ್ಲಿ ಸೋಮೇಶ್ವರನು ಸಿಂಘಣನು ಗುಜರಾತಿನಲ್ಲಿ ನಡೆಸಿದ ದಾಳಿಯನ್ನು ವರ್ಣಿಸಿದ್ದಾನೆ.[28] ಸೇವುಣ ಸೈನ್ಯವು ಮಾರ್ಗದಲ್ಲಿ ಹಳ್ಳಿಗಳಿಗೆ ಬೆಂಕಿಹಚ್ಚಿ, ಬೆಳೆಗಳನ್ನು ಸುಟ್ಟುಬೂದಿಮಾಡಿತು.

ರಥ, ಅಶ್ವ, ಗಜ ಮತ್ತು ಪದಾತಿ ಎಂಬ ಚತುರಂಗ ಬಲಗಳು ಇದ್ದರೂ, ರಥದ ಉಲ್ಲೇಖವು ಸೇವುಣರ ಶಾಸನಗಳಲ್ಲಿ ಅಷ್ಟಾಗಿ ಕಾಣಬರುವುದಿಲ್ಲ. ಕಾಲಾಳುಗಳೇ ಸೈನ್ಯದ ಪ್ರಮುಖ ಅಂಗವಾಗಿದ್ದರು. ಕೋಟೆಗಳನ್ನು ರಕ್ಷಿಸುವಾಗ ಬಿಲ್ಲು ಮತ್ತು ಬಾಣಗಳನ್ನೂ ಮತ್ತು ಯುದ್ಧಭೂಮಿಯಲ್ಲಿ ಕತ್ತಿ, ಗುರಾಣಿ ಮತ್ತು ಭರ್ಜಿಗಳನ್ನೂ ಉಪಯೋಗಿಸುತ್ತಿದ್ದರು. ಐದನೆಯ ಭಿಲ್ಲಮನ ಶಾಸನವೊಂದರಲ್ಲಿ, ಕಂಪನ, ಮುಸುಂಡಿ, ಭಿಂದಿ, ವಾಳ, ಚಾಪ, ಚಕ್ರ, ಶಕ್ತಿ, ಖಳಗ, ತೋಮರ, ಕ್ಷುರಿಕ ಮುಂತಾದ ಆಯುಧಗಳ ಉಲ್ಲೇಖವಿದೆ. [29] ಇವುಗಳ ಸ್ವರೂಪ ವೇನೆಂಬುದು ತಿಳಿದಿಲ್ಲ.

ಅಶ್ವಬಲವು ಯುದ್ಧದಲ್ಲಿ ಪ್ರಧಾನಪಾತ್ರ ವಹಿಸುತ್ತಿದ್ದಂತೆ ಶಾಸನಗಳಿಂದ ತೋರಿಬರುತ್ತದೆ. ಸಾಮಾನ್ಯವಾಗಿ ಸಂಖ್ಯೆಯೂ ಹೆಚ್ಚಾಗಿದ್ದಂತೆ ಕಾಣುತ್ತದೆ. ಸಾಹನಿ, ಪಟ್ಟಸಾಹಾನಾಧಿಪತಿ, ಘೋಡೆಯರಾಯ ಮುಂತಾದ ಅಶ್ವಬಲದ ಅಧಿಕಾರಿಗಳನ್ನು ಶಾಸನಗಳು ಹೆಸರಿಸುತ್ತವೆ. ಅಶ್ವಗಳ ಮೇಲೆ ಕ್ರಮಸಂಖ್ಯೆಯನ್ನು ಗುರುತು ಮಾಡುವ ಪದ್ಧತಿಯಿದ್ದಿತು. 'ಹಮ್ಮೀರಮದರ್ಮನ' ಗ್ರಂಥದಲ್ಲಿ, ರಾಜನ

ಹೆಸರನ್ನು ಗುರುತುಮಾಡಿದ ಅಶ್ವವೊಂದನ್ನು ಬಳುವಳಿಯಾಗಿ ಕೊಟ್ಟ ವಿಷಯವು ಉಲ್ಲೇಖಿತವಾಗಿದೆ. ಶಂಕರಸ್ವಾಮಿ, ಮಲ್ಲೇಯ ಸಾಹನಿ ಮೊದಲಾದ ಅಶ್ವಬಲದ ಅಧಿಕಾರಿಗಳನ್ನು ಶಾಸನಗಳಲ್ಲಿ ಕಾಣಬಹುದು.

ಗಜಬಲವು ಸಮಸ್ತಹಸ್ತಿಪಕಾಧ್ಯಕ್ಷ ಎಂಬ ಅಧಿಕಾರಿಯ ನೇತೃತ್ವದಲ್ಲಿದ್ದಿತು. ಆನೆಗಳನ್ನು ಯುದ್ಧಕ್ಕೆ ತಯಾರುಮಾಡುವವನನ್ನು ಮಾಹುತನೆಂದು ಶಾಸನಗಳು ಕರೆಯುತ್ತವೆ. ರಾಜನು ಆನೆಯ ಮೇಲಿನ ಅಂಬಾರಿಯಲ್ಲಿ ಕುಳಿತು ಉದ್ದವಾದ ಭರ್ಜಿಗಳನ್ನು ಹಿಡಿದು ಯುದ್ಧ ಮಾಡಿದನೆಂದು ಶಾಸನಗಳು ತಿಳಿಸುತ್ತವೆ. ಜಲ್ಹನು, ಗೂರ್ಜರರ ಮೇಲಿನ ಯುದ್ಧದಲ್ಲಿ, ಆನೆಯನ್ನು ಶತ್ರುಸೈನ್ಯದ ಮೇಲೆ ಓಡಿಸಿ, ಸುಲಭವಾಗಿ ಜಯವನ್ನು ಸಂಪಾದಿಸಿದನು. ಕವಿ ಜಲ್ಹಣನ ಪೂರ್ವಜರೆಲ್ಲರೂ ಗಜ ಬಲದಲ್ಲಿ ಪರಿಣತರಾಗಿದ್ದರು. ದಾದ, ಮಹೀಧರ, ಜಲ್ಹ, ಜನಾರ್ಧನ, ಲಕ್ಷ್ಮೀದೇವ, ಮತ್ತು ಜಲ್ಹಣ, ಇವರೆಲ್ಲರೂ ಸೇವುಣರ ಗಜಬಲದಲ್ಲಿ ಕರಿವೃಂದ ನಾಥನಾಗಿದ್ದರು. ಸಿಂಘಣನಿಗೆ ಜನಾರ್ಧನನು ಆನೆಯ ಮೇಲೆ ಕುಳಿತು ಯುದ್ಧ ಮಾಡುವುದನ್ನು ಕಲಿಸಿ ಕೊಟ್ಟನು. ರಾಮಚಂದ್ರನ ಸಮಸ್ತ ಹಸ್ತಿಪಕಾಧ್ಯಕ್ಷನಾಗಿ ಹೇಮಾದ್ರಿಯು ಕೆಲಸ ನಿರ್ವಹಿಸುತ್ತಿದ್ದನು.

ಆಗಿನ ಕಾಲದ ಯುದ್ಧದಲ್ಲಿ ಕೋಟೆಗಳ ಪಾತ್ರ ಮುಖ್ಯವಾದುದು. ರಾಜ್ಯದ ಎಲ್ಲೆಡೆಯಲ್ಲಿಯೂ, ಮುಖ್ಯವಾಗಿ ಬೆಟ್ಟಗುಡ್ಡಗಳ ಮೇಲೆ ಕೋಟೆಗಳನ್ನು ನಿರ್ಮಿಸುತ್ತಿದರು. ಸಿಂಘಣನ ರಾಜ್ಯದಲ್ಲಿ 84 ಕೋಟೆಗಳಿದ್ದವು. ಶಿಲಾಹಾರ ಭೋಜನು ಸಿಂಘಣನಿಂದ ಸೋಲಿಸಲ್ಪಟ್ಟಾಗ, ಅವನು ಪನ್ಹಾಲ ಎಂಬ ಕೋಟೆಯೊಳಗೆ ಅಡಗಿಕೊಂಡನು. ರಾಮಚಂದ್ರನು ಅಲ್ಲಾವುದ್ದೀನನ ಸೈನ್ಯವನ್ನು ನೋಡಿ, ದೇವಗಿರಿಯ ಕೋಟೆಯೊಳಗೆ ಆಶ್ರಯ ಪಡೆದನು. ಐದನೆಯ ಭಿಲ್ಲಮನು ಪರಾಜಿತನಾದಾಗ, ಹೊಯ್ಸಳ ಬಲ್ಲಾಳನು ವಿರಾಟನಗರ, ಕುರುಗೋಡು, ಮಾತಂಗ, ಹಾಲುವೆ, ಮಾನುವೆ, ಕಾಲಡಿ, ಗುತ್ತಿ ಮುಂತಾದ ಕೋಟೆಗಳನ್ನು ವಶಮಾಡಿಕೊಂಡನು. ಇದರಿಂದ ಕೋಟೆಗಳಿಗಿದ್ದ ಮಹತ್ವವು ವ್ಯಕ್ತವಾಗುತ್ತದೆ.

ಸೇವುಣಕಾಲದ ನೌಕಾಸೈನ್ಯದ ವಿಚಾರವಾಗಿ ಹೆಚ್ಚಿನ ಮಾಹಿತಿಗಳು ದೊರಕಿಲ್ಲ. ಆದರೆ ನೌಕಾಸೈನ್ಯವಿದ್ದಿತೆಂದು ಖಚಿತವಾಗಿ ಹೇಳಬಹುದು. ಮಹಾದೇವನು ಶಿಲಾಹಾರ ರಾಜನ ಮೇಲೆ ನೌಕಾಯುದ್ಧವನ್ನು ಮಾಡಿದನೆಂಬುದನ್ನು ಆಗಲೇ ಗಮನಿಸಿದ್ದೇವೆ.

ಕಂದಾಯದ ವಿಚಾರವಾಗಿ ಸೇವುಣರ ಶಾಸನಗಳಿಂದ ಪೂರ್ಣವಿವರಗಳು ದೊರಕುವುದಿಲ್ಲ. ಭೂಕಂದಾಯವೇ ರಾಜಾದಾಯದ ಮುಖ್ಯ ಭಾಗವಾಗಿದ್ದಿತು. ಭೂಮಿಯನ್ನು ಸರಿಯಾಗಿ ಅಳತೆ ಮಾಡಿ ನಂತರ ಕಂದಾಯವನ್ನು ವಿಧಿಸಲಾಗುತ್ತಿದ್ದಿತು. ಚಾವುಂಡರಾಯನು ಭೂಮಿಯನ್ನು ಅಳತೆಮಾಡಿಸಿ, 400 ನಿಷ್ಕಗಳ ಕಂದಾಯವನ್ನು ವಿಧಿಸಿದನೆಂದು ಶಾಸನವೊಂದು ತಿಳಿಸುತ್ತದೆ.[30] ಭೂಮಿಯ

ಅಳತೆಗೆ ಕಚ್ಚವಿಕೋಲ್, ತಿಗುಳಕೋಲ್ ಮತ್ತು ಪರ್ವರಗೋಲ್ ಎಂಬ ಅಳತೆ ಕೋಲುಗಳನ್ನು ಬಳಸುತ್ತಿದ್ದರು. [31] ಈ ಅಳತೆಕೋಲುಗಳ ಸಹಾಯದಿಂದ ಭೂಮಿಯನ್ನು ಮತ್ತರು, ನಿವರ್ತನ, ಕಂಬಗಳೆಂದು ಅಳೆಯುತ್ತಿದ್ದರು. ಭೂಗಂದಾಯವನ್ನು ಧಾನ್ಯರೂಪದಲ್ಲಿಯೂ ದ್ರವ್ಯ ರೂಪದಲ್ಲಿಯೂ ಕೊಡುತ್ತಿದ್ದರೆಂದು ಕಾಣುತ್ತದೆ.

ಧರ್ಮಕಾರ್ಯಗಳಿಗಾಗಿ ಕೊಟ್ಟ ಭೂಮಿಗಳಿಗೆ ಭೂಕಂದಾಯ ಮತ್ತು ಇತರ ತೆರಿಗೆಗಳಿಂದ ಮಾನ್ಯತೆ ದೊರೆಯುತ್ತಿದ್ದಿತು. ಸರ್ವಮಾನ್ಯ, ಅರ್ಧಮಾನ್ಯ, ನಮಸ್ಯ ಮತ್ತು ಉಂಬಳಿಗಳೆಂಬ ವಿವಿಧ ರೀತಿಯ ಮಾನ್ಯತೆಗಳು ಸೇವುಣರ ಶಾಸನಗಳಲ್ಲಿ ಕಾಣಸಿಗುತ್ತವೆ. ಬ್ರಾಹ್ಮಣರಿಗೆ ಅಥವಾ ದೇವಾಲಯಗಳಿಗೆ ಕೊಟ್ಟ ಭೂಮಿಯ ಮೇಲೆ ಕೇಂದ್ರ ಸರ್ಕಾರಕ್ಕೆ ಮತ್ತು ಸ್ಥಳೀಯ ಸಂಸ್ಥೆಗಳಿಗೆ ಕೊಡಬೇಕಾದ ತೆರಿಗೆಗಳಿಂದ ವಿನಾಯಿತಿ ದೊರೆತಿದ್ದನ್ನು ಸರ್ವಮಾನ್ಯಭೂಮಿ ಎಂದು ಕರೆಯುತ್ತಿದ್ದರು. ಸಾಮಾನ್ಯವಾಗಿ ಅಗ್ರಹಾರಗಳು ಈ ರೀತಿಯ ಮಾನ್ಯತೆಗೆ ಸೇರಿದವುಗಳಾಗಿದ್ದವು. ಅರ್ಧಮಾನ್ಯದಲ್ಲಿ ಕೇಂದ್ರಸರ್ಕಾರಕ್ಕೆ ಕೊಡಬೇಕಾದ ಕಂದಾಯಗಳಿಗೆ ವಿನಾಯಿತಿ ದೊರಕಿದರೂ ಸ್ಥಳೀಯ ಸಂಸ್ಥೆಗಳಿಗೆ ಕೊಡಬೇಕಾದ ತೆರಿಗೆಗಳನ್ನು ಕೊಡಲೇಬೇಕಾಗಿದ್ದಿತು. ನಮಸ್ಯವೆಂದರೆ ತೆರಿಗೆಗಳಿಗೆ ಭಾಗಶಃ ವಿನಾಯಿತಿ ದೊರಕಿದವು ಎಂದರ್ಥ. ವೀರರಿಗೆ ಕೊಡುತ್ತಿದ್ದ ಭೂಮಿಗೆ ಉಂಬಳಿ ಎಂದು ಹೆಸರು. ಉಂಬಳಿಗೆ ತೆರಿಗೆಯ ವಿನಾಯಿತಿಯಿರುತ್ತಿದ್ದಿತು.

ತೆರಿಗೆಗಳನ್ನು ವಸೂಲು ಮಾಡಲು ಸುಂಕಾಧಿಕಾರಿ ಅಥವಾ ಸುಂಕದ ಹೆಗ್ಗಡೆ ಎಂಬ ಅಧಿಕಾರಿಗಳಿರುತ್ತಿದ್ದರು. ಸೇವುಣರ ಶಾಸನಗಳಲ್ಲಿ ಅನೇಕ ವಿಧವಾದ ತೆರಿಗೆಗಳ ಹೆಸರುಗಳನ್ನು ಕಾಣುತ್ತೇವೆ. ಆದರೆ ಅವುಗಳ ಸ್ವರೂಪವನ್ನು ತಿಳಿಯುವುದು ಕಷ್ಟವೇ ಸರಿ. ಶೋತ್ರ ಎನ್ನುವುದು ಸರ್ಕಾರದ ಭೂಮಿಯನ್ನು ಉಳುವ ರೈತರಿಂದ ವಸೂಲ್ಮಾಡಲಾಗುತ್ತಿದ್ದ ತೆರಿಗೆ. ಕಟ್ಟಾಚಿ ಮತ್ತು ಕುರುವಣಿಗೆ ಎಂಬುವುದು ಬಹುಶಃ ಭೂಕಂದಾಯವಿರಬಹುದು. ಹೆಜ್ಜುಂಕವು ಸಗಟು ಸರಕಿನ ಮೇಲೆ ವಿಧಿಸುತ್ತಿದ್ದ ಸುಂಕ. ಕಿರುಕುಳ ಸುಂಕವು ಚಿಲ್ಲರೆ ಸಾಮಾನಿನ ಮೇಲೆ ವಿಧಿಸಲಾಗುತ್ತಿದ್ದ ಸುಂಕ. ಶುಲ್ಕ ಎನ್ನುವುದೂ ವಾತಾದೇಯ, ಆವತ ಮತ್ತು ವಾತಪ್ರತ್ಯಯಗಳನ್ನೊಳಗೊಂಡ ಸುಂಕ.ಬಹುಶಃ ಇವು ಆಮದಾದ ವಸ್ತುಗಳ ಮೇಲಿನ ಸುಂಕವಿರಬಹುದು. ದಾನವೆಂಬದೂ ಇದೇ ರೀತಿಯ ಸುಂಕವಿರಬೇಕು. ಅಕ್ಕಿ, ಎಣ್ಣೆ, ವಿಳ್ಳೇದೆಲೆ ಮುಂತಾದ ಆವಶ್ಯಕ ವಸ್ತುಗಳ ಮೇಲೆ ಸುಂಕವನ್ನು ವಿಧಿಸುತ್ತಿರಲಿಲ್ಲ. ಕೋಣನಮೆಯಿದೊರೆ ಎಂಬ ತೆರಿಗೆಯೂ ಇದ್ದಿತೆಂದು ಕೃಷ್ಣನ ಶಾಸನದಿಂದ ತಿಳಿಯುತ್ತದೆ. ನ್ಯಾಯಾಲಯಗಳಲ್ಲಿ ವಿಧಿಸಲಾದ ದಂಡವೂ ಪ್ರಭುತ್ವಕ್ಕೆ ಸೇರುತ್ತಿದ್ದಿತು. ಸ್ಥಳೀಯ ಸಂಸ್ಥೆಗಳೂ ತೆರಿಗೆಗಳನ್ನು ವಿಧಿಸುತ್ತಿದ್ದವು. ಸಿಂಘಣನ ಶಾಸನವೊಂದರಿಂದ ಈ ರೀತಿ ತೆರಿಗೆಯ ಕೆಲವು ವಿವರಗಳು

ತಿಳಿಯುತ್ತವೆ. [32] ಸ್ಥಳೀಯ ದೇವಾಲಯದ ಖರ್ಚಿಗಾಗಿ, ಗ್ರಾಮದಲ್ಲಿ ಮಾರಾಟವಾಗುವ ಎಲ್ಲವಸ್ತುಗಳ ಮೇಲೂ, ಮಾರುವವನಿಂದ ಮತ್ತು ಕೊಳ್ಳುವವನಿಂದ ಒಂದು ಕಾನಿಯು ತೆರಿಗೆಯಾಗಿ ವಸೂಲುಮಾಡಲ್ಪಡುತ್ತಿದ್ದಿತು. ಅಕ್ಕಸಾಲಿಗನು ತಾನು ತಯಾರು ಮಾಡುವ ಪ್ರತಿಯೊಂದು ಚಿನ್ನ ಅಥವಾ ಬೆಳ್ಳಿಯ ಆಭರಣದ ಮೇಲೆ ಒಂದು ಕಾನಿಯನ್ನು ಕೊಡಬೇಕಾಗಿದ್ದಿತು. ಒಂದು ಕಟ್ಟು ವಿಳ್ಳೇದೆಲೆಗೆ, ಐವತ್ತು ವಿಳ್ಳೇದೆಲೆ; ಪ್ರತಿಯೊಂದು ಗಾಣದಮೇಲೂ ಒಂದು ಸೊಂಟಿಗೆ ಎಣ್ಣೆ, ದೇವಾಲಯಕ್ಕಾಗಿ ಕೊಡಬೇಕಾದ್ದಿತು. ಸ್ಥಳೀಯ ವ್ಯಾಪಾರಿಗಳ ಮನೆಯಲ್ಲಿ ಮದುವೆಯು ನಡೆದರೆ ಗಂಡಿನ ಮತ್ತು ಹೆಣ್ಣಿನ ಕಡೆಯವರಿಂದ ಒಂದೊಂದು 'ಚೌಲ'ವನ್ನು ಕೊಡಬೇಕಾಗುತ್ತಿದ್ದಿತು. ಮದುವೆಯು ಹಳ್ಳಿಯ ಹೊರಗಡೆ ಆದರೆ ಆಗ ಒಂದು ಹಾಗವನ್ನು ಕೊಡಬೇಕಾಗಿದ್ದಿತು. ಇದೇ ರೀತಿಯಲ್ಲಿ ರಾಮಚಂದ್ರನ ಕಾಲದ ಶಾಸನವೊಂದು ಇತರ ವಿವರಗಳನ್ನು ತಿಳಿಸುತ್ತದೆ. [33] ಹರಿಹರ ದೇವಾಲಯಕ್ಕಾಗಿ, ಐವತ್ತು ಎತ್ತಿನ ಗಾಡಿ ಅಕ್ಕಿಗೆ ಒಂದು ಮಣ ಅಕ್ಕಿಯೂ, ಹಳ್ಳಿಗೆ ಬರುವ ಇಲ್ಲವೇ ಹಳ್ಳಿಯಿಂದ ಹೊರಗೆ ಹೋಗುವ ಎಲ್ಲಾ ವಸ್ತುಗಳ ಮೇಲೂ ಹಾಗಕ್ಕೆ ಒಂದು ಸೊಲಿಗೆಯಂತೆಯೂ ಒಂದು ತಲೆಹೊರೆ ವಿಳ್ಳೇದೆಲೆಗೆ ನೂರು ವಿಳ್ಳೇದೆಲೆಯಂತೆಯೂ, ತೆರಿಗೆಯಾಗಿ ಕೊಡಬೇಕಾಗಿದ್ದಿತು. ಉದ್ಯೋಗದ ಮೇಲಿನ ತೆರಿಗೆಗಳೂ ಬಳಕೆಯಲ್ಲಿದ್ದವು. ಕೈಕಸುಬುದಾರರ ಮೇಲೆ ವಿಧಿಸುತ್ತಿದ್ದ ತೆರಿಗೆ ಕಾರುಕ, ಸಾಡ, ಸಾರಿಗೆ, ಆನೆ, ಗೋಸಾನೆ ಮುಂತಾದ ತೆರಿಗೆಗಳ ಉಲ್ಲೇಖವಿದ್ದರೂ ಅವುಗಳ ವಿಷಯವು ತಿಳಿದುಬಂದಿಲ್ಲ.

ಇವಿಷ್ಟೇ ನಮಗೆ ಸೇವುಣರ ಶಾಸನಗಳಿಂದ ಮತ್ತು ಇತರ ಗ್ರಂಥಗಳಿಂದ ತಿಳಿದುಬರುವ ವಿಷಯ. ಒಟ್ಟಿನಲ್ಲಿ ಹೇಳುವುದಾದರೆ, ಸೇವುಣರ ರಾಜ್ಯಭಾರ ಕ್ರಮವು ಕರ್ಣಾಟಕದ ಇತರ ರಾಜಮನೆತನಗಳ ರಾಜ್ಯಭಾರಕ್ರಮಕ್ಕಿಂತ ವಿಶೇಷವಾಗಿ ಭಿನ್ನವಾಗಿದ್ದಂತೆ ತೋರುವುದಿಲ್ಲ.

## ಟಿಪ್ಪಣಿಗಳು

1 IA, Vol. XIV, P. 69
2 ಅದೇ,
3 ಅದೇ, Vol, VII, P. 14
4 ಅದೇ, Vol, XII, P. 119
5 EI, Vol, XXIII, P. 189
6 Dinkar Desai : Mahamandalesvaras, P, 371
7 Altekar : The Rastrakutas, P. 165
8 Mahalingam : South Indian Polity, P. 120

9 Altekar : State and government in Ancient India P. 173
10 33 of 1932-33
11 Karnatak Inscription, Vol. IV, no 54
12 EI, Vol. XXV, P. 199
13 Mahalingam : South Indian Polity, P. 18
14 EI. Vol. XIX, P. 194
15 G.S. Dikshit : Local Self government in Medieval Karnataka, P. 26-27
16 169 of 1933-34
17 BK 107 of 1932-33
18 BK I of 1930-31
19 B 400 of 1960-61
20 BK 106 of 1935-36
21 EC, Vol. VIII ಸೊರಬ 387
22 ಅದೇ, Vol. XI, ದಾವಣಗೆರೆ 25
23 ಅದೇ, Vol. VIII ಸೊರಬ 319
24 ಅದೇ, ಸೊರಬ 319
25 ಅದೇ, Vol. V, Cn 179
26 ಅದೇ, Vol. XI, ದಾವಣಗೆರೆ 25
27 ಅದೇ, Vol. VIII ಸೊರಬ 319
28 ಕೀರ್ತಿಕೌಮುದಿ, ಸರ್ಗ 4, ಶ್ಲೋಕ 42-53
29 240 of 1953-54
30 JBBRAS, Vol. XII, P. 49
31 MAR, 1928, no. 69, EC, Vol. VII GJ 21 ಮತ್ತು 130 of 1940-41
32 Hyderabad Archaeological Series, no. 18, Inscription 17.
33 EC, Vol. XI, ದಾವಣಗೆರೆ 97

* * *

ಅಧ್ಯಾಯ ೧೩

# ಸಾಮಾಜಿಕ ಮತ್ತು ಧಾರ್ಮಿಕಸ್ಥಿತಿ

ಸೇವುಣರ ಕಾಲದಲ್ಲಿ ಪ್ರಾಚೀನಕಾಲದ ಸಾಮಾಜಿಕ ಮತ್ತು ಧಾರ್ಮಿಕ ಪರಿಸ್ಥಿತಿಗಳು ಮುಂದುವರಿಯುವುದನ್ನೂ ಮತ್ತು ಹೊಸ ಸ್ಥಿತಿಗಳು ಬೆಳಕಿಗೆ ಬರುವುದನ್ನೂ ಕಾಣುತ್ತೇವೆ. ಜಾತಿ ಪದ್ಧತಿಯು ಈ ಕಾಲದಲ್ಲಿ ಮುಂದುವರಿಯಿತು. ಜಾತಿಪದ್ಧತಿಯನ್ನು ರಕ್ಷಿಸುವುದು ರಾಜನ ಕರ್ತವ್ಯಗಳಲ್ಲೊಂದಾಗಿದ್ದಿತು. ರಾಮಚಂದ್ರನು ವರ್ಣಧರ್ಮಗಳ ರಕ್ಷಕ ಎಂದು ಶಾಸನವೊಂದರಲ್ಲಿ ವರ್ಣಿತನಾಗಿದ್ದಾನೆ.[1] ಅವನ ಮಂತ್ರಿಯಾದ ಪುರುಷೋತ್ತಮನು, ಪ್ರಜೆಗಳು ವರ್ಣಧರ್ಮಗಳನ್ನು ಅನುಸರಿಸುವಂತೆ ಶ್ರಮಿಸಿದನೆಂದು ಹೇಳಿದೆ. [2] ಬ್ರಾಹ್ಮಣರು ಮೇಲ್ಮಟ್ಟದವರೆಂದು ಪರಿಗಣಿತರಾಗಿದ್ದರು. ಆದರೆ ಉತ್ತಮಜಾತಿಯ ಜನಗಳಿಂದ ಕೆಳಜಾತಿಯ ಜನಗಳು ತೊಂದರೆಗೀಡುಮಾಡಲ್ಪಟ್ಟ ಯಾವ ನಿದರ್ಶನಗಳೂ ಶಾಸನಗಳಲ್ಲಿ ಕಾಣಬರುವುದಿಲ್ಲ. ನಾಲ್ಕುವರ್ಣಗಳ ಜೊತೆಗೆ, ವೀರಶೈವ, ಸಾಲೇಯ, ಗೊಲ್ಲ, ಕುಂಬಾರ, ಮ್ಲೇಚ್ಛ, ಬೇಡ, ಬಣ್ಣಗಾರ, ಹೊಲೆಯ, ಮಾದಿಗ, ತಾಂಬೂಲಿಗ ಮುಂತಾದ ಉಪಜಾತಿಗಳ ಹೆಸರುಗಳೂ ಶಾಸನಗಳಲ್ಲಿ ಕಾಣುತ್ತವೆ.[3] ಹೇಮಾದ್ರಿಯು, ಚರ್ಮಕಾರ, ನಟ, ವರುಡ, ಚಂಡಾಲ, ರಾಜಕ, ಕೈವರ್ತ, ನಾಪಿತ, ಸಾನ್ವಿಕ, ಲೋಹಕಾರ, ಶುನಶ್ಚಕ್ರಿ, ಧ್ವಾಜಿ, ಭಿಲ್ಲ ಮೊದಲಾದ ಉಪಜಾತಿಗಳನ್ನು ಪ್ರಾಯಶ್ಚಿತ್ತ ಖಂಡದಲ್ಲಿ ಹೆಸರಿಸುತ್ತಾನೆ. [4] ಇವೆಲ್ಲವೂ ಕಸುಬಿನ ಆಧಾರದ ಮೇಲೆ ಪ್ರಾರಂಭವಾದ ಉಪಜಾತಿಗಳು. ಅಂತರ್ಜಾತೀಯ ವಿವಾಹ ಮತ್ತು ಭೋಜನಗಳು ಸಾಮಾನ್ಯವಾಗಿ ನಿಷಿದ್ಧವಾಗಿದ್ದವು. ಈ ನಿಯಮಗಳನ್ನು ಉಲ್ಲಂಘಿಸಿದವರು ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕಾಗಿದ್ದಿತು. ಕುಲಾಲಸ್ತ್ರೀ ಗಮನ, ಚಂಡಾಲೀಗಮನ, ಶೂದ್ರಸ್ತ್ರೀ ಗಮನಗಳಿಗೂ ಹೇಮಾದ್ರಿಯು ಪ್ರಾಯಶ್ಚಿತ್ತಗಳನ್ನು ವಿಧಿಸಿದ್ದಾನೆ. 'ಜ್ಞಾನೇಶ್ವರೀ' ಗ್ರಂಥದಲ್ಲಿ, ಬ್ರಾಹ್ಮಣರು ಎಷ್ಟೇ ಬಡವರಾಗಿದ್ದರೂ, ಶೂದ್ರನ ಅಂಗಡಿಯಿಂದ ಸಿಹಿ ತಿಂಡಿಯನ್ನು ಕೊಂಡು ತಿನ್ನ ಬಾರದು ಎಂದು ಹೇಳಿದೆ. [5] ಇದರಿಂದ ಆಗಿನ ಕಾಲದ ಜಾತಿಕಟ್ಟುಪಾಡುಗಳು ಬಹಳ ಬಿಗಿಯಾಗಿದ್ದವೆಂದು ಸ್ಪಷ್ಟವಾಗುತ್ತದೆ.

ವರ್ಣಧರ್ಮದ ಇನ್ನೊಂದು ಮುಖವಾದ ಆಶ್ರಮಧರ್ಮವೂ ಈ ಕಾಲದಲ್ಲಿ ಮುಂದುವರಿಯಿತು. ಗೃಹಸ್ಥಾಶ್ರಮವು ಎಲ್ಲ ಆಶ್ರಮಗಳಿಗಿಂತಲೂ ಉತ್ತಮವಾದು

ದೆಂಬ ಅಭಿಪ್ರಾಯವು ಶಾಸನಗಳಲ್ಲಿ ಕಾಣಬರುತ್ತದೆ. ಗೃಹಸ್ಥರು, ಬ್ರಹ್ಮಯಜ್ಞ, ಔಪಾಸನ, ಶ್ರಾದ್ಧ, ದಾನ ಮುಂತಾದ ಸಕಲ ಕರ್ಮಗಳನ್ನೂ ನಿಷ್ಠೆಯಿಂದ ನಡೆಸಿಕೊಂಡು ಹೋಗುತ್ತಿದ್ದರು. ಭಿಲ್ಲಮನ ಮಂತ್ರಿಯೊಬ್ಬನು ಸ್ನಾನ, ದಾನ ಮುಂತಾದವುಗಳನ್ನು ಬಹುನಿಷ್ಠೆಯಿಂದ ಮಾಡುತ್ತಿದ್ದನೆಂದು ಶಾಸನವೊಂದು ಹೊಗಳುತ್ತದೆ.[6] ಅಗ್ನಿಷ್ಟಿಕಾದಾನವು ಬಹಳ ಜನಾನುರಾಗಿಯಾಗಿದ್ದಿತು. ಇದು ದೇವಗಿರಿಯ ಸಮೀಪದಲ್ಲಿರುವ ಪಿಂಪಲ್‌ಗಾಂವ್ ಎಂಬಲ್ಲಿ ವಿಶೇಷವಾಗಿ ನಡೆಸಲ್ಪಡುತ್ತಿದ್ದಿತೆಂದು 'ಲೀಲಾಚರಿತ'ದಿಂದ ತಿಳಿಯುತ್ತದೆ. ಹೇಮಾದ್ರಿಯೂ ಈ ದಾನವನ್ನು ವಿಶದವಾಗಿ ವರ್ಣಿಸಿದ್ದಾನೆ. ಇದು ಹೇಮಂತ ಮತ್ತು ಶಿಶಿರ ಋತುಗಳಲ್ಲಿ ಗೃಹಸ್ಥನು ಪತ್ನಿಯೊಡಗೂಡಿ, ಅಗ್ನಿಯನ್ನು ಸ್ಥಾಪನೆಮಾಡುವ ಕ್ರಮಗಳನ್ನೊಳಗೊಂಡಿದ್ದಿತು.

ಅವಿಭಕ್ತ ಕುಟುಂಬಗಳೇ ಈ ಕಾಲದಲ್ಲಿ ರೂಢಿಯಲ್ಲಿದ್ದ ಸಾಮಾಜಿಕ ಪದ್ಧತಿ. ಸಾಮಾನ್ಯವಾಗಿ ಶಾಸನಗಳಿಂದ, ತಂದೆ, ಮಕ್ಕಳು ಒಟ್ಟಿಗೆ ಇರುತ್ತಿದ್ದುದು ತಿಳಿದು ಬರುತ್ತದೆ. ಅಲ್ಲೊಂದು ಇಲ್ಲೊಂದು, ಇದಕ್ಕೆ ಹೊರತಾದ ಉದಾಹರಣೆಗಳೂ ದೊರೆಯುತ್ತವೆ. ರಾಮಚಂದ್ರನ ಶಾಸನವೊಂದರಲ್ಲಿ ತಂದೆ ಮತ್ತು ಮಕ್ಕಳು ಬೇರೆ ಬೇರೆಯಾಗಿ ಸಂಸಾರ ನಡೆಸುತ್ತಿದ್ದುದಾಗಿ ಹೇಳಿದೆ.[7] ಇದೇ ರೀತಿಯ ನಡವಳಿಕೆ ಯನ್ನು ಕೃಷ್ಣನ ಶಾಸನವೊಂದರಲ್ಲಿಯೂ ಕಾಣಬಹುದು. ಕುಟುಂಬದಲ್ಲಿ ಸಾಮಾನ್ಯವಾಗಿ ಎಲ್ಲರೂ ಪ್ರೀತಿ ವಿಶ್ವಾಸಗಳಿಂದಿದ್ದುದು ನಮ್ಮ ಗಮನಕ್ಕೆ ಬರುತ್ತದೆ. ಸಮಗ್ರ ಕುಟುಂಬದ ಶ್ರೇಯೋಭಿವೃದ್ಧಿಗಾಗಿ ಮಾಡಿದ ಅನೇಕ ಪ್ರಾರ್ಥನೆಗಳು, ಧಾರ್ಮಿಕ ಕಾರ್ಯಗಳು ಶಾಸನಗಳಲ್ಲಿ ದೊರಕುತ್ತವೆ. ರಾಜ ಎರಡನೆಯ ಭಿಲ್ಲಮನು ತನ್ನ ತಂದೆತಾಯಿಗಳ ಮತ್ತು ತನ್ನ ಒಳಿತಿಗೋಸ್ಕರ ಅನೇಕ ದಾನಗಳನ್ನು ಕೊಟ್ಟನು. ಸಿಂಘಣನ ಶಾಸನವೊಂದರಲ್ಲಿ, ದಾನಿಯು ತನ್ನ ಮಾತಾಪಿತೃಗಳ ಮತ್ತು ಮುಂದೆ ಬರುವ ಇಪ್ಪತ್ತೊಂದು ತಲೆಮಾರಿನವರಿಗೋಸ್ಕರ, ದಾನಗಳನ್ನು ಕೊಟ್ಟನೆಂದು ಹೇಳಿದೆ. [8]

ತೀರ್ಥಯಾತ್ರೆಗಳು ಈ ಕಾಲದಲ್ಲಿ ಬಹು ಜನಾನುರಾಗಿಯಾಗಿದ್ದವು. ರಾಮ್ ಟೇಕ್ ಶಾಸನದಲ್ಲಿ ತೀರ್ಥಯಾತ್ರಾಸ್ಥಳಗಳ ಪಟ್ಟಿಯನ್ನು ಕಾಣಬಹುದು. [9] ವಾಜಿಮೇಘತೀರ್ಥ, ಮಣಿಕಾಲಕುಂಡ, ಮೋಕ್ಷಕುಂಡ, ರಾಮತೀರ್ಥ, ಧರ್ಮೇಶ್ವರ, ಮುಕ್ತೇಶ್ವರ, ಘಂಟೇಶ್ವರ, ಸುಧೇಶ್ವರ, ಇವುಗಳೇ ಅಲ್ಲಿ, ಹೆಸರಿಸಲ್ಪ ಟ್ಟಿರುವ ಸ್ಥಳಗಳು. ಈ ಪುಣ್ಯ ಸ್ಥಳಗಳಲ್ಲಿ, ಸಂಕ್ರಾಂತಿ, ಗ್ರಹಣ ಮುಂತಾದ ತಿಥಿಗಳಲ್ಲಿ ದಾನಗಳನ್ನು ವಿಶೇಷವಾಗಿ ಕೊಡುತ್ತಿದ್ದರು. ಈ ರೀತಿಯ ದಾನಗಳ ಲ್ಲದೆ, ಆಶ್ರಮ ಧರ್ಮಕ್ಕನುಗುಣವಾಗಿ ಅನೇಕ ದಾನಗಳನ್ನು ಮಾಡುತ್ತಿದ್ದರು. ಹೇಮಾದ್ರಿಯು ತನ್ನ ಗ್ರಂಥ 'ಚತುರ್ವರ್ಗ ಚಿಂತಾಮಣಿ'ಯಲ್ಲಿ ದಾನಗಳಿಗೋಸ್ಕರ ದಾನಖಂಡವೆಂಬ ಭಾಗವನ್ನೇ ರಚಿಸಿದ್ದಾನೆ. ದಾನಗಳು ಮಹಾದಾನಗಳು

ಮುಂತಾದವನ್ನು ಹೇಮಾದ್ರಿಯು ವಿಶದವಾಗಿ ವರ್ಣಿಸಿದ್ದಾನೆ. ಆದರೆ ಈ ದಾನಗಳು ಎಷ್ಟರಮಟ್ಟಿಗೆ ಜನಸಾಮಾನ್ಯರಲ್ಲಿ ಬಳಕೆಯಲ್ಲಿದ್ದವು ಎಂಬುದನ್ನು ಹೇಳಲು ಶಾಸನಗಳಲ್ಲಿ ದೊರೆತಿರುವ ಮಾಹಿತಿ ಸಾಲದು.

ಮತೀಯ ವ್ರತಗಳು ಬಹಳ ಜನಾನುರಾಗಿಯಾಗಿದ್ದವು. ಹೇಮಾದ್ರಿಯು ವ್ರತಖಂಡದಲ್ಲಿ ಸಾವಿರಕ್ಕೂ ಹೆಚ್ಚು ವ್ರತಗಳನ್ನು ವಿಶದವಾಗಿ ವರ್ಣಿಸಿದ್ದಾನೆ. ದೈನಂದಿಕ ವ್ರತಗಳು, ಮಾಸಿಕವ್ರತಗಳು, ಋತುವ್ರತಗಳು, ವಿಶೇಷವ್ರತಗಳು ಇಷ್ಟಕಾಮ್ಯ ಸಂಪೂರ್ಣ ವ್ರತಗಳು ಮುಂತಾದ ವಿವಿಧ ರೀತಿಯ ವ್ರತಗಳನ್ನು ಜನಗಳು ಆಚರಿಸುತ್ತಿದ್ದರು.

ಧಾರ್ಮಿಕ ಅಥವಾ ಮತೀಯ ನಿಯಮಗಳ ಉಲ್ಲಂಘನೆಗಾಗಿ ಪ್ರಾಯಶ್ಚಿತ್ತ ಗಳನ್ನು ಅವಶ್ಯಕವಾಗಿ ಮಾಡಬೇಕಾಗಿದ್ದಿತು. ಹೇಮಾದ್ರಿಯು ಪ್ರಾಯಶ್ಚಿತ್ತ ಖಂಡದಲ್ಲಿ ಇವುಗಳನ್ನು ಚರ್ಚಿಸಿದ್ದಾನೆ. ಅನ್ನ, ಕುದುರೆ, ಸ್ತ್ರೀ, ಹೆಂಡತಿ ಇವರು ಗಳನ್ನು ಮಾರುವುದು; ಗೋ ಮತ್ತು ಗುರುಹತ್ಯ, ರಾಕ್ಷಸ ಮತ್ತು ಪೈಶಾಚ ವಿವಾಹ ಗಳು, ಮುಂತಾದವುಗಳು ಪ್ರಾಯಶ್ಚಿತ್ತಾರ್ಹ ಅಪರಾಧಗಳಾಗಿದ್ದವು. ಒಟ್ಟಿನಲ್ಲಿ ಹೇಳುವುದಾದರೆ ಧಾರ್ಮಿಕ ನಿಯಮಗಳು ಮತ್ತು ಆಚಾರಗಳು ಸಾಮಾಜಿಕ ಜೀವನದ ಮುಖ್ಯ ಅಂಗಗಳಾಗಿದ್ದವು.

ಜನಗಳು ವಿವಿಧ ರೀತಿಯ ಮನೆಗಳಲ್ಲಿ ವಾಸಮಾಡುತ್ತಿದ್ದರು. 'ಜ್ಞಾನೇಶ್ವರಿ'ಯ ಆಧಾರದ ಮೇಲೆ, ಬಡವರು ಸಣ್ಣ ಮನೆಗಳಲ್ಲೂ, ಬಲ್ಲಿದರು ಮಹಡಿಯ ಮನೆ ಗಳಲ್ಲೂ ವಾಸಿಸುತ್ತಿದ್ದರೆಂದು ಹೇಳಬಹುದು. ಮನೆಗಳಲ್ಲಿ ಮರದ ಪೀಠೋ ಪಕರಣಗಳು ವಿಶೇಷವಾಗಿರುತ್ತಿದ್ದವು. ಕೆಲವು ಬಲ್ಲಿದರ ಮನೆಗಳಲ್ಲಿ, ಗೋಡೆಗಳ ಮೇಲೆ ರಾಮಾಯಣ ಮಹಾಭಾರತದ ಕಥೆಯ ವರ್ಣಚಿತ್ರಗಳೂ ಇರುತ್ತಿದ್ದವು. ಕೆಲವು ರಸ್ತೆಗಳಲ್ಲಿ ಒಂದೇ ರೀತಿಯ ಮನೆಗಳನ್ನು ಕಟ್ಟಬೇಕಾಗಿದ್ದಿತು. ಇದರಿಂದ ಏಕರೂಪತೆಯುಂಟಾಗಿ ನಗರವು ಸುಂದರವಾಗಿ ಕಾಣುತ್ತಿದ್ದಿತೆಂದು 'ಜ್ಞಾನೇಶ್ವರಿಯು' ತಿಳಿಸುತ್ತದೆ. ಬೊಗ್ಗುವಳ್ಳಿಯ ಮಹಾಜನಗಳು, ಮೊದಲನೆಯ ಸಾಲಿನಲ್ಲಿರುವ ಮನೆಗಳು ಹನ್ನೊಂದು ಭಾಗ ಉದ್ದರವಿರಬೇಕೆಂದೂ ಎರಡನೆಯ ಸಾಲಿನ ಮನೆಗಳು ಹತ್ತುಭಾಗ ಉದ್ದವಿರಬೇಕೆಂದೂ ಮತ್ತು ಪ್ರತಿಯೊಂದು ಮನೆಯ ಹೊರಗೂ ಎಂಟು ಕಂಬಗಳ ಹೂದೋಟವಿರಬೇಕೆಂದೂ ತೀರ್ಮಾನಮಾಡಿದ್ದ ರೆಂದು ಶಾಸನವೊಂದು ತಿಳಿಸುತ್ತದೆ. [10]

ಆ ಕಾಲದ ಜನಗಳ ಉಡಿಗೆ ತೊಡಿಗೆಗಳ ಉಲ್ಲೇಖಗಳು 'ಜ್ಞಾನೇಶ್ವರಿ'ಯಲ್ಲಿ ಕಾಣಸಿಗುತ್ತವೆ. ಧೋತಿ ಮತ್ತು ಉತ್ತರೀಯಗಳೇ ಬಹುಸಾಮಾನ್ಯವಾದ ಪುರುಷರ ಉಡುಗೆಯಾಗಿದ್ದಿತು. ಕೆಲವರು ಶರೀರದ ಮೇಲ್ಭಾಗಕ್ಕೆ ಹೊಲಿದು ಸಿದ್ಧಪಡಿಸಿದ ಕೋಟಿನಂತಹ ತೊಡುಗೆಯನ್ನು ಉಪಯೋಗಿಸುತ್ತಿದ್ದರು. ಆ ಕಾಲದ ವೀರಗಲ್ಲು ಗಳಿಂದ 'ಜ್ಞಾನೇಶ್ವರಿ'ಯ ಮಾಹಿತಿಯು ಪುಷ್ಟೀಕರಿಸಿದಂತಾಗುತ್ತದೆ. ಚನ್ನದ

ಆಭರಣಗಳು ಬಹಳ ವಿಶೇಷವಾಗಿ ಬಳಕೆಯಲ್ಲಿದ್ದವು. ಬಳೆಗಳು, ಸರಗಳು, ಕಂಕಣಗಳು, ಉಂಗುರಗಳು, ಡಾಬುಗಳು, ಕಿವಿಯ ಆಭರಣಗಳು ಬಹಳ ಬಳಕೆಯಲ್ಲಿದ್ದ ಆಭರಣಗಳು.

ಸಾತ್ವಿಕ, ರಾಜಸ ಮತ್ತು ತಾಮಸ ಆಹಾರಗಳನ್ನು ಚರ್ಚಿಸುವಾಗ, ಜ್ಞಾನೇಶ್ವರಿಯು ಆಗಿನ ಕಾಲದ ಅನೇಕ ಖಾದ್ಯಪದಾರ್ಥಗಳನ್ನು ಹೆಸರಿಸುತ್ತದೆ. ಅನ್ನ, ಹಾಲು ಮತ್ತು ಹಾಲಿನಿಂದ ತಯಾರಾದ ಪದಾರ್ಥಗಳು ವಿಶೇಷವಾಗಿ ಬಳಕೆಯಲ್ಲಿದ್ದವು. ಉತ್ತಮ ಕುಲದವರು ಮಾಂಸವನ್ನು ತಿನ್ನುತ್ತಿರಲಿಲ್ಲ. ಅಷ್ಟೇ ಅಲ್ಲದೆ ವಿಶೇಷ ಖಾದ್ಯ ಪದಾರ್ಥಗಳನ್ನು ತಿನ್ನುವ ವಿಚಾರದಲ್ಲಿ ನಿಯಮಗಳೂ ಇದ್ದವು. ಕಾರಣವಿಲ್ಲದೆ, ಪಾಯಸವನ್ನು ತಿನ್ನಕೂಡದೆಂದು ಹೇಮಾದ್ರಿಯು ನಿಯಮವನ್ನು ವಿಧಿಸಿ, ಇದನ್ನು ಉಲ್ಲಂಘಿಸಿದವರು ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕಾಗಿದ್ದಿತೆಂದೂ ಹೇಳಿದ್ದಾನೆ.

ಮನರಂಜನೆಗಾಗಿ ಬೇಟೆಯಾಡುವುದು, ಈಜುವುದು, ಕುಸ್ತಿಮಾಡುವುದು, ಬಹಳ ವಿಶೇಷವಾಗಿದ್ದವು. ಸಂತೆಗಳ ಮತ್ತು ಜಾತ್ರೆಗಳ ಸಮಯದಲ್ಲಿ ಎಮ್ಮೆ, ಎತ್ತಿನ ಮತ್ತು ಹಂದಿಗಳ ಕಾಳಗವನ್ನು ಏರ್ಪಡಿಸುತ್ತಿದ್ದರು. ಬಲ್ಲಿದರು ಪಗಡೆ ಆಟವೇ ಮೊದಲಾದ ದ್ಯೂತಗಳಲ್ಲಿ ಆಸಕ್ತಿಯನ್ನು ಹೊಂದಿದ್ದರು. ನೃತ್ಯ, ನಾಟಕ ಮತ್ತು ಬೊಂಬೆಯಾಟಗಳೂ ಬಹು ಸಾಮಾನ್ಯವಾಗಿದ್ದವು.

ದೇವಗಿರಿಯನ್ನು ಸಂದರ್ಶಿಸಿದ ಇಬ್ನ್ ಬತೂತ ಎಂಬ ಚರಿತ್ರಕಾರನು ಆ ಕಾಲದ ಸ್ತ್ರೀಯರ ವಿಚಾರವಾಗಿ ಅನೇಕ ಮೆಚ್ಚುಗೆಯ ಮಾತುಗಳನ್ನು ಆಡಿದ್ದಾನೆ. ಉತ್ತಮ ಕಾಲದ ಸ್ತ್ರೀಯರು ನೋಡಲು ಅಂದವಾಗಿಯೂ, ಸಂಗೀತ ಕಲೆಯಲ್ಲಿ ಆಸಕ್ತಿ ಹೊಂದಿದವರಾಗಿಯೂ ಇದ್ದರೆಂದು ಹೇಳಿದ್ದಾನೆ. [11] 'ಲೇಖಪದ್ಧತಿ' ಎಂಬ ಸಮಕಾಲೀನ ಗ್ರಂಥದಲ್ಲಿಯೂ ಇದೇ ರೀತಿಯ ಮಾಹಿತಿ ದೊರಕುತ್ತದೆ. ಸ್ತ್ರೀಯರು ಸಾರ್ವಜನಿಕ ಕಾರ್ಯದಲ್ಲಿ ಭಾಗವಹಿಸುತ್ತಿದ್ದರು. ಭಾಗೂಬಾಯಿ, ಮೈಲೂಬಾಯಿ, ಪದ್ಮಲದೇವಿ ಮುಂತಾದ ಸ್ತ್ರೀಯರು ರಾಜ್ಯದ ಆಡಳಿತದಲ್ಲಿಯೂ ಭಾಗವಹಿಸುತ್ತಿದ್ದರು. ಯುದ್ಧದಿಂದ ಹಿಂದಿರುಗಿದ ವೀರರನ್ನು ಎದುರುಗೊಂಡು ಅವರಿಗೆ ಹಾರಗಳನ್ನು ಹಾಕುವುದು ಸ್ತ್ರೀಯರ ಕೆಲಸವಾಗಿದ್ದಿತೆಂದು ಗೊತ್ತಾಗುತ್ತದೆ.[12]

ಹದಿನೈದು ವರ್ಷ ತುಂಬುವುದಕ್ಕೆ ಮುಂಚೆ ಕನ್ಯೆಯರಿಗೆ ವಿವಾಹವಾಗಬೇಕೆಂದು ಹೇಮಾದ್ರಿಯು ನಿರೂಪಿಸಿದ್ದಾನೆ. [13] ಹಾಗಿಲ್ಲದಿದ್ದರೆ, ಅದಕ್ಕೊಂದು ಪ್ರಾಯಶ್ಚಿತ್ತವಾಗಬೇಕಾಗುತ್ತಿದ್ದಿತು. ಆದರೆ 'ಜ್ಞಾನೇಶ್ವರಿಯು' ಕನ್ಯೆಯರು ಯುವತಿಯರಾದ ಮೇಲೆ ಮಾತ್ರ ಮದುವೆಯಾಗುತ್ತಿದ್ದರು ಎಂದು ತಿಳಿಸುತ್ತದೆ.[14] ಮದುವೆಯನ್ನು ತೀರ್ಮಾನಿಸುತ್ತಿದ್ದವರು ಕನ್ಯೆಯ ತಂದೆತಾಯಿಗಳಾದರೂ ವರನಿಗೆ ಕನ್ಯೆಯನ್ನು ತೋರಿಸಿ ಅವನ ಒಪ್ಪಿಗೆಯನ್ನು ಪಡೆಯುತ್ತಿದ್ದರು. ಒಳ್ಳೆಯ ವಂಶವು

ಮದುವೆಗೆ ಮುಖ್ಯವಾಗಿ ಎರಡೂ ಕಡೆಯವರು ಗಮನಿಸುತ್ತಿದ್ದ ಅಂಶ. ಸ್ವಯಂವರವು ಬಹುವಿರಳವಾಗಿದ್ದಿತು. 'ಜ್ಞಾನೇಶ್ವರಿಯ' ಪ್ರಕಾರ ಸ್ತ್ರೀಯರು ತಮ್ಮ ಪತಿಗೆ ವಿಧೇಯರಾಗಿದ್ದು, ಯಾವಾಗಲೂ ತಮ್ಮ ಪತಿಯ ಒಳ್ಳೆಯದ ಕ್ಕಾಗಿಯೇ ಶ್ರಮಿಸುತ್ತಿದ್ದರೆಂದು ತಿಳಿದು ಬರುತ್ತದೆ. ಆದರೆ ವಿವಾಹಿತ ಸ್ತ್ರೀಯರು ತಮ್ಮ ಪತಿಯನ್ನು ಬಿಟ್ಟು ಪರಪುರುಷರೊಂದಿಗೆ ಓಡಿಹೋದ ಸಂಗತಿಗಳನ್ನೂ 'ಜ್ಞಾನೇಶ್ವರಿ'ಯು ಉಲ್ಲೇಖಿಸುತ್ತದೆ. [15] ಮಹಾನುಭಾವ ಪಂಥವು ಜನಾನುರಾಗಿ ಯಾದ ಮೇಲೆ ಸ್ತ್ರೀಯರು ಸನ್ಯಾಸಿಗಳಾಗುವುದು ಹೆಚ್ಚಾಯಿತು. ವಾಮನ ಪಂಡಿತ ನೆಂಬುವನ ಪತ್ನಿಯು ತನ್ನ ಗಂಡನ ಅಪ್ಪಣೆ ಪಡೆದು ಚಕ್ರಧರನ ಶಿಷ್ಯಳಾಗಿ ಸನ್ಯಾಸ ವನ್ನು ತೆಗೆದುಕೊಂಡಳೆಂದು 'ಲೀಲಾಚರಿತ'ದಲ್ಲಿ ಹೇಳಿದೆ. [16]

ವ್ಯಭಿಚಾರದ ವಿಚಾರದಲ್ಲಿ ಸಮಕಾಲೀನ ಗ್ರಂಥಗಳು ಮಾಹಿತಿಯನ್ನು ಒದಗಿಸುತ್ತವೆ. ವ್ಯಭಿಚಾರಿಸ್ತ್ರೀಯರನ್ನು 'ಜ್ಞಾನೇಶ್ವರಿ'ಯು ವಿವಿಧ ಹೆಸರುಗಳಿಂದ ಉಲ್ಲೇಖಿಸಿದೆ. [17] ವೇಶ್ಯಾ, ಸಾಮಾನ್ಯಸ್ತ್ರೀ, ವಾಣಾಸೀ, ಪಣ್ಯಾಂಗನಾ, ಹಟಬೇಟೀಂ ಚಾಕಳತ್ರ ಇವೇ ಆ ಪದಗಳು. ವ್ಯಭಿಚಾರಿ ಸ್ತ್ರೀಯರು ನಗರದ ಕೆಲವು ಭಾಗಗಳಲ್ಲಿ ಮಾತ್ರ ವಾಸಿಸುತ್ತಿದ್ದುದಾಗಿಯೂ ತಿಳಿದುಬರುತ್ತದೆ. ತಮ್ಮ ಪತಿಗೆ ತಿಳಿಯದಂತೆ ಕೆಲವು ಸ್ತ್ರೀಯರು ವ್ಯಭಿಚಾರಿಗಳಾಗಿದ್ದರೆಂದು ಜ್ಞಾನೇಶ್ವರಿಯು ತಿಳಿಸುತ್ತದೆ. ವ್ಯಭಿಚಾರವು ಅನಾಚಾರವೆಂದು ಪರಿಗಣಿಸಲ್ಪಟ್ಟಿದ್ದಿತು. ಹೇಮಾದ್ರಿಯು ಇದಕ್ಕೆ ಅನೇಕ ಪ್ರಾಯಶ್ಚಿತ್ತಗಳನ್ನು ವಿಧಿಸಿದ್ದಾನೆ. ಧಾರ್ಮಿಕ ದತ್ತಿಗಳಾಗಿ ಕೊಟ್ಟ ಹಳ್ಳಿ ಗಳಲ್ಲಿ ವ್ಯಭಿಚಾರಿಗಳು ಇರಕೂಡದೆಂಬ ನಿಯಮವು ಇರುತ್ತಿದ್ದಿತು.

ಸತೀ ಅಥವಾ ಸಹಗಮನ ಪದ್ಧತಿಯು ಈ ಕಾಲದಲ್ಲಿ ರೂಢಿಯಲ್ಲಿದ್ದಿತು. ವಿಧೇಯಳಾದ ಪತ್ನಿಯು ಯಾವ ವಿಧವಾದ ದುಃಖವೂ ಇಲ್ಲದೆ ಗಂಡನೊಡನೆ ಚಿತೆಯಲ್ಲಿ ಸಾಯುತ್ತಿದ್ದಳೆಂದು 'ಜ್ಞಾನೇಶ್ವರಿಯು' ತಿಳಿಸುತ್ತದೆ. ಗಣೇಶ್ವರನ ಪತ್ನಿಯಾದ ಬೊಮ್ಮಾಯಿಯು ಸತಿಯನ್ನು ಮಾಡಿ ಸ್ವರ್ಗವನ್ನು ಸೇರಿದಳೆಂದು ಶಾಸನವೊಂದು ತಿಳಿಸುತ್ತದೆ. [18] ರಾಮಚಂದ್ರನ ಪತ್ನಿಯಾದ ಕಾಮಾಯೀ ಎಂಬು ವಳು ಸಹಗಮನ ಮಾಡಲು ಇಷ್ಟಪಡಲಿಲ್ಲ, ಆದರೆ ಮಿಕ್ಕ ಎಲ್ಲ ರಾಣಿಯರೂ ಸಹಗಮನವನ್ನು ಮಾಡಿದರು. ಇದರಿಂದ ಪ್ರಜೆಗಳೂ ಮತ್ತು ಆಕೆಯ ಮಗನಾದ ಸಿಂಘಣನೂ ಕೋಪಗೊಂಡರು. ಕಾಮಾಯಿಯ ತಂದೆಯೂ ಆಕೆಯು ಸಹಗಮನ ವನ್ನು ಮಾಡಬೇಕೆಂದೂ, ಇಲ್ಲವಾದರೆ ಅವರ ವಂಶವೆಲ್ಲವೂ ಕಳಂಕಯುಕ್ತವಾಗು ವುದೆಂದೂ, ಬುದ್ಧಿವಾದ ಹೇಳಿದನು. ಕೊನೆಗೆ ಕಾಮಾಯಿಯು ತನ್ನ ಮಗನನ್ನೇ ಪ್ರಾಣಭಿಕ್ಷೆ ಕೇಳಿದಳೆಂದೂ, ಸಿಂಘಣನು ಅದಕ್ಕೆ ಒಪ್ಪಿದನೆಂದೂ, 'ನಾಗದೇವಾ ಚಾರ್ಯ ಚರಿತ'ವೆಂಬ ಗ್ರಂಥವು ತಿಳಿಸುತ್ತದೆ. [19]

ದಾಸ್ಯಪದ್ಧತಿಯು ಈ ಕಾಲದಲ್ಲಿ ಪ್ರಚಲಿತವಾಗಿದ್ದಿತು. ಪುರುಷರು ಮತ್ತು ಸ್ತ್ರೀಯರು ದಾಸ್ಯಪದ್ಧತಿಗೆ ಒಳಗಾಗಿದ್ದರು. ಮಹಾರಾಷ್ಟ್ರದಿಂದ ಹಿಡಿದುತಂದ

ದಾಸಿಯರನ್ನು ಮಾರುತ್ತಿದ್ದುದು 'ಲೇಖಪದ್ಧತಿ' ಎಂಬ ಗ್ರಂಥದಿಂದ ತಿಳಿಯುತ್ತದೆ.[20]

ಮುಸ್ಲಿಂ ಚರಿತ್ರಕಾರರ ಬರವಣಿಗೆಯಿಂದ ದೇವಗಿರಿಯು ಎಷ್ಟೊಂದು ಸಂಪದ್ಭರಿತವಾಗಿದ್ದಿತೆಂದು ತಿಳಿಯುತ್ತದೆ. ರಾಮಚಂದ್ರನು ಅಲ್ಲಾವುದ್ದೀನನಿಗೆ ಕೊಟ್ಟ ಕಾಣಿಕೆಯ ವಿವರಗಳಿಂದ ರಾಮಚಂದ್ರನ ಐಶ್ವರ್ಯವನ್ನು ಊಹಿಸಬಹುದು. 600 ಮಣ ಮುತ್ತುಗಳು 2 ಮಣ ವಜ್ರಗಳು, 1000 ಮಣ ಬೆಳ್ಳಿ ಮತ್ತು 4000 ರೇಷ್ಮೆ ವಸ್ತ್ರಗಳು ಇವುಗಳನ್ನು ರಾಮಚಂದ್ರನು ಅಲ್ಲಾ ವುದ್ದೀನನಿಗೆ ಒಪ್ಪಿಸಿದನು. ಪ್ರಕೃತಿ ಸಂಪತ್ತು ಸೇವುಣ ರಾಜ್ಯದಲ್ಲಿ ಹೇರಳವಾಗಿದ್ದಿತು. ಭೂಮಿಯು ಫಲವತ್ತಾಗಿದ್ದು, ವಿವಿಧ ಮರಗಳು ಬೆಳೆಯುತ್ತಿದ್ದವು. ಕಬ್ಬು, ಕದಂಬಕ, ತೆಂಗು, ಅಡಿಕೆ, ನಿಂಬೆ, ಹಲಸು, ಸೇಬು, ಕಿತ್ತಳೆ, ಲವಂಗ, ವಿಳ್ಳೇದೆಲೆ ಸುರಹೊನ್ನೆ ಪಾರಿಜಾತ, ಪುನ್ನಾಗ ಮೊದಲಾದವುಗಳನ್ನು ಹೇರಳವಾಗಿ ಬೆಳೆಯುತ್ತಿದ್ದರೆಂದು ಶಾಸನವೊಂದು ತಿಳಿಸುತ್ತದೆ. [21]

ವ್ಯವಸಾಯವೇ ಮುಖ್ಯ ಕಸುಬಾಗಿದ್ದಿತು. ಎಮ್ಮೆಗಳನ್ನು ಕಟ್ಟಿ ಭೂಮಿಯನ್ನು ಉಳುತ್ತಿದ್ದರು. ಇತರ ಕಸುಬುಗಳಲ್ಲಿ ಬಟ್ಟೆ ನೇಯುವುದು ಮುಖ್ಯವಾಗಿದ್ದಿತು. ಉತ್ತಮವಾದ ರೇಷ್ಮೆ ಬಟ್ಟೆಗಳಿಗೆ ಸೇವುಣ ರಾಜ್ಯವು ಪ್ರಸಿದ್ಧಿಯಾಗಿದ್ದಿತೆಂದು ಜ್ಞಾನೇಶ್ವರಿಯು ತಿಳಿಸುತ್ತದೆ. ಇಬ್ನ್ ಬತೂತನ ಪ್ರಕಾರ ದೇವಗಿರಿಯು ಆಭರಣಗಳನ್ನು ತಯಾರು ಮಾಡುವ ಕಲೆಗೆ ಬಹು ಪ್ರಸಿದ್ಧಿಯಾಗಿದ್ದಿತು. [22] ದೇವಗಿರಿಯಲ್ಲಿ ತಯಾರಾದ ಬಣ್ಣ ಬಣ್ಣದ ಚಾಪೆಗಳು ಹೊರದೇಶಗಳಿಗೆ ರಫ್ತಾಗುತ್ತಿದ್ದುವೆಂದು ಮಾರ್ಕೊಪೋಲೊ ತಿಳಿಸಿದ್ದಾನೆ. [23] ಸೇವುಣ ರಾಜ್ಯದ ಥಾಣ ನಗರವು ಚರ್ಮದ ಕೆಲಸಕ್ಕೆ ಹೆಸರಾಗಿದ್ದಿತು.

**ಧಾರ್ಮಿಕ ಸ್ಥಿತಿ :** 'ನಾಸಿಕಕಲ್ಪ'ವೆಂಬ ಗ್ರಂಥದ ಪ್ರಕಾರ ದೃಢಪ್ರಹಾರನು ಜೈನಗುರು ಚಂದ್ರಪ್ರಭಾಸ್ವಾಮಿಗಳ ಆಶ್ರಯದಲ್ಲಿ ಬೆಳೆದವನು. ಇವನ ಅನಂತರ ಆಳಿದ ಎಲ್ಲ ರಾಜರು ಜೈನಧರ್ಮಾವಲಂಬಿಗಳಾಗಿದ್ದರೆಂದು ಹೇಳಲು ಆಧಾರಗಳಿಲ್ಲ. ಮೂರನೆಯ ಸೇವುಣಚಂದ್ರನು ಜೈನಧರ್ಮೀಯಾಗಿದ್ದನು. ಇವನ ಅಂಜನೇರಿ ಶಾಸನವು ಜೈನಸೂತ್ರದಿಂದ ಪ್ರಾರಂಭವಾಗುತ್ತದೆ. [24] ನಾಂದಿಪದ್ಯದಲ್ಲಿ ಪಂಚಪರಮೇಷ್ಠಿ, ಅರ್ಹನ್, ಸಿದ್ಧ, ಆಚಾರ್ಯ ಮತ್ತು ಉಪಾಧ್ಯಾಯ ಇವರ ಉಲ್ಲೇಖವು ಬರುತ್ತದೆ. ಇವನು ಚಂದ್ರಪ್ರಭಾಸ್ವಾಮಿಯ ದೇವಾಲಯಕ್ಕೆ ಅನೇಕ ದಾನಗಳನ್ನು ಕೊಟ್ಟನು. ಇತರ ಸೇವುಣರಾಜರು ಜೈನಧರ್ಮಕ್ಕೆ ಸಾಕಷ್ಟು ಪ್ರೋತ್ಸಾಹವನ್ನು ಕೊಟ್ಟರು. ಸಿಂಘಣನು ಪುರೀಕ ನಗರದಲ್ಲಿ ಜಿನಾಲಯವನ್ನು, ಪಾರ್ಶ್ವನಾಥನ ದೇವಾಲಯವನ್ನು ಮತ್ತು ಅನಂತ ತೀರ್ಥಂಕರನ ದೇವಾಲಯವನ್ನೂ ನಿರ್ಮಿಸಲು ದತ್ತಿಗಳನ್ನು ಕೊಟ್ಟನು. ಕೃಷ್ಣನು ಜೈನಮುನಿ ಸಕಲಚಂದ್ರದೇವನಿಗೆ ದತ್ತಿಗಳನ್ನು ಕೊಟ್ಟನು. ರಾಮಚಂದ್ರನು ಹುಣಿಸೆಹಳ್ಳಿಯನ್ನು ಜಿನಾಲಯ

ಕ್ಕಾಗಿ ದಾನಕೊಟ್ಟನು. ಅವನಿಗೆ ಜಿನಭಟ್ಟಾರಕನೆಂಬ ರಾಜಗುರುವೂ ಇದ್ದನು. ರಾಮಚಂದ್ರನ ಮಂತ್ರಿಯಾಗಿದ್ದ ಪಾಯಿದೇವನು ಜೈನಬಸ್ತಿಯನ್ನು ಕಟ್ಟಿಸಿದನು. ಸೇವುಣರ ಸಾಮಂತರಲ್ಲನೇಕರು ಜೈನಧರ್ಮೀಯರಾಗಿದ್ದರು. ಮಹಾಪ್ರಧಾನರಾದ ಮಲ್ಲ, ಬಾಚ ಮತ್ತು ಪಾಯಿಸೆಟ್ಟಿ, ಇವರು ಕಮಲಸೇನ ಮುನಿಯ ಅಪ್ಪಣೆಮೇರೆಗೆ ಜೈನಬಸ್ತಿಯನ್ನು ನಿರ್ಮಿಸಿದರು. ರಾಮಚಂದ್ರನ ಮಂತ್ರಿಗಳಾದ ಕೂಚಿರಾಜ ಮತ್ತು ಚತ್ತರಾಜ ಪದ್ಮಸೇನಯತಿಯ ಭಕ್ತರಾಗಿದ್ದರು. ಬಿಜಾಪುರ ಜಿಲ್ಲೆಯ ಮುನಿವಳ್ಳಿ ಮತ್ತು ಧಾರ್ವಾಡದ ಕಡಕೊಳಗಳು ಜೈನ ಕೇಂದ್ರಗಳಾಗಿದ್ದವು. ಜೈನಧರ್ಮದ ಪ್ರಕಾರ ಅನೇಕರು ಅನುನೀಗಿದಸಂಗತಿಗಳೂ ಕಾಣುತ್ತವೆ. ಸೋಮಯ್ಯದೇವನು ಸಮಾಧಿಯಿಂದ ಮರಣವನ್ನಪ್ಪಿದನು.

ಸೇವುಣರು ವಿಷ್ಣುವಂಶಕ್ಕೆ ಸೇರಿದವರಾಗಿ, ವಿಷ್ಣುವಂಶೋದ್ಭವ ಎಂಬ ಬಿರುದನ್ನು ಧರಿಸಿದಾಗ್ಯೂ, ಶೈವಧರ್ಮದಲ್ಲಿ ವಿಶೇಷ ಶ್ರದ್ಧೆಯನ್ನಿಟ್ಟಿದ್ದು, ಅದಕ್ಕೆ ಪ್ರೋತ್ಸಾಹಕೊಟ್ಟರು. ಕಾಳಾಮುಖ ಶೈವಧರ್ಮವು ಈ ಕಾಲದಲ್ಲಿ ವಿಶೇಷವಾಗಿದ್ದಂತೆ ತೋರುತ್ತದೆ. ಕಾಶ್ಮೀರದವರಾದ ಈ ಕಾಳಾಮುಖರು ಬಹುಪ್ರಾಚೀನಕಾಲದಿಂದಲೇ ದಕ್ಷಿಣಾಪಥದಲ್ಲಿ ನೆಲಸಿದ್ದಂತೆ ಕಾಣುತ್ತದೆ. ಅವರು ಲಾಕುಲಾಗಮ ಅಥವಾ ಲಕುಲೀಶ ಸಿದ್ಧಾಂತವನ್ನು ಅನುಸರಿಸುತ್ತಿದ್ದು, ದಂಡಧಾರಿಗಳಾಗಿದ್ದರು. ಅವರಲ್ಲಿ ಬ್ರಹ್ಮಚಾರಿಗಳು (ನೈಷ್ಠಿಕ ಬ್ರಹ್ಮಚಾರಿ) ಮತ್ತು ಗೃಹಸ್ಥ (ಸಸ್ತ್ರೀಕ) ಎಂಬ ಎರಡು ಭೇದವಿದ್ದಿತು. ಸಾಮಾನ್ಯವಾಗಿ ಶಕ್ತಿ, ರಾಶಿ, ಪಂಡಿತ, ಶಿವ, ಆಭರಣ ಮುಂತಾದವುಗಳನ್ನು ಇವರು ತಮ್ಮ ಹೆಸರಿನ ಕೊನೆಯಲ್ಲಿ ಸೇರಿಸಿಕೊಳ್ಳುತ್ತಿದ್ದರು. ಸಂತತಿ, ಆಮ್ನಾಯ, ಆವಳಿ, ಪರ್ಷೆ ಮುಂತಾದ ಭಿನ್ನತೆಗಳು ಇವರಲ್ಲಿದ್ದವು. ತಲೆಬುರುಡೆಯಲ್ಲಿ ಊಟ ಮಾಡುವುದು, ಹೆಣಸುಟ್ಟಬೂದಿಯಿಂದ ತಮ್ಮ ಮೈಯನ್ನು ಬಳಿದುಕೊಳ್ಳುವುದು, ಮುಂತಾದವು ಗಳು ಇವರ ಕೆಲವು ವಿಲಕ್ಷಣ ಪದ್ಧತಿಗಳು.

ಸೇವುಣರ ಕಾಲದಲ್ಲಿ, ಎರಡನೆಯ ಭಿಲ್ಲಮನ ಸಂಗಮ್‌ನೇರ್ ಶಾಸನದಲ್ಲಿ ಮೊಟ್ಟಮೊದಲನೆಯದಾಗಿ ಕಾಳಾಮುಖರ ಉಲ್ಲೇಖ ಬರುತ್ತದೆ.[25] ಇವನು ವಿಜಯಾಭರಣನಿಗೆ ದೇವಾಲಯವನ್ನು ಕಟ್ಟಿಸಿದುದಾಗಿ ಹೇಳಿದೆ. ಐದನೆಯ ಭಿಲ್ಲಮನು ಕಾಳಾಮುಖ ಪಂಥಕ್ಕೆ ಪ್ರೋತ್ಸಾಹಕೊಟ್ಟನು. ಇವನು ವಿಜಯಾಭರಣನ ಶಿಷ್ಯನಾದ ಸಿದ್ಧನಾಥನಿಗೆ ಅನೇಕ ದತ್ತಿಗಳನ್ನು ಕೊಟ್ಟನು. ಸಿಂಘಣನ ತಿಳಿವಳ್ಳಿ, ದೇವಸ್ಥಾನಕಲ್ಲು ಶಾಸನಗಳಿಂದ ಕಾಳಾಮುಖ ಗುರುಗಳಾದ ರುದ್ರಶಕ್ತಿ ಮತ್ತು ಸರ್ವೇಶ್ವರ ಶಕ್ತಿಗಳ ವಿಚಾರವು ತಿಳಿಯುತ್ತದೆ.

ವಿದ್ಯಾಭರಣ
|
ಗೋಕರ್ಣ
|
ಕುಮಾರ
|
ಸರ್ವೇಶ್ವರಶಕ್ತಿ
|
ರುದ್ರಶಕ್ತಿ

ಇವರಲ್ಲಿ ಸರ್ವೇಶ್ವರಶಕ್ತಿ ಮತ್ತು ರುದ್ರಶಕ್ತಿ ಇಬ್ಬರೂ ಕುಬ್ಬಟೂರು ಮಠದ ಗುರುಗಳಾಗಿದ್ದರು. ತಿಳಿವಳ್ಳಿಶಾಸನದಿಂದ ಈ ಕಾಳಾಮುಖ ಗುರುಗಳು ಬಹಳ ವಿದ್ಯಾವಂತರಾಗಿದ್ದರೆಂದು ತಿಳಿಯುತ್ತದೆ. ಇವರು ನಾಲ್ಕು ವೇದಗಳು, ವೇದಾಂಗ ಗಳು, ತರ್ಕ, ವ್ಯಾಕರಣ, ಕಾವ್ಯ, ಲಕುಲಾಗಮ ಮುಂತಾದವುಗಳಲ್ಲಿ ಪಂಡಿತ ರಾಗಿದ್ದರು. ಬಳ್ಳಿಗಾವೆ ಮತ್ತು ಕುಬ್ಬಟೂರು ಸೇವುಣರಾಜ್ಯದಲ್ಲಿ ಕಾಳಾಮುಖ ಕೇಂದ್ರಗಳಾಗಿದ್ದವು. ಸಿಂಘಣನ ಮಂತ್ರಿಯಾದ ಹೆಮ್ಮೆಯನಾಯಕನು ಬಳ್ಳಗಾವೆಯ ಕೋಡಿಯ ಮಠದ ಭಕ್ತನಾಗಿದ್ದನು. ಇವನು ತನ್ನ ಪತ್ನಿಯೊಡಗೂಡಿ ಈ ಮಠಕ್ಕೆ ಅನೇಕ ದತ್ತಿಗಳನ್ನು ಬಿಟ್ಟುಕೊಟ್ಟನು. ಕೋಡಿಯ ಮಠದಲ್ಲಿ ಕ್ರಮವಾಗಿ ಈ ಕೆಳಗೆ ಕಂಡ ಗುರುಗಳು ಇದ್ದರು.

ಕೇದಾರಶಕ್ತಿ
|
ಶ್ರೀಕಂಠ ೧
|
ಸೋಮೇಶ್ವರ
|
ವಿದ್ಯಾಭರಣ
|
ವಾಮಶಕ್ತಿ ೧
|
ಗೌತಮ
|

ವಾಮಶಕ್ತಿ ೨
|
ಶ್ರೀಕಂಠ ೨
|
ವಾಮಶಕ್ತಿ ೩

ಹೆಮ್ಮೇಯ ನಾಯಕನು ೩ನೆಯ ವಾಮಶಕ್ತಿಗೆ ದಾನಗಳನ್ನು ಕೊಟ್ಟನು. ಕಾಳಾಮುಖರು ಕರ್ಣಾಟಕದಲ್ಲಿ ವಿಜಯನಗರ ಕಾಲದವರೆಗೂ ಇದ್ದರೆಂದು ತಿಳಿದು ಬಂದಿದ್ದರೂ ಕೃಷ್ಣನ ಕಾಲದಲ್ಲಿ ಅವರ ಉಲ್ಲೇಖವು ಕಡಿಮೆಯಾಗುತ್ತದೆ. ಮಹಾನುಭಾವ ಮತ್ತು ವೀರಶೈವ ಪಂಥಗಳು ಪ್ರಾಬಲ್ಯ ಹೊಂದಿದ ನಂತರ ಕಾಳಾಮುಖರ ಪ್ರಭಾವವು ಕಡಿಮೆಯಾಗಿರಬೇಕು.

ಸೇವುಣರು ವೀರಶೈವ ಧರ್ಮಕ್ಕೂ ಪ್ರೋತ್ಸಾಹಕೊಟ್ಟರು. ಐದನೆಯ ಭಿಲ್ಲಮ, ಸಿಂಘಣ, ಕೃಷ್ಣ, ಮಹಾದೇವ ಮುಂತಾದವರ ಶಾಸನಗಳಲ್ಲಿ ವೀರಶೈವ ಆಲಯಗಳಿಗೆ ಕೊಟ್ಟ ದಾನಗಳ ವಿವರಗಳು ತಿಳಿದು ಬರುತ್ತದೆ. ವೀರಶೈವ ಸಂತ ಸಿದ್ಧರಾಮನು ಹುಟ್ಟಿದ ಸ್ಥಳವಾದ ಸೊನ್ನಲಿಗೆ ಕ್ಷೇತ್ರವು ಖ್ಯಾತ ವೀರಶೈವ ಧಾರ್ಮಿಕ ಕೇಂದ್ರವಾಗಿದ್ದಿತು. ಸಿದ್ಧರಾಮನ ವಚನಗಳು ಸೇವುಣರ ಶಾಸನಗಳಲ್ಲಿ ಉದಾಹರಿಸಲ್ಪಟ್ಟಿವೆ.[26] ಸೊನ್ನಲಿಗೆಯಲ್ಲಿ ಕಪಿಲಸಿದ್ಧಮಲ್ಲಿಕಾರ್ಜುನ ದೇವಾಲಯ ವಿದ್ದಿತು. ಇದು ಅಭಿನವ ಶ್ರೀ ಶೈಲದಕ್ಷಿಣ ವಾರಾಣಸೀ ಎಂದು ಖ್ಯಾತಿ ಪಡೆದಿದ್ದಿತು. ಈ ದೇವಾಲಯಕ್ಕೆ ಐದನೆಯ ಭಿಲ್ಲಮನ ಕಾಲದಿಂದ ದತ್ತಿಗಳು ಕೊಡಲ್ಪಟ್ಟವು. ಅವನ ಮಹಾಪ್ರಧಾನನೊಬ್ಬನು ಚೋರಹರಿಗೆ ಎಂಬ ಹಳ್ಳಿಯನ್ನೇ ದತ್ತಿಯಾಗಿ ಕೊಟ್ಟನು. ಜೈತುಗಿಯು ಜಂಬುಗಾವೆ ಎಂಬ ಗ್ರಾಮವನ್ನು ಈ ದೇವಾಲಯಕ್ಕೆ ಬಿಟ್ಟು ಕೊಟ್ಟನು. ಸಿಂಘಣನ ಮಂತ್ರಿಗಳಾದ ಹೊನ್ನ ಬೊಮ್ಮಿಸೆಟ್ಟಿ, ಕೇಶವನಾಯಕ, ಶ್ರೀರಾಮ, ಕೃಷ್ಣನ ಮಂತ್ರಿಗಳಾದ ಕೂಚರಸ, ಚತ್ತರಸ, ಮಹಾದೇವನ ಮಂತ್ರಿಗಳಾದ ದೇವರಾಜ ಮುಂತಾದವರು ಸೊನ್ನಲಿಗೆಯ ಮಲ್ಲಿಕಾರ್ಜುನ ದೇವಾಲಯಕ್ಕೆ ಅನೇಕ ದತ್ತಿಗಳನ್ನು ಕೊಟ್ಟರು. ಮಹಾದೇವನ ಮಹಾಪ್ರಧಾನನಾದ ದೇವರಾಜನು ಮಲ್ಲಿಕಾರ್ಜುನ ದೇವರ ದರ್ಶನದಿಂದ ಪಾವನಗೊಂಡನು ಎಂದು ಶಾಸನವೊಂದು ತಿಳಿಸುತ್ತದೆ.

ಧಾರ್ವಾಡ ಜಿಲ್ಲೆಯ ಹಾವೇರಿಯು ವೀರಶೈವ ಕೇಂದ್ರಗಳಲ್ಲೊಂದಾಗಿದ್ದಿತು.[27] ಇಲ್ಲಿನ ಸಿದ್ಧನಾಥ ದೇವಾಲಯಕ್ಕೆ ಕರ್ಣಾಟಕದ ಇತರ ಭಾಗಗಳಿಂದ ಭಕ್ತರು ದರ್ಶನಕ್ಕಾಗಿ ಬರುತ್ತಿದ್ದರು. ತಿಪ್ಪರಸ, ದೇಚಿಸೆಟ್ಟಿ, ಬೈಚರಸ ಮೊದಲಾದ ಮಂತ್ರಿಗಳು ಈ ದೇವಾಲಯಕ್ಕೆ ಧನ ಮತ್ತು ಗ್ರಾಮಗಳನ್ನು ದಾನವಾಗಿ ಕೊಟ್ಟಿದ್ದರು. ಅಕ್ಕಲ ಕೋಟೆಯಲ್ಲಿರುವ ಹಿಲ್ಲಿ ಎಂಬುದು ಮತ್ತೊಂದು ವೀರಶೈವ

ಕೇಂದ್ರವಾಗಿದ್ದಿತು.[28] ಇಲ್ಲಿದ್ದ ಕೂಡಲ ಸಂಗಮ ದೇವಾಲಯವು ದಕ್ಷಿಣಾ ಪಥದಲ್ಲೇ ಖ್ಯಾತವಾಗಿದ್ದು, ಭಕ್ತರು ಎಲ್ಲ ಕಡೆಗಳಿಂದಲೂ ಇಲ್ಲಿಗೆ ಬರುತ್ತಿದ್ದರು. ಸಂಗಮನಾಯಕ, ಕುಪ್ಪರಸ ಮುಂತಾದವರು ಈ ದೇವಾಲಯಕ್ಕೆ ಅನೇಕ ದತ್ತಿ ಗಳನ್ನು ಕೊಟ್ಟರು. ಚಿತ್ರದುರ್ಗ ಜಿಲ್ಲೆಯ ಹೆಮ್ಮನಬೇತೂರು ಮತ್ತೊಂದು ವೀರ ಶೈವ ಕೇಂದ್ರ. ಇದು ಜಂಗಮ ಪೂಜೆಗೆ ಬಲು ಹೆಸರಾಗಿದ್ದಿತು. ಹಾಲಬಸವಿದೇವ ನೆಂಬುವನು ಜಂಗಮ ಮತ್ತು ಲಿಂಗ ಪೂಜೆ, ಪ್ರಸಾದಭಕ್ಷಣ ಮೊದಲಾದ ಕಾರ್ಯ ಗಳನ್ನು ಬಹುಶ್ರದ್ಧೆಯಿಂದ ಮಾಡುತ್ತಿದ್ದನೆಂದು ಶಾಸನವೊಂದು ತಿಳಿಸುತ್ತದೆ.[29] ಚಾಮುಂಡರಸನ ಮರಣಾನಂತರ ವೀರಶೈವ ಧರ್ಮಕ್ಕನುಗುಣವಾಗಿ ಅವನ ಅಪರ ಕರ್ಮಗಳು ಮಾಡಲ್ಪಟ್ಟವು ಎಂದು ಇನ್ನೊಂದು ಶಾಸನದಿಂದ ಗೊತ್ತಾಗುತ್ತದೆ.[30] ರಾಮಚಂದ್ರನ ಕಾಲದಲ್ಲಿ ವೀರಶೈವ ಪಂಥಕ್ಕೆ ಅಷ್ಟೊಂದು ಪ್ರೋತ್ಸಾಹ ಸಿಕ್ಕಿದಂತೆ ಕಾಣುವುದಿಲ್ಲ. ಆಗಿನ ಕಾಲದಲ್ಲಿ ಮಹಾನುಭಾವ ಪಂಥವು ಪ್ರಾಮುಖ್ಯವಾಗಿದ್ದು ದರಿಂದ ವೀರಶೈವ ಧರ್ಮಕ್ಕೆ ದೊರಕುತ್ತಿದ್ದ ಪ್ರೋತ್ಸಾಹವು ಕಡಿಮೆಯಾಯಿತೆಂದು ಹೇಳಬಹುದು.

ಸೇವುಣರು ವೈಷ್ಣವರು; ವಿಷ್ಣುವಂಶೋದ್ಭವ ಎಂಬ ಬಿರುದನ್ನು ಅವರ ಶಾಸನಗಳಲ್ಲಿ ಕಾಣುತ್ತೇವೆ. ಅವರ ರಾಜಲಾಂಛನವೂ ವೈಷ್ಣವ ಚಿಹ್ನೆಯಾದ ಗರುಡ. ಸಿಂಘಣನು ವಿಷ್ಣುವನ್ನು ತನ್ನ ಹೃದಯದಲ್ಲಿಟ್ಟುಕೊಂಡು ಕ್ಷೀರ ಪಯೋಧಿಯನ್ನೂ ನಾಚಿಸುವಂತೆ ಮಾಡಿದನೆಂದು ಶಾಸನವೊಂದು ತಿಳಿಸುತ್ತದೆ.[31] ವಿಷ್ಣುವಿನ ಪಾದ ಕಮಲಗಳಿಗೆ ತಾನು ಸಲ್ಲಿಸಿದ ಪೂಜೆಯ ಪುಣ್ಯಫಲದಿಂದ ತನಗೆ ಸಿಂಹಾಸನವು ದೊರಕಿತು ಎಂದು ಕೃಷ್ಣನು ಶಾಸನವೊಂದರಲ್ಲಿ ಹೇಳಿಕೊಂಡಿ ದ್ದಾನೆ.[32]

ಬಿಜಾಪುರದಲ್ಲಿ ನರಸಿಂಹದೇವರ ಆಲಯವೊಂದಿದ್ದಿತು. ಜೈತುಗಿ, ಸಿಂಘಣ, ಕೃಷ್ಣ, ಮಹಾದೇವ ಮತ್ತು ರಾಮಚಂದ್ರ ಇವರುಗಳು ಈ ದೇವಾಲಯಕ್ಕೆ ಅನೇಕ ದತ್ತಿಗಳನ್ನು ಬಿಟ್ಟುಕೊಟ್ಟರು. ಬಳ್ಳಾರಿ ಜಿಲ್ಲೆಯಲ್ಲಿದ್ದ ನರಸಿಂಹ ದೇವಾಲಯಕ್ಕೂ ಮತ್ತು ಲಕ್ಷ್ಮೀನಾರಾಯಣ ದೇವಾಲಯಕ್ಕೂ ಸೇವುಣರಾಜರು ಅನೇಕ ದತ್ತಿಗಳನ್ನು ಕೊಟ್ಟರು.

ಪಂಢರಾಪುರದ ವಿಠಲನ ಉಪಾಸನೆಗೆ ಈ ಕಾಲದಲ್ಲಿ ಹೆಚ್ಚು ಮಹತ್ವವಿದ್ದಿತು. ಜ್ಞಾನದೇವನು ಈ ಉಪಾಸನೆಯ ಮುಖ್ಯ ಗುರುವಾಗಿದ್ದನು. ಜ್ಞಾನದೇವನ ಚರಿತ್ರೆಯು ಪ್ರಚಲಿತವಾಗಿರುವ ದಂತಕಥೆಗಳಿಂದ ಮಾತ್ರ ತಿಳಿದು ಬರುತ್ತದೆ. ಇವನು ಬ್ರಾಹ್ಮಣ ಜಾತಿಯವನು. ರುಕ್ಮಾಬಾಯಿ ಮತ್ತು ವಿಠ್ಠಲಪಂತರ ಮಗ. ಇವನಿಗೆ ನಿವೃತ್ತಿನಾಥ, ಸೋಪಾನ ಎಂಬ ಸಹೋದರರೂ, ಮುಕ್ತಾಬಾಯಿ ಎಂಬ ಸಹೋದರಿಯೂ ಇದ್ದರು. ತಂದೆಯ ಮರಣಾನಂತರ ಜ್ಞಾನದೇವನು, ತನ್ನ ಅಣ್ಣ ನಿವೃತ್ತಿನಾಥನ ಆಶ್ರಯದಲ್ಲಿದ್ದು, ಅನಂತರ ಕಾಶಿಗೆ ಹೋಗಿ ಅಲ್ಲಿ ಸನ್ಯಾಸಿ

ಯಾದನು. ಜ್ಞಾನದೇವನು ಭಗವದ್ಗೀತೆಗೆ ಒಂದು ವ್ಯಾಖ್ಯಾನವನ್ನು ಮತ್ತು 'ಅಮೃತಾನುಭವ' ಎಂಬ ಗ್ರಂಥವನ್ನು ಬರೆದನು. ದೇವರ ಧ್ಯಾನಮಾಡುತ್ತಿದ್ದಾಗಲೇ ಇವನು ಸಮಾಧಿಯನ್ನು ಹೊಂದಿದನು. ಜ್ಞಾನದೇವನ ವೈಷ್ಣವ ಪಂಥದಲ್ಲಿ ಜಾತಿ ಭೇದಕ್ಕೆ ಅವಕಾಶವಿರಲಿಲ್ಲ. ಇವನು ಸ್ತ್ರೀಯರನ್ನು ಮತ್ತು ನೀಚ ಕುಲದವರನ್ನು ತನ್ನ ಧರ್ಮಕ್ಕೆ ಸೇರಿಸಿಕೊಂಡನು. ಸಾಮಾನ್ಯವಾಗಿ ಈ ಪಂಥದವರು ಗೃಹಸ್ಥ ರಾಗಿದ್ದುಕೊಂಡು, ವಿಠಲನ ಉಪಾಸನೆಯನ್ನು ಜನಗಳಿಗೆ ಬೋಧಿಸುತ್ತಿದ್ದರು. ಇವರಿಗೆ ಸಂತರೆಂದು ಹೆಸರಾಯಿತು. ಜ್ಞಾನದೇವನ ಸಹೋದರಿಯಾದ ಮುಕ್ತಾ ಬಾಯಿಯು ಈ ಕಾರ್ಯದಲ್ಲಿ ವಿಶೇಷವಾಗಿ ಆಸಕ್ತಿವಹಿಸಿದ್ದಳು. ಚಂಗದೇವನು ಆಕೆಯ ಶಿಷ್ಯನಾಗಿದ್ದನು.

ಪರಮಾತ್ಮ ಮತ್ತು ಪರಸ್ಪರ ಪ್ರೇಮ ಎಂಬ ಎರಡು ತತ್ತ್ವಗಳಿಗೆ ಜ್ಞಾನ ದೇವನು ಅತಿ ಹೆಚ್ಚಿನ ಮಹತ್ವವನ್ನು ಕೊಟ್ಟನು. ಜ್ಞಾನದೇವನು ತನ್ನ ಗ್ರಂಥಗಳಲ್ಲಿ ಆಧ್ಯಾತ್ಮಿಕ ತತ್ತ್ವಗಳನ್ನು ವಿಶೇಷವಾಗಿ ಚರ್ಚಿಸಿದರೂ ಪರಿಶುದ್ಧವಾದ ಜೀವನಕ್ಕೆ ಅವನು ಹೆಚ್ಚು ಗಮನವನ್ನು ಕೊಟ್ಟನು. ಈ ಪ್ರಪಂಚವೆಂಬುದು ದುಃಖದ ಮಾರುಕಟ್ಟೆಯಿದ್ದಂತೆ. ಇಂತಹ ಮಾರುಕಟ್ಟೆಯಲ್ಲಿ ಯಾರಾದರೂ ಸುಖದಿಂದಿರಲು ಅಥವಾ ತಮ್ಮ ವ್ಯಾಪಾರವನ್ನು ಮಾಡಲು ಸಾಧ್ಯವೇ? ಎಂದು ಜ್ಞಾನದೇವನು ಪ್ರಶ್ನಿಸುತ್ತಾನೆ. [34] ಜನಗಳಿಗೆ ಇದು ತಿಳಿದಿಲ್ಲದೇ ಇರುವುದು ವಿಷಾದಕರ. ಮನುಷ್ಯ ನೊಬ್ಬನು ಚೇಳು ವಾಸಮಾಡುತ್ತಿರುವ ಹಾಸಿಗೆಯ ಮೇಲೆ ಮಲಗಿರುವಂತಿದೆ ಈ ಹವ್ಯಾಸ. ದುಃಖವು ಸುಖವೆಂಬ ವೇಷದಿಂದ ಜನಗಳನ್ನು ಮೋಸಮಾಡುವುದು ಈ ಪ್ರಪಂಚದಲ್ಲಿ ಮಾತ್ರ.

ಶುದ್ಧವಾದ ಮನಸ್ಸು ಧಾರ್ಮಿಕ ಜೀವನಕ್ಕೆ ಮುಖ್ಯಾಧಾರ. ಯಾವ ಮನುಷ್ಯನ ಮನಸ್ಸು ಶುದ್ಧವಾಗಿಲ್ಲವೋ ಅವನು ಒಳ್ಳೆಯ ಕರ್ಮಗಳನ್ನು ಮಾಡಿದರೆ ಅದು ಹೆಣಕ್ಕೆ ಆಭರಣಗಳನ್ನು ತೊಡಿಸಿದಂತೆ ಮತ್ತು ಕತ್ತೆಯು ಪುಷ್ಕರಿಣಿಯಲ್ಲಿ ಸ್ನಾನಮಾಡಿದಂತೆ. ಗುರುವಿನ ಕೃಪೆಯಿಂದ ಪ್ರತಿಯೊಬ್ಬರೂ ಸತ್ಕರ್ಮನಿರತರಾಗಲು ಸಾಧ್ಯ. ಗುರುಭಕ್ತಿ ಇಲ್ಲದವನು, ಗುರುವಿಗಿಂತ ತಾನೇ ಜ್ಞಾನಿ ಎಂದು ತಿಳಿದಿರುವವನು ಅಜ್ಞಾನವಾರಿಧಿ. ಅಂತಹವನ ಹೆಸರನ್ನು ಉಚ್ಚರಿಸುವುದೂ ಮಹಾಪಾಪ. ಜ್ಞಾನದೇವನು ಭಕ್ತಿ ಮಾರ್ಗ ಪ್ರವರ್ತಕನಾದರೂ ಜ್ಞಾನದಲ್ಲಿ ಅವನಿಗೆ ವಿಶೇಷ ಗೌರವ. ಅರ್ಹತೆಯಿಲ್ಲದೆ ಆಸೆಪಡುವವನು, ವಿನಯವಿಲ್ಲದವನು, ಪರನಿಂದನೆ ಮತ್ತು ಆತ್ಮಪ್ರಶಂಸೆ ಮಾಡುವವನು ಇವರೆಲ್ಲರೂ ಅಜ್ಞಾನದ ಗಣೆಗಳು. ಜ್ಞಾನವೆಂಬುದು ಪ್ರತಿಯೊಬ್ಬನ ಆತ್ಮ ದಲ್ಲಿಯೂ ಇದೆ. ಅದಕ್ಕಾಗಿ ತೀರ್ಥಯಾತ್ರೆ ಹೋಗುವುದು ವ್ಯರ್ಥ. ಕುರುಡನ ಕೈನಲ್ಲಿ ಮಾಣಿಕ್ಯವಿದ್ದಂತಲ್ಲವೇ ಎಂದು ಜ್ಞಾನದೇವನು ಪ್ರಶ್ನಿಸುತ್ತಾನೆ. [35]

ಜ್ಞಾನದೇವನು ಜನನ, ಮರಣ, ಮುಪ್ಪು, ಕಾಹಿಲೆಗಳಿಂದ ಮನುಷ್ಯರು

ದೂರವಾಗಿರಲು ಯತ್ನಿಸಬೇಕೆಂದು ಹೇಳುತ್ತಾನೆ. ತನ್ನ ಜೊತೆಗಾರನು ಕಳ್ಳನೆಂದು ಗೊತ್ತಾದಾಗ ಎಚ್ಚರವಾಗಿರಬೇಕಾದುದು ನಮ್ಮ ಕರ್ತವ್ಯವಲ್ಲವೇ? ಕಿವುಡನಾಗು ವುದಕ್ಕೆ ಮುಂಚೆ ಸುಮಧುರ ಭಗವನ್ನಾಮ ಸಂಕೀರ್ತನೆಯನ್ನು ಕೇಳಬೇಕು; ಅಶಕ್ತನಾಗುವುದಕ್ಕೆ ಮೊದಲು ದೇವರಸನ್ನಿಧಿಯನ್ನು ದರ್ಶನಮಾಡಬೇಕು; ಕುರುಡನಾಗುವುದಕ್ಕೆ ಮುಂಚೆ ಒಳ್ಳೆಯ ಗ್ರಂಥಗಳನ್ನು ಓದಬೇಕು ; ನಾಲಿಗೆಯು ಸೇದಿಹೋಗುವುದಕ್ಕೆ ಮುಂಚೆ ಭಗವಂತನ ನಾಮವನ್ನು ಉಚ್ಚರಿಸಬೇಕು. ದೀಪವು ಆರಿಹೋಗುವ ಮೊದಲು ನಮ್ಮ ಎಲ್ಲ ಕೆಲಸಗಳನ್ನೂ ಮುಗಿಸಿಕೊಳ್ಳುವುದು ಬುದ್ಧಿವಂತರ ಲಕ್ಷಣ.

ಜ್ಞಾನದೇವನು ಅಹಿಂಸೆಗೆ ಪ್ರಾಶಸ್ತ್ಯ ಕೊಟ್ಟಿದ್ದಾನೆ. ಪ್ರಾಣವಿರುವ ಮತ್ತು ಪ್ರಾಣವಿಲ್ಲದೇ ಇರುವ ಯಾವ ವಸ್ತುವಿಗೂ ಘಾಸಿಮಾಡಬಾರದು. ಈ ದೃಷ್ಟಿ ಯಿಂದ ಆಯರ್ವೇದ ವೈದ್ಯವೂ ಖಂಡನಾರ್ಹವಾದುದು. ಹಣ್ಣು, ಹೂವು, ಎಲೆ, ಕಾಯಿ, ಮೊದಲಾದವುವನ್ನು ಕಿತ್ತು ಹಿಂಸಿಸಿ ಅದನ್ನು ಆಯುರ್ವೇದದಲ್ಲಿ ಬಳಸು ತ್ತಾರೆ. ಮಾನವನಿಗೆ ಸ್ನೇಹಿತರಾದಗಿಡ ಮರಗಳನ್ನು ಅವರ ಸುಖಕ್ಕೋಸ್ಕರ ಬಲಿಕೊಡುತ್ತಾರೆ. [36] ಇದೇ ದೃಷ್ಟಿಯಿಂದ ಜ್ಞಾನದೇವನು ಪೂರ್ವಮೀಮಾಂಸಕರು ಮಾಡುವ ಯಜ್ಞ ಯಾಗಾದಿಗಳನ್ನೂ ಖಂಡಿಸುತ್ತಾನೆ. ಪಶುಗಳನ್ನು ಯಾಗದಲ್ಲಿ ಬಲಿ ಕೊಡುವುದು ಜನಗಳನ್ನು ಲೂಟಿಮಾಡಿ ಛತ್ರವನ್ನು ಕಟ್ಟಿದಂತೆ ಇಲ್ಲವೇ ವಾಸದಮನೆಯನ್ನು ಕೆಡವಿ ದೇವಾಲಯವನ್ನು ಕಟ್ಟಿದಂತೆ. ಜೈನರು ನೀರನ್ನು ಶೋಧಿಸಿ ಕುಡಿಯುವಾಗ ಆ ಶೋಧಿಸುವ ಕಾರ್ಯದಲ್ಲಿ ಕ್ರಿಮಿಕೀಟಗಳಿಗೆ ಹಿಂಸೆ ಮಾಡುತ್ತಾರೆ. ದುಂಬಿಯು ಹೂವಿನಿಂದ ಮಧುವನ್ನು ಹೀರುವಾಗ ಹೂವಿನ ದಳಗಳ ಮೇಲೆ ಮೃದುವಾಗಿ ಕೂರುತ್ತದೆ. ಇಲ್ಲದಿದ್ದರೆ ಪುಷ್ಪವೇ ಹಿಂಸೆಯಿಂದ ನಲುಗಿ ಹೋಗುತ್ತದೆ.

ಪರಸ್ಪರ ಪ್ರೇಮ ಅಥವಾ ಭಕ್ತಿಯೇ ಸಾಧಕನಿಗೆ ಉತ್ತಮ ಮಾರ್ಗ. ಪತ್ನಿಯು ತನ್ನ ಪತಿಯನ್ನು ಸಂಕೋಚವಿಲ್ಲದೆ ಸಮೀಪಿಸುವಂತೆ, ಭಕ್ತನು ದೇವರ ಸಾಮೀಪ್ಯವನ್ನು ಬಯಸಬೇಕು. ಭಕ್ತರನ್ನು ಕಾಪಾಡುವುದಕ್ಕಾಗಿಯೇ ಭಗವಂತನಿಗೆ ಎರಡು ಕೈಗಳು ಸಾಲದೇ ಇದ್ದುದರಿಂದ ಅವನು ಚತುರ್ಬಾಹುವಾದನು. ಈ ರೀತಿ ಜ್ಞಾನ ದೇವನು ಭಕ್ತಿಮಾರ್ಗವನ್ನು ಉಪದೇಶಿಸಿ ಬಹು ಜನಾನುರಾಗಿ ಯಾದನು. ಕೃಷ್ಣ ಮತ್ತು ರಾಮಚಂದ್ರರು ಪಂಢರಾಪುರ ಕ್ಷೇತ್ರಕ್ಕೆ ಅನೇಕ ದತ್ತಿಗಳನ್ನೂ ಬಿಟ್ಟುಕೊಟ್ಟರು.

ನಾಮದೇವನನ್ನೂ ದಂತಕಥೆಗಳು ಜ್ಞಾನದೇವನ ಸಮಕಾಲೀನನೆಂದು ಹೇಳುತ್ತವೆ. ಆದರೆ ನಾಮದೇವನು ಕ್ರಿ.ಶ. ಹದಿನಾಲ್ಕನೆಯ ಉತ್ತರಾರ್ಧದಲ್ಲಿದ್ದ ವನೆಂದು ಇತ್ತೀಚಿನ ಸಂಶೋಧನೆಗಳಿಂದ ತಿಳಿದು ಬಂದಿದೆ. ಆದುದರಿಂದ ಅವನು ಸೇವುಣರ ಸಮಕಾಲೀನನಾಗಿರಲಿಲ್ಲ.

ಸೇವುಣರ ಕಾಲದಲ್ಲಿ ಮಹಾನುಭಾವ ಪಂಥವು ಅಭಿವೃದ್ಧಿಯನ್ನು ಹೊಂದಿತು. ಇದು ವೈಷ್ಣವ ಸಂಪ್ರದಾಯದ ಒಂದು ಹೊಸ ಪಂಥ. ಈ ಮತಕ್ಕೆ ಮಾನ್‌ಭವ್ ಅಥವಾ ಮಹಾನುಭಾವ ಎಂಬ ಹೆಸರು ಏಕೆ ಬಂದಿತೆಂದು ಹೇಳುವುದು ಕಷ್ಟ. ಮಹಾನುಭಾವರೆಂದರೆ ದಿವ್ಯ ಅನುಭವಿಗಳು ಎಂದರ್ಥವಿರಬಹುದು. ಈ ಮತವನ್ನು ಸ್ಥಾಪಿಸಿದವನು ಚಕ್ರಧರಸ್ವಾಮಿ. ಈತನ ವಿಷಯವಾಗಿ ತಿಳಿದಿರುವ ಚಾರಿತ್ರ್ಯಕ ಮಾಹಿತಿ ಬಹು ಕಡಿಮೆ. ಎಲ್ಲ ಮತ ಸ್ಥಾಪಕರ ವಿಷಯದಲ್ಲಿಯೂ ಸಾಮಾನ್ಯವಾಗಿ ಇರುವಂತೆ ಚಕ್ರಧರನ ವಿಚಾರವಾಗಿ ಕಥೆಗಳೇ ಹೆಚ್ಚು. ಮಾಯಿ ಮಭಟ್ಟನಿಂದ ರಚಿತವಾದ 'ಲೀಲಾಚರಿತ' ಎಂಬ ಮರಾಠಿ ಗ್ರಂಥದಲ್ಲಿ ಚಕ್ರಧರನ ಜೀವನ ಚರಿತ್ರೆಯು ವಿಶದವಾಗಿ ಹೇಳಲ್ಪಟ್ಟಿದೆ. ಈ ಬೃಹದ್ಗ್ರಂಥವು ಏಕಾಂಕ, ಪೂರ್ವಾರ್ಧ ಮತ್ತು ಉತ್ತರಾರ್ಧ ಎಂಬ ಮೂರು ಭಾಗಗಳನ್ನುಳ್ಳದ್ದಾಗಿ ಚಕ್ರಧರಸ್ವಾಮಿಯ ಜೀವನದ ಮುಖ್ಯವಾದ ಮೂರು ಘಟ್ಟಗಳನ್ನು ವಿವರಿಸುತ್ತದೆ.

ಚಕ್ರಧರನ ಪೂರ್ವಾಶ್ರಮದ ಹೆಸರು ಹರಿಪಾಲ. ಇವನ ತಂದೆ ವಿಶಾಲದೇವ ಮತ್ತು ತಾಯಿ ಮಲ್ಹಯಿಶ. ಜನ್ಮತಃ ಶ್ರೀಮಂತನಾಗಿದ್ದ ಹರಿಪಾಲನು ಇಪ್ಪತ್ತೈದು ವರ್ಷಗಳ ಕಾಲ ಬಹಳ ಐಹಿಕವಾದ ಜೀವನವನ್ನು ನಡೆಸಿದನು. ಹರಿಪಾಲನಿಗೆ ಕಮಲೈಶ ಎಂಬ ಪತ್ನಿಯಿದ್ದಳು. ಇದ್ದಕ್ಕಿದ್ದಂತೆ ಹರಿಪಾಲನು ಮರಣ ಹೊಂದಿದನು. ಆದರೆ ದೇವರ ಕೃಪೆಯಿಂದ ಮತ್ತೆ ಬದುಕಿ ಬಂದನು. ಮತ್ತೆ ತನ್ನ ಹಿಂದಿನ ಜೀವನಕ್ಕೆ ಕಾಲಿಡದೆ ಸನ್ಯಾಸಿಯಾಗಿ ರಿದ್ಧಪುರಕ್ಕೆ ಹೋಗಿ, ಅಲ್ಲಿ ಗೋವಿಂದ ಪ್ರಭುವಿನ ದರ್ಶನವನ್ನು ಪಡೆದು, ಅವನ ಕೃಪೆಗೆ ಪಾತ್ರನಾದನು. ಗೋವಿಂದ ಪ್ರಭುವು ಹರಿಪಾಲನಲ್ಲಿದ್ದ ಸುಪ್ತ ಪ್ರತಿಭೆಯನ್ನು ಗುರುತಿಸಿ ಇವನಿಗೆ ಚಕ್ರಧರ ಎಂಬ ಹೊಸ ಹೆಸರನ್ನು ದಯಪಾಲಿಸಿ, ಜ್ಞಾನಮಾರ್ಗವನ್ನು ಉಪದೇಶ ಮಾಡಿದನು. ಅಂದಿನಿಂದ ಸುಮಾರು ಐದುನೂರು ಶಿಷ್ಯರೊಡನೆ ಚಕ್ರಧರನು ಊರಿಂದ ಊರಿಗೆ ತಿರುಗಿ ಸಾಮಾನ್ಯ ಜನಗಳಿಗೆ ಉಪದೇಶ ಮಾಡಲು ಪ್ರಾರಂಭಿಸಿದನು. ಇವನ ಶಿಷ್ಯವೃಂದದಲ್ಲಿ ಹದಿಮೂರು ಮಂದಿ ಸ್ತ್ರೀಯರೂ ಇದ್ದರು. ಚಕ್ರಧರನ ಉಚ್ಛ್ರಾಯ ಸ್ಥಿತಿಯನ್ನು ನೋಡಿ ಅಸೂಯೆಗೊಂಡ ಹೇಮಾದ್ರಿಯು ಇವನನ್ನು ಹಿಂಸಿಸಲು ಪ್ರಾರಂಭಿಸಿದನೆಂದು ಮಹಾನುಭಾವಗ್ರಂಥಗಳು ತಿಳಿಸುತ್ತವೆ. ರಾಜನಾದ ರಾಮಚಂದ್ರನು ಚಕ್ರಧರನನ್ನು ಶೂಲಕ್ಕೆ ಏರಿಸಬೇಕಂದು ಆಜ್ಞೆ ಮಾಡಿದುದಾಗಿಯೂ, ಆದರೆ ಚಕ್ರಧರನು ತನ್ನ ದಿವ್ಯ ಶಕ್ತಿಯಿಂದ ತಪ್ಪಿಸಿಕೊಂಡನೆಂದೂ ಸತೀಗ್ರಂಥಗಳು ತಿಳಿಸುತ್ತವೆ.

ಮಹಾನುಭಾವ ಸಿದ್ಧಾಂತಗಳು ಚಕ್ರಧರನ ಶಿಷ್ಯರಿಂದ ಮರಾಠಿ ಭಾಷೆಯಲ್ಲಿ ವಿವರಿಸಲ್ಪಟ್ಟಿವೆ. ಅವುಗಳನ್ನು ಸತೀಗ್ರಂಥವೆಂದೂ ಕರೆಯುತ್ತಾರೆ. ಮಾಯಿ ಮಭಟ್ಟನ 'ಲೀಲಾಚರಿತ' ಮತ್ತು 'ಪದ್ಯಖರ', ಕೇಶವ ವ್ಯಾಸನ 'ರತ್ನಮಾಲಸ್ತೋತ್ರ' ಮತ್ತು 'ಮೂರ್ತಿಪ್ರಕಾಶ', ಭಾಸ್ಕರಭಟ್ಟನ 'ಶಿಶುಪಾಲವಧ' ಮತ್ತು 'ಉದ್ಧವಗೀತ'

ನರೇಂದ್ರನ 'ರುಕ್ಮಿಣೀ ಸ್ವಯಂವರ', ದಾಮೋದರ ಪಂಡಿತನ 'ವಚ್ಛಹರಣ', ನಾರಾಯಣವ್ಯಾಸನ 'ರಿದ್ಧಪುರವರ್ಣನ' ಮತ್ತು ರಾವಲವ್ಯಾಸನ 'ಸಹ್ಯಾದ್ರಿದರ್ಶನ' - ಇವೇ ಮಹಾನುಭಾವರ ಮುಖ್ಯ ಪವಿತ್ರಗ್ರಂಥಗಳು. ಇವೆಲ್ಲವೂ ಮರಾಠೀ ಭಾಷೆಯಲ್ಲಿವೆ.

ಶ್ರೀಕೃಷ್ಣನೇ ಮಹಾನುಭಾವ ಪಂಥದ ಮುಖ್ಯ ದೇವತೆ. ಶ್ರೀಕೃಷ್ಣನನ್ನು ದತ್ತಾತ್ರೇಯ ಎಂದೂ ಇವರು ಪೂಜಿಸುತ್ತಾರೆ. ಇವರಿಗೆ ಭಗವದ್ಗೀತೆಯಲ್ಲಿ ವಿಶೇಷ ಗೌರವ. ಭಾಗವತ ಪುರಾಣದ ಹನ್ನೊಂದನೇ ಅಧ್ಯಾಯದಲ್ಲಿ ಶ್ರೀಕೃಷ್ಣನ ವಿಜಯವು ವಿಶೇಷವಾಗಿ ಉಲ್ಲೇಖಿತವಾಗಿರುವುದರಿಂದ ಅದರ ಆಧಾರದ ಮೇಲೆ ಭಾಸ್ಕರ ಭಟ್ಟನು ಉದ್ಧವಗೀತ ಎಂಬ ಸತೀಗ್ರಂಥವನ್ನು ರಚಿಸಿದನು. ಮಹಾನುಭಾವರು ವಿಷ್ಣುವಿನ ದಶಾವತಾರಗಳನ್ನು ಪುರಸ್ಕರಿಸುವುದಿಲ್ಲ. ಶ್ರೀಕೃಷ್ಣನು ನಾಲ್ಕು ಯುಗಗಳಲ್ಲಿ ನಾಲ್ಕು ಅವತಾರಗಳನ್ನು ಮಾಡಿದನೆಂಬುದೇ ಅವರ ಮತ. ಕೃತಯುಗದ ಹಂಸಾವತಾರ, ತ್ರೇತಾಯುಗದ ದತ್ತಾತ್ರೇಯಾವತಾರ, ದ್ವಾಪರಯುಗದ ಕೃಷ್ಣಾವತಾರ ಮತ್ತು ಕಲಿಯುಗದ ಚಕ್ರಧರಾವತಾರ ಇವುಗಳೇ ಆ ನಾಲ್ಕು. ಶ್ರೀಕೃಷ್ಣನೇ ಮುಖ್ಯದೇವತೆಯಾದರೂ ಮಹಾನುಭಾವರಿಗೆ ಎಂಟು ದೇವಯೋನಿಗಳು, ಗಂಧರ್ವರು, ಇಂದ್ರ, ಚಂದ್ರ, ಸ್ವರ್ಗ, ಹರಿಹರ, ವಿಷ್ಣು, ಬ್ರಹ್ಮ, ಭೈರವ ಮತ್ತು ವಿರೂಪಾಕ್ಷ ಇವರೂ ಪೂಜಾರ್ಹರು.

ಮಹಾನುಭಾವರಿಗೆ ಜ್ಞಾನಮಾರ್ಗವೂ ಉಂಟು. ಜ್ಞಾನವೇ ಮೋಕ್ಷಕ್ಕೆ ಸಾಧನ. ಗುರುವಿನ ಅಥವಾ ದೇವರ ಕೃಪೆಯಿಂದ ಮಾತ್ರ ಜ್ಞಾನವು ದೊರಕುತ್ತದೆ. ಆದುದರಿಂದ ಮಹಾನುಭಾವರಿಗೆ ಗುರುವಿನಲ್ಲಿ ಅಪಾರ ಭಕ್ತಿ. ಶಿಷ್ಯರಿಗೆ ಗುರುವೇ ದೈವ ಸಮಾನ. ಗುರುವಿನ ಕೃಪೆ ದೊರಕಿದ ಮೇಲೆ ಪ್ರತಿಯೊಬ್ಬರೂ ಒಳ್ಳೆಯ ಜೀವನವನ್ನು ನಡೆಸಬೇಕು. ಅಂತಹವರನ್ನು ದೇವರು ಮತ್ತೆ ಪರೀಕ್ಷಿಸುತ್ತಾನೆ. ಮರಣಾನಂತರ ಅವರಿಗೆ ಶ್ರೀಮಂತವಂಶದಲ್ಲಿ ಪುನರ್ಜನ್ಮಕ್ಕೆ ಅವಕಾಶ ಸಿಗುತ್ತದೆ. ಶ್ರೀಮಂತಸ್ಥಿತಿಯಲ್ಲಿಯೂ ಧನಾಂಧರಾಗದೆ ಸಾತ್ವಿಕರಾಗಿಯೇ ಜೀವನವನ್ನು ನಡೆಸಿದರೆ ದೇವರು ಸಂತುಷ್ಟನಾಗಿ ಅವರಿಗೆ ಮೋಕ್ಷವನ್ನು ಕರುಣಿಸುತ್ತಾನೆ.

ಮಹಾನುಭಾವರ ಅನೇಕ ತತ್ತ್ವಗಳು ಭಗವದ್ಗೀತೆಯಿಂದ ಆರಿಸಿಕೊಂಡವು. ಅವರನ್ನು ಅದ್ವೈತಪಂಥಿಗಳೆಂದು ಹೇಳಬಹುದು. ಜೀವವು ಸತತವಾಗಿ ಅವಿದ್ಯೆಯಿಂದ ಆವೃತವಾಗಿರುತ್ತದೆ. ಇದಕ್ಕೆ ಮಾಯೆಯೇ ಕಾರಣ. ಜೀವಕ್ಕೆ ವಿರುದ್ಧವಾದುದು ದೇವಸ್ವರೂಪ. ಜ್ಞಾನ, ಆನಂದ, ಸಾಮರ್ಥ್ಯ, ಐಶ್ವರ್ಯ ಮತ್ತು ಪ್ರಕಾಶ ಇವೇ ಆ ಪರಮಾತ್ಮನ ಲಕ್ಷಣಗಳು. ಜೀವವು ಅವಿದ್ಯೆಯಿಂದ ಮುಕ್ತಿ ಹೊಂದಲು ಜ್ಞಾನ ಮತ್ತು ಭಕ್ತಿ ಮಾರ್ಗಗಳಿವೆ. ಭಕ್ತಿಮಾರ್ಗವು ಸುಲಭವಾದುದು. ಭಕ್ತಿಮಾರ್ಗದಲ್ಲಿಯೂ ದೈವಕೃಪೆಯು ಮುಖ್ಯವಾದುದು. ಯೋಗ್ಯಭಕ್ತರನ್ನು ದೇವರು ಮೋಕ್ಷದೆಡೆಗೆ ಒಯ್ಯುತ್ತಾನೆ.

ಚಕ್ರಧರನ ಮರಣಾನಂತರ ಮಹಾನುಭಾವರು ತಮ್ಮದೇ ಆದ ಗುಪ್ತ ಸಂಘಗಳನ್ನು ಸ್ಥಾಪಿಸಿಕೊಂಡು, ಚಕ್ರಧರನು ಬೋಧಿಸಿದ ತತ್ತ್ವಗಳನ್ನು ಜನಗಳಿಗೆ ಉಪದೇಶ ಮಾಡ ತೊಡಗಿದರು. ಮಹಾನುಭಾವ ಸಂಘಕ್ಕೆ ಸದಸ್ಯರಾಗಲು ಪುರುಷರಿಗೆ ಮತ್ತು ಸ್ತ್ರೀಯರಿಗೆ ಸಮಾನಾವಕಾಶವನ್ನು ಕಲ್ಪಿಸಲಾಗಿದ್ದಿತು. ಅಷ್ಟೇ ಅಲ್ಲದೆ ಸ್ತ್ರೀಯರಿಗೆ ಸಂನ್ಯಾಸಕ್ಕೂ ಅವಕಾಶವಿದ್ದಿತು. ಜಾತಿಭೇದಗಳು ಅವರಲ್ಲಿರ ಲಿಲ್ಲ. ಅವರಲ್ಲಿ ಗೃಹಸ್ಥರು ಮತ್ತು ಸಂನ್ಯಾಸಿಗಳು ಎಂಬ ಎರಡು ಪಂಗಡಗಳಿದ್ದವು. ಗೃಹಸ್ಥರು ಮಹಾನುಭಾವಮತದ ತತ್ತ್ವಗಳನ್ನು ಪಾಲಿಸುತ್ತಾ, ಮದುವೆಮಾಡಿ ಕೊಂಡು ತಮ್ಮ ಜೀವನೋಪಾಯಕ್ಕೆ ಬೇಕಾದ ಕೆಲಸಗಳನ್ನು ಮಾಡಿಕೊಂಡು ಇರುತ್ತಿದ್ದರು. ಸಂನ್ಯಾಸಿಗಳಿಗೆ ಮಾತ್ರ ವಿವಾಹಕ್ಕೆ ಅವಕಾಶವಿರುತ್ತಿರಲಿಲ್ಲ. ಅವರು ಭಿಕ್ಷೆಯಿಂದಲೇ ಆಹಾರವನ್ನು ಸಂಪಾದಿಸಬೇಕಾಗಿದ್ದಿತು. ಗುಪ್ತ ಸಂಘದ ನಡವಳಿಕೆಗಳನ್ನು ಬಹು ಕಟ್ಟುನಿಟ್ಟಾಗಿ ಪಾಲಿಸಬೇಕಾದ್ದಿತು. ಪುರುಷರು ಮತ್ತು ಸ್ತ್ರೀಯರು ತಲೆಯ ಕೂದಲನ್ನು ಮುಂಡನ ಮಾಡಿಸಿಕೊಂಡು ಕಪ್ಪಗಿರುವ ಜೀರ್ಣವಾದ ಬಟ್ಟೆಯನ್ನುಟ್ಟು ತುಳಸೀಮಣಿಯ ಜಪಸರವನ್ನು ಧರಿಸುತ್ತಿದ್ದರು. ಅವರು ಭಿಕ್ಷೆಯಿಂದಲೇ ಹೊಟ್ಟೆ ಹೊರೆಯುತ್ತಿದ್ದರು. ಆದರೆ ಅವರು ಉಪ್ಪನ್ನು ತಿನ್ನುವ ಹಾಗಿರಲಿಲ್ಲ. ಅವರು ನಿರ್ಜನವಾದ ಪ್ರದೇಶಗಳಲ್ಲಿ ವಾಸಮಾಡುತ್ತಿದ್ದರು. ಸಂಘದಲ್ಲಿ ಸನ್ಯಾಸಿಗಳೂ ಸನ್ಯಾಸಿನಿಯರೂ ಒಟ್ಟಿಗೆ ಇದ್ದರೂ, ಒಬ್ಬರ ಮುಖವನ್ನು ಒಬ್ಬರು ನೋಡುವ ಹಾಗೆ ಇರಲಿಲ್ಲ. ಭಿಕ್ಷಕ್ಕೂ ಕೂಡ ಸ್ತ್ರೀಯರು, ಪುರುಷರೂ ಒಟ್ಟಿಗೆ ಹೋಗುತ್ತಿರಲಿಲ್ಲ. ಸ್ತ್ರೀ ಮತ್ತು ಪುರುಷರ ಸಂಪರ್ಕಕ್ಕೆ ಸ್ವಲ್ಪವೂ ಅವಕಾಶ ವಿರುತ್ತಿರಲಿಲ್ಲ. ಮಹಾನುಭಾವ ಸ್ತ್ರೀ ಸತ್ತರೆ, ಅವಳನ್ನು ಹೂಳಲು ಪುರುಷರು ಹಳ್ಳವನ್ನು ತೋಡಿ, ಎಲ್ಲ ಸಲಕರಣೆಗಳನ್ನು ಅಣಿಮಾಡಿ ಹಿಂದಿರುಗುತ್ತಿದ್ದರು. ಅನಂತರ ಸ್ತ್ರೀಯರೇ ಶವವನ್ನು ಹೊತ್ತುಕೊಂಡು ಹೋಗಿ ಹೂಳುತ್ತಿದ್ದರು. ಈ ನಿಯಮಗಳನ್ನು ಸರಿಯಾಗಿ ಪಾಲಿಸದೇ ಇದ್ದವರು ಸಂಘಬಾಹಿರರಾಗುತ್ತಿದ್ದರು.

ಮಹಾನುಭಾವರು ತಮ್ಮದೇ ಆದ ದೇವಾಲಯಗಳನ್ನು ನಿರ್ಮಿಸಿಕೊಂಡಿದ್ದರು. ಅವರು ಯಾವ ಕಾರಣದಿಂದಲೂ ಇತರರ ದೇವಾಲಯಗಳನ್ನು ಪ್ರವೇಶಿಸುತ್ತಿರಲಿಲ್ಲ. ಅವರ ದೇವಾಲಯಗಳು ಚಚ್ಚೌಕವಾದ ಅಥವಾ ವೃತ್ತಾಕಾರದ ಕಟ್ಟಡಗಳು. ಒಂದು ಮೂಲೆಯಲ್ಲಿ ಸುಣ್ಣ ಬಳಿಯಲ್ಪಟ್ಟ ಜಗುಲಿಯೇ ಅವರಿಗೆ ಪೂಜಾರ್ಹ. ಮೂರ್ತಿಯ ಬದಲು ಅದನ್ನೇ ಅವರು ಪೂಜಿಸುತ್ತಾರೆ. ಅವರು ಮೂರ್ತಿಪೂಜೆಯ ದ್ವೇಷಿಗಳು. ವಿಗ್ರಹವನ್ನು ಪೂಜಿಸುವುದು ಹಾಗಿರಲಿ, ಅದರ ಎದುರಿಗೆ ಒಂದು ತೊಟ್ಟು ನೀರನ್ನೂ ಕುಡಿಯುವುದಿಲ್ಲ.

ಮಹಾನುಭಾವರು ಅಹಿಂಸಾವಾದಿಗಳು. ಹಿಂಸೆಯನ್ನು ಮಾಡುವುದು ಹಾಗಿರಲಿ, ನೋಡುವುದನ್ನೂ, ಅದರ ವಿಚಾರವನ್ನು ಕೇಳುವುದನ್ನು ದ್ವೇಷಿಸುತ್ತಾರೆ.

ಒಂದು ವೇಳೆ ಯಾವುದಾದರೂ ಅಪಘಾತದಿಂದ ಉಂಟಾದ ರಕ್ತಪಾತವನ್ನೋ ಅಥವಾ ಹಿಂಸೆಯನ್ನೋ ಇವರು ನೋಡಿದರೆ ಪ್ರಾಯಶ್ಚಿತ್ತಾರ್ಥವಾಗಿ ಮೂರುದಿನಗಳ ಕಾಲ ಉಪವಾಸವಿರುತ್ತಾರೆ.

ಸೇವುಣರ ಆಶ್ರಯದಲ್ಲಿ ಮಹಾನುಭಾವ ಪಂಥವು ಉಚ್ಛ್ರಾಯಸ್ಥಿತಿಯಲ್ಲಿದ್ದಿತು. ಸೇವುಣ ರಾಜರಾದ ಕೃಷ್ಣ ಮತ್ತು ಮಹಾದೇವ ಇಬ್ಬರೂ ವೈದಿಕಮತದ ಅನುಯಾಯಿಗಳಾಗಿದ್ದರೂ ಕೂಡ ಚಕ್ರಧರನ ದರ್ಶನವನ್ನು ಪಡೆದು, ಅನೇಕ ದತ್ತಿಗಳನ್ನು ಬಿಟ್ಟುಕೊಟ್ಟಿದ್ದರು. ರಾಜರಿಗಿಂತಲೂ ಅವರ ಪತ್ನಿಯರಿಗೇ ಈ ಪಂಥದಲ್ಲಿ ವಿಶೇಷ ಆಸಕ್ತಿ ಇದ್ದಂತೆ ತೋರುತ್ತದೆ. ಮಹಾದೇವನ ಪತ್ನಿಯಾದ ವೈಜೇಯಿಯು ಮಹಾನುಭಾವ ಮತಾವಲಂಬಿಯಾಗಿದ್ದಳು. ರಾಮಚಂದ್ರನ ಪತ್ನಿಯಾದ ಕಾಮಾಯಿಯು ಮಹಾನುಭಾವರಲ್ಲಿ ವಿಶೇಷ ಆದರವನ್ನು ತೋರುತ್ತಿದ್ದಳು. ಮಹಾನುಭಾವ ಗೋಪಾಲಪಂಡಿತನು ಆಕೆಯ ಗುರುವಾಗಿದ್ದನು. ಅವನು ಆಕೆಯ ಆಶ್ರಯದಲ್ಲಿ 'ಅಂತ್ಯಾಕ್ಷರೀ' ಮತ್ತು 'ಲಕ್ಷಣರತ್ನಾಕರ' ಎಂಬ ಗ್ರಂಥಗಳನ್ನು ರಚಿಸಿದನು. ಪ್ರಸಿದ್ಧ ಮಹಾನುಭಾವನಾದ ನಾಗದೇವಾಚಾರ್ಯನಿಗೆ ಕಾಮಾಯಿಯು ವಿಶೇಷ ಪ್ರೋತ್ಸಾಹವನ್ನು ಕೊಡುತ್ತಿದ್ದಳು.

ಮಹಾನುಭಾವರು ತಮ್ಮ ಪಂಥವನ್ನು ಬಲಪಡಿಸಿಕೊಂಡಿದ್ದರೂ ಕೂಡ, ಇವರಲ್ಲಿದ್ದ ಕೆಲವು ವಾಮಾಚಾರಗಳಿಂದ ಮತ್ತು ಸನ್ಯಾಸಿಗಳು ಸನ್ಯಾಸಿನಿಯರಲ್ಲಿ, ಶಿಸ್ತು ಮತ್ತು ಸಂಯಮ ಕಡಿಮೆಯಾದುದರಿಂದ ಇವರ ಸಂಘವು ಕಾಲಕ್ರಮದಲ್ಲಿ ಶಿಥಿಲವಾಯಿತು. ರಾಜಾಶ್ರಯವೂ ತಪ್ಪಿತು. ವೈದಿಕಮತವನ್ನು ಎತ್ತಿಹಿಡಿದ ಹೇಮಾದ್ರಿಯಂತಹ ಪಂಡಿತರ ಮುಂದೆ ಮಹಾನುಭಾವರಿಗೆ ಗೌರವ ಕಡಿಮೆಯಾಯಿತು. ಎಲ್ಲಕ್ಕಿಂತಲೂ ಮಿಗಿಲಾಗಿ, ಚಕ್ರಧರನ ಅನಂತರ ಶಿಸ್ತಿನ ಅನುಯಾಯಿಗಳು ಇಲ್ಲದೇ ಹೋದುದರಿಂದ, ಮಹಾನುಭಾವ ಪಂಥದ ಅವನತಿಯು ಪ್ರಾರಂಭವಾಯಿತು. ಆದರೂ ಕೂಡ ಸೇವುಣರ ಕಾಲದ ಅನಂತರವೂ ಅನೇಕ ಶತಮಾನಗಳ ಕಾಲ ಅಲ್ಲಲ್ಲಿ ಮಹಾನುಭಾವರು ಗುಪ್ತ ಸಂಘಗಳಲ್ಲಿ ಜೀವಿಸುತ್ತಿದ್ದರು.

ಈ ರೀತಿ ಸೇವುಣರ ಕಾಲದಲ್ಲಿ ಅನೇಕ ಧಾರ್ಮಿಕ ಪಂಥಗಳು ಇದ್ದಾಗ್ಯೂ ಒಬ್ಬರನ್ನೊಬ್ಬರು ದ್ವೇಷಿಸುತ್ತಿದ್ದರೆಂಬುದಕ್ಕೆ ಆಧಾರಗಳಿಲ್ಲ. ಅದಕ್ಕೆ ಬದಲಾಗಿ ಅನ್ಯಮತ ಸಹಿಷ್ಣುತೆಯು ಆ ಕಾಲಲ್ಲಿ ಇದ್ದಿತೆಂದು ಹೇಳಲು ಶಾಸನವೊಂದು ನಮಗೆ ಸಹಾಯ ಮಾಡುತ್ತದೆ. 'ಹರಿಗೃಹದಿಂ ಹರಗೃಹದಿಂ ಸುರಗೃಹದಿಂದರುಹಗೃಹದಿಂದೆ ಬೌದ್ಧಾಲಯದಿಂ ಕೊರವರ ಸವಣರ ಬೌದ್ಧರ ನೆರೆವಿಗಳಿಂದ ಇಂದಿನಾಡು ಸೋಗಯ ತೋರ್ಕಂ' ಎಂದು ಶಾಸನವೊಂದು ಇಂದಿನಾಡನ್ನು ವರ್ಣಿಸುತ್ತದೆ. [37] ಬಹುಶಃ ಇದೇ ಪರಿಸ್ಥಿತಿಯು ರಾಜ್ಯದ ಎಲ್ಲಾ ಭಾಗಗಳಲ್ಲಿಯೂ ಇದ್ದಿತೆಂದು ಊಹಿಸಬಹುದು.

## ಟಿಪ್ಪಣಿಗಳು

1 EC. Vol. XI, ದಾವಣಗೆರೆ 59
2 EI. Vol. XXV, P. 211
3 Bk 154 of 1932-33
4 ಪ್ರಾಯಶ್ಚಿತ್ತಖಂಡ, ಪು. 39
5 ಜ್ಞಾನೇಶ್ವರೀ, ಪು. 754
6 IA. Vol. XVII, P. 121
7 ಅದೇ, Vol. XIV, P. 315
8 B 210 of 1957-58
9 EI. Vol. XXV. P. 16
10 EC. Vol. VI, Tk 89
11 Ibn Batuta, P. 227
12 EC. Vol. VIII ಸಾಗರ 63
13 ಪ್ರಾಯಶ್ಚಿತ್ತಖಂಡ, ಪು. 117
14 ಜ್ಞಾನೇಶ್ವರೀ, ಪು. 126
15 ಅದೇ, ಪು. 710
16 ಲೀಲಾಚರಿತ, ಪು. 32
17 ಜ್ಞಾನೇಶ್ವರೀ, ಪು. 32
18 EC. Vol. VII, ಶಿಕಾರಿಪುರ 141
19 ನಾಗದೇವಾಚಾರ್ಯಚರಿತ, ಪು. 123
20 ಲೇಖಪದ್ಧತಿ, ಪು. 52
21 JBBRAS. Vol. XII, P. 38
22 Ibn Batuta, P. 227
23 Marcoplo, Vol. II. P. 393
24 IA. Vol. XII, P. 119
25 EI. Vol. II, P. 212
26 368 of 1960-61, 381 of 1964-65, SH, Vol. XX, nos. 177, 181, 185, 201, 218, Vol. XV, 195, 206, 226 ಇತ್ಯಾದಿ
27 Bk 86, 87, 89 of 1932-33
28 Karnataka Inscriptions, Vol. II, P. 122
29 EI. Vol. XXI, P. 7
30 JBBRAS. Vol. XII, P. 7
31 ಅದೇ, no. 3

32 EI. Vol. XIX, P. 23

33 Bk 131, 122 of 1933-35, Bk 264 of 1927-28

34 ಜ್ಞಾನೇಶ್ವರೀ ಗೀತಾಮೃತ, ಪು. 243

35 ಅದೇ, ಪು. 76

36 ಅದೇ, ಪು. 392

37 Bk 13 of 1933-34

* * *

ಅಧ್ಯಾಯ ೧೪

# ವಿದ್ಯಾಭ್ಯಾಸ ಮತ್ತು ಸಾಹಿತ್ಯ

ಈ ಕಾಲದ ವಿದ್ಯಾಕೇಂದ್ರಗಳನ್ನು ಅಗ್ರಹಾರ, ಬ್ರಹ್ಮಪುರಿ, ಮಠ ಮತ್ತು ಘಟಕಾಸ್ಥಾನಗಳೆಂದು ನಾಲ್ಕು ವಿಧಗಳಾಗಿ ವಿಂಗಡಿಸಬಹುದು. ಇವುಗಳೆಲ್ಲವೂ ವಿದ್ಯಾಕೇಂದ್ರಗಳೇ ಆದರೂ ಅವುಗಳ ಸ್ವರೂಪದಲ್ಲಿ ಭಿನ್ನತೆಯಿರುವುದರಿಂದ ಅವುಗಳನ್ನು ಪ್ರತ್ಯೇಕವಾಗಿ ಗಮನಿಸಬೇಕಾಗುವುದು. ನಾವು ಆಗಲೇ ಅಗ್ರಹಾರದ ವಿಚಾರವನ್ನು ಗಮನಿಸಿದ್ದೇವೆ. ಪುಣ್ಯವನ್ನು ಪಡೆಯುವುದೇ ಅಗ್ರಹಾರಗಳ ನಿರ್ಮಾಣಕ್ಕೆ ಮುಖ್ಯ ಕಾರಣವಾದರೂ, ಅವುಗಳಿಂದ ವಿದ್ಯಾಭ್ಯಾಸಕ್ಕೆ ಉಂಟಾದ ಸಹಾಯ ಮಹತ್ತರವಾದುದು. ಅಗ್ರಹಾರವೆಂದರೆ ಬ್ರಾಹ್ಮಣರಿಗೆ ಅವರ ಜೀವನಕ್ಕಾಗಿ ದಾನಕೊಟ್ಟ ಗ್ರಾಮ. ಗ್ರಾಮದ ವಿಶಿಷ್ಟ ಸಂಪತ್ತೂ ಅವರಿಗೆ ಸೇರಿದುದು. ಈ ಬ್ರಾಹ್ಮಣರಿಗೆ ಜೀವನೋಪಾಯದ ಯೋಚನೆಯು ತಪ್ಪಿದುದರಿಂದ, ಅವರು ತಮ್ಮ ಪೂರ್ಣ ಸಮಯವನ್ನು ವಿದ್ಯಾರ್ಜನೆ ಮತ್ತು ವಿದ್ಯಾದಾನಕ್ಕಾಗಿ ಮುಡುಪಾಗಿಟ್ಟರು. ಇದರಿಂದ ಅಗ್ರಹಾರಗಳು ಮುಖ್ಯ ಕೇಂದ್ರಗಳಾಗಿ ಅಂದರೆ, ಈಗಿನ ವಿಶ್ವವಿದ್ಯಾನಿಲಯಗಳಂತೆ ಕೆಲಸ ಮಾಡಲು ಅವಕಾಶವಾಯಿತು. ಶಾಸನಗಳಲ್ಲಿ ಅಗ್ರಹಾರಗಳಲ್ಲಿದ್ದ ಬ್ರಾಹ್ಮಣರ ಪಾಂಡಿತ್ಯದ ವಿಚಾರಗಳು ವರ್ಣಿತವಾಗಿರುತ್ತವೆ. ತಿಳಿವಳ್ಳಿ ಅಗ್ರಹಾರವು ಅಲ್ಲಿ ವಾಸಮಾಡುತ್ತಿದ್ದ ವಿದ್ಯಾಪರಿಣತ ಬ್ರಾಹ್ಮಣರುಗಳಿಂದ, ನಗರಖಂಡ ನಾಡಿನಲ್ಲೇ ಪ್ರಾಮುಖ್ಯತೆಯನ್ನು ಪಡೆದಿದ್ದಿತು.[1] ಈ ಅಗ್ರಹಾರದ ಒಂದು ಸಾವಿರ ಮಹಾಜನಗಳು ಯಮ, ನಿಯಮ, ಸ್ವಾಧ್ಯಾಯ, ಧ್ಯಾನ, ಧಾರಣ, ಮೌನ, ಜಪ, ಸಮಾಧಿ ಮುಂತಾದವುಗಳಲ್ಲಿ ನಿಷ್ಠರಾಗಿದ್ದರು. ಅವರು ಸದ್ಗುಣ ಗಣಿಗಳಾಗಿದ್ದರು. ನಾಲ್ಕು ವೇದಗಳು, ಉಪನಿಷತ್ತು, ವೇದಾಂಗ, ನ್ಯಾಯ, ವೈಶೇಷಿಕ, ಸಾಂಖ್ಯ, ಲೋಕಾಯತ, ಬೌದ್ಧ, ಜೈನತತ್ತ್ವಗಳಲ್ಲಿಯೂ ಮತ್ತು ತರ್ಕ, ವ್ಯಾಕರಣ ಶಾಸ್ತ್ರಗಳಲ್ಲಿ ಖ್ಯಾತ ಪಂಡಿತರೂ ಆಗಿದ್ದರು; ದಕ್ಷ, ವಸಿಷ್ಠ, ಗೌತಮ ಮುಂತಾದ ಮಹಾತಪಸ್ವಿಗಳಿಗೆ ಸಮಾನರಾಗಿದ್ದರು. ಇತಿಹಾಸ, ಮೀಮಾಂಸ, ಗಣಿತ, ಕಾಮಶಾಸ್ತ್ರ ಮುಂತಾದವುಗಳಲ್ಲಿಯೂ ಅವರ ಪಾಂಡಿತ್ಯವು ವಿಶೇಷವಾಗಿದ್ದಿತು. ಇಂತಹ ಬ್ರಾಹ್ಮಣರು ತಮ್ಮ ಮಕ್ಕಳಿಗೆ ಮತ್ತು ಇತರ ಶಿಷ್ಯರಿಗೆ ನಿರ್ವಂಚನೆಯಿಂದ ಶಾಸ್ತ್ರಗಳನ್ನು ಬೋಧಿಸುತ್ತಿದ್ದರು. ವಿದ್ಯಾರ್ಥಿಗಳೂ ಬಹು ಶ್ರದ್ಧೆಯಿಂದ ಮತ್ತು ಗುರುಭಕ್ತಿಯಿಂದ ಗುರುಗಳಿಗೆ ತಕ್ಕ ಶಿಷ್ಯರಾಗಿ ಉತ್ತಮ

ಪಾಂಡಿತ್ಯವನ್ನು ಹೊಂದಲು ಪ್ರಯತ್ನಿಸುತ್ತಿದ್ದರು. ಹೀಗಾಗಿ ಅಗ್ರಹಾರಗಳು ಪ್ರಾಚೀನ ಕಾಲದಲ್ಲಿ ಶ್ರೇಷ್ಠ ವಿದ್ಯಾಕೇಂದ್ರಗಳಾಗಿ ಪರಿಣಮಿಸಿದವು.

ಬ್ರಹ್ಮಪುರಿಯು ನಗರಗಳಲ್ಲಿ ಮತ್ತು ಪಟ್ಟಣಗಳಲ್ಲಿ ಬ್ರಾಹ್ಮಣ ವಿದ್ವಾಂಸರು ವಾಸಿಸುವ ಭಾಗ. ಅಂದರೆ ಅವುಗಳು ಅಗ್ರಹಾರಗಳಂತೆ ಪೂರ್ಣವಾದವುಗಳಲ್ಲ. ನಗರದ ಒಂದು ಭಾಗ ಮಾತ್ರ. ಸೇವುಣರ ಶಾಸನಗಳಲ್ಲಿ ಕಾಣಬರುವ ಬ್ರಹ್ಮ ಪುರಿಗಳ ಸಂಖ್ಯೆ ಬಲು ಕಡಿಮೆ. ಆ ಕಾಲದಲ್ಲಿ ನಗರಗಳಿಗಿಂತ ಹಳ್ಳಿಯ ಸಂಖ್ಯೆಗಳೇ ಜಾಸ್ತಿಯಾಗಿದ್ದುದರಿಂದ, ಬ್ರಹ್ಮಪುರಿಗಳು ಅಷ್ಟಾಗಿ ಕಾಣುವುದಿಲ್ಲ. ಅನೇಕ ಸೇವುಣ ರಾಜರೂ ಮತ್ತು ಅವರ ಮಂತ್ರಿಗಳೂ ಬ್ರಹ್ಮಪುರಿಗಳನ್ನು ಸ್ಥಾಪಿಸಿದರೆಂದು ಅವರ ಶಾಸನಗಳಿಂದ ಗೊತ್ತಾಗುತ್ತದೆ. ಬಿಜಾಪುರ ಜಿಲ್ಲೆಯ ಕಡ್ಲೆವಾಡದಲ್ಲಿ ಎಂಟು ಬ್ರಹ್ಮಪುರಿಗಳಿದ್ದವು. ಈ ಬ್ರಹ್ಮಪುರಿಯ ಬ್ರಾಹ್ಮಣರೂ ಉದ್ದಾಮ ಪಂಡಿತರಾಗಿದ್ದರು. ವೇದ, ವೇದಾಂಗ, ಪುರಾಣ, ನಾಟಕ, ಕಾವ್ಯ, ಗಣಿತ, ಛಂದಸ್, ಮನುಧರ್ಮಶಾಸ್ತ್ರ, ಸಿದ್ಧಾಂತ ಮತ್ತು ನಿಘಂಟುಗಳಲ್ಲಿ ಅದ್ವಿತೀಯ ಪಂಡಿತ ರಾಗಿದ್ದರು. ಯಮ ನಿಯಮಾದಿ ಷಟ್ಕರ್ಮನಿರತರಾಗಿದ್ದರು. ತರ್ಕಶಾಸ್ತ್ರದಲ್ಲಿ ವಿಶೇಷ ಪರಿಣತರಾಗಿದ್ದ ಇವರನ್ನು ವಾದದಲ್ಲಿ ಸೋಲಿಸುವುದು ಅಸಾಧ್ಯದ ಮಾತಾಗಿದ್ದಿತು. ಒಟ್ಟಿನಲ್ಲಿ ಹೇಳುವುದಾದರೆ ಇವರೂ ಅಗ್ರಹಾರದ ಬ್ರಾಹ್ಮಣ ರನ್ನೇ ಹೋಲುತ್ತಿದ್ದರು. ಈ ಕಾಲದಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಇತರ ಬ್ರಹ್ಮಪುರಿಗಳೆಂದರೆ ಹಿರೇಬೇವಿನೂರು, ಮುದ್ಗಲ್, ಕಬ್ಬೂರು ಮುಂತಾದವು.

ಈ ಕಾಲದಲ್ಲಿ ಮಠಗಳು ಮತ್ತು ದೇವಾಲಯಗಳು ಧಾರ್ಮಿಕ ಜೀವನದಲ್ಲಿ ಎಷ್ಟು ಮುಖ್ಯವಾಗಿದ್ದವೋ, ವಿದ್ಯಾಭ್ಯಾಸದಲ್ಲೂ ಅಷ್ಟೇ ಪ್ರಾಮುಖ್ಯವನ್ನು ಪಡೆದಿದ್ದವು. ಭಕ್ತರು ದೇವಾಲಯಗಳಿಗೆ ದಾನಗಳನ್ನು ಕೊಡುವಾಗ, ಅಲ್ಲಿದ್ದ ವಿದ್ಯಾರ್ಥಿಗಳ ಮತ್ತು ಉಪಾಧ್ಯಾಯ ಯತಿಗಳ ಸೌಕರ್ಯಕ್ಕಾಗಿಯೂ ಅನೇಕ ದತ್ತಿಗಳನ್ನು ಕೊಡುತ್ತಿದ್ದರು. ಸೇವುಣರ ಕಾಲದಲ್ಲಿ ಪ್ರಖ್ಯಾತವಾಗಿದ್ದ ಮಠಗಳೆಂದರೆ ಸರೂರು, ಭೈರವಡಗಿ, ಸಾಲ್ವಡಗಿ, ಕಲ್ಲೂರು ಮತ್ತು ಉದ್ರಿ. ಮಠಗಳಲ್ಲಿದ್ದ ಯತಿಗಳ ಪಾಂಡಿತ್ಯವೂ ಅಗ್ರಹಾರದ ಬ್ರಾಹ್ಮಣರ ಪಾಂಡಿತ್ಯಕ್ಕಿಂತ ಕಮ್ಮಿಯೇನೂ ಆಗಿರಲಿಲ್ಲ. ಸಾಮಾನ್ಯವಾಗಿ ಸೇವುಣ ಕಾಲದಲ್ಲಿ ಮಠಗಳು ಕಾಳಾಮುಖ ಮುನಿಗಳ ಆಶ್ರಯದಲ್ಲಿದ್ದವು. ಕಾಳಾಮುಖರು ವಿದ್ಯಾಭ್ಯಾಸಕ್ಕೆ ಕೊಟ್ಟ ಕೊಡುಗೆಯನ್ನು ಆಗಲೇ ಗಮನಿಸಿದ್ದೇವೆ. ಸರ್ವೇಶ್ವರಶಕ್ತಿ, ರುದ್ರಶಕ್ತಿ, ವಾಮಶಕ್ತಿ ಮುಂತಾದವರು ರಾಜಗುರುಗಳಾಗಿದ್ದು, ರಾಜರುಗಳಿಂದ ಮತ್ತು ಮಂತ್ರಿಗಳಿಂದ ಅನೇಕ ದತ್ತಿಗಳನ್ನೂ ಪಡೆದರು. ಇದರಿಂದ ಮಠಗಳು ಬೆಳೆಯಲು ಅನುಕೂಲವಾಯಿತು.

ಘಟಿಕಾಸ್ಥಾನಗಳ ಸ್ವರೂಪದ ವಿಚಾರವು ಚರ್ಚಾಸ್ಪದವಾಗಿದ್ದರೂ, ಅದೊಂದು ಪ್ರಮುಖವಿದ್ಯಾಕೇಂದ್ರವೆಂದು ಎಲ್ಲರೂ ಒಪ್ಪಿದ್ದಾರೆ. ಕಲ್ಯಾಣದ

ಚಾಳುಕ್ಯರ ಶಾಸನದಲ್ಲಿ 'ಘಟಿಕಾಸ್ಥಾನಮೆನಿಪಶಾಲೆಗೆ' ಎಂದು ಹೇಳಿರುವುದು ಇದನ್ನು ಸ್ಪಷ್ಟಗೊಳಿಸುತ್ತದೆ. ರಾಮಚಂದ್ರನ ಕಾಲದ ಶಾಸನವೊಂದರಿಂದ ಶೋಲಾಪುರ ಜಿಲ್ಲೆಯ ವೇಲಾಪುರದಲ್ಲಿ ಘಟಿಕಾಸ್ಥಾನವು ಇದ್ದುದು ತಿಳಿದುಬರುತ್ತದೆ.[3] ರಾಮಚಂದ್ರನ ಸರ್ವಾಧಿಕಾರಿಯಾದ ಬ್ರಹ್ಮದೇವರಾಣೆಯು ಇದಕ್ಕೆ ಅನೇಕ ದತ್ತಿಗಳನ್ನು ಕೊಟ್ಟನು.

ಮಕ್ಕಳ ವಿದ್ಯಾಭ್ಯಾಸಕ್ಕೋಸ್ಕರ ಪ್ರತ್ಯೇಕ ಶಾಲೆಗಳಿರುತ್ತಿದ್ದವು. ಸಿಂಘಣನ ಧಾರ್ವಾಡದ ಶಾಸನದಲ್ಲಿ ಬಾಲಶಿಕ್ಷೆಗೋಸ್ಕರ ನಿಯಮಿತನಾದ ಉಪಾಧ್ಯಾಯನಿಗೆ ಎರಡು ನಿವರ್ತನ ಭೂಮಿಯನ್ನು ದತ್ತಿಯಾಗಿ ಕೊಟ್ಟ ನಿದರ್ಶನವಿದೆ.[4] ಈ ಶಾಲೆಯು ಅಲ್ಲಿನ ದೇವಸ್ಥಾನಕ್ಕೆ ಸೇರಿದಂತೆ ಇದ್ದು ಅಲ್ಲಿ ವಿದ್ಯಾರ್ಥಿಗಳಿಗೆ ಊಟ ಉಪಚಾರಗಳೂ ನಡೆಯುತ್ತಿದ್ದವು. ಇದೇ ರೀತಿಯ ಪ್ರಾಥಮಿಕ ವಿದ್ಯಾಭ್ಯಾಸದ ಶಾಲೆಯೊಂದು ಐದನೆಯ ಭಿಲ್ಲಮನ ಕಾಲದಲ್ಲಿ ಸಾಲೊತ್ತಿ ಎಂಬಲ್ಲಿದ್ದಿತು.[5]

ಶಾಸನಗಳಲ್ಲಿ ಹೆಸರಿಸಿರುವ ಉಪಾಧ್ಯಾಯರ ವಿದ್ಯಾರ್ಹತೆಗಳಿಂದ ಸೇವುಣ ಕಾಲದಲ್ಲಿ ವೈದಿಕ ವಿದ್ಯೆಗೇ ಹೆಚ್ಚು ಪ್ರೋತ್ಸಾಹವಿದ್ದುದು ಗೊತ್ತಾಗುತ್ತದೆ. ಆದರೆ ಇತರ ವಿಷಯಗಳಾದ ನಾಟಕ, ಇತಿಹಾಸ, ಖಗೋಳಶಾಸ್ತ್ರ, ಗಣಿತಶಾಸ್ತ್ರ, ಜ್ಯೋತಿಷ್ಯಶಾಸ್ತ್ರ ಮುಂತಾದವೂ ಶಾಲೆಗಳಲ್ಲಿ ಬೋಧನೆಯ ವಿಷಯಗಳಾಗಿದ್ದವು. ಸಿಂಘಣನ ಕಾಲದಲ್ಲಿ ಖಗೋಳಶಾಸ್ತ್ರ ಮತ್ತು ಜ್ಯೋತಿಷ್ಯಶಾಸ್ತ್ರಕ್ಕೋಸ್ಕರವಾಗಿ ಒಂದು ವಿದ್ಯಾಸಂಸ್ಥೆಯಿದ್ದಿತು.[6] ಸುಪ್ರಸಿದ್ಧ ಖಗೋಳಶಾಸ್ತ್ರಜ್ಞ ಭಾಸ್ಕರಾಚಾರ್ಯನ ಮೊಮ್ಮಗನಾದ ಚಂಗದೇವನಿಂದ ಸ್ಥಾಪಿತವಾದ ಈ ಸಂಸ್ಥೆಯಲ್ಲಿ ಮುಖ್ಯವಾಗಿ ಸಿದ್ಧಾಂತಶಿರೋಮಣಿಗೆ ಸಂಬಂಧಿಸಿದ ವಿಷಯಗಳನ್ನು ಬೋಧಿಸಲಾಗುತ್ತಿದ್ದಿತು. ಇದರ ಸ್ಥಾಪಕನಾದ ಅನಂತದೇವನು ಬ್ರಹ್ಮಗುಪ್ತನ ಬ್ರಹ್ಮಸ್ಫುಟಸಿದ್ಧಾಂತ ಮತ್ತು ವರಾಹಮಿಹಿರನ ಹೋರಾಗ್ರಂಥಗಳಲ್ಲಿ ಪಾಂಡಿತ್ಯವನ್ನು ಸಂಪಾದಿಸಿ ಪ್ರಸಿದ್ಧನಾಗಿದ್ದನು. ಸಿಂಘಣನ ಆಶ್ರಿತರಾಗಿದ್ದ ಸೋವಿದೇವ ಮತ್ತು ಹೆಮ್ಮಾಡಿದೇವ ಈ ವಿದ್ಯಾಸಂಸ್ಥೆಗೆ ವಿಶೇಷ ಧನಸಹಾಯವನ್ನು ಮಾಡಿದ್ದರು.

ಈ ಮೇಲಿನ ಎಲ್ಲ ವಿಷಯಗಳಿಂದಲೂ ಸೇವುಣರ ಕಾಲದಲ್ಲಿ ವಿದ್ಯೆಗೋಸ್ಕರ ರಾಜರೂ, ಮಂತ್ರಿಗಳೂ ಮತ್ತು ಪ್ರಜೆಗಳು ವಿಶೇಷ ಆಸಕ್ತಿ ವಹಿಸುತ್ತಿದ್ದರೆಂದು ಗೊತ್ತಾಗುತ್ತದೆ.

ಸೇವುಣರ ಕಾಲವು ಸಾಹಿತ್ಯ ನಿರ್ಮಾಣ ಕಾರ್ಯದಲ್ಲೂ ಗಮನಾರ್ಹವಾಗಿದೆ. ಸಂಸ್ಕೃತದಲ್ಲಿ ಹೇಮಾದ್ರಿಯೇ ಅತ್ಯಂತ ಮುಖ್ಯನಾದವನು. ಈತನು ಮಹಾದೇವ ಮತ್ತು ರಾಮಚಂದ್ರ ಇವರ ಕಾಲದಲ್ಲಿ ಶ್ರೇಷ್ಠ ಅಧಿಕಾರಿಯಾಗಿ ಕೆಲಸ ಮಾಡುತ್ತಿದ್ದನು. ಇವನಿಂದ ರಚಿತವಾದ ಚತುರ್ವರ್ಗ ಚಿಂತಾಮಣಿಯ ಪ್ರತಿ ಅಧ್ಯಾಯದ ಕೊನೆಯಲ್ಲಿ ಶ್ರೀ ಮಹಾರಾಜಾಧಿರಾಜ ಶ್ರೀ ಮಹಾದೇವಸ್ಯ ಸಮಸ್ತ ಕರಣಾಧೀಶ್ವರ ಸಕಲ ವಿದ್ಯಾ ವಿಶಾರದ ಹೇಮಾದ್ರಿ ವಿರಚಿತ... ಎಂದಿದೆ.

ಹೇಮಾದ್ರಿಯು ವತ್ಸಗೋತ್ರಕ್ಕೆ ಸೇರಿದ ಬ್ರಾಹ್ಮಣ ಮನೆತನದವನು. ವಾಮ, ವಾಸುದೇವ ಮತ್ತು ಕಾಮದೇವ ಎಂಬುವರು ಇವನ ಮುತ್ತಜ್ಜ, ಅಜ್ಜ ಮತ್ತು ತಂದೆ. ಚತುರ್ವರ್ಗ ಚಿಂತಾಣಿಯು ಐದು ಭಾಗಗಳನ್ನೊಳಗೊಂಡಿದೆ. ಕೆಲವು ಹಸ್ತ ಪ್ರತಿಗಳಲ್ಲಿ ವ್ರತಖಂಡ, ದಾನಖಂಡ, ಕಾಲಖಂಡ, ಶ್ರಾದ್ಧಖಂಡ ಮತ್ತು ಪರಿಶೇಷಖಂಡ ಎಂಬ ಭಾಗಗಳಿವೆ. ಮತ್ತೆ ಕೆಲವಲ್ಲಿ ಕಾಲಖಂಡ ಮತ್ತು ಶ್ರಾದ್ಧಖಂಡಗಳ ಬದಲು ತೀರ್ಥಖಂಡ ಮತ್ತು ಮೋಕ್ಷಖಂಡ ಭಾಗಗಳಿವೆ. ಚತುರ್ವರ್ಗಚಿಂತಾಮಣಿಯು ವೈದಿಕ ಮತಕ್ಕೆ ಸಂಬಂಧಿಸಿದ ಒಂದು ವಿಶ್ವಕೋಶ. ಇದರಲ್ಲಿ ವೈದಿಕ ಋಷಿಗಳ ಅಭಿಪ್ರಾಯಗಳಿಂದ ಪ್ರಾರಂಭವಾಗಿ ಅನಂತರ ಬಂದ ಎಲ್ಲ ವೈದಿಕ ಬರಹಗಾರರ ಅಭಿಪ್ರಾಯಗಳನ್ನೂ ಒಂದುಗೂಡಿಸಿ ಕೊಡಲಾಗಿದೆ. ಒಟ್ಟಿನಲ್ಲಿ ಹೇಳುವುದಾದರೆ ಇದೊಂದು ವೈದಿಕ ಮತದ ಶ್ರೇಷ್ಠ ಕೃತಿ. ಈ ಕೃತಿಯ ಜೊತೆಗೆ ಹೇಮಾದ್ರಿಯು 'ಮುಕ್ತಾಫಲ' ಗ್ರಂಥವನ್ನು ಕುರಿತು 'ಕೈವಲ್ಯದೀಪಿಕಾ' ಎಂಬ ಟೀಕೆಯನ್ನೂ ಮತ್ತು ವಾಗ್ಭಟನ 'ಅಷ್ಟಾಂಗ ಹೃದಯ'ವನ್ನು ಕುರಿತು 'ಆಯುರ್ವೇದ ರಸಾಯನ' ಎಂಬ ಟೀಕೆಯನ್ನು ರಚಿಸಿದನೆಂದೂ ಕೆಲವರ ಮತ. ಮೋಡಿಲಿಪಿಯ ಉಗಮ ಮತ್ತು ಹೇಮಾದ್ರಿಪಂತ್ ಶೈಲಿಯ ದೇವಾಲಯಗಳಿಗೂ ಹೇಮಾದ್ರಿಯೇ ಕಾರಣನೆಂದು ಪ್ರತೀತಿ ಇದೆ. ಮಂತ್ರಿಯ ಕಾರ್ಯವನ್ನು ನೆರವೇರಿಸಿ ಕೊಂಡು, ಇಷ್ಟೆಲ್ಲಾ ಸಾಹಿತ್ಯ ನಿರ್ಮಾಣಕ್ಕೆ ಹೇಮಾದ್ರಿಗೆ ವ್ಯವಧಾನವಿದ್ದಿತೇ ಎಂಬ ಪ್ರಶ್ನೆಯನ್ನು ಅನೇಕರು ಎತ್ತಿದ್ದಾರೆ.

ಶಾರ್ಙದೇವನ 'ಸಂಗೀತ ರತ್ನಾಕರ'ವು ಸೇವುಣ ಕಾಲದಲ್ಲಿ ರಚಿಸಲಾದ ಗ್ರಂಥಗಳಲ್ಲಿ ಮುಖ್ಯವಾದುದು. ಶಾರ್ಙದೇವನು ಸಿಂಘಣನ ಆಶ್ರಯದಲ್ಲಿದ್ದನು. ಇವನು ಕಾಶ್ಮೀರದ ಬ್ರಾಹ್ಮಣ ಕುಲಕ್ಕೆ ಸೇರಿದವನು. ಇವನ ತಂದೆಯ ಹೆಸರು ಶೋಢಲ. ಶಾರ್ಙದೇವನು ಸಿಂಘಣನ ಕರಣಾಗ್ರಣೀ ಎಂದು ಹೇಳಿಕೊಂಡಿದ್ದಾನೆ.[7] 'ಸಂಗೀತ ರತ್ನಾಕರ'ವು ಕರ್ನಾಟಕ ಸಂಗೀತ ಸಾಹಿತ್ಯದಲ್ಲಿ ಅತಿ ಮುಖ್ಯವಾದ ಮತ್ತು ಬಹುದೊಡ್ಡದಾದ ಗ್ರಂಥ. ಸಂಗೀತದ ವಿವಿಧ ಅಂಶಗಳನ್ನು ಕ್ರಮವಾಗಿ ವಿಶದೀಕರಿ ಸುವ ಮುಖ್ಯ ಗ್ರಂಥವಿದು. ಇದರಲ್ಲಿ ಏಳು ಅಧ್ಯಾಯಗಳಿವೆ. ಪ್ರತಿಯೊಂದು ಅಧ್ಯಾಯವೂ ಸ್ವರ, ರಾಗ, ಪರಿಕೀರ್ಣಕ, ಪ್ರಬಂಧ, ತಾಳ, ವಾದ್ಯ ಮತ್ತು ನೃತ್ಯ ಎಂಬ ವಿವಿಧ ವಿಷಯಗಳನ್ನು ಪ್ರಸ್ತಾಪಿಸುತ್ತದೆ.

ಜಲ್ಹಣ ಪಂಡಿತನ 'ಸೂಕ್ತ ಮುಕ್ತಾವಲೀ' ಗ್ರಂಥವು ಕೃಷ್ಣನ ಆಶ್ರಯದಲ್ಲಿ ರಚಿತವಾಯಿತು. ಜಲ್ಹಣನ ಪೂರ್ವಜರು ಸೇವುಣ ರಾಜರಿಗೆ ಯಾವ ರೀತಿ ಸಹಾಯ ಮಾಡಿದರೆಂದು ಆಗಲೇ ಗಮನಿಸಿದ್ದೇವೆ. 'ಸೂಕ್ತಮುಕ್ತಾವಲಿ'ಯು ಸಂಸ್ಕೃತ ಗ್ರಂಥ ಗಳಿಂದ ಆಯ್ದ ಮುಕ್ತಕಗಳ ಸಂಕಲನ. ವಾಲ್ಮೀಕಿ, ಭಾಸ, ವರರುಚಿ, ಕಾಳಿದಾಸ, ದಂಡಿ, ಬಾಣ, ಮಾಘ, ಹಾಲ, ಗುಣಾಢ್ಯ, ರಾಜಶೇಖರ, ಬಿಲ್ಹಣ, ಅಮರ ಮುಂತಾದ ಕವಿಗಳ ಕೃತಿಗಳಿಂದ ಆಯ್ದ ಮುಕ್ತಕಗಳು ಇದರಲ್ಲಿ ಮುಖ್ಯವಾದವು.

ಸುಪ್ರಸಿದ್ಧ ಖಗೋಳಶಾಸ್ತ್ರಜ್ಞ ಭಾಸ್ಕರಾಚಾರ್ಯನ ವಂಶಸ್ಥನಾದ ಅನಂತ ದೇವನು 'ಶಾಂತೀಶ್ವರ ಪುರಾಣ'ವೆಂಬ ಚಂಪೂಗ್ರಂಥವನ್ನು ಸಿಂಘಣನ ಆಶ್ರಯ ದಲ್ಲಿ ರಚಿಸಿದನು. ಇದು ಹದಿನಾರನೆಯ ಜೈನ ತೀರ್ಥಂಕರ ಶಾಂತಿನಾಥನ ಚರಿತ್ರೆಯನ್ನು ವರ್ಣಿಸುತ್ತದೆ.

ಸೇವುಣರ ಬಹುಪಾಲು ಶಾಸನಗಳು ಕನ್ನಡ ಭಾಷೆಯಲ್ಲಿವೆ ಎಂದು ಆಗಲೇ ಹೇಳಿದ್ದೇವೆ. ಅವುಗಳಲ್ಲಿ ಕೆಲವು ಉತ್ತಮ ಶಾಸನ ಕಾವ್ಯಗಳಾಗಿವೆ. ತಿಳಿವಳ್ಳಿ, ದೇವಸ್ಥಾನ ಹಕ್ಕಲು, ದಾವಣಗೆರೆ ಮುಂತಾದ ಕಡೆಗಳಲ್ಲಿರುವ ಶಾಸನಗಳು ಶಾಸನ ಕಾವ್ಯಕ್ಕೆ ಒಳ್ಳೆಯ ಉದಾಹರಣೆಗಳು.[8] ವಚನ ಸಾಹಿತ್ಯವು ಬೆಳೆದಂತೆ, ಶಾಸನಗಳ ಮೇಲೂ ಅದರ ಪ್ರಭಾವ ಪ್ರಾರಂಭವಾಯಿತು. ಸೊನ್ನಲಿಗೆಯ ಸಿದ್ಧರಾಮನ ವಚನಗಳು ಶಾಸನಗಳಲ್ಲಿ ಉದಾಹೃತವಾಗಿರುವುದು ಗಮನಾರ್ಹವಾದುದು. ಸುಮಾರು ಇಪ್ಪತ್ತೈದು ಸೇವುಣ ಶಾಸನಗಳಲ್ಲಿ ಸಿದ್ಧರಾಮನ ವಚನಗಳು ಉದಾಹೃತ ವಾಗಿವೆ.[9] ಅಷ್ಟೇ ಅಲ್ಲದೇ ಕೃಷ್ಣನ ತಾಕಳಿ ಶಾಸನದಲ್ಲಿ ಈ ವಚನದ ಸಂಸ್ಕೃತ ಭಾಷಾಂತರವೂ ಕೊಡಲ್ಪಟ್ಟಿದೆ.[10]

ವೀರಶೈವ ಮತವು ಬೆಳೆದಂತೆ ಮಹಾರಾಷ್ಟ್ರದಲ್ಲಿಯೂ ಅದರ ಪ್ರಭಾವವು ಹೆಚ್ಚಲಾರಂಭಿಸಿತು. ಮುಕುಂದ ರಾಜನಿಂದ ಪ್ರಾರಂಭವಾಗಿ ಮರಾಠೀ ಸಂತರು ಸಂಸ್ಕೃತವನ್ನು ಬಿಟ್ಟು ಜನಸಾಮಾನ್ಯರಾಡುವ ಮರಾಠೀ ಭಾಷೆಯಲ್ಲಿ ಜನಗಳಿಗೆ ಧಾರ್ಮಿಕ ಬೋಧೆಯನ್ನು ಮಾಡಲು ಪ್ರಾರಂಭಿಸಿದರು. ಇಂತಹ ಸಂತರಲ್ಲಿ ಜ್ಞಾನದೇವನು ಅತಿಮುಖ್ಯನಾದವನು. ಜ್ಞಾನದೇವನ ಜೀವನ ಚರಿತ್ರೆಯನ್ನು ನಾವು ಆಗಲೇ ನೋಡಿದ್ದೇವೆ. ಜ್ಞಾನದೇವನ ಮುಖ್ಯ ಗ್ರಂಥವೆಂದರೆ 'ಜ್ಞಾನೇಶ್ವರೀ'. ಇದು ಭಗವದ್ಗೀತೆಯನ್ನು ಕುರಿತಾದ ಮರಾಠೀ ಭಾಷೆಯ ಟೀಕೆ. ಉದಾಹರಣೆ ಗಳೊಂದಿಗೆ ತಾತ್ವಿಕ ವಿಷಯಗಳನ್ನು ಸುಲಭವಾಗಿ ಅರ್ಥವಾಗುವ ರೀತಿಯಲ್ಲಿ ಹೇಳಿರುವುದೇ ಈ ಗ್ರಂಥದ ವೈಶಿಷ್ಟ್ಯ. ಪ್ರಾಚೀನ ಮರಾಠೀಭಾಷೆಯಲ್ಲಿ ಇದೊಂದು ಉತ್ತಮ ಕೃತಿ. ಜ್ಞಾನದೇವನು ಓವಿ ಎಂಬ ಛಂದಸ್ಸನ್ನು ಬಳಸಿದ್ದಾನೆ. ಇದು ನಾಗಾಲೋಟ ಓಡುತ್ತದೆ, ನರ್ತಿಸುತ್ತದೆ, ಹಾರುತ್ತದೆ, ನಿಲ್ಲುತ್ತದೆ, ಬೀಸಿಕೊಂಡು ಮಂದವಾಗಿ ಮುಂದುವರಿಯುತ್ತದೆ; ಈ ರೀತಿಯ ಸುಂದರವಾದ ನೂರಾರು ರೂಪಗಳನ್ನು ಆ ಶ್ರೇಷ್ಠ ಆಚಾರ್ಯನ ಅಪ್ಪಣೆಯಂತೆ ಪಡೆಯುತ್ತದೆ ಎಂದು ರಾನಡೆಯವರು ಹೊಗಳಿದ್ದಾರೆ.[11] ಸುಂದರವಾದ ಮತ್ತು ಕಿವಿಗೆ ಇಂಪಾದ ಶಬ್ದ ಸಂಗ್ರಹದಿಂದ ಕೂಡಿದ್ದು, ಪ್ರಾಚೀನ ಮರಾಠೀ ಸಾಹಿತ್ಯದಲ್ಲಿ ಅದೊಂದು ಉತ್ತಮ ಗ್ರಂಥವೆಂದು ಭಾಟೆಯವರು ಭಾವಿಸುತ್ತಾರೆ. ಜ್ಞಾನದೇವನ ಮತ್ತೊಂದು ಕೃತಿ ಯೆಂದರೆ ಅಮೃತಾನುಭವ. ಇದರಲ್ಲಿ ಉಪನಿಷತ್ತಿನ ರಹಸ್ಯವನ್ನು ಸುಲಭವಾಗಿ ಅರ್ಥವಾಗುವಂತೆ ಹೇಳಲಾಗಿದೆ. ಜ್ಞಾನದೇವನು ಅಭಂಗಗಳೆಂದು ಕರೆಯಲ್ಪಡುವ ಅನೇಕ ಭಕ್ತಿ ರಸಪ್ರಧಾನವಾದ ಶ್ಲೋಕಗಳನ್ನು ರಚಿಸಿ ಖ್ಯಾತನಾಗಿದ್ದಾನೆ. ಒಟ್ಟಿನಲ್ಲಿ

ಹೇಳುವುದಾದರೆ ಮರಾಠೀ ಸಾಹಿತ್ಯಕ್ಕೆ ಜ್ಞಾನದೇವನ ಕೊಡುಗೆಯು ಬಹು ಮಹತ್ತರವಾದುದು. ಪ್ರಾಚೀನ ಮರಾಠೀ ಸಾಹಿತ್ಯವು ಜ್ಞಾನದೇವನಿಂದ ಶ್ರೀಮಂತವಾಯಿತು.

ಮರಾಠೀ ಸಾಹಿತ್ಯದ ಬೆಳವಣಿಗೆಗೆ ಮಹಾನುಭಾವರೂ ವಿಶೇಷ ಕೊಡುಗೆಯನ್ನು ಕೊಟ್ಟಿದ್ದಾರೆ. ಮಹಾನುಭಾವ ತತ್ವಗಳನ್ನು ಬೋಧಿಸುವ ಸಲುವಾಗಿ ಅವರು ಅನೇಕ ಸತೀಗ್ರಂಥಗಳನ್ನು ರಚಿಸಿದರು. ಮಾಯಿಮ ಭಟ್ಟನಿಂದ ರಚಿತವಾದ 'ಲೀಲಾ ಚರಿತ'ವು ಉತ್ತಮ ಮರಾಠೀ ಗ್ರಂಥಗಳಲ್ಲೊಂದು. ಏಕಾಂಕ, ಪೂರ್ವಾರ್ಧ ಮತ್ತು ಉತ್ತರಾರ್ಧ ಎಂದು ವಿಭಾಗಿಸಲ್ಪಟ್ಟ ಈ ಗ್ರಂಥವು ಬಹು ಸುಲಭಶೈಲಿಯಲ್ಲಿ ಮಹಾನುಭಾವ ಪಂಥದ ತತ್ತ್ವಗಳನ್ನು ವಿವರಿಸುತ್ತದೆ. ಮಹಾನುಭಾವರ ಇತರ ಸತೀಗ್ರಂಥಗಳನ್ನು ಆಗಲೇ ಹೆಸರಿಸಿದ್ದೇವೆ. ಭಗವದ್ಗೀತೆಯು ಬಹು ಜನಾನುರಾಗಿಯಾದ ಈ ಕಾಲದಲ್ಲಿ ಅನೇಕ ಮರಾಠೀ ಟೀಕೆಗಳು ರಚಿತವಾದವು. ಮಹೇಂದ್ರ, ಭಾಸ್ಕರಭಟ್ಟ, ಅನಂತಭಟ್ಟ ಇವರ ಭಗವದ್ಗೀತೆಯ ಮರಾಠೀ ಟಿಪ್ಪಣಿಗಳು ಜ್ಞಾನೇಶ್ವರಿಯಷ್ಟು ಉತ್ತಮವಾಗಿಲ್ಲದಿದ್ದರೂ, ಸಾಮಾನ್ಯ ಗ್ರಂಥಗಳಾಗಿವೆ. ಒಟ್ಟಿನಲ್ಲಿ ಈ ಎಲ್ಲ ಗ್ರಂಥಗಳಿಂದ ಮರಾಠೀ ಸಾಹಿತ್ಯವು ವಿಶೇಷವಾಗಿ ಬೆಳೆಯಿತು.

## ಟಿಪ್ಪಣಿಗಳು

1 ಕರ್ನಾಟಕ ಸಾಹಿತ್ಯ ಪರಿಷತ್ ಪತ್ರಿಕೆ, ಸಂ. 28. ಪು. 1
2 BK 43 of 1936-37
3 ಪ್ರಾಚೀನ ಕೋರೀವ್ ಮರಾಠೀ ಲೇಖ್ no 50.
4 EI, Vol. XXXIV, P. 41
5 BK 66 of 1937-38
6 EI, Vol. I, P. 338
7 ಸಂಗೀತ ರತ್ನಾಕರ, ಸಂ. 1, ಶ್ಲೋಕ 1-3
8 EC, Vol. VIII, ಸೊರಬ 276, EI, Vol. XXIII, P. 189
9 SII, Vol XV, nos 190, 191, 195, 184; Vol XX, nos 177, 181, 201, 218
10 SII, Vol XX, no 218
11 Ranade: Mysticism in Maharastra, P. 36

* * *

ಅನುಬಂಧ ೧

## ಸೇವುಣರ ವಂಶವೃಕ್ಷ

| | |
|---|---|
| ಸುಬಾಹು | |
| \| | |
| ದೃಢಪ್ರಹಾರ | [ಕ್ರಿ.ಶ. 825-850] |
| \| | |
| ಸೇವುಣಚಂದ್ರ ೧ | [ಕ್ರಿ.ಶ. 850-875] |
| \| | |
| ಧಡಿಯಪ್ಪ ೧ | [ಕ್ರಿ.ಶ. 875-900] |
| \| | |
| ಭಿಲ್ಲಮ ೧ | [ಕ್ರಿ.ಶ. 900-928] |
| \| | |
| ರಾಜಗಿ | [ಕ್ರಿ.ಶ. 925-950] |
| \| | |
| ವಡ್ಡಿಗ ೧ | [ಕ್ರಿ.ಶ. 960-975] |
| \| | |
| ಧಡಿಯಪ್ಪ ೨ | |
| \| | |
| ಭಿಲ್ಲಮ ೨ | [ಕ್ರಿ.ಶ. 975-1000] |
| \| | |
| ವೇಸುಗಿ ೧ | [ಕ್ರಿ.ಶ. 1000-1025] |
| \| | |
| ಅರ್ಜುನ | |
| \| | |
| ಭಿಲ್ಲಮ ೩ | [ಕ್ರಿ.ಶ. 1025-1052] |
| \| | |
| ವಾಡುಗಿ ೨ | |
| \| | |
| ವೇಸುಗಿ ೨ | |
| \| | |
| ಭಿಲ್ಲಮ ೪ | |
| \| | |

- ಸೇವುಣಚಂದ್ರ ೨ [ಕ್ರಿ.ಶ.1069-1098]
  - ಐರಮದೇವ [ಕ್ರಿ.ಶ.1098-1123]
  - ಸೇವುಣದೇವ [ಕ್ರಿ.ಶ.1123-1142]
    - ಮಲ್ಲುಗಿ [ಕ್ರಿ.ಶ.1142-1169]
      - ಅಮರಗಾಂಗೇಯ
        - ಗೋವಿಂದರಾಜ
      - ಅಮರ ಮಲ್ಲುಗಿ
        - ಕಲಿಯಬಲ್ಲಾಳ
      - ಕರ್ಣ
        - ಭಿಲ್ಲಮ ೫ [ಕ್ರಿ.ಶ.1173-1192]
          - ಜೈತುಗಿ ೧ [ಕ್ರಿ.ಶ.1192-1200]
            - ಸಿಂಘಣ [ಕ್ರಿ.ಶ.1200-11247]
              - ಜೈತುಗಿ ೨
                - ಕೃಷ್ಣ [ಕ್ರಿ.ಶ.1247-1261]
                  - ರಾಮಚಂದ್ರ [ಕ್ರಿ.ಶ.1271-1312]
                    - ಸಿಂಘಣ ೨ [ಕ್ರಿ.ಶ.1311-13]
                      - ಮೇಲುಗಿದೇವ [ಕ್ರಿ.ಶ.1333-1334]
                    - ಹರಪಾಲ ದೇವ [ಅಳಿಯ] [ಕ್ರಿ.ಶ.1313-18]
                    - ಭಿಲ್ಲಮ ೬
                    - ಬಿಂಬ
                    - ಪ್ರತಾಪಶ
                - ಮಹಾದೇವ [ಕ್ರಿ.ಶ.1261-1270]
                  - ಆಮಣ [ಕ್ರಿ.ಶ.1270-1271]

ಅನುಬಂಧ - ೨

## ಸೇವುಣರ ನಾಣ್ಯಗಳು

ದೇವಗಿರಿಯ ಸೇವುಣರು ಅಥವಾ ಯಾದವರು ದಖನ್ನಿನ ಇತಿಹಾಸದಲ್ಲಿ ಮುಖ್ಯ ಪಾತ್ರ ವಹಿಸಿದವರು. ಕರ್ನಾಟಕಕ್ಕೆ ಸೇರಿದ ಇವರು ಹೊಯ್ಸಳರೊಡನೆ ಸಾಕಷ್ಟು ಸೆಣಸಾಡಿ, ಕೊನೆಗೆ ದಕ್ಷಿಣ ಕರ್ನಾಟಕಕ್ಕೆ ಬರಲಾರದೆ, ಉತ್ತರ ಕರ್ನಾಟಕ ಹಾಗೂ ಮಹಾರಾಷ್ಟ್ರದ ಕೆಲವು ಭಾಗಗಳನ್ನು ತಮ್ಮದಾಗಿಸಿಕೊಂಡು ದೇವಗಿರಿಯಿಂದ ರಾಜ್ಯವಾಳಿದರು. ಕ್ರಿ.ಶ. 1000 ರಿಂದ ಆರಂಭಿಸಿ ಕ್ರಿ.ಶ. 1325ರ ವರೆಗೆ ವಿಶಾಲವಾದ ಈ ರಾಜ್ಯವನ್ನು ಆಳಿ ಕೊನೆಗೆ ಮುಸ್ಲಿಮರ ಆಘಾತದಿಂದ ಇತಿಹಾಸದ ಹೊರಕ್ಕೆ ನಿರ್ಗಮಿಸಿದರು. [1] ಕಲ್ಯಾಣದ ಚಾಲುಕ್ಯರು ಬಲಹೀನರಾಗುತ್ತಿದ್ದಂತೆ, ಅವರ ರಾಜ್ಯವನ್ನು ಕಬಳಿಸಲು ಹೊಯ್ಸಳರು ಮತ್ತು ಸೇವುಣರು ಪ್ರಯತ್ನಿಸಿದರು. ಒಂದರ ಮೇಲೆ ಒಂದರಂತೆ ಅನೇಕ ಯುದ್ಧಗಳು ಈ ಪರಸ್ಪರರಲ್ಲಿ ನಡೆದವು. ಇಬ್ಬರಿಗೂ ಮನಶ್ಶಾಂತಿ ಲಭಿಸಲಿಲ್ಲ. ಇದರಿಂದಾಗಿ ಎರಡೂ ರಾಜ್ಯಗಳ ಸಂಪತ್ತು ನಾಶವಾಗಿ, ಮುಸ್ಲಿಮರು ಇವರನ್ನು ಸೋಲಿಸುವುದು ಸುಲಭವಾಯಿತು. ಚಾಲುಕ್ಯರ ಸಾಮಂತರಾಗಿ, ಅದಕ್ಕೂ ಮೊದಲು ರಾಷ್ಟ್ರಕೂಟರ ಸಾಮಂತರಾಗಿ ರಾಜ್ಯವಾಳಿದ ಸೇವುಣರನ್ನು ಪರಮೋಚ್ಚ ರಾಜರನ್ನಾಗಿ ಮಾಡಿದ ಕೀರ್ತಿ ಐದನೆಯ ಭಿಲ್ಲಮನಿಗೆ (1173-1182) ಸೇರುತ್ತದೆ. ನಂತರ ಸಿಂಘಣ, ಮಹಾದೇವ, ರಾಮಚಂದ್ರ ಮುಂತಾದ ರಾಜರುಗಳು ಆಳಿ ಈ ರಾಜ್ಯವನ್ನು ಅಭಿವೃದ್ಧಿ ಪಡಿಸಿದರು.[2] ಸೇವುಣರು ಮರಾಠಿ ಯವರೆಂದು ಹಿಂದಿನ ತಲೆಮಾರಿನ ಇತಿಹಾಸಕಾರರು ಭಾವಿಸಿದ್ದರು. ಆದರೆ ಇತ್ತೀಚಿನ ಸಂಶೋಧನೆಗಳಿಂದ ಇವರು ಕರ್ನಾಟಕದವರೆಂದು ತಿಳಿದುಬಂದಿದೆ. ಇವರ ನಾಣ್ಯಗಳು ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು, ಮಹಾರಾಷ್ಟ್ರ, ಮಧ್ಯಪ್ರದೇಶಗಳಲ್ಲಿ ದೊರಕಿವೆ.

ಕನ್ನಡಿಗರೇ ಆದ ಸೇವುಣರು ಕನ್ನಡ ಮತ್ತು ಸಂಸ್ಕೃತ ಭಾಷೆಗಳಲ್ಲಿ ಹೆಚ್ಚಿನ ಸಂಖ್ಯೆಯ ಶಾಸನಗಳನ್ನು ಹೊರಡಿಸಿದ್ದಾರೆ. ಈ ಶಾಸನಗಳು ಕರ್ನಾಟಕದಲ್ಲಿ ಮಾತ್ರವಲ್ಲದೆ ಅದರ ಹೊರಗಡೆಯೂ ಸಾಕಷ್ಟು ಸಂಖ್ಯೆಯಲ್ಲಿ ದೊರಕಿವೆ. ಇದರಿಂದ ಆಗಿನ ಕಾಲದಲ್ಲಿ ಕರ್ನಾಟಕ ಎಷ್ಟೊಂದು ವಿಶಾಲವಾಗಿತ್ತು ಎಂಬುದು ತಿಳಿಯುತ್ತದೆ. ನಾಣ್ಯಶಾಸ್ತ್ರದ ದೃಷ್ಟಿಯಿಂದಲೂ ಸೇವುಣರ ಶಾಸನಗಳು ಮಹತ್ವ ವನ್ನು ಪಡೆದಿವೆ. ಏಕೆಂದರೆ ಅವುಗಳಲ್ಲಿ ಅಂದು ಚಲಾವಣೆಯಲ್ಲಿದ್ದ ವಿವಿಧ

ನಾಣ್ಯಗಳ ವಿಷಯ ಹೇರಳವಾಗಿ ಕಾಣಬರುತ್ತವೆ. ಇವರ ಶಾಸನಗಳಿಂದ ತಿಳಿದುಬರುವ ನಾಣ್ಯಗಳೆಂದರೆ ನಿಷ್ಕ, ದ್ರಮ್ಮ, ಗದ್ಯಾಣ, ಹೊನ್, ಸುವರ್ಣ, ಪಣ, ಚವುಲ, ಕಾಕಿನೀ, ರೂಕ, ಹಾಗ, ಟಂಕ, ಬೇಳೆ, ವೀಸ, ಅರೆವೀಸ ಮತ್ತು ಅಚ್ಚು.

ಗದ್ಯಾಣವೇ ಈ ಕಾಲದ ಅತ್ಯಂತ ಮುಖ್ಯವಾದ ಹಾಗೂ ವರಿಷ್ಠ ನಾಣ್ಯವಾಗಿತ್ತು. ವರಹ ಇನ್ನೂ ಜನಾನುರಾಗಿಯಾಗಿರಲಿಲ್ಲ. ಗದ್ಯಾಣವನ್ನೇ ನಿಷ್ಕ ಮತ್ತು ಸುವರ್ಣ ಎಂದೂ ಕರೆಯುತ್ತಿದ್ದರು. ಈ ಕಾಲದಲ್ಲಿಯೂ ವಿವಿಧ ರೀತಿಯ ಗದ್ಯಾಣಗಳಿದ್ದವೆಂಬುದನ್ನು ಶಾಸನಗಳು ದೃಢಪಡಿಸುತ್ತವೆ. ಲೊಕ್ಕಿ ಗದ್ಯಾಣವೆಂಬುದು ಆಗಲೇ ಗಮನಿಸಿರುವಂತೆ ಲೊಕ್ಕಿಗುಂಡಿಯ ಟಂಕಶಾಲೆಯಲ್ಲಿ ತಯಾರಾದ ಗದ್ಯಾಣ. ಅಂಬಿಲಿ ಗದ್ಯಾಣವೆಂದರೆ, ಅಂಬಿಲಿ ಎಂಬಲ್ಲಿದ್ದ ಟಂಕಶಾಲೆಯಲ್ಲಿ ಅಚ್ಚಿಸಲಾದ ಗದ್ಯಾಣ.[3] ಗಜಮಲ್ಲ ಗದ್ಯಾಣವೆನ್ನುವುದರ ಸರಿಯಾದ ಅರ್ಥ ತಿಳಿಯದು.[4] ಬಹುಶಃ ಈ ನಾಣ್ಯದ ಮೇಲೆ ಗಜಮಲ್ಲ ಎಂಬ ಬಿರುದು ಇದ್ದಿರಬಹುದು. ಪ್ರಿಯ ಶ್ರಾಹಿ ಗದ್ಯಾಣವೆನ್ನುವುದು ಉತ್ತಮ ಚಿನ್ನದಿಂದ ತಯಾರಾದ ಮತ್ತು ಚಲಾವಣೆಯಲ್ಲಿದ್ದ ಗದ್ಯಾಣ. [5] ಪಂಗು ಗದ್ಯಾಣ ಎನ್ನುವುದರ ಅರ್ಥ ತಿಳಿದಿಲ್ಲ. ಬಹುಶಃ 'ಪಂಗು' ಅಥವಾ 'ಪಂಗ' ಎನ್ನುವ ರಾಜಾದಾಯಕ್ಕೆ ಸಂಬಂಧಪಟ್ಟಿದ್ದಿರಬೇಕು. [6]

ನಿಷ್ಕ ಎನ್ನುವ ನಾಣ್ಯದ ವಿಷಯ ಕೆಲವು ಶಾಸನಗಳಲ್ಲಿ ಕಾಣಬರುತ್ತದೆ. ದೊರೆ ಕೃಷ್ಣನ ಬೆಹಟ್ಟಿ ಶಾಸನದಲ್ಲಿ, ದೊರೆಯು ಅಗ್ರಹಾರಕ್ಕೆ ನಾನೂರು ನಿಷ್ಕಗಳನ್ನು ಕೊಡುಗೆಯಾಗಿ ನೀಡಿದನೆಂದು ಹೇಳಿದೆ. [7] ಬಹುಶಃ ಇದು ಚಿನ್ನದ ಗದ್ಯಾಣವನ್ನು ಸೂಚಿಸುತ್ತದೆ ಎಂದು ಭಾವಿಸಬೇಕು. ಭಾಸ್ಕರಾಚಾರ್ಯನ ಲೀಲಾವತೀ ಎಂಬ ಗ್ರಂಥದಲ್ಲಿ ನಿಷ್ಕವನ್ನು ಚಿನ್ನದ ನಾಣ್ಯವೆಂದು ತಿಳಿಸಿ, ಅದು ಹದಿನಾರು ಬೆಳ್ಳಿಯ ದ್ರಮ್ಮಗಳಿಗೆ ಸಮನಾಗಿದ್ದಿತು ಎಂದು ವಿವರಣೆ ನೀಡಿದೆ.[8] ಸೇವುಣ ಶಾಸನಗಳಲ್ಲಿ ಬೆಳ್ಳಿಯ ದ್ರಮ್ಮಗಳ ಪ್ರಸ್ತಾಪ ಆಗಾಗ್ಗೆ ಬರುತ್ತದೆ.[9] ಇದು ನಿಜವಾಗಿಯೂ ಆಶ್ಚರ್ಯಕರವಾದುದು. ಗ್ರೀಕರ ಪ್ರಭಾವ ಕಡಿಮೆ ಆದ ಮೇಲೆ ಅವರು ಬಳಸುತ್ತಿದ್ದ ಡ್ರಕ್ಮ ಅಥವಾ ದ್ರಮ್ಮದ ಉಪಯೋಗವೂ ಕಡಿಮೆಯಾಗಿ ಈ ಸಮಯಕ್ಕೆ ಅದು ಪೂರ್ಣವಾಗಿ ನಿಂತುಹೋಗಿರುವ ಸಾಧ್ಯತೆಗಳೇ ಹೆಚ್ಚು. ಆದುದರಿಂದ ಬೆಳ್ಳಿಯ ನಾಣ್ಯವನ್ನೇ ದ್ರಮ್ಮ ಎಂದು ಸಮಕಾಲೀನ ಸೇವುಣ ಶಾಸನಗಳು ಉಲ್ಲೇಖಿಸಿವೆ ಎಂದು ಭಾವಿಸಬೇಕು. ಸೇವುಣರ ಸಾಮಂತರಾಗಿದ್ದ ಶಿಲಾಹಾರರ ಶಾಸನ ಒಂದರಲ್ಲಿ ಪೋರುತ್ತ ದ್ರಮ್ಮದ ಉಲ್ಲೇಖವಿದೆ. [10] ಇದರ ಅರ್ಥ ಏನೆಂಬುದು ತಿಳಿದಿಲ್ಲ.

ರೂಕ ಎನ್ನುವುದು ಸೇವುಣರ ಶಾಸನಗಳಲ್ಲಿ ಕಾಣಬರುವ ಇನ್ನೊಂದು ನಾಣ್ಯ. ದೊರೆ ರಾಮಚಂದ್ರನ ಶಾಸನದಲ್ಲಿ ಪಂಡರಾಪುರದ ವಿಠಲನಿಗೆ ರೂಕಗಳನ್ನು

ದಾನ ಮಾಡಿದ ವಿಷಯವನ್ನು ಹೇಳಿದೆ. [11] ಸ್ಮೃತಿಸ್ಥಲ ಎನ್ನುವ ಮಹಾನುಭಾವ ಗ್ರಂಥದಲ್ಲಿಯೂ ರೂಕ ಎಂಬ ನಾಣ್ಯದ ಪ್ರಸ್ತಾಪವಿದೆ. [12] ಈ ನಾಣ್ಯ ವಿಶೇಷವಾಗಿ ಆಂಧ್ರದ ಭಾಗಗಳಲ್ಲಿ ಚಲಾವಣೆಯಲ್ಲಿದ್ದಿತು. ಇದೊಂದು ಬೆಳ್ಳಿಯ ನಾಣ್ಯ. ಇದು ರೂಪ್ಯಕ ಅಥವಾ ರೂಪಾಯಿ ಎನ್ನುವ ನಾಣ್ಯಕ್ಕೆ ಸಮವೆಂದು ಕೆಲವರು ಭಾವಿಸುತ್ತಾರೆ. ಉದಾಹರಣೆಗೆ ಕಲಚುರಿ ದೊರೆ ಕೃಷ್ಣರಾಜನ ಕಾಲದ ನಾಣ್ಯಗಳನ್ನು ಕೃಷ್ಣರಾಜ ರೂಪ್ಯಕವೆಂದು ಕರೆಯುತ್ತಿದ್ದರು.

ಈ ಕಾಲದ ಇನ್ನೊಂದು ನಾಣ್ಯವೆಂದರೆ ಪಣ ಅಥವಾ ಹಣ. ಶಾಸನಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಇದು ಚಿನ್ನದ ಹಾಗೂ ತಾಮ್ರದ ನಾಣ್ಯವಾಗಿದ್ದಿತೆಂದು ತಿಳಿಯುತ್ತದೆ. ಸಿಂಘಣನ ಪುಲುಂಜ ಶಾಸನದಿಂದ ಒಂದು ಪಣಕ್ಕೆ ನಾಲ್ಕು ಹಾಗಗಳು ಸಮವಾಗಿದ್ದವು ಎಂದು ಗೊತ್ತಾಗುತ್ತದೆ. [13] ಭಾಸ್ಕರಾಚಾರ್ಯನ ಪ್ರಕಾರ ಒಂದು ದ್ರಮ್ಮಕ್ಕೆ ಹದಿನಾರು ಪಣಗಳು.

ಅನೇಕ ಮಹಾನುಭಾವ ಮರಾಠೀ ಗ್ರಂಥಗಳಲ್ಲಿ ಆಸು ಎಂಬ ನಾಣ್ಯದ ಪ್ರಸ್ತಾಪ ಆಗಾಗ್ಗೆ ಕಾಣಬರುತ್ತದೆ. ಲೀಲಾಚರಿತದ ಪ್ರಕಾರ ದೊರೆ ಕೃಷ್ಣನು ಚಕ್ರಧರ ಸ್ವಾಮಿಗೆ ಆಸು ಎಂಬ ನಾಣ್ಯಗಳನ್ನು ಕಾಣಿಕೆಯಾಗಿ ಅರ್ಪಿಸಿದನು. [14] ಅಂಬೆ ಮತ್ತು ಪಟಾನ್ ಶಾಸನಗಳೂ ಕೂಡ ಆಸು ಎಂಬ ನಾಣ್ಯವನ್ನು ಉಲ್ಲೇಖಿಸುತ್ತವೆ.[15] ಅಚ್ಚು ಎಂಬ ನಾಣ್ಯದ ಮರಾಠೀ ರೂಪವೇ ಆಸು ಇರಬೇಕೆಂದು ವಿದ್ವಾಂಸರು ಭಾವಿಸುತ್ತಾರೆ. ಟಂಕಾಧಿಕಾರಿಯಾಗಿದ್ದ ಥಕ್ಕೂರ ಫೇರು, ತನ್ನ ಗ್ರಂಥ 'ದ್ರವ್ಯ ಪರೀಕ್ಷೆ'ಯಲ್ಲಿ ಸೇವುಣರ ಹೇಮಾಚ್ಚು ಎಂಬ ನಾಣ್ಯಗಳನ್ನು ಉಲ್ಲೇಖಿಸಿದ್ದಾನೆ. [16] ಮಹಾನುಭಾವ ಗ್ರಂಥಗಳಲ್ಲಿ ಕಾಸು, ಕವಡಾ, ದಾಮು, ಚಿಂಚೊರಾ, ಪೊಫಲಿ ಮತ್ತು ಅಡ್ಡ ಎಂಬ ನಾಣ್ಯಗಳು ಕಾಣಸಿಗುತ್ತವೆ. ಇವುಗಳ ಸರಿಯಾದ ಮೌಲ್ಯ ತಿಳಿದಿಲ್ಲ. ಜ್ಞಾನೇಶ್ವರೀ ಗ್ರಂಥದಲ್ಲಿ ಚಾಮ ಎಂಬ ಪದವು ಚರ್ಮದ ನಾಣ್ಯ ಎನ್ನುವ ಅರ್ಥದಲ್ಲಿ ಕಂಡುಬರುತ್ತದೆ. [17] ನಿಜವಾಗಿಯೂ ಈ ರೀತಿಯ ನಾಣ್ಯ ಚಲಾವಣೆಯಲ್ಲಿದ್ದಿತೆಂದು ನಂಬುವುದು ಕಷ್ಟ. ರಾಜನ ಅಧಿಕಾರದಿಂದ ಚರ್ಮವೂ ನಾಣ್ಯವಾಗಬಲ್ಲದು ಎಂದು ಹೇಳಲು ಜ್ಞಾನೇಶ್ವರ ಈ ಪದವನ್ನು ಬಳಸಿರಬೇಕೆಂದು ಊಹಿಸಬಹುದು. ಹಿಂದಿನ ಕಾಲದಲ್ಲಿದ್ದಂತೆ ಸೇವುಣರ ಕಾಲದಲ್ಲಿಯೂ ನಾಣ್ಯಗಳನ್ನು ತಯಾರು ಮಾಡುವ ಕೆಲಸವನ್ನು ಖಾಸಗಿ ಜನಗಳಿಗೆ ವಹಿಸಲಾಗುತ್ತಿದ್ದಿತು. ಅಂತಹವರು ಟಂಕೆ, ಮುದ್ರೆ ಎಂಬ ತೆರಿಗೆಯನ್ನು ಸರಕಾರಕ್ಕೆ ಕೊಡಬೇಕಾಗಿದ್ದಿತು. [18]

ಸೇವುಣರ ಕಾಲದ ಶಾಸನಗಳಲ್ಲಿ ಹಾಗೂ ಮಹಾನುಭಾವ ಗ್ರಂಥಗಳಲ್ಲಿ ದೊರಕುವ ಮಾಹಿತಿಗಳ ಆಧಾರದ ಮೇಲೆ ಸೇವುಣರ ನಾಣ್ಯಗಳ ಪಟ್ಟಿಯನ್ನು ಹೀಗೆ ತೋರಿಸಬಹುದು.

1 ಗದ್ಯಾಣ = 1ನಿಷ್ಕ 1 ಸುವರ್ಣ = 59 ಗ್ರೇನ್

1 ಗದ್ಯಾಣ = 16 ದ್ರಮ್ಮ

1 ಗದ್ಯಾಣ = 10 ಪಣ

1 ಪಣ = 4 ಹಾಗ

1 ಹಾಗ = 5 ವೀಸ

1ವೀಸ = 2 ಬೇಳೆ

ಸೇವುಣರ ನಾಣ್ಯಗಳು ತಾಂತ್ರಿಕ ದೃಷ್ಟಿಯಿಂದ ವಿಶಿಷ್ಟವಾದವು. ಏಕೆಂದರೆ ಇವುಗಳು ಪಂಚ್ ಮಾಡಿದ ತಾಂತ್ರಿಕತೆ ಹಾಗೂ ದ್ವಿಮುಖ ಮುದ್ರೆಗಳ ತಾಂತ್ರಿಕತೆ ಎರಡಕ್ಕೂ ಸೇರುತ್ತವೆ. ಅಂದರೆ ಈ ಎರಡೂ ರೀತಿಯ ನಾಣ್ಯಗಳನ್ನು ಅವರು ಬಳಕೆಗೆ ತಂದರು. ಸೇವುಣರ ನಾಣ್ಯಗಳು ವ್ಯಾಪಕವಾಗಿ ವಿವಿಧ ಸ್ಥಳಗಳಲ್ಲಿ ದೊರಕಿರುವುದು ಗಮನಾರ್ಹ ಸಂಗತಿ. ಆಂಧ್ರಪ್ರದೇಶದಲ್ಲಿ ಇವರ ಹೆಚ್ಚಿನ ಸಂಖ್ಯೆಯ ನಾಣ್ಯಗಳು ದೊರಕಿವೆ. ಕರೀಂನಗರ, ಮೇಡಕ್, ಮಹಬೂಬ್‌ನಗರ, ಕೃಷ್ಣಾ ಮುಂತಾದ ಜಿಲ್ಲೆಗಳಲ್ಲಿ ಈ ನಾಣ್ಯಗಳು ದೊರಕಿವೆ. ಕೃಷ್ಣಾಜಿಲ್ಲೆಯ ರಾಚಪಟ್ಟಣಂ ಎಂಬಲ್ಲಿ ದೊರಕಿರುವ ನಾಣ್ಯಗಳು ಇತಿಹಾಸದ ದೃಷ್ಟಿಯಿಂದ ಬಲು ಮುಖ್ಯವಾದವು. ಮಹಾರಾಷ್ಟ್ರ, ಛತ್ತೀಸ್‌ಗಡ, ಒರಿಸ್ಸ, ಮಧ್ಯಪ್ರದೇಶ ಮತ್ತು ಕರ್ನಾಟಕಗಳಲ್ಲಿ ಇವರ ನಾಣ್ಯಗಳು ದೊರೆತಿವೆ. ಈಗ ಈ ನಾಣ್ಯಗಳನ್ನು ವಿವರವಾಗಿ ಗಮನಿಸಬಹುದು.

**ಮೂರನೆಯ ಸೇವುಣದೇವನ ನಾಣ್ಯ**

ಇತ್ತೀಚೆಗೆ ಮಹಾರಾಷ್ಟ್ರದಲ್ಲಿ ಒಂದು ಬೆಳ್ಳಿಯ ನಾಣ್ಯ ದೊರಕಿತು. ಅದರ ಅಳತೆ 0.4"; ತೂಕ 100 ಗ್ರೇನ್.

ಮು : ಬಾಲವನ್ನು ಮೇಲೆತ್ತಿಕೊಂಡಿರುವ ಸಿಂಹ

ಹಿ : ಎರಡು ಸಾಲುಗಳ ನಾಗರೀ ಬರಹ

ಸೇ ಉ


ಣದೇವ

ಸೇವುಣರು ಸಾಮಂತರಾಗಿ ಆಳಿದ ಸಮಯದಲ್ಲಿ ಈ ಹೆಸರಿನ ಮೂವರು ರಾಜರುಗಳಿದ್ದರು. ಮೊದಲನೆಯವನು ಸೇವುಣಚಂದ್ರ [1] (850-875). ಇವನು ನಾಣ್ಯವನ್ನು ಟಂಕಿಸುವಷ್ಟು ಸಮರ್ಥನಾಗಿರಲಿಲ್ಲ. ಎರಡನೆಯವನು ಸೇವುಣಚಂದ್ರ[2] (1123-1142). ಮೂರನೆಯವನು ಇವನ ಮಗ ಸೇವುಣದೇವ ಹಾಗೂ ಮಲ್ಲುಗಿಯ ತಂದೆ(1123-1142). ಇವನು ಚಾಲುಕ್ಯ ಆರನೆಯ ವಿಕ್ರಮಾದಿತ್ಯನ ಸಾಮಂತ ನಾಗಿದ್ದು ಕರ್ಪೂರತಿಲಕ ಎಂಬ ಆನೆಯನ್ನು ತಂದು, ಆರನೆಯ ವಿಕ್ರಮಾದಿತ್ಯನು ಕರ್ಪೂರ ವ್ರತವನ್ನು ಪೂರೈಸಲು ಸಹಾಯಕನಾದನು. ಆದುವ

ರಿಂದ ಈ ಬೆಳ್ಳಿಯ ನಾಣ್ಯವನ್ನು ಟಂಕಿಸಿದವನು ಮೂರನೆಯ ಸೇವುಣದೇವ ಎಂದು ತರ್ಕಿಸಲಾಗಿದೆ. ಸೇವುಣರು ಸಾಮಂತರಾಗಿದ್ದ ಸಮಯದ ಯಾವ ನಾಣ್ಯವೂ ದೊರೆತಿರಲಿಲ್ಲ. ಈ ನಾಣ್ಯ ದೊರೆತ ಮೇಲೆ, ಸಾಮಂತ ಸೇವುಣರಿಗೆ ನಾಣ್ಯಗಳನ್ನು ಟಂಕಿಸುವ ಅಧಿಕಾರವನ್ನು ಚಾಲುಕ್ಯರು ನೀಡಿದ್ದರು ಎಂಬುದು ಖಚಿತವಾಗುತ್ತದೆ. ಆದುದರಿಂದ ಈ ನಾಣ್ಯ ಮುಖ್ಯವಾದದ್ದು.

### ಐದನೆಯ ಭಿಲ್ಲಮನ ನಾಣ್ಯಗಳು

ಸೇವುಣರನ್ನು ಸ್ವತಂತ್ರರನ್ನಾಗಿ ಮಾಡಿದ ಈ ದೊರೆಯ ಚಿನ್ನದ, ಬೆಳ್ಳಿಯ ಮತ್ತು ತಾಮ್ರದ ನಾಣ್ಯಗಳು ದೊರೆತಿವೆ. ಚಿನ್ನದ ನಾಣ್ಯಗಳು ವೃತ್ತಾಕಾರವಾಗಿದ್ದು ಪಂಚ್ ರೀತಿಯ ನಾಣ್ಯಗಳಾಗಿವೆ. ಅವುಗಳ ಅಳತೆ 0.6"; ತೂಕ 58ಗ್ರೇನ್.[20]



ಮು : ಮಧ್ಯದಲ್ಲಿ ಅಗಲವಾದ ಎಂಟು ದಳಗಳ ಪದ್ಮವಿದೆ; ಅದರ ಎರಡೂ ಕಡೆಗಳಲ್ಲಿ ಶ್ರೀ ಎಂಬ ಕನ್ನಡ ಅಕ್ಷರಗಳು ; ಕೆಳಭಾಗ ದಲ್ಲಿ ಶಂಖವಿದೆ; ಮೇಲ್ಭಾಗದಲ್ಲಿ ಎರಡು ಸಾಲುಗಳ ನಾಗರೀ ಬರಹ<br>
ಶ್ರೀ ಭಿಲ್ಲ<br>
ಮದೇವ

ಈ ನಮೂನೆಯ ನಾಣ್ಯಗಳಲ್ಲಿ ಸ್ವಸ್ತಿಕ, ರಾಜದಂಡ ಮುಂತಾದ ಚಿಹ್ನೆಗಳು ಶಂಖದ ಬದಲು ಇರುವುದೂ ಉಂಟು. ಇವುಗಳ ಜೊತೆಗೆ ಸಣ್ಣ ಚುಕ್ಕೆಗಳು ಕಾಣಬರುತ್ತವೆ. ಬಹುಶಃ ಇವು ಟಂಕಶಾಲೆಯ ಗುರುತುಗಳಿರಬಹುದೆಂದು ಭಾವಿಸ ಲಾಗಿದೆ. ಇದಕ್ಕೆ ಹಿಮ್ಮುಖವಿಲ್ಲ.

ಈ ರಾಜನ ಇನ್ನೊಂದು ನಮೂನೆಯ ನಾಣ್ಯ ಬೆಳ್ಳಿಯಿಂದ ತಯಾರಾದದ್ದು. ಇದೂ ವೃತ್ತಾಕಾರದಲ್ಲಿದ್ದು, ಇದರ ಅಳತೆ 0.5" ; ತೂಕ 135 ಗ್ರೇನ್.[21]

ಮು : ಚುಕ್ಕಿಗಳಿಂದ ವಿನ್ಯಾಸಗೊಳಿಸಿದ ಸಿಂಹ<br>
ಹಿ : ಎರಡು ಸಾಲುಗಳ ನಾಗರೀ ಬರಹ<br>
ಶ್ರೀ ಭಿಲ್ಲ<br>
ಮದೇವ

ಈ ನಮೂನೆಯ ನಾಣ್ಯಗಳು ಅನೇಕ ಅಳತೆ ಮತ್ತು ತೂಕಗಳಲ್ಲಿ ದೊರಕಿವೆ. ಈ ನಾಣ್ಯಗಳ ತೂಕದ ಆಧಾರದ ಮೇಲೆ ಇವುಗಳನ್ನು ದ್ವಿಮಾಷಕ, ಮಾಷಕ, ಅರ್ಧಮಾಷಕ, ಪಾದಮಾಷಕ, ಹತ್ತನೆಯ ಒಂದು ಭಾಗದ ಮಾಷಕ ಎಂದು ಗುರುತಿಸಬಹುದು. ಕ್ರಮವಾಗಿ ಇವುಗಳ ತೂಕ 270, 135, 68, 34 ಮತ್ತು 13 ಗ್ರೇನ್‌ಗಳಾಗುತ್ತವೆ. ಈ ಮೇಲಿನ ತೂಕಗಳ ಎಲ್ಲ ನಾಣ್ಯಗಳೂ ದೊರಕಿವೆ. [22]

ಭಿಲ್ಲಮನು ಟಂಕಿಸಿದ ತಾಮ್ರದ ನಾಣ್ಯದ ವಿವರಗಳು ಹೀಗಿವೆ. ಇದು ವೃತ್ತಾಕಾರದಲ್ಲಿದ್ದು, ಇದರ ಅಳತೆ 0.3"; ತೂಕ 18ಗ್ರೇನ್. [23]

ಮು : ಬಲಕ್ಕಿರುವ ಸಿಂಹ

ಹಿ : ಎರಡು ಸಾಲುಗಳು ನಾಗರೀ ಬರಹ
ಶ್ರೀ ಭಿಲ್ಲ
ಮದೇವ

## ಇಮ್ಮಡಿ ಸಿಂಘಣನ ನಾಣ್ಯಗಳು

ಸೇವುಣರಲ್ಲಿ ಅತ್ಯಂತ ಶ್ರೇಷ್ಠ ದೊರೆಯೆನಿಸಿದ ಇಮ್ಮಡಿ ಸಿಂಘಣನು, ಚಿನ್ನ, ಬೆಳ್ಳಿ ಮತ್ತು ತಾಮ್ರಗಳಲ್ಲಿ ನಾಣ್ಯಗಳನ್ನು ಟಂಕಿಸಿದನೆಂದು ತಿಳಿದು ಬಂದಿದೆ. ಆದರೆ ಇವನ ತಾಮ್ರದ ನಾಣ್ಯಗಳು ದೊರಕಿಲ್ಲ. ಇವನ ನಾಣ್ಯಗಳು ವೈವಿಧ್ಯಮಯ ವಾಗಿದ್ದು, ಅವುಗಳಲ್ಲಿ ಅನೇಕ ನಮೂನೆಗಳನ್ನು ಗುರುತಿಸಬಹುದು. ಸೋನ್ ಪುರದ ಕೋಶಾಗಾರದಲ್ಲಿದ್ದ ಇವನ ಚಿನ್ನದ ನಾಣ್ಯಗಳು ಈ ರೀತಿ ಇವೆ. [24] ಇವೆಲ್ಲವೂ ವೃತ್ತಾಕಾರದವು ; ಇವುಗಳ ಅಳತೆ 0.6" ತೂಕ 57 ಗ್ರೇನ್. ಇವೆಲ್ಲವೂ ಪಂಚ್ ನಮೂನೆಗೆ ಸೇರಿದ ನಾಣ್ಯಗಳು.

ಮು : ಮಧ್ಯದಲ್ಲಿ ಎಂಟು ದಳಗಳ ಪದ್ಮ ; ಕೆಳಗೆ ಶಂಖ; ಪಕ್ಕದಲ್ಲಿ ಶ್ರೀ ಎಂಬ ಅಕ್ಷರ ಮತ್ತು ಚಕ್ರ ; ಮೇಲ್ಭಾಗದಲ್ಲಿ ಒಂದು ಸಾಲಿನ ನಾಗರೀ ಬರಹ.
ಸಿಂಘಣ

ಈ ರೀತಿಯ ನಾಣ್ಯಗಳು ಹೆಚ್ಚಿನ ಸಂಖ್ಯೆಯಲ್ಲಿ ದೊರಕಿವೆ. ಕೆಲವು ನಾಣ್ಯ ಗಳಲ್ಲಿ ಸಣ್ಣ ಭಿನ್ನತೆ ಕಂಡುಬರುತ್ತದೆ. ಕೆಲವು ನಾಣ್ಯಗಳಲ್ಲಿ ಖಡ್ಗ ಕಂಡು ಬಂದರೆ, ಮತ್ತೆ ಕೆಲವಲ್ಲಿ ಬಿಲ್ಲು ಕಾಣಬರುತ್ತದೆ. [25]

ಇವನ ಬೆಳ್ಳಿಯ ನಾಣ್ಯಗಳು ಇನ್ನೊಂದು ನಮೂನೆಗೆ ಸೇರುತ್ತವೆ. [26] ಇವುಗಳನ್ನು ತೂಕದಿಂದ ಮಾಷಕ ಮೌಲ್ಯದ ನಾಣ್ಯಗಳೆಂದು ತಿಳಿಯಬಹುದು. ಇವುಗಳ ಅಳತೆ 0.4"; ತೂಕ 120 ರಿಂದ 135 ಗ್ರೇನ್.

ಮು : ಬಾಲವನ್ನು ಮೇಲಕ್ಕೆತ್ತಿಕೊಂಡಿರುವ ಸಿಂಹ
ಹಿ : ಎರಡು ಸಾಲುಗಳ ನಾಗರೀ ಬರಹ; ಕೆಳಗೆ ಅಂಕುಶ
ಶ್ರೀ ಸಿಂಘ
ಣದೇವ




ಈ ನಮೂನೆಯ ಕೆಲವು ನಾಣ್ಯಗಳ ಮೇಲೆ ಶ್ರೀ ಸಿಂಘಣ ಎಂಬ ಬರಹ ಮಾತ್ರವಿರುವುದೂ ಉಂಟು.

ಇತ್ತೀಚೆಗೆ ನಿತ್ಯಾನಂದ ಪೈ ಅವರು ಸಂಘಣನ ಹೆಂಡತಿ ರಾಣಿ ಕಾಂಚಲ ದೇವಿಯ ಹೆಸರಿರುವ ನಾಣ್ಯಗಳನ್ನು ಪ್ರಕಟಿಸಿದ್ದಾರೆ. [27] ಇದರಿಂದ ಇವನಿಗೆ ಕಾಂಚಲದೇವಿ ಎಂಬ ರಾಣಿಯಿದ್ದಳು ಎಂಬುದು ಈ ನಾಣ್ಯದಿಂದ ಗೊತ್ತಾಗುತ್ತದೆ. ಇದು ಚಿನ್ನದ ನಾಣ್ಯ; ಇದರ ತೂಕ 53 ಗ್ರೇನ್, ಅಗಲ 0.6"

ಮು : ಶಂಖ ಮತ್ತು ಚಕ್ರಗಳ ನಡುವೆ ಖಡ್ಗ
ಹಿ : ಮೂರು ಸಾಲುಗಳ ನಾಗರೀ ಬರಹ
ಶ್ರೀ ಸಿಂಘ
ಣ ಕಾಂಚ
ಲದೇವಿ

ಶಾಸನಗಳಿಂದಲೂ ಈ ರಾಣಿಯ ಹೆಸರು ತಿಳಿದುಬಂದಿಲ್ಲ.



### ಕೃಷ್ಣ ಅಥವಾ ಕನ್ನರದೇವನ ನಾಣ್ಯಗಳು

ಈ ದೊರೆಯ ಚಿನ್ನ, ಬೆಳ್ಳಿ ಮತ್ತು ತಾಮ್ರದ ನಾಣ್ಯಗಳು ದೊರೆತಿವೆ. ಇವನ ಚಿನ್ನದ ನಾಣ್ಯಗಳು ಐದನೆಯ ಭಿಲ್ಲಮನ ನಾಣ್ಯಗಳಂತೆಯೇ ಇವೆ. ಇವುಗಳ ಅಳತೆ 0.6";ತೂಕ 56 ಗ್ರೇನ್.

ಮು : ಮಧ್ಯದಲ್ಲಿ ಎಂಟು ದಳಗಳ ಪದ್ಮ; ಎಡ ಮತ್ತು ಬಲ ಭಾಗಗಳಲ್ಲಿ ಶ್ರೀ ಎಂಬ ಕನ್ನಡ ಅಕ್ಷರ ;ಕೆಳಭಾಗದಲ್ಲಿ ಶಂಖ ಮತ್ತು ಕೆಲವು ಚುಕ್ಕಿಗಳು ; ಮೇಲ್ಭಾಗದಲ್ಲಿ ನಾಗರೀ ಲಿಪಿಯಲ್ಲಿ ಕನ್ಹಪ ಅಥವಾ ಕನ್ಹ ಅಥವಾ ಕ ಎಂಬ ಬರಹ. ಹಿಂಭಾಗ ಖಾಲಿ

ಈ ದೊರೆಯ ಬೆಳ್ಳಿಯ ನಾಣ್ಯಗಳು ವೃತ್ತಾಕಾರದಲ್ಲಿವೆ ; ಅವುಗಳ ಅಳತೆ - 0.4"; ತೂಕ 135 ಗ್ರೇನ್. [28]

ಮು : ಮುಂಗಾಲುಗಳನ್ನು ಮೇಲೆತ್ತಿರುವ ಸಿಂಹ

ಹಿ : ಎರಡು ಸಾಲುಗಳ ನಾಗರೀ ಬರಹ

ಶ್ರೀ ಕನ್ಹ

ರದೇವ

ತೂಕವನ್ನು ಗಮನಿಸಿದರೆ, ಇದು ಮಾಷಕ ಮೌಲ್ಯದ ನಾಣ್ಯವೆಂದು ತಿಳಿಯುತ್ತದೆ.



ಕನ್ನರದೇವನ ತಾಮ್ರದ ನಾಣ್ಯವೂ ದೊರಕಿದೆ. ಮುಂಬಯಿಯ ಏಷಿಯಾಟಿಕ್ ಸೊಸೈಟಿ ಸಂಗ್ರಹದಲ್ಲಿರುವ ಈ ನಾಣ್ಯ ಆಯತಾಕಾರವಾಗಿದೆ. ಇದರ ಅಳತೆ 0.7" x 0.6"; ತೂಕ 50 ಗ್ರೇನ್. [29]

ಮು : ಎಡಕ್ಕಿರುವ ಸಿಂಹ

ಹಿ : ಎರಡು ಸಾಲುಗಳ ನಾಗರೀ ಬರಹ

ಶ್ರೀ ಕನ

ರದೇವಸ

ಕೃಷ್ಣನಿಗೆ ಲಕ್ಷ್ಮಿ ಎಂಬ ರಾಣಿಯಿದ್ದಳು. ಆದುದರಿಂದ ಭೋರ್ ರಾಜ್ಯದ ಕೋಶಾಗಾರದಲ್ಲಿದ್ದ ಕೆಲವು ನಾಣ್ಯಗಳ ಮೇಲೆ ಲಕ್ಷುಮಾ ಎನ್ನುವ ಬರಹವಿರುವುದರಿಂದ ಈ ನಾಣ್ಯಗಳನ್ನು ಈ ಸೇವುಣ ರಾಣಿ ಟಂಕಿಸಿದಳೆಂದು ಕೆಲವರು ಅಭಿಪ್ರಾಯಪಡುತ್ತಾರೆ. ಆದರೆ ಈ ನಾಣ್ಯಗಳು ಚಾಲುಕ್ಯ ಆರನೆಯ ವಿಕ್ರಮಾ

ದಿತ್ಯನ ರಾಣಿ ಲಕ್ಷ್ಮೀದೇವಿಗೆ ಸೇರಿದ್ದೆಂದೂ ಭಾವಿಸಲಾಗಿದೆ. ಸದ್ಯಕ್ಕೆ ಈ ವಿಷಯದಲ್ಲಿ ಖಚಿತವಾದ ಅಭಿಪ್ರಾಯವನ್ನು ಹೇಳುವುದು ಸಾಧ್ಯವಿಲ್ಲ.

**ಮಹಾದೇವನ ನಾಣ್ಯಗಳು**

ಕೃಷ್ಣನ ಅನಂತರ ರಾಜನಾದ ಮಹಾದೇವನ ಅನೇಕ ನಮೂನೆಯ ನಾಣ್ಯಗಳು ದೊರಕಿವೆ. ಚಿನ್ನದ ನಾಣ್ಯಗಳ ಅಳತೆ 0.7"; ತೂಕ 50 ಗ್ರೇನ್. ಅಂದರೆ ಇದು ಗದ್ಯಾಣ ಮೌಲ್ಯದ ನಾಣ್ಯ. ಇದು ಪಂಚ್ ರೀತಿಯ ನಾಣ್ಯವಾದುದರಿಂದ ಮುಮ್ಮುಖ ಮಾತ್ರವಿದೆ.


ಮು : ಮಧ್ಯದಲ್ಲಿ ಎಂಟು ದಳಗಳ ಪದ್ಮ ; ಎರಡು ಕಡೆಗಳಲ್ಲಿಯೂ ಶ್ರೀ ಎನ್ನುವ ನಾಗರೀ ಅಕ್ಷರ ; ಕೆಳಭಾಗದಲ್ಲಿ ಎರಡು ಸಾಲುಗಳ ನಾಗರೀ ಬರಹ
ಶ್ರೀ ಮ
ಹಾದೇವ

ಕೆಲವು ನಾಣ್ಯಗಳಲ್ಲಿ ಬರಹವು ನಾಣ್ಯದ ಮೇಲ್ಭಾಗದಲ್ಲಿರುತ್ತದೆ.

ಇನ್ನೊಂದು ನಮೂನೆಯ ನಾಣ್ಯವನ್ನು ಈಗ ಗಮನಿಸಬಹುದು. ಇದು ಬೆಳ್ಳಿಯ ನಾಣ್ಯ. ಇದು ವೃತ್ತಾಕಾರವಾಗಿದೆ. ಇದರ ಅಳತೆ 0.5"; ತೂಕ 15 ಗ್ರೇನ್.[30]

ಮು : ಮುಂಗಾಲುಗಳನ್ನು ಮೇಲಕ್ಕೆತ್ತಿರುವ ಸಿಂಹ

ಹಿ : ಕೆಳಭಾಗದಲ್ಲಿ ವರಾಹ; ಇದರ ಮೇಲ್ಗಡೆಯಲ್ಲಿ ಎರಡು ಸಾಲುಗಳ ನಾಗರೀ ಬರಹ
ಮಹಾದೇ
ವ



ಸೇವುಣ ಮತ್ತು ಕಾಕತೀಯರ ಇತಿಹಾಸದ ದೃಷ್ಟಿಯಿಂದ ಈ ನಾಣ್ಯ ಮುಖ್ಯವಾದುದೆಂದು ಕೆಲವರು ಅಭಿಪ್ರಾಯಪಡುತ್ತಾರೆ. ಅದಕ್ಕೆ ಈ ನಾಣ್ಯದ ಹಿಮ್ಮುಖದಲ್ಲಿರುವ ವರಾಹದ ಚಿತ್ರವೇ ಕಾರಣ. ವರಾಹ ಕಾಕತೀಯ ಲಾಂಛನ. ಅದು ಸೇವುಣ ಮಹಾದೇವನ ನಾಣ್ಯಗಳ ಮೇಲೆ ಏಕೆ ಮತ್ತು ಹೇಗೆ ಬಂದಿತು ಎನ್ನುವುದೇ ಮುಖ್ಯವಾದ ಪ್ರಶ್ನೆ. ಮಹಾದೇವನಿಗೂ ಕಾಕತೀಯ ರಾಣಿ ರುದ್ರಮದೇವಿಗೂ

ಘೋರ ಯುದ್ಧನಡೆಯಿತು. ಇದರಲ್ಲಿ ರುದ್ರಮದೇವಿಯು ಜಯಶಾಲಿಯಾದಳು. ಆದುದರಿಂದ ಅವಳು ಮಹಾದೇವನು ಟಂಕಿಸುವ ನಾಣ್ಯಗಳ ಮೇಲೆ, ತನ್ನ ರಾಜಲಾಂಛನ ವರಾಹವನ್ನು ವಿನ್ಯಾಸಗೊಳಿಸಬೇಕೆಂದು ಷರತ್ತುಗಳನ್ನು ಹಾಕಿದಳು. ಇದಕ್ಕೆ ಒಪ್ಪಿ ಸೇವುಣ ಮಹಾದೇವನು ಈ ರೀತಿ ಮಾಡಿದನು ಎಂದು ಆಂಧ್ರದ ಇತಿಹಾಸಕಾರರು ಭಾವಿಸುತ್ತಾರೆ. ಪ್ರತಾಪ ಚರಿತ್ರಮು ಮತ್ತು ಸಿದ್ದೇಶ್ವರ ಚರಿತ್ರಮು ಎನ್ನುವ ತೆಲುಗು ಗ್ರಂಥಗಳಲ್ಲಿ ಈ ವಿಷಯ ಹೇಳ್ಪಟ್ಟಿದೆ. ಆದರೆ ಮಹಾದೇವನು ಪೂರ್ಣವಾಗಿ ಸೋತು ರಾಣಿಗೆ ಶರಣಾಗತನಾದುದಕ್ಕೆ ಶಾಸನಾಧಾರಗಳು ದೊರಕುವುದಿಲ್ಲ. ಆದರೂ ಇದರ ವಿಷಯದಲ್ಲಿ ಖಚಿತವಾದ ಅಭಿಪ್ರಾಯವನ್ನು ಹೇಳುವುದು ಕಷ್ಟ.

ಈ ರೀತಿಯ ನಾಣ್ಯಗಳು ಹಲವಾರು ದೊರಕಿದ್ದು, ಅವುಗಳಲ್ಲಿ ಸಣ್ಣ ಪುಟ್ಟ ಭಿನ್ನತೆಗಳನ್ನು ಗಮನಿಸಬಹುದು. ವೃತ್ತಾಕಾರದ ನಾಣ್ಯದ ಅಳತೆ 1.0" ; ತೂಕ 58 ಗ್ರೇನ್.

ಮು : ಎಂಟು ದಳಗಳ ಪದ್ಮ : ಕೆಳಗಡೆ ಮಹಾದೇವ ಎನ್ನುವ ನಾಗರೀ ಬರಹ ; ಅದರ ಕೆಳಗೆ ಖಡ್ಗ ; ಎಡಭಾಗದಲ್ಲಿ ಶ್ರೀ ಎನ್ನುವ ಅಕ್ಷರ ; ಅದರ ಪಕ್ಕದಲ್ಲಿ ಆನೆ ; ಬಲಗಡೆ ಶಂಖ

ಹಿ : ಖಾಲಿ

ಅಂದರೆ ಇದರಲ್ಲಿ ವರಾಹದ ಬದಲು ಆನೆಯ ಚಿತ್ರವಿದೆ.

**ಆಮಣನ ನಾಣ್ಯ**

ಮಹಾದೇವನ ನಂತರ ಕ್ರಿ.ಶ. 1270ರಲ್ಲಿ, ಅವನ ಮಗ ಆಮಣನು ಸೇವುಣ ದೊರೆಯಾದನು. ಅಂದರೆ ಕೃಷ್ಣನ ಮಗನಾದ ರಾಮಚಂದ್ರನು ಸಿಂಹಾಸನಕ್ಕೆ ನಿಜವಾದ ಹಕ್ಕುದಾರನಾಗಿದ್ದುದರಿಂದ, ಇವರೀರ್ವರಿಗೂ ಯುದ್ಧ ನಡೆದು, ಆಮಣನು ಮಡಿದು, ರಾಮಚಂದ್ರನೇ ದೊರೆಯಾದನು. ಅಂದರೆ ಸುಮಾರು ಆರು ತಿಂಗಳ ಕಾಲ ಆಮಣನು ದೊರೆಯಾಗಿದ್ದನೆಂದು ತಿಳಿದು ಬರುತ್ತದೆ. ಈ ಸಮಯದಲ್ಲಿ ಇವನು ಚಿನ್ನದ ಗದ್ಯಾಣದ ನಾಣ್ಯವನ್ನು ಟಂಕಿಸಿದನು. ಆದರೆ ಇವನ ಶಾಸನಗಳು ಇನ್ನೂ ದೊರಕಿಲ್ಲ. ಈ ನಾಣ್ಯ ಪದ್ಮಟಂಕ ನಮೂನೆಗೆ ಸೇರಿದ ಚಿನ್ನದ ನಾಣ್ಯ; ಪಂಚ್ ತಾಂತ್ರಿಕತೆಯ ಈ ನಾಣ್ಯ ವೃತ್ತಾಕಾರದಲ್ಲಿದ್ದು ಇದರ ಅಳತೆ 0.6" ; ತೂಕ 59 ಗ್ರೇನ್. [31]

ಮು : ಮಧ್ಯದಲ್ಲಿ ಎಂಟು ದಳಗಳ ಪದ್ಮ; ಎರಡೂ ಕಡೆಗಳಲ್ಲಿ ಶ್ರೀ ಎಂಬ ನಾಗರೀ ಅಕ್ಷರ ; ಕೆಳಗಡೆ ಕೆಲವು ಚಿಹ್ನೆಗಳು ; ನಾಗರೀ ಬರಹದ ಕೆಳಗೆ ಖಡ್ಗ ; ಒಂದು ಸಾಲಿನ ನಾಗರೀ ಬರಹ

ಶ್ರೀ ಆಮಣ
ಹಿ : ಖಾಲಿ

ಈ ದೊರೆಯ ಶಾಸನಗಳು ದೊರಕಿಲ್ಲದೇ ಇದ್ದುದರಿಂದ, ಇತಿಹಾಸಕಾರರು ಈತನು ರಾಜ್ಯಭಾರ ಮಾಡಲಿಲ್ಲವೆಂದು ಅಭಿಪ್ರಾಯಪಟ್ಟಿದ್ದರು. ಆದರೆ ಮಹಾನುಭಾವ ಗ್ರಂಥಗಳಲ್ಲಿ ಆಮಣನು ಸ್ವಲ್ಪ ಕಾಲ ರಾಜ್ಯಭಾರ ಮಾಡಿದನೆಂದೂ



ಅನಂತರ ಅವನನ್ನು ರಾಮಚಂದ್ರನು ಪದಚ್ಯುತಿಗೊಳಿಸಿದನೆಂದೂ ಉಲ್ಲೇಖಿಸಲಾಗಿತ್ತು. ಈಗ ಈ ಮುಖ್ಯ ನಾಣ್ಯ ದೊರೆತಿರುವುದರಿಂದ, ಆಮಣನು ಕೆಲವು ತಿಂಗಳವರೆಗೆ ಮಾತ್ರ ರಾಜ್ಯವಾಳಿದನೆಂದು ಗೊತ್ತಾಗುತ್ತದೆ. ಆದುದರಿಂದ ಈ ನಾಣ್ಯ ಮುಖ್ಯವಾದ ಆಕರವಾಗಿದೆ.

## ರಾಮಚಂದ್ರನ ನಾಣ್ಯಗಳು

ಇವನೇ ಈ ವಂಶದ ಕೊನೆಯ ಖ್ಯಾತ ದೊರೆ. ಇವನ ನಂತರ ಬಂದ ರಾಜರು ತೀರ ಅಶಕ್ತರಾಗಿದ್ದರು. ಇವನ ಕಾಲದಲ್ಲೇ ಮುಸ್ಲಿಮರು ಇವನ ಮೇಲೆ ದಂಡೆತ್ತಿ ಹೋಗಿ ಇವನನ್ನು ಸೋಲಿಸಿದರು. ಈ ರಾಜನ ಚಿನ್ನ ಮತ್ತು ಬೆಳ್ಳಿಯ ನಾಣ್ಯಗಳು ದೊರಕಿವೆ. ವೃತ್ತಾಕಾರದಲ್ಲಿರುವ ಚಿನ್ನದ ನಾಣ್ಯದ ಅಳತೆ 0.6" ; ತೂಕ 58 ಗ್ರೇನ್.[32]

ಮು : ಮಧ್ಯದಲ್ಲಿ ಎಂಟು ದಳಗಳ ಪದ್ಮ ; ಎರಡು ಕಡೆಗಳಲ್ಲಿ ಶ್ರೀ ಎಂಬ ಅಕ್ಷರ ; ಕೆಳಗಡೆ ಶಂಖ ; ಮೇಲ್ಭಾಗದಲ್ಲಿ ನಾಗರೀ ಬರಹ ಶ್ರೀರಾಮ ಅಥವಾ ರಾಮ




ಈ ದೊರೆಯ ಇನ್ನೊಂದು ನಮೂನೆಯ ನಾಣ್ಯವನ್ನು ಗಮನಿಸಬಹುದು. ಇದು ಚಿನ್ನದಿಂದ ಮಾಡಿದ್ದು, ವೃತ್ತಾಕಾರದಲ್ಲಿದೆ. ಇದರ ಅಳತೆ 0.6"; ತೂಕ 59ಗ್ರೇನ್.

ಮು : ನಾಣ್ಯದ ಮಧ್ಯದಲ್ಲಿ ಗರುಡ ; ಎರಡು ಕಡೆಗಳಲ್ಲಿ ಶ್ರೀ ಎಂಬ
ಅಕ್ಷರ ; ಮೇಲ್ಭಾಗದಲ್ಲಿ ಒಂದು ಸಾಲಿನ ನಾಗರೀ
ಬರಹ ರಾಮಚ

ಸೇವುಣರ ಇತರ ಎಲ್ಲ ನಾಣ್ಯಗಳ ಮೇಲೂ ಅಷ್ಟದಳ ಪದ್ಮವಿರುವುದನ್ನು ನಾವು ಮೇಲೆ ಗಮನಿಸಿದ್ದೇವೆ. ಆದರೆ ಈ ನಾಣ್ಯದಲ್ಲಿ ಗರುಡನ ಚಿತ್ರವಿದೆ. ಗರುಡ ಸೇವುಣರ ರಾಜಲಾಂಛನ. ಆದುದರಿಂದ ಗರುಡನ ಚಿತ್ರವಿರುವುದು ಸಮಂಜಸವಾಗಿಯೇ ಇದೆ.

ಈ ದೊರೆಯ ಇನ್ನೊಂದು ನಮೂನೆಯ ನಾಣ್ಯ ದ್ವಿಮುಖ ಮುದ್ರೆಯ ತಾಂತ್ರಿಕತೆಗೆ ಸೇರಿದೆ.[33] ಇದು ವೃತ್ತಾಕಾರವಾಗಿದ್ದು, ಇದರ ಅಳತೆ 0.5" ; ತೂಕ 10 ಗ್ರೇನ್.

ಮು : ಬಲಕ್ಕಿರುವ ಸಿಂಹ
ಹಿ : ಎರಡು ಸಾಲುಗಳ ನಾಗರೀ ಬರಹ
ಶ್ರೀ ರಾ
ಮದೇವಃ



ಈ ರೀತಿಯ ಬೆಳ್ಳಿಯ ನಾಣ್ಯಗಳು ಹೇರಳವಾಗಿ ದೊರಕಿದ್ದು ಅವುಗಳಲ್ಲಿ ಸಣ್ಣ ಪುಟ್ಟ ಬದಲಾವಣೆಗಳನ್ನು ಗಮನಿಸಬಹುದು.

ಇವನ ಇನ್ನೊಂದು ನಮೂನೆಯ ಬೆಳ್ಳಿಯ ನಾಣ್ಯ ಗಮನಾರ್ಹವಾದುದು. ಇದು ದೀರ್ಘವೃತ್ತಾಕಾರದ ನಾಣ್ಯ. ಇದರ ಅಳತೆ 1.0" x 0.6" ; ತೂಕ 3 ಗ್ರೇನ್. [34]

ಮು : ಎಡಕ್ಕಿರುವ ಸಿಂಹ
ಹಿ : ಎರಡು ಸಾಲುಗಳ ನಾಗರೀ ಬರಹ
ಶ್ರೀ ರಾಮ
ಚಂದ್ರ



ಆಗಲೇ ಗಮನಿಸಿರುವಂತೆ ಸೇವುಣ ನಾಣ್ಯಗಳು ವಿವಿಧ ದೂರದ ಸ್ಥಳಗಳಲ್ಲಿ ದೊರಕಿವೆ. ಆಂಧ್ರದ ರಾಚಪಟ್ಟಣಂ ಎಂಬಲ್ಲಿ ದೊರಕಿರುವ ನಾಣ್ಯರಾಶಿಯು, ಮಹಾದೇವನು ಸೋತು, ಕಾಕತೀಯ ರುದ್ರಮದೇವಿಗೆ ಕೊಟ್ಟ ಕಪ್ಪ -ಕಾಣಿಕೆಯೆಂದು ಕೆಲವರು ಭಾವಿಸುತ್ತಾರೆ. ದೂರದ ಛತ್ತೀಸ್‌ಗಡದಲ್ಲಿ ಸೇವುಣ ನಾಣ್ಯಗಳು ದೊರಕಿರುವುದರಿಂದ, ಈ ರಾಜರು ಅಲ್ಲಿಯವರೆಗೂ ದಂಡೆತ್ತಿ ಹೋಗಿ, ಅಲ್ಲಿನ ರಾಜರುಗಳನ್ನು ಸೋಲಿಸಿರಬೇಕು ಎಂದೂ ಭಾವಿಸಲಾಗಿದೆ. ಆದರೆ ಇತ್ತೀಚಿನ ಸಂಶೋಧನೆಗಳಿಂದ, ಕಕ್ಕುಲ ಮತ್ತು ಜಜ್ಜಲ ಎಂಬ ರಾಜರನ್ನು ಇಲ್ಲೇ ಕರ್ನಾಟಕದ ಸಮೀಪದ ರಾಜರುಗಳೆಂದು ನಿರ್ಧರಿಸಲಾಗಿದೆ. ಆದುದರಿಂದ ಈ ಸೇವುಣ ನಾಣ್ಯಗಳು ಈ ದೂರದ ಸ್ಥಳಗಳಿಗೆ ಹೋಗಿರುವುದು, ಅವರ ರಾಜಕೀಯ ಚಟುವಟಿಕೆಗಳಿಂದ ಅಲ್ಲ ; ಅದು ವ್ಯಾಪಾರ ಸಂಬಂಧಗಳಿಂದಾಗಿರ ಬೇಕು ಎಂಬುದು ಈಗ ಒಪ್ಪಿಗೆಯಾದ ಸಂಗತಿಯಾಗಿದೆ. ನಾಣ್ಯಗಳು ಬಲು ಬೇಗ ಅನೇಕ ಕಾರಣಗಳಿಂದ ದೂರದೂರಕ್ಕೆ ಪ್ರಯಾಣಿಸುತ್ತವೆ ಎನ್ನುವ ಸಂಗತಿಯನ್ನು ಮರೆಯುವಂತಿಲ್ಲ.

ಸೇವುಣ ನಾಣ್ಯಗಳು ಅನೇಕ ರಾಜ್ಯಗಳಲ್ಲಿ ದೊರಕಿವೆ. ಆಂಧ್ರ ಪ್ರದೇಶದ ಮೇದಕ್, ಕರೀಂನಗರ, ಮಹಬೂಬ್‌ನಗರ ಮತ್ತು ಕೃಷ್ಣ ಜಿಲ್ಲೆಗಳಲ್ಲಿ ದೊರಕಿವೆ.[35] ಆಂಧ್ರ ಪ್ರದೇಶದಲ್ಲಿ ದೊರಕಿರುವ ಈ ನಾಣ್ಯಗಳಲ್ಲಿ ಕೃಷ್ಣ ಜಿಲ್ಲೆಯ ರಾಚಪಟ್ಟಣಂ ಎಂಬಲ್ಲಿ ದೊರಕಿರುವ ನಾಣ್ಯಗಳು ಅನೇಕ ರೀತಿಗಳಿಂದ ಪ್ರಮುಖವಾಗಿವೆ. ಬಹುಶಃ ಇದೇ ಸೇವುಣ ವಂಶದವರ ಮೊಟ್ಟಮೊದಲನೆಯ ನಾಣ್ಯದ ಪತ್ತೆಯೂ ಆಗಿದೆ (1922). ಇದನ್ನು ಪತ್ತೆ ಮಾಡಿದ ಕೀರ್ತಿ ಶ್ರೀನಿವಾಸ ರಾಘವ ಅಯ್ಯಂಗಾರ್‌ರವರಿಗೆ ಸೇರುತ್ತದೆ. ಇಲ್ಲಿ ದೊರಕಿದ 43 ಚಿನ್ನದ ಪದ್ಮಟಂಕಗಳನ್ನು

ಅವರು ಮೊದಲ ಬಾರಿಗೆ ನ್ಯೂಮಿಸ್‌ಮ್ಯಾಟಿಕ್ ಸಪ್ಲಿಮೆಂಟ್ ನಲ್ಲಿ ಪ್ರಕಟಿಸಿದರು.[36] ಆನಂತರ ಸೇವುಣ ನಾಣ್ಯಗಳು ಮಹಾರಾಷ್ಟ್ರ,[37] ಒರಿಸ್ಸ,[38] ಛತ್ತೀಸ್‌ಗಡ[39] ಮತ್ತು ಮಧ್ಯಪ್ರದೇಶಗಳಲ್ಲಿ [40] ದೊರಕಿದವು.

ಈ ರೀತಿ ಸೇವುಣ ನಾಣ್ಯಗಳು ವೈವಿಧ್ಯತೆಯನ್ನು ಪ್ರದರ್ಶಿಸುವುದಲ್ಲದೆ, ರಾಜಕೀಯ ಇತಿಹಾಸಕ್ಕೆ ಉತ್ತಮ ಆಕರವಾಗಿವೆ. ಈ ಎಲ್ಲ ನಾಣ್ಯಗಳ ವರ್ಣನಾತ್ಮಕ ಯಾದಿಯನ್ನು ತಯಾರಿಸುವ ಅಗತ್ಯವಿದೆ ಎಂಬುದನ್ನು ಒತ್ತಿ ಹೇಳಬೇಕು.

## ಟಿಪ್ಪಣಿಗಳು

1 A.V. Narasimhamurthy : The Sevunas of Devagiri, Mysore, 1971
2 ಈ ಮೇಲಿನ ಗ್ರಂಥದಲ್ಲಿ ನೀಡಿರುವ ಕಾಲಮಾನವನ್ನು ಇಲ್ಲಿ ಬಳಸಲಾಗಿದೆ.
3 SMHD, II ಪು. 62
4 ಅದೇ
5 A.V. Narasimhamurthy : Karnataka Numismatics, ಪು. 205-10
6 SMHD, IV, ಪು. 49
7 JBBRAS, XII, ಪು. 49
8 JNSU, 2, ಪು. 9
9 IA, 12, ಪು. 128, ಪ್ರಾಚೀನ ಮರಾಠೀ ಕೋರೀವ್ ಲೇಖ್ (ಪ್ರಮಕೋಲೆ), 34
10 EI, 13, ಪು. 279
11 ಪ್ರಮಕೋಲೆ, 34
12 ಸ್ಮೃತಿ ಸ್ಥಲ, 110
13 SMHD, II, ಪು. 63
14 ಲೀಲಾಚರಿತ, ಏಕಾಂಕ, 41, 58; ಪೂರ್ವಾರ್ಧ, 54, 66, 185, 187, 204 ಮತ್ತು ಉತ್ತರಾರ್ಧ 188
15 ಪ್ರಮಕೋಲೆ, 21, 22
16 ND, 4, i, ಪು. 31
17 ಜ್ಞಾನೇಶ್ವರಿ, ಅಧ್ಯಾಯ 14, ಪು. 449,
18 ಅದೇ
19 EI, 21, ಪು. 12
20 JNSI, 30, ii, hg. 46
21 ND, 4, i, 29-45; 14, ಪು. 37-42; JNSI, 45, ಪು. 59; ಅದೇ, ಪು. 38
22 JNSI, 45, ಪು. 35, 45, 59
23 ಅದೇ, ಪು. 45
24 ಅದೇ, 15, ಪು. 126

25 ಅದೇ, 8, ಪು. 147

26 ND, 4, i, 3, 4

27 SSIC, 13, p. 42

28 ND, 14 ಪು. 37

29 IIRNS, Newsletter, no 6, April1995

30 R. Subramanyam, A catalogue of Yadava coins in A.P. State Museum, p. 22

31 ND, 14, ಪು. 38

32 P.L. Gupta, Coins, P. 75

33 ND, 4, i, P. 40

34 ಅದೇ, 14, ಪು. 40

35 ಆರ್. ಸುಬ್ರಮಣ್ಯಂ (ಪೂರ್ವೋಕ್ತ)

36 Numismatic Supplement, 34, ಲೇಖನ 250

37 ಮಾಲ್ಬ್ವಂಗೆ (1943); ಕಲಂಬ್ (1950-51); ದೇವಲ್‌ಝುರಿ (1966).

38 JNSI, 14, ಪು. 92; 17, ಪು. 58

39 ಅದೇ, 13, ಪು. 148

40 ಅದೇ, 27, ಪು. 214

* * *

ಅನುಬಂಧ - ೩

# ಸೇವುಣರ ಸಾಮಂತ ರಾಜರು

## (1) ಮಾಸವಾಡಿಯ ಸೇವುಣರು

ಬಿಜಾಪುರ ಮತ್ತು ಧಾರ್ವಾಡ ಜಿಲ್ಲೆಗಳಲ್ಲಿ ದೊರಕಿರುವ ಅನೇಕ ಶಾಸನಗಳಿಂದ ಮಾಸವಾಡಿ ನೂರ ನಲವತ್ತು ಎಂಬ ಪ್ರಾಚೀನ ಪ್ರಾಂತ್ಯದಲ್ಲಿ ಸೇವುಣ ಮನೆತನದ ರಾಜರು ಆಳುತ್ತಿದ್ದರು ಎಂದು ವ್ಯಕ್ತವಾಗುತ್ತದೆ. ಮಾಸವಾಡಿ ನೂರ ನಲವತ್ತು ಎಂಬ ಪ್ರಾಂತ್ಯವು ಈಗಿನ ಧಾರ್ವಾಡ ಜಿಲ್ಲೆಯ ಡಂಬಳ ಎಂಬ ಪಟ್ಟಣದ ಅಕ್ಕಪಕ್ಕದ ಪ್ರದೇಶಗಳನ್ನು ಒಳಗೊಂಡಿದ್ದಿತು ಎಂದು ಹೇಳಬಹುದು. ಮಾಸವಾಡಿಯ ಸೇವುಣರಿಗೂ ದೇವಗಿರಿಯ ಸೇವುಣರಿಗೂ ಯಾವ ವಿಧವಾದ ಸಂಬಂಧವಿದ್ದಿತು ಎಂದು ಹೇಳಲು ಸಾಕಷ್ಟು ಮಾಹಿತಿ ದೊರಕಿಲ್ಲ. ದೇವಗಿರಿಯ ಸೇವುಣರು ಕರ್ನಾಟಕದಲ್ಲೇ ಅತಿ ಪ್ರಮುಖರಾಗಿ ನಾಲ್ಕು ನೂರು ವರ್ಷಗಳ ಕಾಲ ಆಳ್ವಿಕೆಯನ್ನು ನಡೆಸಿದರೂ, ಮಾಸವಾಡಿಯ ಸೇವುಣರು ಅವರೊಡನೆ ಸೇರದೆ ಸಣ್ಣ ಪ್ರಾಂತ್ಯವಾದ ಮಾಸವಾಡಿಯಲ್ಲೇ ನೆಲೆಸಿ ರಾಜ್ಯಭಾರವನ್ನು ಮಾಡಿದ್ದುದು ಆಶ್ಚರ್ಯಕರ ವಿಚಾರ. ಹೇಮಾದ್ರಿಯಿಂದ ರಚಿತವಾದ 'ಚತುವರ್ಗ ಚಿಂತಾಮಣಿಯ' ಆದಿಯಲ್ಲಿರುವ ರಾಜಪ್ರಶಸ್ತಿಯಲ್ಲಾಗಲೀ ಅಥವಾ ದೇವಗಿರಿಯ ಸೇವುಣರ ಶಾಸನಗಳಲ್ಲಾಗಲೀ, ಮಾಸವಾಡಿಯ ಸೇವುಣರ ಉಲ್ಲೇಖವಿಲ್ಲ. ಅದೇ ರೀತಿ ಮಾಸವಾಡಿಯ ಸೇವುಣರ ಶಾಸನಗಳಲ್ಲಿ ದೇವಗಿರಿಯ ಮನೆತನದ ವಿಚಾರವೂ ಬರುವುದಿಲ್ಲ.

ಮಾಸವಾಡಿ ಸೇವುಣರ ಶಾಸನಗಳಿಂದ ಅವರಿಗೆ ಇದ್ದ ಬಿರುದುಗಳು ಗೊತ್ತಾಗುತ್ತವೆ. ಯಾದವವಂಶೋದ್ಭವ, ಯಾವದನಾರಾಯಣ, ದ್ವಾರಾವತೀ ಪುರವರಾಧೀಶ್ವರ ಮತ್ತು ಯಾದವಕುಲ ಕುಮುದಿನೀ ನಿಶಾಕರ, ಎಂಬುವು ಸಾಮಾನ್ಯವಾಗಿ ಈ ಎಲ್ಲ ರಾಜರುಗಳಿಗೂ ಇದ್ದ ಬಿರುದುಗಳು. ಸೇವುಣಾನ್ವಯ ಪ್ರಸೂತ, ಸೇವುಣಭೀಮ ಎಂಬ ಬಿರುದುಗಳು ಕೆಲವು ರಾಜರುಗಳಿಗೆ ಮಾತ್ರವೇ ಇದ್ದವು. ಸಾಮಾನ್ಯವಾಗಿ ಎಲ್ಲ ರಾಜರುಗಳಿಗೂ ಮಾಸವಾಡಿ ನೂರನಲವತ್ತರ ಮನ್ನೆಯ ಎಂಬ ಬಿರುದೂ ಇದ್ದಿತು. ಆದರೆ ಇವರ ಬಿರುದುಗಳಾದ ರಣ ಮೂರ್ಖ ವಂಶೋದ್ಭವ, ರಣ ಮೂರ್ಖಧವಳ, ರಣಮೂರ್ಖಕೇಸರಿ, ರಣ

ಮೂರ್ಖ ಪಾರ್ಥ - ಇವುಗಳು ಏನನ್ನು ಸೂಚಿಸುತ್ತವೆ ಎಂದು ಖಚಿತವಾಗಿ ಹೇಳಲಾಗುವುದಿಲ್ಲ.

ನಮಗೆ ದೊರಕಿರುವ ಶಾಸನಗಳಿಂದ ಈ ಮನೆತನದ ಮೊದಲನೆಯ ರಾಜನು ಮಹಾಸಾಮಂತ ಕುಪ್ಪೇಯರಸನೆಂದು ತಿಳಿಯುತ್ತದೆ.[1] ಇವನು ರಾಷ್ಟ್ರಕೂಟ ಮೊದಲನೆಯ ಅಮೋಘವರ್ಷ ಮತ್ತು ಎರಡನೆಯ ಕೃಷ್ಣ - ಇವರ ಸಾಮಂತನಾಗಿದ್ದನು. ಕುಪ್ಪೇಯರಸನ ಶಾಸನಗಳು ಕ್ರಿ.ಶ.865 ರಿಂದ 901 ರವರೆವಿಗೂ ಇರುವುದರಿಂದ, ಇವನು ಕೊನೆಯಪಕ್ಷ ಕ್ರಿ.ಶ.901 ರವರೆಗೂ ಇದ್ದನೆಂದು ಹೇಳಬೇಕು. ಕುಪ್ಪೇಯರಸನ ಅನಂತರ ಯಾರು ಸಾಮಂತರಾದರು ಎಂದು ಹೇಳಲು ಯಾವ ಶಾಸನವೂ ದೊರಕಿಲ್ಲ. ಅಷ್ಟೇ ಅಲ್ಲದೆ ಕೊನೆಯ ಪಕ್ಷ ಒಂದು ಶತಮಾನದವರೆವಿಗೂ ಈ ರಾಜಮನೆತನದವರ ಚರಿತ್ರೆಯ ವಿಚಾರವಾಗಿ ನಮಗೆ ಏನೇನೂ ತಿಳಿದಿಲ್ಲ. ಮುಂದಿನ ದೊರೆಯಾದ ಐತವರ್ಮನ ಶಾಸನವು ಕ್ರಿ.ಶ. 1024ರಲ್ಲಿರುವುದರಿಂದ,[2] ಕ್ರಿ.ಶ. 902 ರಿಂದ 1024ರವರೆಗೆ ಎಷ್ಟು ರಾಜರು ಆಳಿದರು ಎಂದೂ ಹೇಳಲಾಗುವುದಿಲ್ಲ. ಐತವರ್ಮನ ಅನಂತರ ನಾಗವರ್ಮನು ಮಾಸವಾಡಿಯ ಮನ್ನೇಯನಾದನು.[3] ಇವನು ಚಾಳುಕ್ಯ ಎರಡನೆಯ ಜಯಸಿಂಹನ ಕಾಲದಲ್ಲಿ ಸಾಮಂತನಾಗಿದ್ದನು. ನಾಗವರ್ಮನ ಕಾಲವು ಕ್ರಿ.ಶ.1032. ನಾಗವರ್ಮನ ಅನಂತರ ಗೋಮರಸನು ಕ್ರಿ.ಶ. 1041ರಲ್ಲಿ ರಾಜ್ಯಕ್ಕೆ ಬಂದನು.[4] ಇದಾದಮೂರು ವರ್ಷಗಳಲ್ಲಿ ಅಂದರೆ ಕ್ರಿ.ಶ.1044 ರಲ್ಲಿ ಎರಡನೆಯ ಕುಪ್ಪನು ಮಾಸವಾಡಿಯ ಮನ್ನೇಯನಾದನು. ಇವನು ಚಾಳುಕ್ಯ ಮೊದಲನೆಯ ಸೋಮೇ ಶ್ವರನ ಆಶ್ರಯದಲ್ಲಿ ಮಹಾಸಾಮಂತನಾಗಿದ್ದನು.[5] ಕ್ರಿ.ಶ. 1050ರಲ್ಲಿ ಅಜ್ಜರಸನು ಮಾಸವಾಡಿಯ ಆಡಳಿತವನ್ನು ವಹಿಸಿಕೊಂಡನು.[6] ಇವನು ಚಾಲುಕ್ಯ ಎರಡನೆಯ ಜಯಸಿಂಹನ ಸಹೋದರಿಯಾದ ಅಕ್ಕಾದೇವಿಯ ಆಶ್ರಯದಲ್ಲಿದ್ದನು. ಅಜ್ಜರಸನು ಚಾಳುಕ್ಯ ಮಂಡಲೀಕತಿಲಕನೆಂದೂ, ಅಕ್ಕಾದೇವಿಯ ಪಾದಪದ್ಮೋಪ ಜೀವಿಯೆಂದೂ ಶಾಸನದಲ್ಲಿ ಹೇಳಿದೆ. ಇವಳು ಚೋಳ, ಆಂಧ್ರ, ಮಗಧ, ಕೊಂಕಣ, ಮಾಳ್ವ ಮತ್ತು ಲಾಟ ದೇಶಗಳ ರಾಜರುಗಳನ್ನು ಸೋಲಿಸಿದನೆಂಬ ಶಾಸನದ ಉಲ್ಲೇಖವು ಕೇವಲ ಉತ್ಪ್ರೇಕ್ಷೆಯೆಂದು ಸುಲಭವಾಗಿ ತೀರ್ಮಾನಿಸ ಬಹುದು.

ಅಜ್ಜರಸನ ಅನಂತರ ಅವನ ಮಗನಾದ ಮಾಚಿಭೂಪ ಅಥವಾ ಮಾಧವನು ಮಾಸವಾಡಿಯ ಮನ್ನೇಯನಾದನು. [7] ಇವನು ಚಾಳುಕ್ಯ ಮೊದಲನೆಯ ಸೋಮೇಶ್ವರನ ಅಧೀನನಾಗಿದ್ದನು. ತನ್ನ ಒಡೆಯನ ಪರವಾಗಿ ಮಾಚಿಭೂಪನು ಉಚ್ಚಂಗಿಯ ರಾಜನ ಮೇಲೆ ಯುದ್ಧಮಾಡಿ, ಆ ಯುದ್ಧದಲ್ಲಿ ಮಡಿದನೆಂದು ತಿಳಿದುಬರುತ್ತದೆ. ಇವನ ಮರಣಾನಂತರ ಕ್ರಿ.ಶ. 1082ರಲ್ಲಿ ಸೋಮದೇವನು ರಾಜನಾದನು. [8] ಸೋಮದೇವನು ಚಾಳುಕ್ಯ ಆರನೆಯ ವಿಕ್ರಮಾದಿತ್ಯನ ಆಧಿಪತ್ಯದಲ್ಲಿ ಸ್ವಯಂಭೂ ಕಲಿದೇವನ ದೇವಾಲಯಕ್ಕೆ ಅನೇಕ ದತ್ತಿಗಳನ್ನು ಕೊಟ್ಟ

ವಿವರಗಳು ಅವನ ಶಾಸನದಿಂದ ತಿಳಿಯುತ್ತವೆ. ಸೋಮದೇವನ ಅನಂತರ ಕ್ರಿ.ಶ. 1091ರಲ್ಲಿ ಮಹೇಂದ್ರನು ಮನ್ನೇಯನಾದನು. [9] ಇವನ ಅನಂತರ ರಾಜನಾದ ಎರಡನೆಯ ಗೋಮರಸನಿಗೆ ಸಂಬಂಧಿಸಿದ ಶಾಸನಗಳು ಯಾವುವೂ ಸಿಕ್ಕಿಲ್ಲ. ಆದರೆ ಅವನ ಮಗನಾದ ಹೆಮ್ಮಾಡಿ ಅಥವಾ ಪೆರ್ಮಾಡಿಯ ಕಾಲಕ್ಕೆ ಸೇರಿದ ಅನೇಕ ಶಾಸನಗಳು ಬೆಳಕಿಗೆ ಬಂದಿವೆ. ಹೇಮ್ಮಾಡಿಯೇ ಮಾಸವಾಡಿಯ ಸೇವುಣ ರಲ್ಲಿ ಅತ್ಯಂತ ಪ್ರಸಿದ್ಧನಾದ ಮಹಾಸಾಮಂತ. ಇವನ ಶಾಸನಗಳು ಕ್ರಿ.ಶ. 1113 ರಿಂದ 1147 ರವರೆವಿಗೂ ಪ್ರಸರಿಸಿವೆ.[10] ಇವನ ಅನೇಕ ಬಿರುದುಗಳಲ್ಲಿ ಮುಖ್ಯ ವಾದವು ಸೇವುಣಭೀಮ ಮತ್ತು ಸೇವುಣಾನ್ವಯ ಪ್ರಸೂತ. ಇವನು ಆರನೆಯ ವಿಕ್ರಮಾದಿತ್ಯನ ಆಳ್ವಿಕೆಯಲ್ಲಿಯೂ ಅನಂತರ ಎರಡನೆಯ ಜಗದೇಕಮಲ್ಲನ ಆಳ್ವಿಕೆಯಲ್ಲಿಯೂ ಮಹಾಸಾಮಂತನಾಗಿ ರಾಜ್ಯಭಾರ ಮಾಡಿದನು. ಹೆಮ್ಮಾಡಿಯ ಅಧೀನದಲ್ಲಿ ಸರ್ವಾಧಿಕಾರಿ ಅಚಿಯಣ್ಣ, ತೊಂಡರಸ, ಬೊಮ್ಮರಸ, ದಂಡ ನಾಯಕರಾದ ಬೊಮ್ಮ ಮತ್ತು ಸೋಮದೇವ ಮುಂತಾದ ಅಧಿಕಾರಿಗಳಿದ್ದರು. ಹೆಮ್ಮಾಡಿಯ ಪತ್ನಿಯ ಹೆಸರು ಅಚಲದೇವಿ. ಹೆಮ್ಮಾಡಿಯ ಮಂತ್ರಿಯಾಗಿದ್ದ ಚಿಕ್ಕ ಬೊಮ್ಮಯ್ಯನು ಸೇವುಣರಾಜ್ಯವನ್ನು ಶತ್ರುಗಳಿಂದ ಕಾಪಾಡಿದನೆಂದು ಶಾಸನಗಳಿಂದ ತಿಳಿದುಬರುತ್ತದೆ. ಬಹುಶಃ ಈ ಶತ್ರುಗಳು ಹಗರ್ತಗೆ ಮುನ್ನೂರು ಎಂಬ ಪ್ರಾಂತದಲ್ಲಿ ಆಳುತ್ತಿದ್ದ ಸಾಮಂತರಿರಬೇಕು. ಮಾಸವಾಡಿಯ ಜೊತೆಗೆ ಹಗರ್ತಗೆ ಮುನ್ನೂರು ಪ್ರಾಂತ್ಯವೂ ಹೆಮ್ಮಾಡಿಯ ಆಧಿಪತ್ಯಕ್ಕೆ ಸೇರಿದ್ದಿತು. ಅವರನ್ನು ಸೋಲಿಸಿ ಅವರ ಪ್ರಾಂತ್ಯವನ್ನು ತನ್ನ ಆಧಿಪತ್ಯಕ್ಕೆ ಚಿಕ್ಕಬೊಮ್ಮಯ್ಯನ ಸಹಾಯದಿಂದ ಹೆಮ್ಮಾಡಿಯು ಸೇರಿಸಿಕೊಂಡಿರಬೇಕು.

ಹೆಮ್ಮಾಡಿಗೆ ಹರಿಹರ ಮತ್ತು ಕುಪ್ಪ ಎಂಬ ಇಬ್ಬರು ಮಕ್ಕಳಿದ್ದರು.[11] ಕ್ರಿ.ಶ. 1147ರಲ್ಲಿ ಹೆಮ್ಮಾಡಿಯ ಮಗನಾದ ಕುಪ್ಪನ ಶಾಸನ ಇರುವುದರಿಂದಲೂ, ಅದೇ ವರ್ಷದಲ್ಲಿ ಹೆಮ್ಮಾಡಿಯ ಶಾಸನ ಇರುವುದರಿಂದಲೂ ಕ್ರಿ.ಶ.1147ರಲ್ಲಿ ಹೆಮ್ಮಾಡಿಯು ಮರಣಹೊಂದಿರಬೇಕು. ಅವನ ಅನಂತರ ಮೂರನೆಯ ಕುಪ್ಪನು ಪಟ್ಟಕ್ಕೆ ಬಂದಿದ್ದುದರಿಂದ, ಹರಿಹರನ ವಿಚಾರವಾಗಿ ಏನೂ ತಿಳಿದಿಲ್ಲ. ಕುಪ್ಪನಿಗೆ ರೆಮ್ಮಾದೇವಿ ಎಂಬ ಪತ್ನಿಯೂ, ಬಲ್ಲಾಳ, ಹರಿಹರ ಮತ್ತು ಮಲ್ಲಿದೇವ ಎಂಬ ಮಕ್ಕಳೂ ಇದ್ದರು. [12] ಆದರೆ ಮೂರನೆಯ ಕುಪ್ಪನ ಅನಂತರ ಅವನ ಮಕ್ಕಳು ಪಟ್ಟಕ್ಕೆ ಬರದೆ ಗೋಮದೇವರಸನು ಪಟ್ಟಕ್ಕೆ ಬಂದನು. ಇವನು ಯಾರು ಮತ್ತು ಇವನಿಗೂ ಮೂರನೆಯ ಕುಪ್ಪನಿಗೂ ಇದ್ದ ಸಂಬಂಧವೇನು ಎಂದು ತಿಳಿಯಲು ಯಾವ ಮಾಹಿತಿಯೂ ಸಿಕ್ಕಿಲ್ಲ. ಇವನ ಶಾಸನದಲ್ಲಿ ಇವನಿಗೂ ಮಾಸವಾಡಿಯ ಸೇವುಣರ ಬಿರುದುಗಳೇ ಇರುವುದರಿಂದ ಗೋಮದೇವರಸನು ಸೇವುಣ ವಂಶದವ ನೆಂದು ಗೊತ್ತಾಗುತ್ತದೆ. ಆದರೆ ಇವನಿಗಿದ್ದ ಸಿಂದಸೇವುಣಾನ್ವಯ ಪ್ರಸೂತ ಎಂಬ ಬಿರುದು ಮಾತ್ರ ಗಮನಾರ್ಹವಾದುದು. ಬಹುಶಃ ಗೋಮರಸನ ಹಿಂದಿನ

ಸಾಮಂತರಲ್ಲೊಬ್ಬರು ಕರ್ಣಾಟಕದ ಸಿಂದವಂಶದವರೊಡನೆ ವಿವಾಹ ಸಂಬಂಧ ವನ್ನು ಮಾಡಿರಬೇಕು. ಈ ವಿಚಾರವಾಗಿ ಸಿಂದವಂಶದ ಶಾಸನಗಳಲ್ಲಿಯೂ ಉಲ್ಲೇಖವಿಲ್ಲ. ಕುರುವತ್ತಿಯ ಶಾಸನದಲ್ಲಿ ಗೋಮದೇವರಸನು ಆಹವಮಲ್ಲ ದೇವರಿಗೆ ದತ್ತಿಗಳನ್ನು ಬಿಟ್ಟ ವಿಷಯವು ಪ್ರಸ್ತಾಪಿತವಾಗಿದೆ. [13] ಈ ದತ್ತಿಗಳನ್ನು ಗೋಮ ದೇವರಸನು ಲೋಕಾಭರಣ ಮುನಿಯ ವಶಕ್ಕೆ ಕೊಟ್ಟನು. ಹೊಯ್ಸಳ ಇಮ್ಮಡಿ ಬಲ್ಲಾಳನ ಕಾಲದಲ್ಲಿಯೂ ಲೋಕಾಭರಣ ಮುನಿಯ ಉಲ್ಲೇಖವಿದೆ. ಆದು ದರಿಂದ ಗೋಮರಸನು ಹೊಯ್ಸಳ ಇಮ್ಮಡಿ ಬಲ್ಲಾಳನ ಸಾಮಂತನಾಗಿದ್ದಿರ ಬಹುದೆಂದು ಹೇಳಲು ಅವಕಾಶವಿದೆ. ಆದರೆ ಮಾಸವಾಡಿಯ ಸೇವುಣರು ಯಾವಾಗ ಮತ್ತು ಹೇಗೆ ಚಾಲುಕ್ಯರ ಆಧಿಪತ್ಯವನ್ನು ತಪ್ಪಿಸಿಕೊಂಡು ಹೊಯ್ಸಳರ ಸಾಮಂತರಾದರು ಎಂದು ಹೇಳಲು ಆಧಾರಗಳು ದೊರಕಿಲ್ಲ. ಚಾಲುಕ್ಯರ ಪ್ರಾಬಲ್ಯ ಕಡಿಮೆಯಾಗಿ ಹೊಯ್ಸಳರು ಪ್ರಬಲರಾದ ಕೂಡಲೆ, ಕರ್ಣಾಟಕದ ಅನೇಕ ಸಾಮಂತರಾಜರು ತಮ್ಮ ಹಿತದೃಷ್ಟಿಯಿಂದ ಹೊಯ್ಸಳರ ಸಾಮಂತರಾದ ವಿಚಾರ ತಿಳಿದೇ ಇದೆ. ಅದೇ ರೀತಿ ಮಾಸವಾಡಿಯ ಸೇವುಣರೂ ಹೊಯ್ಸಳರ ಸಾಮಂತ ರಾಗಿರಬೇಕು.

ಮೂರನೆಯ ಗೋಮರಸನ ಅನಂತರ ಮೂರನೆಯ ಕುಪ್ಪನ ಮಗನಾದ ಬಲ್ಲಾಳನು ಪಟ್ಟಕ್ಕೆ ಬಂದನು. [14] ಇವನ ರಾಣಿಯ ಹೆಸರು ಲಕ್ಮಾದೇವಿ. ಇವನಿಗೆ ಸೋಮೇಶ್ವರ ಮತ್ತು ವಿರೂಪಾಕ್ಷ ಎಂಬ ಮಕ್ಕಳಿದ್ದರು. ಈ ಬಲ್ಲಾಳನ ಕಾಲದ ಮುಖ್ಯ ಸಂಗತಿಯೆಂದರೆ ಇವನು ಹೊಯ್ಸಳರ ಆಧಿಪತ್ಯದಿಂದ ಬಿಡುಗಡೆಹೊಂದಿ, ದೇವಗಿರಿಯ ಸೇವುಣರ ಅಧೀನದಲ್ಲಿದ್ದನು. ಜೊತೆಗೆ ಇವನ ಹಿಂದಿನವರಂತೆ ಬಲ್ಲಾಳನು ಮಹಾಸಾಮಂತನಾಗಲೀ ಅಥವಾ ಮಾಂಡಲಿಕನಾಗಲೀ ಆಗಿರಲಿಲ್ಲ. ಇವನು ದೇವಗಿರಿಯ ಸಿಂಘಣನ ಆಶ್ರಯದಲ್ಲಿ ಮಹಾಮಂಡಳೇಶ್ವರನಾಗಿದ್ದನು.[15] ಇವನು ಹೇಗೆ ಸಿಂಘಣನ ಆಶ್ರಯವನ್ನು ಪಡೆದನು ಎಂದು ಹೇಳಲು ಸಾಕಷ್ಟು ವಿವರಗಳು ದೊರಕಿಲ್ಲ. ಹೊಯ್ಸಳ ಬಲ್ಲಾಳನಿಗೂ ಸಿಂಘಣನಿಗೂ ಅನೇಕ ಯುದ್ಧ ಗಳು ನಡೆದು ತಾತ್ಕಾಲಿಕವಾಗಿ ಸಿಂಘಣನದೇ ಮೆಲುಗೈಯಾದಾಗ ಮಾಸವಾಡಿಯ ಬಲ್ಲಾಳನು ಸಿಂಘಣ' ಅಧೀನನಾಗಿ ಅವನಿಗೆ ಸಹಾಯಮಾಡಿರಬೇಕು. ಇದರಿಂದ ಸಂತೋಷಗೊಂಡ ಸಿಂಘಣನು ಬಲ್ಲಾಳನಿಗೆ ಮಹಾಮಂಡಳೇಶ್ವರ ಪದವಿಯನ್ನು ಕೊಟ್ಟು, ಗೌರವಿಸಿರಬೇಕು. ನಮಗೆ ತಿಳಿದಿರುವಂತೆ ಬಲ್ಲಾಳನೇ ಮಾಸವಾಡಿ ಸೇವುಣರ ಕೊನೆಯ ದೊರೆ. ಅವನ ಮಕ್ಕಳಾದ ಸೋಮೇಶ್ವರ ಮತ್ತು ವಿರೂಪಾಕ್ಷ ಇವರ ವಿಚಾರ ಏನೂ ತಿಳಿದಿಲ್ಲ. ಕ್ರಿ.ಶ.1220 ರಿಂದ ಸಿಂಘಣನಿಂದ ನಿಯಮಿತ ರಾದ ಅಧಿಕಾರಿಗಳೇ ಮಾಸವಾಡಿಯ ಪ್ರಾಂತ್ಯವನ್ನೂ ಆಳುತ್ತಾ ಇದ್ದುದರಿಂದ, ಈ ಸಮಯಕ್ಕೆ ಮಾಸವಾಡಿಯ ಸೇವುಣರ ಆಳ್ವಿಕೆಯು ಕೊನೆಗೊಂಡಿತೆಂದು ಹೇಳಬಹುದು.

ಈವರೆವಿಗೂ ಉಪಲಬ್ಧವಾಗಿರುವ ಶಾಸನಗಳಿಂದ ಮಾಸವಾಡಿ ಸೇವುಣರ ವಂಶವೃಕ್ಷವನ್ನು ಈ ಕೆಳಗಿನಂತೆ ರಚಿಸಬಹುದು.

ಕುಪ್ಪೇಯರಸ [ಕ್ರಿ.ಶ. 865-901]
|
ಐತವರ್ಮ [ಕ್ರಿ.ಶ. 1024]
|
ನಾಗವರ್ಮ [ಕ್ರಿ.ಶ. 1032]
|
ಗೋಮರಸ [ಕ್ರಿ.ಶ. 1041]
|
ಕುಪ್ಪರಸ II [ಕ್ರಿ.ಶ. 1044]
|
ಅಜ್ಜರಸ [ಕ್ರಿ.ಶ. 1050]
|
ಮಾಚಿಭೂಪ [ಕ್ರಿ.ಶ. 1054]
|
ಸೋಮದೇವ [ಕ್ರಿ.ಶ. 1082]
|
ಮಹೇಂದ್ರ [ಕ್ರಿ.ಶ. 1091]
|
ಗೋಮರಸ II
|
ಹೆಮ್ಮಾಡಿ [ಕ್ರಿ.ಶ. 1013-1047]

- ಹರಿಹರ
- ಕುಪ್ಪ III [ಕ್ರಿ.ಶ.1147]
  - ಗೋಮರಸ III
    - ಹರಿಹರ
    - ಮಲ್ಲಿದೇವ
    - ಬಲ್ಲಾಳ [ಕ್ರಿ.ಶ.1218]
      - ಸೋಮೇಶ್ವರ
      - ವಿರೂಪಾಕ್ಷ

**(2) ಹೈಹೇಯರು**

ಹೈಹೇಯ ರಾಜಮನೆತನವು ಪ್ರಾಚೀನ ಭಾರತದ ಚರಿತ್ರೆಗೆ ಹೊಸದೇನೂ ಅಲ್ಲ. ಉತ್ತರಭಾರತದಲ್ಲಿ ಮತ್ತು ಆಂಧ್ರದಲ್ಲಿ ಆಳಿದ ಈ ಮನೆತನದ ಚರಿತ್ರೆ ನಮಗೆ ತಿಳಿದೇ ಇದೆ. ಈ ಹೈಹೇಯ ವಂಶದ ರಾಜರು ಕರ್ನಾಟಕದಲ್ಲಿಯೂ ಮಹಾಮಂಡಳೇಶ್ವರರಾಗಿ ಬಾಳಿದರು ಎಂಬ ವಿಚಾರವು ಇತ್ತೀಚೆಗೆ ದೊರಕಿರುವ ಶಾಸನಗಳಿಂದ ತಿಳಿದುಬಂದಿದೆ. ವಿಶೇಷವಾಗಿ ಈ ಶಾಸನಗಳು ರಾಯಚೂರು ಮತ್ತು ಗುಲ್ಬರ್ಗ ಜಿಲ್ಲೆಗಳಲ್ಲಿ ದೊರಕಿವೆ.

ಸಾಮಾನ್ಯವಾಗಿ ಇವರ ಶಾಸನಗಳಲ್ಲಿ ಹೈಹೇಯರನ್ನು ಮಾಹಿಷ್ಮತೀ ಪುರವರಾಧೀಶ್ವರ ಎಂದು ಕರೆದಿರುತ್ತಾರೆ. ಅಂದರೆ ಇವರು ಉತ್ತರದ ಮಾಹಿಷ್ಮತೀ ನಗರದಿಂದ ಇಲ್ಲಿಗೆ ಬಂದು ನೆಲೆಸಿರಬೇಕು. ಈಗ ನಮಗೆ ಲಬ್ಧವಾಗಿರುವ ಶಾಸನ ಗಳಿಂದ ಮೊರಟ ಮುನ್ನೂರು ಎಂಬ ಪ್ರದೇಶದಲ್ಲಿ ಆಳುತ್ತಿದ್ದ ಒಂದು ವಂಶವೂ ಮತ್ತು ಅರಳು ಮುನ್ನೂರು ಎಂಬಲ್ಲಿ ಆಳುತ್ತಿದ್ದ ಮತ್ತೊಂದು ವಂಶವೂ ಬೆಳಕಿಗೆ ಬಂದಿವೆ. ಮೊರಟ ಮುನ್ನೂರು ಎಂಬ ಪ್ರಾಚೀನ ಪ್ರದೇಶವು ಈಗಿನ ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನ ಸುತ್ತಮುತ್ತಲ ಪ್ರದೇಶವನ್ನು ಒಳಗೊಂಡಿದ್ದಿತು. ಅರಳು ಮುನ್ನೂರು ಎಂಬ ಪ್ರಾಚೀನ ಪ್ರಾಂತ್ಯವು ಈಗಿನ ಗುಲ್ಬರ್ಗ ಜಿಲ್ಲೆಯ ಸೆಡಂ ತಾಲ್ಲೂಕಿನ ಅರಳೂರು ಎಂಬ ಗ್ರಾಮದ ಸುತ್ತಮುತ್ತ ಲಿನ ಪ್ರದೇಶಗಳನ್ನು ಒಳಗೊಂಡಿದ್ದಿತು. ಮೊದಲು ಮೊರಟ ಮುನ್ನೂರರಲ್ಲಿ ಆಳುತ್ತಿದ್ದ ಹೈಹೇಯರ ವಿಚಾರವನ್ನು ಗಮನಿಸೋಣ.

ಮೊದಲನೆಯ ಚಾಲುಕ್ಯ ಸೋಮೇಶ್ವರನ ಕಾಲದ ಶಾಸನವೊಂದರಲ್ಲಿ ಮೊರಟದಲ್ಲಿ ಆಳುತ್ತಿದ್ದ ಹೈಹೇಯ ವಂಶದ ಮಹಾಮಂಡಳೇಶ್ವರ ದೇವರಸನ ಉಲ್ಲೇಖವಿದೆ. [1] ಇವನು ಕೊಂಕಣದ ಮುಮ್ಮುನಿಯನ್ನೂ ಮತ್ತು ಧಾರಾನಗರದ ರಾಜನನ್ನು ಪರಾಭವಗೊಳಿಸಿದನೆಂದು ಹೇಳಿರುವ ಶಾಸನದ ಮಾತಿನ ಸತ್ಯಾಸತ್ಯತೆ ಯನ್ನು ತಿಳಿಯಲು ಬೇರೆ ಯಾವ ಆಧಾರವೂ ಇಲ್ಲ. ಮೊರಟ ಮುನ್ನೂರರ ಜೊತೆಗೆ ಎಡೆದೊರೆ ಇನ್ನೂರು ಎಂಬ ಪ್ರಾಂತ್ಯಕ್ಕೂ ಇವನು ಅಧಿಪತಿಯಾಗಿದ್ದನು. ಅನಂತರ ಎರಡನೆಯ ಜಗದೇಕಮಲ್ಲನ ಕಾಲದವರೆಗೂ ನಮಗೆ ಈ ಹೈಹೇಯರ ಶಾಸನಗಳು ದೊರಕಿಲ್ಲ. ಈ ಚಾಲುಕ್ಯ ರಾಜನ ಮೂರು ಶಾಸನಗಳಲ್ಲಿ ಹೈಹೇಯ ಮಹಾಮಂಡಳೇಶ್ವರ ಘಟ್ಟಿದೇವರಸನ ಉಲ್ಲೇಖವಿದೆ.[2] ಇವುಗಳಲ್ಲಿ ಮೊದಲನೆ ಯದು ಕ್ರಿ.ಶ.1139ರ ಮಲ್ಹಾತ್ ಎಂಬಲ್ಲಿ ದೊರಕಿರುವ ಶಾಸನ. ಇದರಲ್ಲಿ ಮಲ್ಲಿಕಾರ್ಜುನ ದೇವರಿಗೆ ಕೊಟ್ಟ ದತ್ತಿಗಳ ವಿಚಾರವು ಪ್ರಸ್ತಾಪಿತವಾಗಿದೆ. ಮಿಕ್ಕ ಎರಡು ಶಾಸನಗಳು ಮಲ್ಹಾತ್ ಗ್ರಾಮದಲ್ಲೇ ದೊರಕಿದ್ದು ಕ್ರಿ.ಶ. 1149ಕ್ಕೆ ಸೇರಿವೆ. ಇವುಗಳಲ್ಲಿ ಘಟ್ಟಿದೇವರಸನ ಮಂತ್ರಿಯಾದ ಮಹಾಕರಣ ಸೋಮರಸನ ವಿಷಯ ಬರುತ್ತದೆ. ಘಟ್ಟಿದೇವರಸನ ಅನಂತರ ಅವನ ಮಗನಾದ ಹಲ್ಲರಸನು ಪಟ್ಟಕ್ಕೆ

ಬಂದನು[3] ಇವನ ರಾಣಿಯು ಹೆಸರು ರೇಕಲದೇವಿ. ಹಲ್ಲರಸನ ಅನಂತರ ಕ್ರಿ.ಶ. 1178ರಲ್ಲಿ ಅವನ ಮಗನಾದ ಮೊದಲನೆಯ ಮಲ್ಲಿದೇವರಸನು ಮಹಾಮಂಡಳೇಶ್ವರನಾದನು.[4] ಈ ಕಾಲದಲ್ಲಿ ಚಾಳುಕ್ಯರ ಪ್ರಾಬಲ್ಯವು ಕಡಿಮೆಯಾಗಿ ಕಲ್ಯಾಣದ ಕಳಚೂರ್ಯರು ಪ್ರಬಲರಾದುದನ್ನು ಕಂಡು ಮಲ್ಲಿದೇವರಸನು ಚಾಳುಕ್ಯರನ್ನು ಕಡೆಗಣಿಸಿ ಕಳಚೂರ್ಯರ ಸಾಮಂತನಾದನು. ಕ್ರಿ.ಶ. 1178ರ ಶಾಸನವೊಂದರಲ್ಲಿ ಇವನು ಕಳಚೂರಿ ಸಂಕಮದೇವನ ಸಾಮಂತನಾಗಿರುವುದು ಕಂಡು ಬರುತ್ತದೆ. ಆದರೆ ಕೆಲವು ವರ್ಷಗಳ ಅನಂತರ ಕಳಚೂರ್ಯರ ಪ್ರಭಾವವು ಕಡಿಮೆಯಾದಾಗ ಮಲ್ಲಿದೇವನು ಮತ್ತೆ ಚಾಳುಕ್ಯರ ಆಶ್ರಯವನ್ನು ಪಡೆದನು. ಹೀಗೆ ಸಮಯಕ್ಕೆ ಸರಿಯಾಗಿ ಬದಲಾಗುವುದು ಸಾಮಾನ್ಯವಾಗಿ ಸಾಮಂತರ ಮುಖ್ಯ ಗುಣವೇ ಆಗಿದ್ದಿತು. ಕ್ರಿ.ಶ. 1190ರಲ್ಲಿ ಮಲ್ಲಿದೇವರಸನು ನಾಲ್ಕನೆಯ ಚಾಳುಕ್ಯ ಸೋಮೇಶ್ವರನ ಸಾಮಂತನಾಗಿದ್ದನೆಂದು ಬಳಗನೂರು ಶಾಸನದಿಂದ ತಿಳಿಯಬರುತ್ತದೆ.[5]

ಇದೇ ಸಮಯದಲ್ಲಿ ಚಾಳುಕ್ಯ, ಹೊಯ್ಸಳ ಮತ್ತು ಸೇವುಣ ವಂಶಗಳ ರಾಜರು ಕರ್ನಾಟಕವನ್ನು ತಮ್ಮ ವಶಮಾಡಿಕೊಳ್ಳಲು ಸತತ ಪ್ರಯತ್ನ ಮಾಡುತ್ತಿದ್ದರು. ತಮ್ಮ ತಮ್ಮಲ್ಲೇ ಕಲಹಗಳನ್ನು ಮಾಡುತ್ತಿದ್ದರು. ಇದೇ ತಕ್ಕ ಸಮಯವೆಂದು ತಿಳಿದು ಮಲ್ಲಿದೇವರಸನು ತನ್ನ ರಾಣಿಯೊಡನೆ ಅಯ್ಯಣ ಸಿರಿವೂರಲ್ಲಿ ಬೀಡುಬಿಟ್ಟಿದ್ದಾಗ, ಇವನು ಯಾವ ರಾಜರ ಪಾದಪದ್ಮೋಪ ಜೀವಿಯೂ ಆಗಿರಲಿಲ್ಲ. [6] ಇವನು ಮಾಡೆಗನೂರಿನ ರಾಜನಾದ ಬಿಜ್ಜನನ್ನೂ ಮತ್ತೊಬ್ಬನಾದ ಹಡಿಗನನ್ನೂ ಸೋಲಿಸಿದನೆಂದು ಈ ಶಾಸನದಲ್ಲಿ ಹೇಳಿದೆ. ಮಲ್ಲಿದೇವರಸನ ಸೈನಿಕರು ಭಿಲ್ಲಮನ ಕಡೆಯವರನ್ನೂ ಸೋಲಿಸಿದರೆಂದು ಈ ಶಾಸನದಲ್ಲಿ ಹೇಳಿದೆ. ಬಹುಶಃ ಸೇವುಣ ಭಿಲ್ಲಮನು ತನ್ನ ರಾಜ್ಯವನ್ನು ವಿಸ್ತರಿಸುತ್ತಿದ್ದಾಗ ಇವನ ಸೇನಾಪತಿಗೂ ಮಲ್ಲಿದೇವರಸನ ಕಡೆಯವರಿಗೂ ಕದನವು ನಡೆದಿರಬೇಕು. ಮಲ್ಲಿದೇವರಸನಿಗೆ ಅಲ್ಲಾಹುಲಿದೇವ, ಹಲ್ಲಗದೇವ, ಬೈರುಗಿದೇವ ಎಂಬ ಮಕ್ಕಳಿದ್ದರು. ಕ್ರಿ.ಶ. 1217ರಲ್ಲಿ ಅಲ್ಲಾಹುಲಿ ದೇವನ ಮಗನಾದ ಎರಡನೆಯ ಮಲ್ಲಿದೇವನು ಮೊರಟದಲ್ಲಿ ಆಳುತ್ತಿದ್ದನು. ಈ ಕಾಲದಲ್ಲಿ ಸೇವುಣ ಸಿಂಘಣನು ಕರ್ನಾಟಕದಲ್ಲಿಯೇ ಅತಿ ಪ್ರಬಲನಾಗಿದ್ದನು. ಮೊದಲನೆಯ ಮಲ್ಲಿದೇವನು ಸ್ವತಂತ್ರನಾಗಿ ಆಳಲು ಪ್ರಾರಂಭಿಸಿದುದನ್ನು ಗಮನಿಸಿದ ಸಿಂಘಣನು ತನ್ನ ಸೇನಾಧಿಪತಿಗಳನ್ನು ಈ ಪ್ರದೇಶಕ್ಕೆ ಕಳುಹಿಸಿದನು. ಕೂಡಲೆ ಅವರು ಹೈಹೇಯ ರಾಜನನ್ನು ಸೋಲಿಸಿದರು. ಸಿಂಘಣನ ದಕ್ಷಿಣ ಕ್ಷೋಣೀಪಾಲನಾದ ಬೀಚಣನ ಆಧಿಪತ್ಯದಲ್ಲಿ ಎರಡನೆಯ ಮಲ್ಲಿದೇವನು ಮಹಾಮಂಡಳೇಶ್ವರನಾಗಿ ಆಳುತ್ತಿದ್ದನು.[7] ಬಹುಶಃ ಇವನೇ ಮೊರಟ ಮುನ್ನೂರು ಪ್ರಾಂತ್ಯದ ಕೊನೆಯ ಸಾಮಂತ ರಾಜನಿರಬೇಕು. ಇವನ ಅನಂತರ ಈ ಪ್ರಾಂತವು ಸೇವುಣರ ಆಳ್ವಿಕೆಗೆ ಸೇರಿ ಹೋಯಿತು.

## ವಂಶವೃಕ್ಷ

ದೇವರಸ [ಕ್ರಿ.ಶ. 1052]

|

ಘಟ್ಟಿದೇವರಸ [ಕ್ರಿ.ಶ. 1139-1048]

|

ಹಲ್ಲರಸ

|

ಮಲ್ಲಿದೇವ I [ಕ್ರಿ.ಶ. 1178-1198]

|

ಅಲ್ಲಾಹುಲಿ ದೇವ ಹಲ್ಲಗದೇವ ಬೈರುಗಿದೇವ

|

ಮಲ್ಲಿದೇವ II [ಕ್ರಿ.ಶ.1217]

### (3) ಅರಳು ಮುನ್ನೂರು ಪ್ರಾಂತ್ಯದ ಹೈಹೇಯರು

ಈ ಮನೆತನದ ಅತ್ಯಂತ ಪ್ರಾಚೀನ ಉಲ್ಲೇಖವನ್ನು ಕ್ರಿ.ಶ. 1038ರ ಚಾಳುಕ್ಯ ರಾಜ ಎರಡನೆಯ ಜಗದೇಕಮಲ್ಲನ ಶಾಸನದಲ್ಲಿ ನೋಡಬಹುದು.[1] ಈ ಶಾಸನದ ಮಾಹಿತಿಯ ಪ್ರಕಾರ ರೇಚರಸನೇ ಮೊದಲನೆಯ ಸಾಮಂತರಾಜ. ಇವನ ಅನಂತರ ಮಹಾಮಂಡಳೇಶ್ವರ ಬಜ್ಜರಸನು ಸಾಮಂತರಾಜನಾದನೆಂದು ಕ್ರಿ.ಶ. 1051ರ ಶಾಸನದಿಂದ ತಿಳಿಯುತ್ತದೆ.[2] ಅನಂತರ ರಾಜನಾದ ಮಹಾಮಂಡಳೇಶ್ವರ ಬಾಚರಸನು ಚಾಳುಕ್ಯರ ಪಾದಪದ್ಮೋಪಜೀವಿ ಎಂದು ಹೇಳಿಕೊಳ್ಳದೆ ಒಂದು ಶಾಸನವನ್ನು ಕೆತ್ತಿಸಿದ್ದಾನೆ.[3] ಈ ಶಾಸನವು ಚಿತಾಪುರ ತಾಲ್ಲೂಕಿನ ಇಂಗಲ್ಗಿಯಲ್ಲಿ ದೊರಕಿದೆ. ಇದರಿಂದ ಮಹಾಮಂಡಳೇಶ್ವರ ಬಾಚರಸನು ಸ್ವತಂತ್ರನಾಗಲು ಹವಣಿಸುತ್ತಿದ್ದನೆಂದು ಹೇಳಬಹುದು. ಕ್ರಿ.ಶ. 1071ರ ಶಾಸನದಲ್ಲಿ ಇವನು ತನ್ನ ರಾಣಿಯಾದ ಕಾಲಬ್ಬರಸಿಯೊಡನೆ ಇಂಗಲ್ಗಿಯಲ್ಲಿರುವ ಲೋಕೇಶ್ವರ ದೇವಾಲಯ ವನ್ನು ಸಂದರ್ಶಿಸಿ, ಈ ದೇವಾಲಯಕ್ಕೆ ಕೊಟ್ಟ ದತ್ತಿಗಳ ವಿವರಗಳು ಉಲ್ಲೇಖಿತ ವಾಗಿವೆ.

ಮುಂದಿನ ರಾಜನಾದ ಮಹಾಮಂಡಳೇಶ್ವರ ಆನೆಮರಸನು ಚಾಳುಕ್ಯ ಆರನೆಯ ವಿಕ್ರಮಾದಿತ್ಯನ ಸಾಮಂತನಾಗಿದ್ದನು. ಹಲಕಟ್ಟಿಯ ಕ್ರಿ.ಶ. 1096ರ ಶಾಸನವು ಇವನು ಬ್ರಹ್ಮೇಶ್ವರ ದೇವಾಲಯಕ್ಕೆ ಕೊಟ್ಟ ದತ್ತಿಗಳ ವಿಚಾರ ಮತ್ತು

ಕ್ರಿ.ಶ. 1104ರ ಕಮ್ಮರವಾಡಿಯ ಶಾಸನವು ಸೋಮರಾಶಿ ಎಂಬ ಪಾಶುಪತನಿಗೆ ಕೊಟ್ಟ ದತ್ತಿಗಳ ವಿಚಾರವನ್ನು ತಿಳಿಸುತ್ತದೆ.[4] ಇವನ ಅನಂತರ ಎರಡನೆಯ ಬಿಜ್ಜರಸನು ರಾಜನಾದನು. ಇವನ ಶಾಸನಗಳಾವುವೂ ದೊರಕಿಲ್ಲ. ಇವನ ಅನಂತರ ಇವನ ಮಗನಾದ ಲೋಕಾದಿತ್ಯನು ಸಾಮಂತನಾದನು. ಇವನು ಎರಡನೆಯ ಜಗದೇಕಮಲ್ಲನ ಕಾಲದಲ್ಲಿ ಮಹಾಪ್ರಧಾನ ಬಮ್ಮಣಯ್ಯನ ಆಶ್ರಯದಲ್ಲಿ ಮಹಾಮಂಡಳೇಶ್ವರನಾಗಿದ್ದನೆಂದು ಕ್ರಿ.ಶ. 1147ರ ಇಂಗಲ್ಗಿಯ ಶಾಸನದಿಂದ ತಿಳಿದು ಬರುತ್ತದೆ. [5] ಇವನ ಸಹೋದರನಾದ ಎರಡನೆಯ ಆನೆಮರಸನು ಅನಂತರ ಸಾಮಂತನಾದನು. ಕ್ರಿ.ಶ 1158ರ ಹಲಕಟ್ಟಿಯ ಶಾಸನದಿಂದ ಇವನು ಬಿಜ್ಜೇಶ್ವರ ದೇವಾಲಯಕ್ಕೆ ದತ್ತಿಗಳನ್ನು ಕೊಟ್ಟನೆಂದು ತಿಳಿಯುತ್ತದೆ. ಅಂದರೆ ಈ ದೇವಾಲಯವು ಇವನ ತಂದೆಯ ಜ್ಞಾಪಕಾರ್ಥವಾಗಿ ನಿರ್ಮಿತವಾಗಿರಬೇಕು. ಆನೆಮರಸನಿಗೆ ಮೂರನೆಯ ಬಿಜ್ಜರಸ ಮತ್ತು ಏಚರಸ ಎಂಬ ಮಕ್ಕಳಿದ್ದರು. ಮೂರನೆಯ ಬಿಜ್ಜರಸನು ತನ್ನ ತಂದೆಯ ಆಶ್ರಯದಲ್ಲಿದ್ದ ಈ ಹೈಹೇಯರು, ಈಗ ಸೇವುಣರ ಆಧೀನರಾದರು.

ಸಿಂಘಣನ ಸೇನಾಧಿಪತಿಯಾದ ಲಕ್ಷ್ಮೀದೇವನು ಕರ್ನಾಟಕದ ಸಣ್ಣ ಪುಟ್ಟ ರಾಜರುಗಳನ್ನೆಲ್ಲಾ ಸೋಲಿಸಿ, ಸೇವುಣರ ಆಧಿಪತ್ಯಕ್ಕೆ ಸೇರಿಸಿದ್ದನು. ಈ ಒಂದು ಯುದ್ಧದಲ್ಲಿ ಹೈಹೇಯ ಮೂರನೆಯ ಬಿಜ್ಜರಸನು ಲಕ್ಷ್ಮೀದೇವನ ಅಧೀನನಾಗಿರಬೇಕು. ಕ್ರಿ.ಶ. 1208ರ ಇಂಗಲ್ಗಿಯ ಶಾಸನದಲ್ಲಿ ಇವನು ಸಿಂಘಣನ ಪಾದಪದ್ಮೋಪಜೀವಿ ಎಂದು ಹೇಳಿಕೊಂಡಿದ್ದಾನೆ. [8] ಈ ಶಾಸನದಲ್ಲಿ ಇವನು ಮತ್ತು ಇವನ ರಾಣಿಯಾದ ಸಿರಿಯಾದೇವಿಯು ಇಂಗಲ್ಗಿ ಅಗ್ರಹಾರಕ್ಕೆ ಬಿಟ್ಟು ಕೊಟ್ಟ ದತ್ತಿಗಳ ವಿಚಾರವು ಉಲ್ಲೇಖಿತವಾಗಿದೆ. ಇವನ ಅನಂತರ ಇವನ ಸಹೋದರನಾದ ಏಚರಸನು ಪಟ್ಟಕ್ಕೆಬಂದನೇ ಎಂಬುದು ನಿರ್ದಿಷ್ಟವಾಗಿ ತಿಳಿದಿಲ್ಲ. ಆದರೆ ಕ್ರಿ.ಶ. 1212ರಲ್ಲಿ ಏಚರಸನ ಮಗನಾದ ಕಾಚರಸನು ಸಾಮಂತನಾಗಿದ್ದುದು ತಿಳಿದು ಬರುತ್ತದೆ. [9] ಇವನೂ ಸಿಂಘಣನ ಆಶ್ರಯದಲ್ಲಿ ಮಹಾಮಂಡಳೇಶ್ವರನಾಗಿದ್ದನು. ಇವನು ತನ್ನ ತಂದೆಯ ಜ್ಞಾಪಾಕಾರ್ಥವಾಗಿ ಏಚೇಶ್ವರ ದೇವಾಲಯವನ್ನು ಕಟ್ಟಿಸಿದನು. ಇವನ ಅನಂತರ ನಾಲ್ಕನೆಯ ಬಿಜ್ಜರಸನು ಕ್ರಿ.ಶ. 1221ರಲ್ಲಿ ಈ ಪ್ರಾಂತ್ಯದ ಸಾಮಂತ ರಾಜನಾಗಿ ಸಿಂಘಣನ ಆಶ್ರಯದಲ್ಲಿದ್ದನು.[10] ಇವನ ಅನಂತರ ಈ ಪ್ರಾಂತ್ಯವು ಸಿಂಘಣನ ಆಳ್ವಿಕೆಗೆ ಸೇರಿಹೋಗಿ ಸೇವುಣ ಅಧಿಕಾರಿಗಳಿಂದ ಆಳಲ್ಪಡುತ್ತಿದ್ದಿತೆಂದು ತೋರುತ್ತದೆ. ಈಗ ದೊರಕಿರುವ ಶಾಸನಗಳಿಂದ ನಾಲ್ಕನೆಯ ಬಿಜ್ಜರಸನೇ ಅರಳು ಮುನ್ನೂರು ಪ್ರಾಂತ್ಯದ ಹೈಹೇಯ ವಂಶದ ಕೊನೆಯ ಸಾಮಂತನೆಂದು ಹೇಳಬಹುದು.

## ವಂಶವೃಕ್ಷ

ರೇಚರಸ [ಕ್ರಿ.ಶ. 1038]
|
ಬಿಜ್ಜರಸ I [ಕ್ರಿ.ಶ. 1051]
|
ಬಾಚರಸ [ಕ್ರಿ.ಶ. 1071]
|
ಆನೆಮರಸ [ಕ್ರಿ.ಶ. 1096-1104]
|
ಬಿಜ್ಜರಸ II
|
ಲೋಕಾದಿತ್ಯ — ಆನೆಮರಸ II [ಕ್ರಿ.ಶ. 1158]

ಆನೆಮರಸ II
|
ಬಿಚ್ಚರಸ III — ಏಚರಸ

ಏಚರಸ
|
ಕಾಚರಸ [ಕ್ರಿ.ಶ. 1212]
|
ಬಿಜ್ಜರಸ IV [ಕ್ರಿ.ಶ. 1221]

### (4) ಗುತ್ತವೊಳಲಿನ ಗುತ್ತರು

ಈಚೆಗೆ ದೊರಕಿರುವ ಅನೇಕ ಶಾಸನಗಳು ಗುತ್ತರ ವಿಚಾರದಲ್ಲಿ ಹೊಸ ಬೆಳಕನ್ನು ಬೀರುತ್ತವೆ. ಅವುಗಳನ್ನು ಇಲ್ಲಿ ಚರ್ಚಿಸಲಾಗಿದೆ. ಗುತ್ತವೊಳಲು ಪ್ರಾಂತ್ಯವು ಈಗಿನ ರಾಣಿಬೆನ್ನೂರು, ಕರಜಗಿ ಮುಂತಾದ ಪ್ರದೇಶಗಳನ್ನೊಳಗೊಂಡಿದ್ದಿತು. ಗುತ್ತವೊಳಲು ನಗರವು ಈಗಿನ ಕರಜಗಿಯ ಪೂರ್ವದಲ್ಲಿ ಆರು ಮೈಲಿ ದೂರದಲ್ಲಿರುವ ಸಣ್ಣ ಗ್ರಾಮವಾಗಿದೆ. ಹಿಂದೆ ಅದು ಗುತ್ತರ ರಾಜಧಾನಿಯಾಗಿದ್ದಿತು. ಇವರಿಗೆ ಚಂದ್ರಗುಪ್ತ ವಂಶೋದ್ಭವ, ವಿಕ್ರಮಾದಿತ್ಯ ವಂಶೋದ್ಭವ, ಗುಪ್ತವಂಶ ತ್ರಿನೇತ್ರ, ಉಜ್ಜಯಿನೀ ಪುರವರಾಧೀಶ್ವರ, ಪಾಟಲೀಪುರವರಾಧೀಶ್ವರ ಮುಂತಾದ ಬಿರುದುಗಳಿದ್ದವು. ಗುತ್ತ ಎನ್ನುವ ಪದವು ಗುಪ್ತ ಎನ್ನು

ಸಂಸ್ಕೃತ ಪದದಿಂದ ಬಂದಿರಬೇಕೆಂದು ಅನೇಕ ಚರಿತ್ರಕಾರರ ಮತ. ಇವರು ಚಂದ್ರಗುಪ್ತನ ವಂಶದವರೆಂದು ಹೇಳಿಕೊಂಡಿರುವುದರಿಂದ, ಈ ಚಂದ್ರಗುಪ್ತನು ಗುಪ್ತವಂಶದ ಎರಡನೆಯ ಚಂದ್ರಗುಪ್ತನಿರಬೇಕೆಂದು ಅನೇಕರು ಭಾವಿಸುತ್ತಾರೆ. ಏಕೆಂದರೆ ಈ ಚಂದ್ರಗುಪ್ತನಿಗೆ ವಿಕ್ರಮಾದಿತ್ಯನೆಂದೂ ಬಿರುದು ಇದ್ದಿತು. ಅಷ್ಟೇ ಅಲ್ಲದೆ ಅವನು ಉಜ್ಜಯಿನಿಯ ವಿಕ್ರಮಾದಿತ್ಯನೆಂದೂ ಪ್ರಸಿದ್ಧನಾಗಿದ್ದನು. ಇವು ಗಳಿಂದ ಗುತ್ತರು ಉಜ್ಜಯಿನಿಯಲ್ಲಿ ಎರಡನೆಯ ಚಂದ್ರಗುಪ್ತ ವಿಕ್ರಮಾದಿತ್ಯನ ಕಾಲದಿಂದಲೂ ಇದ್ದವರೆಂದು ಕ್ರಿ.ಶ. ಹನ್ನೆರಡನೆಯ ಶತಮಾನದ ಹೊತ್ತಿಗೆ ಕರ್ನಾಟಕಕ್ಕೆ ವಲಸೆ ಬಂದರೆಂದೂ ದೇಸಾಯಿಯವರು ಉಲ್ಲೇಖಿಸಿದ್ದಾರೆ. ವಿಕ್ರಮ ಶಕೆಯನ್ನು ಕ್ರಿ.ಶ. 58ರಲ್ಲಿ ಸ್ಥಾಪಿಸಿದ ವಿಕ್ರಮಾದಿತ್ಯನೇ ಗುತ್ತರ ಮೂಲಪುರುಷ ನೆಂದೂ ಅವನು ಗುಪ್ತರಾಜನಲ್ಲವೆಂದೂ ಫ್ಲೀಟ್‌ರವರು ಭಾವಿಸುತ್ತಾರೆ. ಆದರೆ ಪಾಟಲೀಪುರ ವರಾಧೀಶ್ವರ ಎಂಬ ಬಿರುದಿನ ಆಧಾರದ ಮೇಲೆ ಗುತ್ತರು ಪಾಟಲೀ ಪುತ್ರದಲ್ಲಿ ಆಳಿದ ಮೌರ್ಯಚಕ್ರವರ್ತಿ ಚಂದ್ರಗುಪ್ತನ ವಂಶದವರಿದ್ದರೂ ಇರಬಹುದು ಎಂಬ ಶಂಕೆಯನ್ನು ಅವರೇ ವ್ಯಕ್ತಪಡಿಸಿದ್ದಾರೆ.

ಈ ಎರಡು ಅಭಿಪ್ರಾಯಗಳನ್ನೂ ಒಪ್ಪಿಕೊಳ್ಳಲು ಕೆಲವು ಬಾಧಕಗಳಿರುವುದು ನಮ್ಮ ಗಮನಕ್ಕೆ ಬರುತ್ತದೆ. ಗುತ್ತರು ಕರ್ನಾಟಕದಲ್ಲಿ ಬೆಳಕಿಗೆ ಬರುವುದು ಸುಮಾರು ಕ್ರಿ.ಶ. ಹನ್ನೊಂದನೆಯ ಶತಮಾನದಲ್ಲಿ. ಅದಕ್ಕೆ ಮುಂಚೆ ಅವರು ಉತ್ತರ ಭಾರತದ ಉಜ್ಜಯಿನಿಯಲ್ಲಾಗಲೀ ಅಥವಾ ಪಾಟಲೀಪುತ್ರದಲ್ಲಾಗಲೀ ಇದ್ದಿರಬೇಕು. ಮೌರ್ಯರ ಅಥವಾ ಗುಪ್ತರ ಕಾಲದಿಂದ ಕ್ರಿ.ಶ. ಹನ್ನೊಂದನೆಯ ಶತಮಾನದವರೆಗೆ ಉಜ್ಜಯಿನಿಯಲ್ಲಾಗಲೀ ಅಥವಾ ಅವರಿಗೆ ಸಂಬಂಧಿಸಿದ ಇನ್ನಾವ ಮಾಹಿತಿಗಳಾಗಲೀ ದೊರಕಿಲ್ಲದಿರುವುದು ಗಮನಾರ್ಹ. ಗುಪ್ತವಂಶಜ ರಾದ ಗುತ್ತರು ಈ ಆರುನೂರು ವರ್ಷಗಳ ಕಾಲ ಹೆಸರಿಲ್ಲದೇ ಹೋಗಿ ಇದ್ದಕ್ಕಿ ದ್ದಂತೆ ಕರ್ನಾಟಕದಲ್ಲಿ ಕ್ರಿ.ಶ. ಹನ್ನೊಂದನೆಯ ಶತಮಾನದಲ್ಲಿ ಉದ್ಭವಿಸಿದ ರೆಂದರೆ ಅದು ಸೋಜಿಗದ ಸಂಗತಿಯೇ ಸರಿ. ಆದುದರಿಂದ ಗುತ್ತರು ಗುಪ್ತವಂಶ ದವರೆಂದೂ ಮತ್ತು ಉಜ್ಜಯಿನಿ ಅಥವಾ ಪಾಟಲೀಪುತ್ರದಿಂದ ಬಂದವರೆಂಬ ವಾದವನ್ನು ಒಪ್ಪುವುದು ಕಷ್ಟವಾಗುತ್ತದೆ.

ಕರ್ನಾಟಕದ ಅನೇಕ ರಾಜಮನೆತನಗಳು ತಮ್ಮ ಸ್ವಂತ ಶಕ್ತಿಯಿಂದ ರಾಜ್ಯಕಟ್ಟಿ ಪ್ರಸಿದ್ಧವಾದವು. ಅಂತಹ ರಾಜರು ತಾವು ಯದುವಂಶದವರೆಂದೋ, ದ್ವಾರಾವತೀಪಟ್ಟಣದವರೆಂದೋ ಹೇಳಿಕೊಂಡು ತಮ್ಮ ಘನತೆಯನ್ನು ಹೆಚ್ಚಿಸಿ ಕೊಳ್ಳಲು ಯತ್ನಿಸಿದ್ದಾರೆ. ಹೊಯ್ಸಳರು ದ್ವಾರಾವತೀಪಟ್ಟಣದವರೆಂದು ಹೇಳಿ ಕೊಂಡಿದ್ದರೂ, ಅವರು ಉತ್ತರ ಭಾರತವದರೇನೂ ಅಲ್ಲ. ಅವರು ಕರ್ನಾಟಕ ದವರೇ. ಅದೇ ರೀತಿ ಗುತ್ತರು ಗೂಡ ತಮ್ಮ ಘನತೆಯನ್ನು ಹೆಚ್ಚಿಸಿಕೊಳ್ಳುವ ದೃಷ್ಟಿಯಿಂದ ಭಾರತದ ಚರಿತ್ರೆಯಲ್ಲಿ ಅತ್ಯಂತ ಪ್ರಸಿದ್ಧರಾಗಿದ್ದ ಗುಪ್ತರ ಹೆಸರನ್ನು

ತಮ್ಮ ಉಗಮಕ್ಕೆ ಬಳಸಿಕೊಂಡಿರಬೇಕು. ಉಜ್ಜಯಿನೀ ನಗರವು ಪ್ರಾಚೀನ ಭಾರತದಲ್ಲಿ ಭವ್ಯಪರಂಪರೆಯನ್ನು ಹೊಂದಿದ್ದಿತು. ಆದುದರಿಂದ ಗುತ್ತರು ದ್ವಾರಾವತೀ ನಗರದ ಬದಲು ಉಜ್ಜಯಿನಿ ಮತ್ತು ಪಾಟಲೀಪುತ್ರ ನಗರಗಳ ಮರೆಹೊಕ್ಕಿರಬೇಕು. ಗುತ್ತರ ರಾಜಧಾನಿಯಾದ ಗುತ್ತವೊಳಲು ಧಾರ್ವಾಡ ಜಿಲ್ಲೆಯ ಸಮೀಪದಲ್ಲಿಯೇ ಇದೆ. ಈ ಪ್ರದೇಶದಲ್ಲಿ ಅನೇಕ ಸಣ್ಣ ಪುಟ್ಟ ರಾಜಮನೆತನಗಳು ಜನ್ಮತಾಳಿದವು. ಆದುದರಿಂದ ಗುತ್ತರೂ ಇದೇ ಪ್ರದೇಶಕ್ಕೆಸೇರಿದವರಾಗಿ, ಸುಮಾರು ಕ್ರಿ.ಶ. ಹನ್ನೊಂದನೆಯ ಶತಮಾನದಲ್ಲಿ ಕರ್ಣಾಟಕದಲ್ಲಿಯೇ ಜನ್ಮತಾಳಿದರೆಂದು ಹೇಳಬೇಕಾಗುತ್ತದೆ.

ಮಹಾಗುತ್ತ ಅಥವಾ ಮಾಗುತ್ತನೇ ಗುತ್ತರ ಮೊದಲನೆಯ ದೊರೆ. ಬಹುಶಃ ಇವನು ಕ್ರಿ.ಶ. ಹನ್ನೊಂದನೆಯ ಶತಮಾನದಲ್ಲಿ ಚಾಳುಕ್ಯರ ಸಾಮಂತನಾಗಿ ಆಳುತ್ತಿದ್ದಿರಬೇಕು. ಇವನ ಅನಂತರ ಇವನ ಮಗನಾದ, ಮೊದಲನೆಯ ಗುತ್ತನು ರಾಜನಾದನು. ಇವನು ತನ್ನ ರಾಜ್ಯದ ಪಶ್ಚಿಮದಲ್ಲಿ ಆಳುತ್ತಿದ್ದ ಹಾನುಗಲ್ಲಿನ ಕದಂಬರ ಮೇಲೆ ಯುದ್ಧ ಮಾಡಿ ಅವರನ್ನು ಸೋಲಿಸಿದನು. ಇವನ ಮರಣಾನಂತರ, ಇವನ ಮಗನಾದ ಮಲ್ಲಿದೇವನು ರಾಜನಾದನು. ಇವನ ಉತ್ತರಾಧಿಕಾರಿಗಳ ಶಾಸನದಲ್ಲಿ ಇವನನ್ನು ಬಹುವಾಗಿ ಹೊಗಳಿರುವುದನ್ನು ನೋಡಿದರೆ ಇವನು ಪ್ರಮುಖನಾಗಿದ್ದಂತೆ ತೋರುತ್ತದೆ. ಇವನು ಬನವಾಸಿಯ ರಾಜ್ಯಪಾಲ ಗೋವಿಂದರಸನ ಆಶ್ರಯದಲ್ಲಿ (ಕ್ರಿ.ಶ.1100-1117) ಸಾಮಂತನಾಗಿದ್ದನು. ಇವನ ಸಮಕಾಲೀನನಾದ ಹೊಯ್ಸಳ ವಿಷ್ಣುವರ್ಧನನು ಕದಂಬ ಮಲ್ಲಿಕಾರ್ಜುನನನ್ನು ಸೋಲಿಸಿದನು. ಕೇವಲ ಕೆಲವೇ ಮೈಲಿಗಳ ಸಮೀಪದಲ್ಲಿದ್ದ ಮಲ್ಲಿದೇವನ ಮೇಲೂ ವಿಷ್ಣುವರ್ಧನನು ಯುದ್ಧ ಮಾಡಿದನೇ ಎಂಬ ವಿಚಾರ ತಿಳಿದಿಲ್ಲ. ವಿಷ್ಣುವರ್ಧನನ ಶಾಸನಗಳಲ್ಲಿ ಎಲ್ಲಿಯೂ ಅವನು ಗುತ್ತರನ್ನು ಜಯಿಸಿದಂತೆ ಕಾಣಬರುವುದಿಲ್ಲ. ಕ್ರಿ.ಶ. 1140ರಲ್ಲಿ ಮಲ್ಲಿದೇವನು ಮರಣ ಹೊಂದಲು, ಅವನ ಮಗನಾದ ಮೊದಲನೆಯ ವಿಕ್ರಮಾದಿತ್ಯನು ಗುತ್ತರಾಜನಾದನು.

ವಿಕ್ರಮಾದಿತ್ಯನು ರಾಜನಾಗಿದ್ದಾಗ ಕರ್ಣಾಟಕದಲ್ಲಿ ಗಮನಾರ್ಹವಾದ ರಾಜಕೀಯ ಬದಲಾವಣೆಗಳುಂಟಾಗಿದ್ದವು. ಚಾಳುಕ್ಯರ ಪ್ರಾಬಲ್ಯವು ಕಡಿಮೆಯಾಗಿ ಕಳಚೂರ್ಯರು ತಲೆ ಎತ್ತುತ್ತಿದ್ದರು. ಈ ಮಧ್ಯದಲ್ಲಿ ವಿಷ್ಣುವರ್ಧನನ ಅನಂತರ, ಹೊಯ್ಸಳರ ಪ್ರಾಬಲ್ಯವೂ ಕಡಿಮೆಯಾಗಿದ್ದಿತು. ಇದರಿಂದ ಉತ್ತೇಜಿತನಾದ ಗುತ್ತ ವಿಕ್ರಮಾದಿತ್ಯನು ಹೊಯ್ಸಳರಿಗೆ ಸೇರಿದ್ದ ಕೆಲವು ಪ್ರಾಂತ್ಯಗಳನ್ನು ತನ್ನ ಆಳ್ವಿಕೆಗೆ ಸೇರಿಸಿಕೊಂಡನು. ಬಹುಶಃ ಇವನು ಕಳಚೂರ್ಯರ ಸಾಮಂತನಾಗಿದ್ದಿರಬೇಕು. ಕ್ರಿ.ಶ. 1170ರಲ್ಲಿ ಇವನ ಮಗನಾದ ಮೊದಲನೆಯ ಜೋಯಿದೇವನು ರಾಜನಾದನು. ಈ ಜೋಯಿದೇವನು ಕಳಚೂರ್ಯರ ಆಶ್ರಯದಲ್ಲಿ ಮಹಾಮಂಡಳೇಶ್ವರ ಪದವಿಯನ್ನು ಸಂಪಾದಿಸಿದ್ದನೆಂದು ಹೇಳಲು ಎರಡು ಶಾಸನಗಳು ದೊರಕಿವೆ.

ಇವು ಕ್ರಿ.ಶ. 1179ಮತ್ತು 1181ರಲ್ಲಿ ಜೋಯಿದೇವನಿಂದ ಕಳಚೂರ್ಯ ಸಂಕಮ ಮತ್ತು ಆಹವಮಲ್ಲ ರಾಜರ ಹೆಸರಿನಲ್ಲಿ ಬರೆಸಲ್ಪಟ್ಟಿವೆ.[1] ಇವನು ತನ್ನ ರಾಜ್ಯಕ್ಕೆ ನಗರಖಂಡನಾಡಿನ ಕೆಲವು ಭಾಗಗಳನ್ನು ಸೇರಿಸಿಕೊಂಡನು. ಇಷ್ಟರಲ್ಲಿಯೇ ಕಳಚೂರ್ಯರ ಪ್ರಾಬಲ್ಯವು ಕಡಿಮೆಯಾದುದನ್ನು ಗಮನಿಸಿದ ಜೋಯಿದೇವನು ಕಳಚೂರ್ಯರನ್ನು ಕಡೆಗಣಿಸಿ ಮತ್ತೆ ಚಾಳುಕ್ಯ ಸಾಮಂತನಾದನು. ಕ್ರಿ.ಶ.1184 ರಲ್ಲಿ ಹೊನ್ನಟ್ಟಿಯಲ್ಲಿ ಬರೆಸಲಾದ ಶಾಸನವು ಚಾಳುಕ್ಯರಾಜನ ಹೆಸರಿ ನಲ್ಲಿದೆ.[2] ಕ್ರಿ.ಶ.1185ರಲ್ಲಿ ಜೋಯಿದೇವನು ಮರಣ ಹೊಂದಲು ಇವನ ಸಹೋದರನ ಮಗನಾದ ಎರಡನೆಯ ವಿಕ್ರಮಾದಿತ್ಯನು ರಾಜನಾದನು.

ಎರಡನೆಯ ವಿಕ್ರಮಾದಿತ್ಯನೇ ಗುತ್ತವಂಶದಲ್ಲಿ ಅತ್ಯಂತ ಪ್ರಸಿದ್ಧನಾದ ದೊರೆ. ಹೊಯ್ಸಳ ಇಮ್ಮಡಿ ಬಲ್ಲಾಳನೂ ಮತ್ತು ಸೇವುಣ ಐದನೆಯ ಭಿಲ್ಲಮನೂ ಚಾಳುಕ್ಯ ರಾಜ್ಯವನ್ನು ತಮ್ಮಲ್ಲೇ ಹಂಚಿಕೊಳ್ಳುವ ದೃಷ್ಟಿಯಿಂದ ಕಾದಾಡುತ್ತಿದ್ದರು. ಇದನ್ನು ಗಮನಿಸಿದ ವಿಕ್ರಮಾದಿತ್ಯನು ಸ್ವತಂತ್ರವಾಗಿ ರಾಜ್ಯಭಾರ ಮಾಡಲು ಪ್ರಾರಂಭಿಸಿದನು. ಇವನು ಆಗ ಬರೆಸಿದ ಯಾವ ಶಾಸನಗಳಲ್ಲಿ ಯಾಗಲೀ ಹೊಯ್ಸಳರ ಅಥವಾ ಸೇವುಣ ರಾಜರ ಉಲ್ಲೇಖವೇ ಇಲ್ಲ. ಕನವಳ್ಳಿಯಲ್ಲಿ ದೊರಕಿರುವ ಕ್ರಿ.ಶ.1233ರ ಶಾಸನದಲ್ಲಿ ವೀರ ವಿಕ್ರಮಾದಿತ್ಯನು ತನ್ನ ಪ್ರಧಾನಿ ಯೊಡನೆ ಬನವಾಸಿ ನಾಡನ್ನು ಆಳುತ್ತಿದ್ದನೆಂದು ಹೇಳಿದೆ.[3] ಅಂದರೆ ಕ್ರಿ.ಶ. 1233ರ ವರೆಗೂ ಸ್ವತಂತ್ರವಾಗಿಯೇ ಆಳುತ್ತಿದ್ದನೆಂದು ವ್ಯಕ್ತವಾಗುತ್ತದೆ. ವಿಕ್ರಮಾದಿತ್ಯನಿಗೆ ಪಟ್ಟಮಹಾದೇವಿ ಎಂಬ ರಾಣಿಯಿಂದ ತುಳುವಲದೇವಿ ಎಂಬ ಮಗಳೂ, ಜೋಯಿ ದೇವ ಮತ್ತು ವಿಕ್ರಮಾದಿತ್ಯ ಎಂಬ ಪುತ್ರರೂ ಇದ್ದರು. ಕ್ರಿ.ಶ. 1233ರಲ್ಲಿ ಎರಡನೆಯ ಜೋಯಿದೇವನು ರಾಜನಾದನು.

ಈ ಕಾಲದಲ್ಲಿ ಸೇವುಣ ಸಿಂಘಣನು ಅತ್ಯಂತ ಪರಾಕ್ರಮದಿಂದ ದಕ್ಷಿಣಾ ಪಥವನ್ನೇ ತನ್ನ ವಶಮಾಡಿಕೊಂಡಿದ್ದನು. ಅವನ ಮುಂದೆ ಹೊಯ್ಸಳ ಇಮ್ಮಡಿ ಬಲ್ಲಾಳನೂ ಏನೂ ಮಾಡಲಾಗಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಗುತ್ತ ಜೋಯಿ ದೇವನು ಸ್ವತಂತ್ರನಾಗಿ ರಾಜ್ಯಭಾರ ಮಾಡಲು ಸಾಧ್ಯವಿಲ್ಲವಾಯಿತು. ಸಿಂಘಣನ ದಕ್ಷಿಣಕ್ಷೋಣೀ ಪಾಲನಾದ ಬೀಚನು ಕರ್ನಾಟಕದ ಸಣ್ಣ ಪುಟ್ಟ ರಾಜರುಗಳನ್ನೆಲ್ಲಾ ಸೋಲಿಸಿದನು. ಎರಡನೆಯ ಜೋಯಿದೇವನೂ ಬೀಚನ ಪ್ರಭಾವಕ್ಕೆ ಒಳಗಾಗಿರ ಬೇಕು. ಕ್ರಿ.ಶ.1238ರ ಶಾಸನದಲ್ಲಿ ಜೋಯಿದೇವನು ಸೇವುಣ ಸಿಂಘಣನ ಪಾದಪದ್ಮೋಪಜೀವಿಯಾಗಿ ಆಳುತ್ತಿದ್ದನೆಂದು ತಿಳಿದುಬರುತ್ತದೆ.[4] ಸಿಂಘಣನು ತನ್ನ ದಂಡನಾಯಕನಾದ ಚಿಕ್ಕದೇವನನ್ನು ಗುತ್ತ ವೊಳಲಿನಲ್ಲಿ ತನ್ನ ಪರವಾಗಿ ಅಧಿಕಾರಿಯಾಗಿ ನಿಯಮಿಸಿದನು. ಎರಡನೆಯ ಜೋಯಿದೇವನು ತನ್ನ ಮರಣ ಪರ್ಯಂತ ಸಿಂಘಣನಿಗೆ ವಿಧೇಯನಾಗಿಯೇ ಇದ್ದನು. ಕ್ರಿ.ಶ1248ರಲ್ಲಿ ಜೋಯಿ ದೇವನ ಮರಣಾನಂತರ, ಇವನ ಸಹೋದರನಾದ ಮೂರನೆಯ ವಿಕ್ರಮಾದಿತ್ಯನು

ಗುತ್ತರಾಜನಾದನು. ಈ ವಿಕ್ರಮಾದಿತ್ಯನ ಒಂದೇ ಒಂದು ಶಾಸನವು ಬೆಳಕಿಗೆ ಬಂದಿದೆ. ಅದು ಕ್ರಿ.ಶ. 1248ಕ್ಕೆ ಸೇರಿದ್ದು ಹಾವೇರಿ ತಾಲ್ಲೂಕಿನ ಹೊಸಹಳ್ಳಿಯಲ್ಲಿ ದೊರಕಿದೆ. [5] ಇದರಲ್ಲಿ ವಿಕ್ರಮಾದಿತ್ಯನು ಸೇವುಣ ದೊರೆ ಕೃಷ್ಣನ ಆಶ್ರಯದಲ್ಲಿ ಮಹಾಮಂಡಳೇಶ್ವರನಾಗಿದ್ದನೆಂದು ಉಲ್ಲೇಖಿತವಾಗಿದೆ. ವಿಕ್ರಮಾದಿತ್ಯನಿಗೆ ಮೈಳಾಲದೇವಿ ಎಂಬ ರಾಣಿಯಿದ್ದಳು. ಈ ರಾಣಿಯಿಂದ ಇವನಿಗೆ ಮೂರನೆಯ ಗುತ್ತದೇವ, ಹಿರಿಯದೇವ ಮತ್ತು ಮೂರನೆಯ ಜೋಯಿ ದೇವ ಎಂಬ ಮಕ್ಕಳಿದ್ದರು. ವಿಕ್ರಮಾದಿತ್ಯನು ಕ್ರಿ.ಶ.1259ರಲ್ಲಿ ಮರಣ ಹೊಂದಲು ಇವನ ಹಿರಿಯಪುತ್ರನಾದ ಮೂರನೆಯ ಗುತ್ತದೇವರು ರಾಜನಾದನು.

ಮೂರನೆಯ ಗುತ್ತನು ಸೇವುಣ ರಾಜನ ಮೇಲೆ ದಂಗೆ ಎದ್ದನು. ಬಹುಶಃ ಸೇವುಣ ಕೃಷ್ಣನು ಗೂರ್ಜರ ಮತ್ತು ಮಾಳ್ವರ ರಾಜ್ಯಗಳಲ್ಲಿ ದಂಡೆಯಾತ್ರೆಗಳನ್ನು ನಡೆಸುತ್ತಿದ್ದುದನ್ನು ಗಮನಿಸಿದ ಮೂರನೆಯ ಗುತ್ತನು ಸ್ವತಂತ್ರನಾಗಲು ಹವಣಿಸಿರಬೇಕು. ಕೂಡಲೆ ಕೃಷ್ಣನ ಸೇನಾಧಿಪತಿಗಳು ಗುತ್ತರಾಜ್ಯಕ್ಕೆ ಹೋಗಿ ಗುತ್ತನನ್ನು ಸೋಲಿಸಿದರು.[6] ಇದಾದ ಅನಂತರ ಕೃಷ್ಣನು ಮರಣ ಹೊಂದಿ, ಅವನ ಸಹೋದರನಾದ ಮಹಾದೇವನು ದೊರೆಯಾದನು. ಮಹಾದೇವನು ಸಾಳುವ ತಿಕ್ಕಮನ ನೇತೃತ್ವದಲ್ಲಿ ಹೊಯ್ಸಳರ ಮೇಲೆ ಒಂದು ಸೈನ್ಯವನ್ನು ಕಳುಹಿಸಿದನು. ಈ ಸೈನ್ಯವು ಗುತ್ತವೊಳಲಿಗೆ ಬಂದು ಅಲ್ಲಿ ತಂಗಿತು. ಇಷ್ಟರಲ್ಲಿ ಸೇವುಣ ಮಹಾದೇವನ ಅನಂತರ ರಾಮಚಂದ್ರನು ರಾಜನಾಗಿದ್ದನು. ಸಾಳುವ ತಿಕ್ಕಮನಿಗೆ ಮೂರನೆಯ ಗುತ್ತನು ಬಹುವಾಗಿ ಸಹಾಯ ಮಾಡಿದನು. ತನ್ನ ಸೈನ್ಯವನ್ನು ಸೇವುಣ ಸೈನ್ಯದೊಡನೆ ಸೇರಿಸಿದುದೇ ಅಲ್ಲದೆ, ಸುತ್ತಮುತ್ತಲ ಪ್ರದೇಶಗಳಿಂದ ಯೋಧರನ್ನು ನಿಯಮಿಸಿಕೊಳ್ಳಲು ಗುತ್ತನು ತಿಕ್ಕಮನಿಗೆ ಸಹಾಯ ಮಾಡಿದನು. ಈ ಯುದ್ಧದಲ್ಲಿ ಸೇವುಣರಿಗೆ ಜಯವೇನೂ ಲಭಿಸಲಿಲ್ಲ. ಆದರೆ ಗುತ್ತನ ಜೀವಿತ ಕಾಲವೆಲ್ಲಾ ಇದರಲ್ಲೇ ಕಳೆಯಿತು. ಇವನು ಸುಮಾರು ಕ್ರಿ.ಶ.1280ರಲ್ಲಿ ಮರಣ ಹೊಂದಿದನು.

ಇವನ ಅನಂತರ ನಾಲ್ಕನೆಯ ವಿಕ್ರಮಾದಿತ್ಯನು ಗುತ್ತ ರಾಜನಾದನು. ಈ ವಿಚಾರವನ್ನು ತಿಳಿಸುವ ಶಾಸನವೊಂದು ಇತ್ತೀಚೆಗೆ ದೊರಕಿದೆ. [7] ಇದು ಕ್ರಿ.ಶ. 1283ರ ಕಾಲಕ್ಕೆ ಸೇರಿದ್ದು ರಾಣಿಬೆನ್ನೂರಿನ ಹಿರೇಬಿದ್ರಿ ಎಂಬಲ್ಲಿ ದೊರಕಿದೆ. ಈ ಶಾಸನದ ಪ್ರಕಾರ ಗುತ್ತ ಮಹಾಮಂಡಳೇಶ್ವರ ನಾಲ್ಕನೆಯ ವಿಕ್ರಮಾದಿತ್ಯನ ರಾಣಿಯಾದ ಪದ್ಮಳಾದೇವಿಯು ಕಲಿನಾಥ ದೇವಾಲಯಕ್ಕೆ ಕೆಲವು ದತ್ತಿಗಳನ್ನು ಬಿಟ್ಟುಕೊಟ್ಟಳು. ಈ ವಿಕ್ರಮಾದಿತ್ಯನು ಮೂರನೆಯ ಜೋಯಿದೇವನ ಮಗ. ಅಂದರೆ ಮೂರನೆಯ ಗುತ್ತನ ಮರಣಾನಂತರ, ಅವನ ತಮ್ಮನ ಮಗನಾದ ನಾಲ್ಕನೆಯ ವಿಕ್ರಮಾದಿತ್ಯನು ಮಹಾಮಂಡಳೇಶ್ವರನಾದನು. ಇವನು ಎಲ್ಲಿಯ ವರೆಗೆ ರಾಜ್ಯವಾಳಿದನು ಎಂಬುದು ತಿಳಿದಿಲ್ಲ. ನಮಗೆ ತಿಳಿದಿರುವಂತೆ ಇವನೇ ಗುತ್ತವಂಶದ ಕೊನೆಯ ದೊರೆ.

**ವಂಶವೃಕ್ಷ**

ಮಹಾಗುತ್ತ
|
ಗುತ್ತ ೧
|
ಮಲ್ಲಿದೇವ
|
ವಿಕ್ರಮಾದಿತ್ಯ ೧
|
- ಜೋಯಿದೇವ ೧ [ಕ್ರಿ.ಶ. 1170-1185]
- ಗುತ್ತ ೨
  |
  ವಿಕ್ರಮಾದಿತ್ಯ ೨ [ಕ್ರಿ.ಶ. 1185-1233]
  |
  - ತುಳುವಲದೇವಿ
  - ಜೋಯಿದೇವ ೨ [ಕ್ರಿ.ಶ. 1233-48]
  - ವಿಕ್ರಮಾದಿತ್ಯ ೩ [ಕ್ರಿ.ಶ. 1248-59]
    |
    - ಗುತ್ತ ೩ [ಕ್ರಿ.ಶ. 1259-80]
    - ಹಿರಿಯದೇವ
    - ಜೋಯಿದೇವ ೩
      |
      ವಿಕ್ರಮಾದಿತ್ಯ ೪ [ಕ್ರಿ.ಶ. 1283-]

**(5) ತರ್ದವಾಡಿಯ ಶಿಲಾಹಾರರು**

ಸೇವುಣರ ಕೆಲವು ಶಾಸನಗಳಿಂದ ತರ್ದವಾಡಿ ನಾಡಿನಲ್ಲಿ ಶಿಲಾಹಾರರ ರಾಜ ಮನೆತನವೊಂದು ರಾಜ್ಯಭಾರ ಮಾಡುತ್ತಿದ್ದುದಾಗಿ ತಿಳಿದು ಬರುತ್ತದೆ. ಕೆಲವು ಶಾಸನಗಳಲ್ಲಿ ಶಿಲಾಹಾರ ಎಂಬುದಕ್ಕೆ ಬದಲಾಗಿ ಸೇಲಾರ ಎಂಬ ರೂಪವೂ ಕಾಣಬರುತ್ತದೆ. ಈ ಮನೆತನದ ಪೂರ್ವಜರು ಕಲ್ಯಾಣದ ಕಳಚೂರ್ಯರ

ಆಶ್ರಯದಲ್ಲಿ ಸಾಮಂತರಾಗಿದ್ದರು. ಕ್ರಿ.ಶ. 1168ರ ಶಾಸನವೊಂದರಲ್ಲಿ ಕಳಚೂರಿ ಸೋವಿದೇವನ ಆಶ್ರಯದಲ್ಲಿ ಮಹಾಮಂಡಳೇಶ್ವರ ಸಿಂಗಿದೇವರಸನು ಆಳುತ್ತಿದ್ದ ನೆಂದು ಹೇಳಿದೆ.[1] ಇವನ ಅನಂತರ ಮಹಾಮಂಡಳೇಶ್ವರ ಚಾಮುಂಡರಸನು ಸಾಮಂತನಾಗಿದ್ದುದು ಕಳಚೂರಿ ಮಲ್ಲುಗಿಯ ಕ್ರಿ.ಶ.1176ರ ಶಾಸನದಿಂದ ತಿಳಿಯುತ್ತದೆ.[2] ಅನಂತರ ಈ ಶಿಲಾಹಾರರು ಕಳಚೂರ್ಯರನ್ನು ಕಡೆಗಣಿಸಿ ಚಾಳುಕ್ಯರ ಆಶ್ರಿತರಾದರು. ನಾಲ್ಕನೆಯ ಸೋಮೇಶ್ವರನ ಕ್ರಿ.ಶ.1186ರ ಶಾಸನ ವೊಂದರಲ್ಲಿ ಆನೆಮರಸನೆಂಬ ಮಹಾಮಂಡಳೇಶ್ವರನು ಆಳುತ್ತಿದ್ದ ಉಲ್ಲೇಖವು ಕಾಣಬರುತ್ತದೆ.[3] ಇದಾದ ಸ್ವಲ್ಪ ಕಾಲದ ಅನಂತರ ಈ ಶಿಲಾಹಾರರು ಸೇವುಣರ ಅಧಿಪತ್ಯಕ್ಕೊಳಪಟ್ಟರು. ಕ್ರಿ.ಶ. 1190ರಲ್ಲಿ ಮಹಾಸಾಮಂತ ಬಂಡರಸನೆಂಬು ವನು ಅಮರೇಶ್ವರ ದೇವಾಲಯಕ್ಕೆ ದತ್ತಿಗಳನ್ನು ಕೊಟ್ಟನು. ಈ ಬಂಡರಸನು ಧನ ಸಂಗ್ರಹನ ವಂಶದಲ್ಲಿ ಜನಿಸಿದವನೆಂದು ಹೇಳಿದೆ. ಧನಸಂಗ್ರಹನೆಂಬುವನು ಶಿಲಾಹಾರ ಮನೆತನಕ್ಕೆ ಸೇರಿದ ಸಾಮಂತನೆಂದೂ, ಅವನು ಚಾಳುಕ್ಯ ಜಗದೇಕ ಮಲ್ಲನ ಆಶ್ರಯದಲ್ಲಿದ್ದನೆಂದೂ ಶಾಸನಗಳಿಂದ ತಿಳಿದು ಬಂದಿದೆ. [4] ಬಂಡರಸನ ಅನಂತರ ಕ್ರಿ.ಶ.1192ರಲ್ಲಿ ಗೋನರಸನೆಂಬುವನು ಕಲಿದೇವನ ದೇವಾಲಯಕ್ಕೆ ದತ್ತಿಗಳನ್ನು ಕೊಟ್ಟ ವಿಷಯವು ಪ್ರಸ್ತಾಪಿತವಾಗಿದೆ.[5] ಆಗ ತರ್ದವಾಡಿಯಲ್ಲಿ ಮಲ್ಲೇಯ ಸಾಹನಿಯು ಸೇವುಣ ರಾಜ್ಯಪಾಲನಾಗಿದ್ದನು.

ಅನಂತರ ಬೊಮ್ಮಿದೇವರಸನು ಮಹಾಮಂಡಳೇಶ್ವರನಾದನು.[6] ಇವನು ಸೇವುಣ ಸಿಂಘಣನ ಆಶ್ರಯದಲ್ಲಿದ್ದನು. ಕ್ರಿ.ಶ.1208ರ ಸಿಂಘಣನ ಶಾಸನ ಒಂದರಲ್ಲಿ ಬೊಮ್ಮಿದೇವರಸನು ಹೈಮೇಶ್ವರ ದೇವಾಲಯಕ್ಕೆ ದತ್ತಿಗಳನ್ನು ಕೊಟ್ಟ ವಿಚಾರ ಹೇಳಲ್ಪಟ್ಟಿದೆ. ಕ್ರಿ.ಶ.1251ರ ಸೇವುಣ ರಾಜ ಕೃಷ್ಣನ ಶಾಸನದಿಂದ ರಂಗ ರಸನು ಚಾವುಂಡಿಸೆಟ್ಟಿಯ ಆಶ್ರಯದಲ್ಲಿ ಆಳುತ್ತಿದ್ದುದಾಗಿ ತಿಳಿದು ಬರುತ್ತದೆ.[7] ಇದಾದ ಅನಂತರ ಸೇವುಣರ ಶಾಸನಗಳಲ್ಲಿ ತರ್ದವಾಡಿಯ ಶಿಲಾಹಾರರ ಉಲ್ಲೇಖ ಕಾಣಸಿಗುವುದಿಲ್ಲ.

### ವಂಶವೃಕ್ಷ

ಸಿಂಗಿದೇವರಸ [ಕ್ರಿ.ಶ. 1168]
|
ಚಾಮುಂಡರಸ [ಕ್ರಿ.ಶ. 1176]
|
ಆನೆಮರಸ [ಕ್ರಿ.ಶ. 1186]
|
ಬಂಡರಸ [ಕ್ರಿ.ಶ. 1190]

|
ಗೋನರಸ [ಕ್ರಿ.ಶ. 1192]
|
ಬೊಮ್ಮಿದೇವರಸ [ಕ್ರಿ.ಶ. 1208]
|
ರಂಗರಸ [ಕ್ರಿ.ಶ. 1251]

**(6) ಕರಡಿಕಲ್ಲಿನ ಕದಂಬರು**

ಕರಡಿಕಲ್ಲು ಎಂಬ ಪ್ರಾಂತ್ಯದಲ್ಲಿ ಕದಂಬ ವಂಶಕ್ಕೆ ಸೇರಿದ ರಾಜರು ಆಳುತ್ತಿದ್ದರು. ಕರಡಿಕಲ್ಲು ಪ್ರಾಂತ್ಯವು ಈಗಿನ ರಾಯಚೂರು ಜಿಲ್ಲೆಯ ಲಿಂಗಸುಗೂರ್ ತಾಲ್ಲೂಕಿನ ಪ್ರದೇಶಗಳನ್ನು ಒಳಗೊಂಡಿತ್ತು. ಕರಡಿಕಲ್ ಕದಂಬರ ಪ್ರಾಚೀನತಮ ಉಲ್ಲೇಖವು ಚಾಳುಕ್ಯ ಮೊದಲನೆಯ ಸೋಮೇಶ್ವರನ ಶಾಸನದಲ್ಲಿ ಕಾಣಸಿಗುತ್ತದೆ. [1] ಕ್ರಿ.ಶ. 1066ಕ್ಕೆ ಸೇರಿದ ಈ ಶಾಸನದಲ್ಲಿ ಮನ್ನೇಯ ನಾಗವರ್ಮರಸನ ಉಲ್ಲೇಖವು ಕಾಣುತ್ತದೆ. ಅನಂತರ ನಮಗೆ ಈ ವಂಶಜರ ಉಲ್ಲೇಖ ಕಾಣಬರುವುದು ಆರನೆಯ ವಿಕ್ರಮಾದಿತ್ಯನ ಕ್ರಿ.ಶ. 1119ನೆಯ ವರ್ಷಕ್ಕೆ ಸೇರಿದ ಶಾಸನದಲ್ಲಿ. [2] ಈ ಶಾಸನದಿಂದ ಮಹಾಮಂಡಳೇಶ್ವರ ಭೂತರಸನು ಸ್ಥಳೀಯ ದೇವಾಲಯಕ್ಕೆ ದತ್ತಿಗಳನ್ನು ಕೊಟ್ಟನೆಂದು ತಿಳಿಯುತ್ತದೆ. ಅನಂತರ ಭೂತರಸನ ಮಗನಾದ ಮಧುವತ್ತಿಯರಸನು ರಾಜನಾದನು. ಇವನ ಕಾಲದ ಎರಡು ಶಾಸನಗಳು ದೊರಕಿವೆ. [3] ಇವುಗಳಲ್ಲಿ ಮೊದಲನೆಯದು ಕ್ರಿ.ಶ. 1124ಕ್ಕೆ ಸೇರಿದ್ದು, ಚಾಳುಕ್ಯ ಆರನೆಯ ವಿಕ್ರಮಾದಿತ್ಯನನ್ನು ಹೆಸರಿಸುತ್ತದೆ. ಈ ಶಾಸನದಿಂದ ಮಧುವತ್ತಿಯರಸನಿಗೆ ತೊರೆದಡಿಯ ಭೀಮ, ನವಿಲೆಯ ಪಾರ್ಥ ಎಂಬ ಬಿರುದುಗಳು ಇದ್ದುದು ಗೊತ್ತಾಗುತ್ತದೆ. ಕ್ರಿ.ಶ. 1135ರ ಇವನ ಇನ್ನೊಂದು ಶಾಸನದಲ್ಲಿ ಚಾಳುಕ್ಯ ರಾಜನ ಹೆಸರಿಲ್ಲ. ಬಹುಶಃ, ಮಧುವತ್ತಿಯರಸನು ಸ್ವತಂತ್ರನಾಗಲು ಹವಣಿಸಿರಬೇಕು.

ಮಧುವತ್ತಿಯರಸನ ಅನಂತರ ಸುಮಾರು ಅರ್ಧ ಶತಮಾನಗಳ ಕಾಲದ ಚರಿತ್ರೆಯು ನಮಗೆ ತಿಳಿದಿಲ್ಲ. ಕ್ರಿ.ಶ. 1191ರ ಸೇವುಣ ಐದನೆಯ ಭಿಲ್ಲಮನ ಕಾಲದ ಶಾಸನವು ಕರಡಿಕಲ್ ಕದಂಬ ವಂಶಕ್ಕೆ ಸೇರಿದ ಬಜ್ಜರಸನನ್ನು ಉಲ್ಲೇಖಿಸುತ್ತದೆ. [4] ಈ ಶಾಸನವು ಇವನ ಪೂರ್ವಿಕರ ವಿಚಾರವನ್ನೂ ಹೇಳುತ್ತದೆ. ಇದರ ಪ್ರಕಾರ ಮೊದಲನೆಯ ಬಜ್ಜನೂ, ಅನಂತರ ಮೊದಲನೆಯ ಕಾಚನೂ, ಅವನ ಅಂತರ ಎರಡನೆಯ ಬಜ್ಜನೂ, ಅನಂತರ ಎರಡನೆ ಕಾಚನೂ ಆಳಿದುದಾಗಿ ತಿಳಿದುಬರುತ್ತದೆ. ಎರಡನೆಯ ಬಜ್ಜನಿಗೆ ಬಾಚಲದೇವಿ ಎಂಬ ರಾಣಿಯೂ ಮತ್ತು ಎರಡನೆಯ ಕಾಚನಿಗೆ ಸೆಜ್ಜಲದೇವಿ ಎಂಬ ರಾಣಿಯೂ ಇದ್ದರು. ಎರಡನೆಯ

ಕಾಚನ ಉತ್ತರಾಧಿಕಾರಿಯಾದ ಮೂರನೆಯ ಬಜ್ಜನು ಐದನೆಯ ಭಿಲ್ಲಮನ ಆಶ್ರಯದಲ್ಲಿ ಮಹಾಮಂಡಳೇಶ್ವರನಾಗಿದ್ದನು. ಈತನಿಗೆ ಹೊಳ್ಳದೇವಿ ಎಂಬ ರಾಣಿಯಿದ್ದಳು. ಮೂರನೆಯ ಬಜ್ಜನ ಅಂತರ ಕರಡಿಕಲ್ ಪ್ರಾಂತ ಕ್ರಿ.ಶ. 1207ರಲ್ಲಿ ಸಿಂಘಣನ ಮಂತ್ರಿಗಳ ಆಳ್ವಿಕೆಗೆ ಸೇರಿಸಲ್ಪಟ್ಟಿತು. ಮೊದಲು ಲಕ್ಷ್ಮೀದೇವನು, ಅನಂತರ ಕ್ರಿ.ಶ. 1215ರಲ್ಲಿ ದಾಮೋದರನೂ ಕರಡಿಕಲ್ ಪ್ರಾಂತ್ಯದ ರಾಜ್ಯಪಾಲರಾಗಿದ್ದರು. [5]

### ವಂಶವೃಕ್ಷ


ನಾಗವರ್ಮರಸ [ಕ್ರಿ.ಶ. 1066]
|
ಭೂತರಸ [ಕ್ರಿ.ಶ. 1119]
|
ಮಧುವತ್ತಿಯರಸ
|
ಬಜ್ಜರಸ ೧
|
ಕಾಚರಸ ೧
|
ಬಜ್ಜರಸ ೨
|
ಕಾಚರಸ ೨
|
ಬಜ್ಜರಸ ೩

**(7) ನೂರುಂಬಾಡದ ಕದಂಬರು**

ನೂರುಂಬಾಡ ಎನ್ನುವ ಪ್ರಾಚೀನ ಪ್ರಾಂತ್ಯವು ಈಗಿನ ಧಾರ್ವಾಡ ಜಿಲ್ಲೆಯ ಹಿರೇಕೆರೂರು, ಕೋಡ್ ಮತ್ತು ರಾಣಿಬೆನ್ನೂರು ತಾಲ್ಲೂಕುಗಳ ಪ್ರದೇಶಗಳನ್ನು ಒಳಗೊಂಡಿದ್ದಿತು. ಇಲ್ಲಿ ಆಳುತ್ತಿದ್ದ ಕದಂಬ ವಂಶದ ರಾಜರುಗಳಿಗೆ ಸೇರಿದ ಮೂರು ಶಾಸನಗಳು ದೊರಕಿವೆ. ಆ ಮೂರು ಶಾಸನಗಳೂ ಕೋಡ್ ತಾಲ್ಲೂಕಿನ ರಟ್ಟಿಹಳ್ಳಿ ಎಂಬಲ್ಲಿ ದೊರಕಿವೆ. ಇವುಗಳಲ್ಲಿ ಪ್ರಾಚೀನವಾದುದು ಚಾಳುಕ್ಯ ಜಗದೇಕಮಲ್ಲನ ಕಾಲದ ಶಾಸನ[1] ಇದರಲ್ಲಿ ಎರಡನೆಯ ಕೇತರಸನವರೆಗಿನ ವಂಶವೃಕ್ಷವು ಹೇಳಲ್ಪಟ್ಟಿದೆ. ಎರಡನೆಯ ಶಾಸನವು ಕಳಚೂರಿ ಸೋವಿದೇವನ

ಕಾಲದ್ದು.[2] ಇದರಲ್ಲಿ ಮಹಾಮಂಡಳೇಶ್ವರ ಪಾಂಡ್ಯದೇವ ಮತ್ತು ಅವನ ರಾಣಿ ಬಾಚಲದೇವಿಯ ಹೆಸರೂ ಉಲ್ಲೇಖಿತವಾಗಿವೆ. ಈಕೆಯು ಗುತ್ತರಾಜ ವಿಕ್ರಮಾದಿತ್ಯನ ಮಗಳು. ಬಹುಶಃ ಈ ವಿಕ್ರಮಾದಿತ್ಯನು ಗುತ್ತರಾಜ ಮೊದಲನೆಯ ವಿಕ್ರಮಾದಿತ್ಯನಿರಬೇಕು (ಕ್ರಿ.ಶ. 1139-70). ಮೂರನೆಯ ಶಾಸನವು ಸೇವುಣ ಸಿಂಘಣನ ಕಾಲಕ್ಕೆ ಸೇರಿದೆ. [3] ಇದರ ಕಾಲ ಕ್ರಿ.ಶ. 1238. ಈ ಶಾಸನದಲ್ಲಿಯೂ ಕದಂಬರ ವಂಶವೃಕ್ಷವು ಹೇಳಲ್ಪಟ್ಟಿದೆ. ಸಮಕಾಲೀನ ಕದಂಬ ರಾಜನು ವೀರಪಾಂಡ್ಯದೇವ. ಇವನು ಸಿಂಘಣನ ಮಂತ್ರಿ ಹೊನ್ನ ಬೊಮ್ಮಿಸೆಟ್ಟಿಯ ಆಶ್ರಯದಲ್ಲಿ ಆಳುತ್ತಿದ್ದನು. ವೀರಪಾಂಡ್ಯನ ಅನಂತರ ಈ ಕದಂಬರ ಉಲ್ಲೇಖವು ದೊರಕುವುದಿಲ್ಲ. ಬಹುಶಃ ಅಲ್ಲಿಗೆ ಅವರ ಅವನತಿಯುಂಟಾಗಿರಬೇಕು.

**ವಂಶವೃಕ್ಷ**




**(8) ಬೆಳಗುತ್ತಿಯ ಸಿಂದರು**

ಶಿಕಾರಿಪುರ, ಹೊನ್ನಾಳಿ ಮತ್ತು ಚಿತ್ರದುರ್ಗದ ಭಾಗಗಳಲ್ಲಿ ಆಳಿದ ಸಿಂದರು ಸೇವುಣರ ಸಾಮಂತರಾಜರಲ್ಲಿ ಮುಖ್ಯರಾದವರು. ಸೇವುಣರ ಸಾಮಂತರಾಗುವುದಕ್ಕೆ ಮುಂಚೆ ಇವರು ರಾಷ್ಟ್ರಕೂಟರ ಮತ್ತು ಅನಂತರ ಚಾಳುಕ್ಯರ ಸಾಮಂತರಾಗಿದ್ದರು.

ಈ ವಂಶದ ಮೊದಲನೆಯ ರಾಜನಾದ ನನ್ನಿಯ ಸಿಂದನು ರಾಷ್ಟ್ರಕೂಟ ಮೂರನೆಯ ಕೃಷ್ಣನ ಆಶ್ರಯದಲ್ಲಿದ್ದನು. ಇವನ ಕಾಲಕ್ಕೆ ಸೇರಿದ ಶಾಸನದ ತೇದಿ ಕ್ರಿ.ಶ. 967. ಇವನ ಅನಂತರ ಮಹಾಸಾಮಂತ ಜಾತರಸನು ರಾಜನಾಗಿದ್ದನೆಂದು ಕ್ರಿ.ಶ. 992ರ ಶಾಸನವೊಂದು ತಿಳಿಸುತ್ತದೆ.[2] ಇವನ ಆನಂತರ ಬಂದವನೇ ಪಿರಿಯ ಚಟ್ಟರಸ. ಇವನ ಕಾಲದ ಶಾಸನಗಳು ದೊರಕಿಲ್ಲ. ಇವನ ಅನಂತರ ಬಂದ ಮಹಾಮಂಡಳೇಶ್ವರ ಜೋಗರಸನು ಚಾಳುಕ್ಯ ಮೊದಲನೆಯ ಸೋಮೇಶ್ವರನ ಆಶ್ರಯದಲ್ಲಿದ್ದನು. ಜೋಗರಸನ ಅನಂತರ ಎರಡನೆಯ ಚಟ್ಟರಸನು ಸಾಮಂತನಾದನು. ಇವನ ಮಗನಾದ ಮೊದಲನೆಯ ಈಶ್ವರ ದೇವನು ಅನಂತರ ಸಿಂದ ದೊರೆಯಾದನು. ಇವನ ಮಗನೇ ಮಾಚರಸ. ಇವನು ಚಾಳುಕ್ಯ ಮೊದಲನೆಯ ಸೋಮೇಶ್ವರನ ಆಶ್ರಯದಲ್ಲಿದ್ದನೆಂದು ಕ್ರಿ.ಶ. 1128ರ ಶಾಸನ ವೊಂದರಿಂದ ತಿಳಿಯುತ್ತದೆ.[3] ಮಾಚರಸನಿಗೆ ಮಲ್ಲಿದೇವ ಮತ್ತು ಐಹರಸ ಎಂಬ ತಮ್ಮಂದಿರಿದ್ದರು. ಐಹರಸನಿಗೆ ರಾಯರಸ ಎಂಬ ಮಗನಿದ್ದನು. ಈ ರಾಜರ ಶಾಸನಗಳಾವುವೂ ಬೆಳಕಿಗೆ ಬಂದಿಲ್ಲ. ಮಾಚರಸನ ಅನಂತರ ಮೊದಲನೆಯ ಮಲ್ಲಿದೇವನೂ, ಅವನ ಅನಂತರ ರಾಯರಸನ ಮಗನಾದ ಎರಡನೆಯ ಈಶ್ವರ ದೇವನೂ ರಾಜ್ಯವಾಳಿದರು. ಕೋಡುಮಗ್ಗಿ ಎಂಬಲ್ಲಿ ದೊರಕಿರುವ ಕ್ರಿ.ಶ.1158ರ ಶಾಸನದಿಂದ ಎರಡನೆಯ ಈಶ್ವರದೇವನು ಕಳಚೂರಿ ಬಿಜ್ಜಳನ ಸಾಮಂತನಾಗಿದ್ದನೆಂದು ಗೊತ್ತಾಗುತ್ತದೆ.[4] ಇವನ ಇನ್ನೊಂದು ಶಾಸನವು ಕಳಚೂರಿ ಸಂಕಮನ ಕಾಲಕ್ಕೆ ಸೇರಿರುವುದರಿಂದ ಬಹುಶಃ ಇವನು ಕ್ರಿ.ಶ.1185ರ ವರೆಗೆ ಆಳಿರಬೇಕೆಂದು ಊಹಿಸಬಹುದು.

ಇವನ ಅನಂತರ ಇವನ ಮಗನಾದ ಎರಡನೆಯ ಮಲ್ಲಿದೇವನು ರಾಜನಾದನು. ಇವನು ತನ್ನ ತಂದೆಯಂತೆ ಕಳಚೂರ್ಯರ ಆಶ್ರಿತನಾಗಿರದೆ, ಚಾಳುಕ್ಯರ ಮಹಾಮಂಡಳೇಶ್ವರನಾಗಿದ್ದನು. ಕ್ರಿ.ಶ.1189ರ ಶಾಸನವೊಂದರಿಂದ ಎರಡನೆಯ ಮಲ್ಲಿದೇವನು ನಾಲ್ಕನೆಯ ಸೋಮೇಶ್ವರನ ಅಧೀನಲ್ಲಿದ್ದನು ಎಂದು ಗೊತ್ತಾಗುತ್ತದೆ.[5] ಆದರೆ ಬಹಳ ಕಾಲ ಅವನು ಅವರಿಗೆ ಅಧೀನನಾಗಿರಲಿಲ್ಲ. ಈ ಕಾಲದಲ್ಲಿ ಚಾಳುಕ್ಯ, ಹೊಯ್ಸಳ ಮತ್ತುಸೇವುಣರ ಪರಸ್ಪರ ಯುದ್ಧಗಳಿಂದ ರಾಜಕೀಯವು ಕಲುಷಿತವಾಗಿದ್ದುದನ್ನು ಗಮನಿಸಿದ ಮಲ್ಲಿದೇವನು ಸ್ವತಂತ್ರನಾಗಿ ರಾಜ್ಯಭಾರ ಮಾಡಲು ಪ್ರಾರಂಭಿಸಿದನು. ಕ್ರಿ.ಶ.1195ರ ಹೊತ್ತಿಗೆ ಇವನು ಸ್ವತಂತ್ರನಾದನೆಂದು ತೋರುತ್ತದೆ. ಆದರೆ ಹೊಯ್ಸಳರು ಇವನು ಸ್ವತಂತ್ರ ನಾದುದನ್ನು ನೋಡಿ, ಅವನನ್ನು ಶಿಕ್ಷಿಸಲು ವ್ಯವಸ್ಥೆ ಮಾಡಿದರು. ಹೊಯ್ಸಳರಾಣಿ ಉಮಾದೇವಿಯ ಆಜ್ಞೆಯಂತೆ ಹೊಯ್ಸಳ ಸೈನ್ಯವು ಮಲ್ಲಿದೇವನ ಮೇಲೆ ಯುದ್ಧವನ್ನು ಮಾಡಿ, ಅವನನ್ನು ಸೋಲಿಸಿತು.[6] ಕ್ರಿ.ಶ.1198ರಿಂದ ಮಲ್ಲಿದೇವನು ಹೊಯ್ಸಳರ ಅಧೀನನಾಗಿ ಆಳಿದನು.

ಇವನ ಮರಣಾನಂತರ ಇವನ ಮಗನಾದ ಮೂರನೆಯ ಈಶ್ವರದೇವನು ರಾಜನಾದನು. ತನ್ನ ತಂದೆ ಮಲ್ಲಿದೇವನಿಗೆ ಹೊಯ್ಸಳ ರಾಣಿ ಉಮಾದೇವಿಯಿಂದ ಉಂಟಾದ ಅವಮಾನಕ್ಕೆ ತಕ್ಕ ಶಾಸ್ತಿಯನ್ನು ಮಾಡಬೇಕೆಂಬ ಉದ್ದೇಶದಿಂದ, ಈಶ್ವರದೇವನು ಹೊಯ್ಸಳರ ಆಧಿಪತ್ಯವನ್ನು ಕಡೆಗಣಿಸಿ, ಅವರ ಶತ್ರುಗಳಾದ ಸೇವುಣರ ಆಶ್ರಯವನ್ನು ಕೋರಿದನು. ಸಮಕಾಲೀನ ರಾಜನಾದ ಸಿಂಘಣನಿಗೂ ಇದೊಂದು ಒಳ್ಳೆಯ ಅವಕಾಶವೆನಿಸಿರಬೇಕು. ಕ್ರಿ.ಶ.1215ರಿಂದ ಈಶ್ವರದೇವನು ಸೇವುಣ ಸಿಂಘಣನ ಹೆಸರಿನಲ್ಲಿ ಶಾಸನಗಳನ್ನು ಬರೆಸಿದನು.[7] 'ಸಿಂಘಣ ರಾಜ್ಯಾಭ್ಯುದಯ ಕಾರಣ' ಎಂಬ ಬಿರುದನ್ನೂ ಧರಿಸಿದನು. ಕ್ರಿ.ಶ. 1217ರಲ್ಲಿ ಹೊಯ್ಸಳರು ಬೆಳಗುತ್ತಿಗೆ ಮುತ್ತಿಗೆ ಹಾಕಿದರು. ಸೇವುಣ ಸೈನ್ಯಾಧಿಪತಿಯಾದ ಬೊಮ್ಮಿದೇವರಸನು ಹೊಯ್ಸಳರನ್ನು ಸೋಲಿಸಿ ಓಡಿಸಿದನು. ಇದಾದ ನಂತರ ಕ್ರಿ.ಶ. 1219ರಲ್ಲಿ ಈಶ್ವರದೇವನು ಸೇವುಣರಿಂದ ಸ್ವತಂತ್ರನಾಗಲು ಪ್ರಯತ್ನಿಸಿದನು. ಆದರೆ ಸೇವುಣ ಸೇನಾಧಿಪತಿಗಳಿಂದ ಇವನ ಪ್ರಯತ್ನಗಳು ಸಫಲವಾಗಲಿಲ್ಲ. ಕ್ರಿ.ಶ. 1223ರಲ್ಲಿ ಮತ್ತೊಮ್ಮೆ ಸ್ವತಂತ್ರನಾಗಲು ಈಶ್ವರದೇವನು ಪ್ರಯತ್ನಿಸಿದನು. ಈ ಪ್ರಯತ್ನದಲ್ಲಿಯೂ ಅವನು ಸೋತನು. ಚಿಕ್ಕೆರೂರಿನಲ್ಲಿ ದೊರಕಿರುವ ಕ್ರಿ.ಶ. 1223ರ ಸಮಯದ ವೀರಗಲ್ಲುಗಳು ಈ ಯುದ್ಧಕ್ಕೆ ಸಂಬಂಧಿಸಿದವುಗಳು.[8] ತನ್ನ ಆಶಯವನ್ನು ಸಾಧಿಸದೇ ಈಶ್ವರದೇವನು ಕ್ರಿ.ಶ. 1227ರಲ್ಲಿ ಮರಣಹೊಂದಿದನು. ಇವನ ಮರಣಾನಂತರ ಇವನ ಮಗನಾದ ಕೇಶವದೇವನು ರಾಜನಾದನು. ಇವನೂ ಸೇವುಣರಿಗೆ ವಿಧೇಯನಾಗಿ ಉಳಿಯಲಿಲ್ಲ. ಸೇವುಣ ಸೇನಾಧಿಪತಿ ಹೊನ್ನಬಮ್ಮಿಶೆಟ್ಟಿಯು ಇವನ ಮೇಲೆ ಕ್ರಿ.ಶ. 1232ರಲ್ಲಿ ಯುದ್ಧ ಮಾಡಿ ಇವನನ್ನು ಸೋಲಿಸಿದನು.[9] ಸೇವುಣ -ಸಿಂದರ ಯುದ್ಧಗಳು ಅನಂತರವೂ ಮುಂದುವರಿದವು. ಕೇಶವದೇವನ ಮಗನಾದ ಬೀರದೇವನ ಕಾಲದಲ್ಲಿ ಸೇವುಣ ಸೇನಾಧಿಪತಿ ಲಖಿನಪಾಲನು ಸಿಂದರ ಮೇಲೆ ಯುದ್ಧ ಮಾಡಿದನು. ಮತ್ತೆ 1245ರಲ್ಲಿ ಶ್ರೀಧರನ ನೇತೃತ್ವದಲ್ಲಿ ಸೇವುಣ ಸೈನ್ಯವು ಸಿಂದರನ್ನು ಸೋಲಿಸಿ ಕೂಡಲಿಯನ್ನು ತಮ್ಮ ವಶಮಾಡಿಸಿಕೊಂಡಿತು. ಕೂಡಲಿಯು ಸಿಂದರ ರಾಜಧಾನಿಯಿಂದ ಬೆಳಗುತ್ತಿಗೆ ಕೇವಲ ಐದು ಮೈಲಿ ಸಮೀಪದಲ್ಲಿದ್ದರೂ, ಬಹಳ ಶೌರ್ಯದಿಂದ ಹೋರಾಡಿ ಬೀರದೇವನು ಕ್ರಿ.ಶ. 1247ರಲ್ಲಿ ನೇಮತ್ತಿಯಲ್ಲಿ ರಣರಂಗದಲ್ಲಿ ಮಡಿದನು.[10] ಬೀರದೇವನ ಮರಣಾನಂತರ ಮಹಾಮಂಡಳೇಶ್ವರರಾಗಿದ್ದ ಸಿಂದವಂಶದ ಸಾಮಂತರು ನಮಗೆ ಕಾಣಬರುವುದಿಲ್ಲ. ಆದರೆ ಸಿಂದ ವಂಶದವರು ಸಣ್ಣ ಸಣ್ಣ ಹುದ್ದೆಗಳಲ್ಲಿ ಮುಂದುವರಿಯುತ್ತಿದ್ದರೆಂದು ಮಾತ್ರ ಹೇಳಬಹುದು. ಸೇವುಣ ರಾಮಚಂದ್ರನ ಆಳ್ವಿಕೆಯಲ್ಲಿ ಕ್ರಿ.ಶ.1289 ಮತ್ತು 1312ರಲ್ಲಿ ಮಧುಕರಯ್ಯ ಮತ್ತು ಕಾಮಯ್ಯ ಎಂಬ ಸಿಂದವಂಶದವರು ನಾಡಪ್ರಭುಗಳಾಗಿ ಅಧಿಕಾರ ನಿರ್ವಹಿಸುತ್ತಿದ್ದರು.[11] ಇವರಿಬ್ಬರಿಗೂ ಬೆಳಗುತ್ತಿಯ ಸಿಂದರ ಬಿರುದು ಗಳಿರುವುದು ಗಮನಾರ್ಹವಾದುದು.

## ವಂಶವೃಕ್ಷ

ನನ್ನಯ ಸಿಂಹ
|
ಜಾತರಸ [ಕ್ರಿ.ಶ. 992]
|
ಪಿರಿಯ ಚಟ್ಟರಸ [ಕ್ರಿ.ಶ. 1020-1060]
|
ಜೋಗರಸ [ಕ್ರಿ.ಶ. 1060-1120]
|
ಚಟ್ಟರಸ ೨
|
ಮಾಚರಸ | ಮಲ್ಲಿದೇವ | ಐಹರಸ
|
ರಾಯರಸ
|
ಈಶ್ವರದೇವ ೨
[ಕ್ರಿ.ಶ. 1155-85]
|
ಪಾಂಡ್ಯದೇವ | ಮಲ್ಲಿದೇವ ೨ [ಕ್ರಿ.ಶ. 1185-1205] | ರಾಯ | ವಿಜಯ
|
ಈಶ್ವರದೇವ ೩ ಕ್ರಿ.ಶ. 120-5-27
|
ಸೋವಲಾ | ಕಳಲೆ | ಕೇಶವದೇವ [ಕ್ರಿ.ಶ.1227-1239]
|
ಬೀರದೇವ
|
ಮಧುಕರಯ್ಯ [ಕ್ರಿ.ಶ. 1289]
|
ಕಾಮಯ್ಯ [ಕ್ರಿ.ಶ. 1312]

## (9) ಸೌಂದತ್ತಿಯ ರಟ್ಟರು

ಸೌಂದತ್ತಿಯ ರಟ್ಟರ ಚರಿತ್ರೆಯು ಕ್ರಿ.ಶ. ಹತ್ತನೆಯ ಶತಮಾನದಿಂದಲೇ ಪ್ರಾರಂಭವಾದರೂ, ಸೇವುಣರಿಗೂ, ಅವರಿಗೂ ರಾಜಕೀಯ ಸಂಬಂಧಗಳು ಪ್ರಾರಂಭವಾದುದು ಸುಮಾರು ಕ್ರಿ.ಶ.1220ರಲ್ಲಿ. ಅಲ್ಲಿಯವರೆಗೆ ಅವರು ಸೇವುಣರ ಅಧೀನದಲ್ಲಿರಲಿಲ್ಲ. ಆ ಕಾಲದ ಚರಿತ್ರೆಯನ್ನು ಇಲ್ಲಿ ಗಮನಿಸಲಾಗಿಲ್ಲ. ಕ್ರಿ.ಶ. 1200ರಲ್ಲಿ ಪಟ್ಟಕ್ಕೆ ಬಂದ ಸಿಂಘಣನು ಕೊಲ್ಲಾಪುರದಲ್ಲಿ ಆಳುತ್ತಿದ್ದ ಶಿಲಾಹಾರ ಭೋಜನನ್ನು ಸೋಲಿಸಿದನು. [1] ಭೋಜನ ನೆರೆಯವರೇ ಆದ ರಟ್ಟರು ಸೇವುಣರಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಆಗ ಎರಡನೆಯ ಲಕ್ಷ್ಮೀದೇವನು ರಟ್ಟ ರಾಜನಾಗಿದ್ದನು. ಸಿಂಘಣನ ಕ್ರಿ.ಶ. 1222ರ ಮುನೋಳಿ ಶಾಸನದಿಂದ ರಟ್ಟರಿಗೂ ಸೇವುಣರಿಗೂ ಘರ್ಷಣೆಗಳಾಗಿರಬೇಕೆಂದು ತಿಳಿಯುತ್ತದೆ. [2] ಬಹುಶಃ ಸಿಂಘಣನ ಅತಿ ದೊಡ್ಡ ಸೈನ್ಯವನ್ನು ಎದುರಿಸಲಾರದೆ ರಟ್ಟ ಲಕ್ಷ್ಮೀದೇವನು ಶರಣಾಗತನಾಗಿ ಸೇವುಣರಿಂದ ತಪ್ಪಿಸಿಕೊಂಡಿರಬೇಕು. ಆದರೆ ಸಿಂಘಣನು ಉತ್ತರ ಭಾರತದ ಕಡೆಗೆ ತನ್ನ ಗಮನವನ್ನು ಹರಿಸಿ ಅಲ್ಲಿ ದಿಗ್ವಿಜಯಗಳನ್ನು ಕೈಕೊಂಡಾಗ, ಇದೇ ತಕ್ಕ ಸಮಯವೆಂದು ಎರಡನೆಯ ಲಕ್ಷ್ಮೀದೇವನು ಸ್ವತಂತ್ರನಾಗಿ ಶಾಸನಗಳನ್ನು ಬರೆಸಲು ಪ್ರಾರಂಭಿಸಿದನು. ಇವನ ಗುರುವಾದ ಮುನಿಚಂದ್ರನ ಪ್ರೇರಣೆಯೇ ಇದಕ್ಕೆ ಕಾರಣವಿರಬೇಕೆಂದು ಊಹಿಸಬಹುದು. ಕ್ರಿ.ಶ.1228ರ ಶಾಸನವೊಂದರಿಂದ ಲಕ್ಷ್ಮೀದೇವನು ಸ್ವತಂತ್ರನಾಗಿದ್ದನೆಂದು ಗೊತ್ತಾಗುತ್ತದೆ.[3]

ಲಕ್ಷ್ಮೀದೇವನನ್ನು ತನ್ನ ಅಧಿಪತ್ಯಕ್ಕೊಳಪಡಿಸುವ ಸಲುವಾಗಿ ಸಿಂಘಣನ ದಕ್ಷಿಣಕ್ಷೋಣೀಪಾಲನಾದ ಬೀಚಣನು ಸೈನ್ಯ ಸಮೇತ ಸೌಂದತ್ತಿಗೆ ಹೋಗಿ ಲಕ್ಷ್ಮೀದೇವನನ್ನು ಸೋಲಿಸಿದನು. ಕ್ರಿ.ಶ. 1238ರ ತಿಳಿವಳ್ಳಿ ಶಾಸನದಲ್ಲಿ ಬೀಚನು ಲಕ್ಷ್ಮೀದೇವನನ್ನು ಸೋಲಿಸಿದುದು ಮಾತ್ರವಲ್ಲದೆ, ಅವನ ಕುಲವನ್ನೇ ನಾಶ ಮಾಡಿದನೆಂದು ಹೇಳಿದೆ.[4] ಲಕ್ಷ್ಮೀದೇವನು ಈ ಯುದ್ಧದಲ್ಲಿ ಮಡಿದನೆಂದು ಖಚಿತವಾಗಿ ಹೇಳಲಾಗುವುದಿಲ್ಲ. ಏಕೆಂದರೆ ಸ್ವಲ್ಪ ಕಾಲಾನಂತರ ಸಿಂಘಣನ ಮರಣಾನಂತರ ಸೇವುಣರಿಗೂ ರಟ್ಟ ಲಕ್ಷ್ಮೀದೇವನಿಗೂ ಯುದ್ಧವಾಗಿರಬೇಕೆಂದು ತೋರುತ್ತದೆ. ತನ್ನನ್ನು ಸೋಲಿಸಿದ ಸೇವುಣ ಸಿಂಘಣನು ಮರಣಹೊಂದಿದಮೇಲೆ ಲಕ್ಷ್ಮೀದೇವನು ಮತ್ತೆ ಸ್ವತಂತ್ರನಾಗಿರಬೇಕು. ಅಷ್ಟೇ ಅಲ್ಲದೆ ಅವನ ಬಂಧುವಾದ ಕದಂಬವಂಶದ ಮೂರನೆಯ ಷಷ್ಠದೇವನು ಸೇವುಣ ಕೃಷ್ಣನ ಮೇಲೆ ಯುದ್ಧ ಮಾಡಲು ಸಹಾಯವನ್ನೂ ಮಾಡಿದನು. ಕೂಡಲೇ ಕೃಷ್ಣನ ಮಹಾಪ್ರಧಾನನಾದ ನಾಗರಸನು ಬೆಳಗಾಂಗೆ ಹೋಗಿ ರಟ್ಟರನ್ನು ಸೋಲಿಸಿ ಆ ಪ್ರಾಂತ್ಯವನ್ನು ಸೇವುಣರ ಆಳ್ವಿಕೆಗೆ ಸೇರಿಸಿದನು. [5] ಅಲ್ಲಿಂದ ಮುಂದೆ ಆ ಪ್ರಾಂತ್ಯದಲ್ಲಿ ಸೇವುಣರ ಅಧಿಕಾರಿಗಳೇ ಆಡಳಿತವನ್ನು ನಡೆಸುತ್ತಿದ್ದರು. ಎರಡನೆಯ ಲಕ್ಷ್ಮೀದೇವನ ಅನಂತರ ನಮಗೆ ಯಾವ ರಟ್ಟ ರಾಜನ ಹೆಸರೂ ತಿಳಿದುಬಂದಿಲ್ಲ. ಬಹುಶಃ ಅವನೇ ಕೊನೆಯ ರಾಜನಿರಬೇಕು.

## (10) ಆಮರ್ದಕಪುರದ ರಟ್ಟರು

ಸೇವುಣ ಐದನೆಯ ಭಿಲ್ಲಮನ ಕಾಲದ ಅರ್ಧಾಪುರದಲ್ಲಿ (ನಾಂದೇಡ್ ಜಿಲ್ಲೆ) ದೊರಕಿರುವ ಶಾಸನವೊಂದರಿಂದ ಆಮರ್ದಕಪುರವೆಂಬಲ್ಲಿ ರಟ್ಟವಂಶದ ಅರಸುಗಳು ಆಳುತ್ತಿದ್ದರೆಂದು ತಿಳಿಯುತ್ತದೆ.[1] ಈ ಆಮರ್ದಕಪುರ ಯಾವುದು ಎಂದು ಖಚಿತವಾಗಿ ತಿಳಿದಿಲ್ಲ. ಬಹುಶಃ ನಾಂದೇಡ್ ಜಿಲ್ಲೆಯ ಸಮೀಪದಲ್ಲಿದ್ದ ಒಂದು ಪ್ರಾಚೀನ ನಗರವಿರಬೇಕು. ಅರ್ಧಾಪುರದ ಶಾಸನದ ಕಾಲ ಕ್ರಿ.ಶ. 1192. ಈಗ ರಾಜನಾಗಿದ್ದ ರಟ್ಟ ರಾಜನ ಹೆಸರು ಬಲ್ಲಾಳ. ಈತನಿಗೆ ಇದ್ದ ಬಿರುದುಗಳಲ್ಲಿ, ಮೈಲುಗಿಮಂಡಲೀಕ ಪ್ರತಿಷ್ಠಾಚಾರ್ಯ, ಯಾದವರಾಜ್ಯಸ್ಥೈರ್ಯಾಚಾರ್ಯ ಎಂಬುವು ಮುಖ್ಯವಾದುವು. [2] ಭಿಲ್ಲಮನ ಹಿಂದಿನವನಾದ ಮೈಲುಗಿಗೆ, ಈ ಬಲ್ಲಾಳನು ಸಹಾಯಮಾಡಿರಬೇಕು. ಮೈಲುಗಿಯ ಕಾಲದಲ್ಲಿ ಸೇವುಣ ರಾಜ್ಯವು ಸ್ಥಿರವಾಗಿರಲಿಲ್ಲವೆಂಬುದನ್ನು ಆಗಲೇ ಗಮನಿಸಿದ್ದೇವೆ. ಅಂತಹ ಸಮಯದಲ್ಲಿ ಬಲ್ಲಾಳನು ಮೈಲುಗಿಗೆ ಸಹಾಯಮಾಡಿ, ಆ ಬಿರುದುಗಳನ್ನು ಧರಿಸಿರಬೇಕು. ಮೈಲುಗಿಯ ಅನಂತರ ಬಲ್ಲಾಳನು ಐದನೆಯ ಭಿಲ್ಲಮನ ಆಶ್ರಯದಲ್ಲಿ ಮಹಾ ಮಂಡಳೇಶ್ವರನಾಗಿದ್ದ ನೆಂಬುದಕ್ಕೆ ಅರ್ಧಾಪುರದ ಶಾಸನವೇ ಸಾಕ್ಷಿ.

ಈ ಶಾಸನದಲ್ಲಿ ಬಲ್ಲಾಳನ ಪೂರ್ವಜರ ಹೆಸರುಗಳು ಉಲ್ಲೇಖಿತವಾಗಿವೆ. ವಿಕ್ರಮಾರ್ಕನು ಇವನ ತಂದೆಯೂ ಮತ್ತು ದೇವಪಾಲನು ಇವನ ಅಜ್ಜನೂ ಆಗಿದ್ದರು. ಬಲ್ಲಾಳನಿಗೆ ಪೊಮ್ಮಲದೇವಿ ಎಂಬ ರಾಣಿಯಿದ್ದಳು. ಈ ವಂಶದ ಇನ್ನೂ ಇತರ ಶಾಸನಗಳು ದೊರೆಯುವವರೆಗೆ ಈ ರಟ್ಟ ವಂಶದ ವಿಚಾರದಲ್ಲಿ ಇನ್ನೇನನ್ನೂ ಹೇಳಲು ಮಾಹಿತಿ ಸಾಲದು.

## ಟಿಪ್ಪಣಿಗಳು

1. **ಮಾಸವಾಡಿಯ ಸೇವುಣರು :**

1 Karnataka Inscriptions, Vol. I, P. 13 ಮತ್ತು SII, Vol. XI, part I, no 22

2 ಅದೇ ನಂ. 62

3 ಅದೇ ನಂ. 66

4 BK 140 of 1933-34

5 SII, Vol. IX, no 99

6 ಅದೇ Vol. IX, Pt i, no. 86

7 ಅದೇ no 92

8 BK 35 of 1929-30

9 497 of 1914

10 BK 45 of 1927-28, 56 of 1928-29

11 BK 69 and 70 of 1927-28

12 ಅದೇ

13 SII, Vol. IX, part I, no. 337

14 Fleet : Dynasties of the Kanarese districts, P 506, Note 2

15 ಅದೇ,

2. **ಹೈಹೇಯರು :**

1. B 256 of 1953-54

2 B 553, 558, 559 of 1960-61

3 B 556 of 1960-61

4 ಅದೇ

5 B 258 of 1953-54

6 B 557 of 1960-61

7 B 379, 380 of 1957-58

3. **ಅರಳು ಮುನ್ನೂರು ಪ್ರಾಂತ್ಯದ ಹೈಹೇಯರು :**

1 B 444 of 1959 - 60

2 B 623 of 1958-59

3 B 439 of 1959-60

4 B 431 of 1959-60 ಮತ್ತು B 505 of 1960-61

5 B 440 of 1959 - 60

6 B 434 of 1959 - 60

7 B 437 of 1959-60

8 ಅದೇ

9 B 432 of 1959-60

10 B 506 of 1960-61

4. **ಗುತ್ತವೊಳಲಿನ ಗುತ್ತರು :**

1 EC, Vol. VII ಶಿಕಾರಿಪುರ 123

2 BK 89 of 1933-34

3 B 135 of 1932-33

4 JBBRAS, Vol, XV, P. 384

5 BK 50 of 1933-34

6 B 437 of 1960-61

7 SII Vol. XX, no. 221

5. ತರ್ದವಾಡಿಯ ಶಿಲಾಹಾರರು :

1 SII, Vol XX, no. 151

2 ಅದೇ, no. 166

3 ಅದೇ, no. 127

4 ಅದೇ, no. 179 ಮತ್ತು BK 58 of 1937-38

5 ಅದೇ, no. 178

6 ಅದೇ, no. 189

7 ಅದೇ, Vol. XV, no 188

6. ಕರಡಿಕಲ್ಲಿನ ಕದಂಬರು :

1 B 714 of 1958-59

2 B 711 of 1958-59

3 B 241 of 1953-54 ಮತ್ತು B 712 of 1958-59

4 B 240 of 1953-54

5 S II, Vol XV, no. 156

7. ನೂರುಂಬಾಡದ ಕದಂಬರು :

1 B 96 of 1951-52

2 B 94 of 1951-52

3 B 95 of 1951-52

8. ಬೆಳಗುತ್ತಿಯ ಸಿಂದರು :

1 EC. Vol XI, HK 23

2 ಅದೇ Dg 114

3 No. 14 of 1948-49 (Kannada Research Institute Report)

4 B 571 of 1958-59

5 EC, Vol. XI, HI 46

6 EC, Vol. VII, ಶಿಕಾರಿಪುರ 315

7 ಅದೇ,

8 B 239, 241, 248 of 1957-58

9 EC, Vol. VII HI 43

10 ಅದೇ HI 55

11 EC, Vol. VIII ಸೊರಬ 209 ಮತ್ತು 295

9 ಸೌಂದತ್ತಿಯ ರಟ್ಟರು

1 JBBRAS, Vol. XII. P. II

2 ಅದೇ,

3 ಅದೇ, Vol XV, P. 384

4 ಕರ್ನಾಟಕ ಸಾಹಿತ್ಯ ಪರಿಷತ್ ಪತ್ರಿಕೆ, ಸಂ. 28, ಪು. 1

5 EI, Vol. XXI, P. 9

10 **ಆಮರ್ದಕಪುರದ ರಟ್ಟರು :**

1 Inscriptions from Nanded District, no 40

2 ಅದೇ, ಪು. 87

3 ಅದೇ ಶ್ಲೋಕ 4 ಮತ್ತು 52 hg. 81

* * *

—

ಅನುಬಂಧ ೪

# ಸೇವುಣರಾಜ್ಯದ ಮುಖ್ಯ ಅಧಿಕಾರಿಗಳು ಮತ್ತು ಮಂತ್ರಿಗಳು

## ಎರಡನೆಯ ಸೇವುಣಚಂದ್ರ

ಸೇವುಣ ರಾಜ್ಯದ ಮಂತ್ರಿಗಳನ್ನು ಹೆಸರಿಸುವ ಮೊಟ್ಟಮೊದಲನೆಯ ಶಾಸನವೆಂದರೆ ಎರಡನೆಯ ಸೇವುಣಚಂದ್ರನ ಬಸೇನ್ ಶಾಸನ. ಈ ಶಾಸನದಲ್ಲಿ ಉಲ್ಲೇಖಿತರಾಗಿರುವ ಮಂತ್ರಿಗಳೆಂದರೆ ದಂಡನಾಯಕ ಶ್ರೀಧರ, ಮಹಾಮಾತ್ಯ ವಾಸುದೇವ, ಮಹಾಪ್ರಧಾನನಾಯಕ ಭಾಭಾಯಿಕ, ಸಂಧಿವಿಗ್ರಹಿ, ಶ್ರೀನಾಯಕ, ಪಟಲಕರಣಿ ಅಪಾಯಿಕ ಮತ್ತು ಮಹತ್ತಮ ಅಮಾದಿತ್ಯ. [1]

ಮೌರ್ಯವಂಶಕ್ಕೆ ಸೇರಿದ ಗೋವಿಂದರಾಜನು ಎರಡನೆಯ ಸೇವುಣಚಂದ್ರನ ಸಾಮಂತನಾಗಿದ್ದನು. ಗೋವಿಂದರಾಜನ ಪೂರ್ವಿಕರು ಸೌರಾಷ್ಟ್ರದವರೆಂದೂ, ಅವರ ರಾಜಧಾನಿಯು ವಲಭಿಯೆಂದೂ ಶಾಸನದಿಂದ ಗೊತ್ತಾಗುತ್ತದೆ. [2] ಗೋವಿಂದರಾಜನ ವಂಶಾವಳಿಯನ್ನು ಈ ಕೆಳಕಂಡಂತೆ ರಚಿಸಬಹುದು

ಕೀಕಟ
|
ತಕ್ಷಕ
|
ಭೀಮ
|
ಸರ್ವಶೂರ
|
ಗೋವಿಂದರಾಜ ೧
|
ಝುಂಝು
|
ದೇವಹಸ್ತಿನ್
|


ಮುಂಜ
|
ಪದ್ಮಕರ
|
ವಪ್ಪಯ್ಯ
|
ಮಗ (ಹೆಸರು ತಿಳಿಯದು)
|
ಸದ್ಧವಸಿಕ
|
ಶಾಂತಿರಾಜ
|
ಪ್ರವರಶುಕ್ರ
|
ಭಾಯಿಲೇಕ
|
ಭೀಮರಾಜ
|
ಗೋವಿಂದರಾಜ

## ಮಲ್ಲುಗಿ

ಸೂಕ್ತಿಮುಕ್ತಾವಳೀ ಗ್ರಂಥದಿಂದ ಮಲ್ಲುಗಿಯಿಂದ ಪ್ರಾರಂಭವಾಗಿ ರಾಮಚಂದ್ರನವರೆಗೆ ಸೇವುಣರಾಜರ ಆಶ್ರಯದಲ್ಲಿದ್ದ ಅಧಿಕಾರಿಗಳ ವಂಶದ ವಿಷಯವು ತಿಳಿದುಬರುತ್ತದೆ. ದಾದ ಎಂಬ ವತ್ಸಗೋತ್ರದ ಬ್ರಾಹ್ಮಣನು ಮಲ್ಲುಗಿಯ ಕರಿವೃಂದನಾಥನಾಗಿದ್ದನು. ಈ ದಾದನು ಮಲ್ಲುಗಿಗೆ ಬಹುವಾಗಿ ಸಹಾಯಮಾಡಿದನೆಂದೂ, ಅದರಲ್ಲಿಯೂ ವಿಜ್ಜಣನ ಸೈನ್ಯವನ್ನು ಸೋಲಿಸುವುದರಲ್ಲಿ ವಿಶೇಷ ಪಾತ್ರವಹಿಸಿದ್ದನೆಂದೂ ಗೊತ್ತಾಗುತ್ತದೆ. ದಾದನಿಗೆ ಮಹೀಧರ, ಜಲ್ಹ, ಸಾಂಬ ಮತ್ತು ಗಂಗಾಧರ ಎಂಬ ನಾಲ್ವರು ಪುತ್ರರಿದ್ದರು. ದಾದನ ಅನಂತರ ಮಹೀಧರನು ಕರಿವೃಂದನಾಥನಾದನು. ಇವನೂ ವಿಜ್ಜಣನ ಮೇಲಿನ ಯುದ್ಧದಲ್ಲಿ ತನ್ನ ಮಗ ಅನಂತನೊಡನೆ ಮಲ್ಲುಗಿಗೆ ಸಹಾಯಮಾಡಿದನು. ಮಹೀಧರನ ಅನಂತರ, ಅವನ ತಮ್ಮನಾದ ಜಲ್ಹನು ಕರಿವೃಂದನಾಥನಾಗಿ ನಿಯಮಿಸಲ್ಪಟ್ಟನು. ಇವನು ಐದನೆಯ ಭಿಲ್ಲಮನ ಕಾಲದಲ್ಲಿಯೂ ಮುಂದುವರಿದನು. ಜಲ್ಹನು ಗೂರ್ಜರ ರಾಜನ

ಮೇಲೆ ಭಿಲ್ಲಮನು ಮಾಡಿದ ಯುದ್ಧದಲ್ಲಿ ವಿಶೇಷ ಧೈರ್ಯದಿಂದ ಹೋರಾಡಿದನು. ಗಂಗಾಧರನ ಮಗನಾದ ಜನಾರ್ದನನು ಸಿಂಘಣನ ಆಶ್ರಯದಲ್ಲಿ ಕರಿವೃಂದನಾಥನಾಗಿದ್ದನು. ಇವನ ಮಗನಾದ ಲಕ್ಷ್ಮೀದೇವನು ಕೃಷ್ಣನ ಆಶ್ರಯದಲ್ಲಿ ಅದೇ ಅಧಿಕಾರದಲ್ಲಿ ಮುಂದುವರಿದನು. ಇವನ ಮಗನೇ ಜಲ್ಹಣ. ಇವನೂ ಕೃಷ್ಣನ ಆಶ್ರಯದಲ್ಲಿ ಕರಿವೃಂದನಾಥನಾಗಿದ್ದನು. ಇವನ ಮೊಮ್ಮಗನಾದ ಅಚ್ಯುತ ನಾಯಕನು ರಾಮಚಂದ್ರನ ಆಶ್ರಯದಲ್ಲಿ ಕ್ರಿ.ಶ. 1272 ರಲ್ಲಿ ಕೊಂಕಣದ ರಾಜ್ಯಪಾಲನಾಗಿದ್ದನು. ಒಟ್ಟಿನಲ್ಲಿ ಈ ವಂಶದವರು ಸುಮಾರು ಒಂದೂವರೆ ಶತಮಾನ ಕಾಲ ಸೇವುಣರಾಜರ ಆಶ್ರಯದಲ್ಲಿ ವಂಶಪಾರಂಪರ್ಯವಾಗಿ ಕರಿವೃಂದನಾಥರಾಗಿದ್ದರು.

ಇವರ ವಂಶವೃಕ್ಷವನ್ನು ಈ ರೀತಿ ರಚಿಸಬಹುದು :




### ಐದನೆಯ ಭಿಲ್ಲಮ

ಕರಡಿಕಲ್ಲು 400 : ಕದಂಬ ವಂಶದ ಮಹಾಮಂಡಳೇಶ್ವರ ಬಿಜ್ಜರಸ (1191)
ಬೆಳ್ವೊಲ 300 : ಮಹಾಮಂಡಳೇಶ್ವರ ಬಾಚಿದೇವರಸ (1189)
ಅಂಕಲ್ಗಿ : ಮೇಲಾಲಿಕೆ ಅಧಿಕಾರಿ ಕುಪ್ಪರಸ (1190)
ಉಸ್ಮಾನಾಬಾದ್ : ಮಹಾಪ್ರಧಾನ ಗಂಡರಯ್ಯ (1184)
ಹಗರ್ತಗೆ 300 : ಮಹಾಮಂಡಳೇಶ್ವರ ವಿರೂಪದೇವರಸ (1187) ಮಹಾಪ್ರಧಾನ

ಲಕ್ಷ್ಮೀದೇವನಾಯಕ ಮತ್ತು ಮಹಾಪ್ರಧಾನ ದೇಸೀಯ ದಂಡನಾಯಕ

ತರ್ದವಾಡಿ : ತಂಬ ಪ್ರಾಂತದಲ್ಲಿ 1189ರಲ್ಲಿ ರಾಜ್ಯಪಾಲರಾದ ಮಹಾಪ್ರಧಾನ ವೈಜರಸ

ಮಹಾಪ್ರಧಾನ ವಾಯಿದೇರಸ

ಸೇಲಾರ ನಾಯಕ ಮಹಾಸಾಮಂತ ಬಂಡರಸ ಮತ್ತು ಗೋನರಸ

ಮಹಾಪ್ರಧಾನ ಮಾಯಿದೇವ ನಾಯಕ

ಮೂವತ್ತಾರುಂಬಾಡದ ರಾಜ್ಯಪಾಲನಾದ ಬೊಪ್ಪಣ್ಣ

ಮಹಾಪ್ರಧಾನ, ಪಟ್ಟಸಾಹನಾಧಿಪತಿ, ಬಾಹತ್ತರನಿಯೋಗಾಧಿಪತಿ

ಪೇಯೀಯ ಸಾಹಣಿ ಮತ್ತು ಮಲ್ಲೇಯ ಸಾಹಣಿ


ಮಹಾಮಂಡಳೇಶ್ವರ ವೀರಬಂಡುಗಿದೇವ

ದಂಡನಾಯಕ ವಿಕ್ರಮಾದಿತ್ಯ

ಐದನೆಯ ಭಿಲ್ಲಮನ ಕೆಳಗೆ ಆನೆಯ ಸೈನ್ಯವನ್ನು ನೋಡಿಕೊಳ್ಳಲು ಖ್ಯಾತ ಸೇನಾನಿ ಜಲ್ಹನಿದ್ದನು. ಇವನು ಗುಜರಾತಿನ ದಂಡಯಾತ್ರೆಯಲ್ಲಿ ಮದಿಸಿದ ಆನೆಯನ್ನು ಶತ್ರುಸೈನ್ಯದಲ್ಲಿ ನುಗ್ಗಿಸಿ ಜಯ ಪಡೆದನೆಂದು ತಿಳಿದಿದೆ. ಇವನು ಮಲ್ಲರು ಮತ್ತು ಮೈಲುಗಿಗೂ ಭಯ ಹುಟ್ಟಿಸಿದನೆಂದು ಹೇಳಿದೆ.

## ಜೈತುಗಿ

ಮಹಾಮಂಡಳೇಶ್ವರ ಸಹದೇವ ದಂಡನಾಥನು ತರ್ದವಾಡಿಯಲ್ಲಿ ರಾಜ್ಯ ಪಾಲನಾಗಿದ್ದನು. ಇವನ ಪೂರ್ವಿಕರು ಕಾಶ್ಮೀರದವರು. ಇವನು ವತ್ಸಗೋತ್ರ ಮತ್ತು ಸಹವಾಸಿಕುಲಕ್ಕೆ ಸೇರಿದವನು. ಜೈತುಗಿಯ ಮನಗೋಳಿ ಶಾಸನದಲ್ಲಿ, ಸಹದೇವನು ಮಾಳ್ವ, ಕಳಿಂಗ ಮುಂತಾದ ದೇಶಗಳ ರಾಜರುಗಳನ್ನು ಸೋಲಿಸಿದ ನೆಂದು ಹೇಳಿದೆ.[3] ಸಹದೇವನು ಸಿಂಘಣನ ಕಾಲದಲ್ಲಿಯೂ ತರ್ದವಾಡಿಯ ರಾಜ್ಯಪಾಲನಾಗಿ ಮುಂದುವರಿದನು. ಸಹದೇವನ ವಂಶವೃಕ್ಷವು ಹೀಗಿದೆ :



ಲಕ್ಷ್ಮೀಧರನು ಜೈತುಗಿಯ ಆಸ್ಥಾನದಲ್ಲಿ ವಿಭುದಾಗ್ರಣಿಯಾಗಿದ್ದನು. ಇವನು ಖ್ಯಾತ ಖಗೋಳಶಾಸ್ತ್ರಜ್ಞ ಭಾಸ್ಕರಚಾರ್ಯನ ಮಗನು. ಲಕ್ಷ್ಮೀಧರನು ಶಾಂಡಿಲ್ಯ ಗೋತ್ರಕ್ಕೆ ಸೇರಿದವನು. ಇವನ ಮಗನಾದ ಚಂಗದೇವನು ಸಿಂಘಣನ ಪ್ರಧಾನ ಜ್ಯೋತಿಷಿಯಾಗಿದ್ದನು. ಶಾಸನಗಳಿಂದ ಲಕ್ಷ್ಮೀಧರನ ವಂಶವೃಕ್ಷವನ್ನು ಹೀಗೆ ರಚಿಸಬಹುದು: [4]

ತ್ರಿವಿಕ್ರಮ ಕವಿಚಕ್ರವರ್ತಿ
|
ಭಾಸ್ಕರಾಚಾರ್ಯ ವಿದ್ಯಾಪತಿ
|
ಗೋವಿಂದ
|
ಪ್ರಭಾಕರ
|
ಮನೋರಥ
|
ಮಹೇಶ್ವರಾಚಾರ್ಯ
|
ಭಾಸ್ಕರಾಚಾರ್ಯ
|
ಲಕ್ಷ್ಮೀಧರ
|
ಚಂಗದೇವ

**ಸಿಂಘಣ**

ಸಿಂಘಣನ ಆಶ್ರಯದಲ್ಲಿ ಅನೇಕ ಉತ್ತಮ ವರ್ಗದ ಮಂತ್ರಿಗಳು ಮತ್ತು ಅಧಿಕಾರಿಗಳು ಇದ್ದು ಸಿಂಘಣನ ರಾಜ್ಯ ಬೆಳೆಯಲು ಅನುಕೂಲರಾದರು. ಇವರುಗಳ ಸಹಾಯವಿಲ್ಲದೇ ಹೋಗಿದ್ದರೆ ಸಿಂಘಣನು ಅಷ್ಟೊಂದು ಬಲಯುತವಾದ ಸಾಮ್ರಾಜ್ಯವನ್ನು ಸ್ಥಾಪಿಸುವುದು ಅಸಾಧ್ಯವಾಗುತ್ತಿದ್ದಿತು. ಖೋಲೇಶ್ವರನು ಸಿಂಘಣನ ಮಂತ್ರಿಗಳಲ್ಲಿ ಅತ್ಯಂತ ಮುಖ್ಯನಾದವನು. ಉತ್ತರ ಭಾರತದ ಮೇಲೆ ಸಿಂಘಣನು ನಡೆಸಿದ ದಂಡಯಾತ್ರೆಗಳೆಲ್ಲವುಗಳಲ್ಲಿಯೂ ಖೋಲೇಶ್ವರನು ಭಾಗವಹಿಸಿದ್ದನು. ಅಂಬೆಜೋಗೈ ಶಾಸನದಿಂದ ಖೋಲೇಶ್ವರನ ಸಾಧನೆಗಳು ವಿಶೇಷವಾಗಿ ತಿಳಿದುಬರುತ್ತವೆ.[5] ಖೋಲೇಶ್ವರನು ಬ್ರಾಹ್ಮಣ ಮತದವನು. ಇವನ

ತಂದೆಯಾದ ತ್ರಿವಿಕ್ರಮನು ಮೌದ್ಗಲ್ಯ ಗೋತ್ರದವನು. ತಾಯಿಯಾದ ಚಂದ್ರಾ ಕಾಶ್ಯಪ ಗೋತ್ರದವಳು.

ಈ ಶಾಸನದಲ್ಲಿ ಖೋಲೇಶ್ವರನ ತಂದೆ - ತಾಯಿಗಳ, ಪೂರ್ವಿಕರ ವಿಚಾರವು ಹೇಳಲ್ಪಟ್ಟಿದೆ.

| <u>ತಂದೆಯ ಕಡೆ</u> | <u>ತಾಯಿಯ ಕಡೆ</u> |
|---|---|
| ಭಾಯಿದೇವ | ಗೋವಿಂದ |
| ಸ್ವಾಮಿದೇವ | ವಾಸುದೇವ |
| ತ್ರಿವಿಕ್ರಮ | ನಿಂಬದೇವ |
| ಖೋಲೇಶ್ವರ | ಚಂದ್ರಾ (ಖೋಲೇಶ್ವರನ ತಾಯಿ) |
| ರಾಮ ಲಕ್ಷ್ಮಿ | |

ಅಂಬೆಜೋಗೈ ಶಾಸನದಲ್ಲಿ ಖೋಲೇಶ್ವರನು ಸಾಧಿಸಿದ ವಿಜಯಗಳು ಹೇಳಲ್ಪಟ್ಟಿವೆ. 'ಇವನು ಗೂರ್ಜರರನ್ನು ಹೊಡೆದೋಡಿಸಿದನು: ಚಾಹಂದದ ಭೋಜನನ್ನು ಸೋಲಿಸಿದನು ; ಹೆಮ್ಮಾಡಿಯನ್ನು ಅವಮಾನಿಸಿದನು ; ಕಾಶಿಯ ರಾಮಪಾಲನನ್ನು ಹೆದರಿಸಿದನು ; ಲಕ್ಷ್ಮೀದೇವನ ಕುಲವನ್ನೇ ನಾಶ ಮಾಡಿದನು; ದೇವಪಾಲನನ್ನು ಅವಮಾನಿಸಿದನು ; ರಟ್ಟಪತಿ ಕರುವೇಮನಿಂದ ಪೀಡಿತನಾದ ದಕ್ಷಿಣಾಪಥದ ರಾಜನಿಗೆ ಸಹಾಯಮಾಡಿದನು ; ನಾಯಕನನ್ನು ಕೊಂದು ತೊರಗಲೆ ಕೋಟೆಯನ್ನು ವಶಪಡಿಸಿಕೊಂಡನು ; ಅಚಲಪುರದಲ್ಲಿ ವಿಷ್ಣುವಿಗೋಸ್ಕರ ಒಂದು ದೇವಾಲಯವನ್ನು ಕಟ್ಟಿಸಿದನು ಮತ್ತು ಕೊಲ್ಲಾಪುರವನ್ನು ಸ್ಥಾಪಿಸಿದನು.' ಸಿಂಘಣನ ವಿಜಯಗಳನ್ನು ಪರಿಶೀಲಿಸುವಾಗ ಈ ಎಲ್ಲ ವಿಜಯಗಳನ್ನೂ ಆಗಲೇ ನಾವು ಗಮನಿಸಿದ್ದೇವೆ.

ಖೋಲೇಶ್ವರನ ಮಗನಾದ ರಾಮನೂ ತನ್ನ ತಂದೆಯಷ್ಟೇ ಶೂರನೂ ಧೀರನೂ ಆಗಿದ್ದನು. ತನ್ನ ತಂದೆಯ ಮರಣಾನಂತರ ಉತ್ತರಾಪಥಕ್ಕೆ ಅವನು ರಾಜ್ಯಪಾಲನಾದನು. ಸಿಂಘಣನು ಕ್ರಿ.ಶ. 1240ರ ಸಮಯಕ್ಕೆ ಗುಜರಾತಿನ ಮೇಲೆ ನಡೆಸಿದ ದಾಳಿಯಲ್ಲಿ ರಾಮನು ಸೈನ್ಯಾಧಿಪತಿಯಾಗಿದ್ದನು. ಇವನು ಜಯಶಾಲಿ ಯಾದರೂ, ಯುದ್ಧದಲ್ಲಿ ಮರಣಹೊಂದಿದನು. ಇವನ ಸಹೋದರಿಯಾದ ಲಕ್ಷ್ಮಿಯು ಇವನ ಹೆಸರಿನಲ್ಲಿ ರಾಮನಾರಾಯಣ ಎಂಬ ದೇವಾಲಯವನ್ನು ಕಟ್ಟಿಸಿದಳು. [6]


ಹರದೇವ ಮತ್ತು ಮಹಾದೇವ ಎಂಬ ಇಬ್ಬರು ಸಹೋದರರು ಸೇವುಣದೇಶದಲ್ಲಿ ರಾಜ್ಯಪಾಲರಾಗಿದ್ದರು. [7] ಇವರು ಯಾವ ವಂಶದವರು ಎಂಬುದು ತಿಳಿದಿಲ್ಲ. ಇವರು ಆತ್ರೇಯಗೋತ್ರದ ಬ್ರಾಹ್ಮಣರು. ಇವರಿಬ್ಬರೂ ವೈಜುನಾಯಕನ ಆಶ್ರಯದಲ್ಲಿದ್ದರು. ಇವರ ವಂಶಾವಳಿಯನ್ನು ಈ ಕೆಳಗೆ ಕಂಡಂತೆ ರಚಿಸಬಹುದು:

ಪ್ರಭುವರಸ
|
ಅಭ್ರಶ್ಯಾಮ
|
ಜಗದೇವಪ್ರಭು
|
ಸಿದ್ಧಿಪ್ರಭು
|
ವೈದ್ಯನಾಥ
|
ದೇವಲ
|
ಹರದೇವ ಮಹಾದೇವ

ಕರಡಿಕಲ್ ಪ್ರಾಂತ್ಯವು ಕ್ರಿ.ಶ. 1207ರವರೆಗೆ ಕದಂಬ ವಂಶದ ಅರಸುಗಳ ಆಳ್ವಿಕೆಗೆ ಒಳಪಟ್ಟಿದ್ದಿತು. ಅನಂತರ ಲಕ್ಷ್ಮೀದೇವನು ಅದರ ರಾಜ್ಯಪಾಲನಾಗಿ ನಿಯಮಿತನಾದನು. [8] ಸುಮಾರು ಕ್ರಿ.ಶ. 1210ರ ಸಮಯಕ್ಕೆ ಲಕ್ಷ್ಮೀದೇವನು ಇನ್ನೂ ದೊಡ್ಡ ಪ್ರಾಂತ್ಯದ ಅಧಿಕಾರಿಯಾಗಿ ನೇಮಿಸಲ್ಪಟ್ಟನು. ನರಸಿಂಹರಾವುತನು ಕರಡಿಕಲ್ಲಿನ ಅಧಿಕಾರಿಯಾದನು. ಸುಮಾರು ಕ್ರಿ.ಶ.1215ರ ಹೊತ್ತಿಗೆ ದಾಮೋದರನು ಕರಡಿಕಲ್ಲಿನ ರಾಜ್ಯಪಾಲನಾದನು.

ಬನವಾಸಿನಾಡನ್ನು ಆಳಲು ಸಿಂಘಣನು ಅನೇಕ ರಾಜ್ಯಪಾಲರುಗಳನ್ನು ನೇಮಿಸಿದ್ದನು. ಕ್ರಿ.ಶ.1215ರಲ್ಲಿ ಮಾಯಿದೇವ ಪಂಡಿತನು ಬನವಾಸಿಯ ಮೇಲಾಲಿಕೆ ಅಧಿಕಾರಿಯಾಗಿದ್ದನು. ಇವನು ಕದಂಬರ ಮೇಲಿನ ಯುದ್ಧಗಳಲ್ಲಿ ವಿಶೇಷ ಪಾತ್ರವಹಿಸಿದ್ದನು. ಹೊಯ್ಸಳರ ಮೇಲೆ ಯುದ್ಧ ಮಾಡಿ ಸಿಂದರನ್ನು ಪ್ರೇರೇಪಿಸಿ ಅವರ ಸಹಾಯವನ್ನು ಪಡೆದವನೂ ಮಾಯಿದೇವ. 1219ರಲ್ಲಿ ಸಿಂಗಣದೇವನು ಬನವಾಸಿಯ ರಾಜ್ಯಪಾಲನಾದನು. 1222ರಲ್ಲಿ ವಂಕರಾವುತನು ಬನವಾಸಿಯ ರಾಜ್ಯಪಾಲನಾದನು. 1232ರಲ್ಲಿ ಹೊನ್ನಬೊಮ್ಮಿಸೆಟ್ಟಿಯು

ಬನವಾಸಿಯ ರಾಜ್ಯಪಾಲನಾಗಿದ್ದನು. ಇವನು ಸಿಂದ ಮಹಾಮಂಡಳೇಶ್ವರ ಕೇಶವದೇವನನ್ನು ಸೋಲಿಸಿದನು. ಮೂರು ವರ್ಷಗಳ ಅನಂತರ ಅಂದರೆ ಕ್ರಿ.ಶ. 1235ರಲ್ಲಿ ಮಹಾ ಪ್ರಧಾನ ಮಲ್ಲಿಸೆಟ್ಟಿಯು ಬೆಳ್ವೊಲ, ಬನವಾಸಿ ಮತ್ತು ಪುಲಿಗೆರೆಗಳ ರಾಜ್ಯಪಾಲನಾಗಿದ್ದನೆಂದು ಗೊತ್ತಾಗುತ್ತದೆ. [8] ಈ ಮಲ್ಲಿಸೆಟ್ಟಿಯು ಗೌರವಾನ್ವಿತ ವಂಶಕ್ಕೆ ಸೇರಿದವನಾಗಿದ್ದನು. ಈ ಸೆಟ್ಟಿಗಳ ವಂಶದಲ್ಲಿ ಅನೇಕರು ಸೇವುಣರ ಮುಖ್ಯ ಅಧಿಕಾರಿಗಳಾಗಿ ಪ್ರಸಿದ್ಧಿ ಹೊಂದಿದರು. ದೊರಕಿರುವ ಶಾಸನಗಳಿಂದ ಇವರ ವಂಶವೃಕ್ಷವನ್ನು ಈ ರೀತಿ ರಚಿಸಬಹುದು :




ಈ ವಂಶದವರಲ್ಲಿ ಬೀಚಣನು ಸಿಂಘಣನ ಅತ್ಯಂತ ಮುಖ್ಯ ರಾಜರುಗಳಲ್ಲಿ ಒಬ್ಬನಾಗಿದ್ದನು. ಇವನು ಸಿಂಘಣನ ರಾಜ್ಯದ ದಕ್ಷಿಣಕ್ಷೋಣೀರಾಯನಾಗಿದ್ದನು. ಇವನು ರಟ್ಟರನ್ನು, ಕಂದಬರನ್ನು, ಹೊಯ್ಸಳರನ್ನು ಮತ್ತು ಗುತ್ತಿಯ ಪಾಂಡ್ಯರನ್ನು ಸೋಲಿಸಿದನು. ಸಿಂಘಣನು ಹೊಯ್ಸಳರ ಮೇಲೆ ಸಾಧಿಸಿದ ವಿಜಯಗಳಿಗೆ ಇವನೇ ಮುಖ್ಯ ಕಾರಣವೆಂದರೆ ಅದು ಅತಿಶಯೋಕ್ತಿಯಲ್ಲ. ಇವನು ಕಾವೇರಿಯ ತೀರದವರೆಗೂ ಹೋಗಿ ಅಲ್ಲೊಂದು ವಿಜಯಸ್ತಂಭವನ್ನು ಸ್ಥಾಪಿಸಿದನೆಂದು ಶಾಸನಗಳಲ್ಲಿ ಹೇಳಿದೆ. [10]

ಬೀಚಣನ ಅಣ್ಣನಾದ ಮಲ್ಲಿಸೆಟ್ಟಿಯೂ ಮಂತ್ರಿಯಾಗಿದ್ದನು. ಬನವಾಸಿಯ ರಾಜ್ಯಪಾಲನಾಗುವುದಕ್ಕೆ ಮುಂಚೆ ಇವನು ಸಣ್ಣ ಸಣ್ಣ ಪ್ರಾಂತಗಳ ಅಧಿಕಾರಿಯಾಗಿದ್ದನು. ಕ್ರಿ.ಶ. 1235ರ ಶಾಸನವೊಂದರಲ್ಲಿ ಮಲ್ಲಿಸೆಟ್ಟಿಯು ಮಹಾಸಾಮಂತಾಧಿಪ,

ಮಹಾಪ್ರಧಾನ ಮತ್ತು ಮಹಾಮಾತ್ಯ ಎಂದು ಉಲ್ಲೇಖಿತನಾಗಿದ್ದಾನೆ.[11] ಬೀಚಿಸೆಟ್ಟಿಯ ಅಳಿಯನಾದ ಮಲ್ಲಿಸೆಟ್ಟಿಯೂ ಬೆಳ್ವೊಲದ ರಾಜ್ಯಪಾಲನಾಗಿದ್ದನು. ಬೀಚಿಸೆಟ್ಟಿಗೆ ರಾಜಲದೇವಿ ಮತ್ತು ಚಿಕ್ಕಾಂಬಾ ಎಂಬ ಇಬ್ಬರು ಹೆಣ್ಣು ಮಕ್ಕಳು ಮಾತ್ರವಿದ್ದುದರಿಂದ, ಪಾಯಿಸೆಟ್ಟಿ ಎಂಬುವನನ್ನು ದತ್ತು ತೆಗೆದು ಕೊಂಡನು. ಈ ಪಾಯಿಸೆಟ್ಟಿಯು ಮಹಾಪ್ರಧಾನನಾಗಿ ಹಗರ್ತಗೆ ನಾಡಿನ ರಾಜ್ಯಪಾಲನಾಗಿದ್ದನು.[12]

ಜೈತುಗಿಯ ಆಶ್ರಯದಲ್ಲಿ ತರ್ದವಾಡಿಯ ರಾಜ್ಯಪಾಲನಾಗಿದ್ದ ಮಹಾಪ್ರಧಾನ ಸಹದೇವನು ಸಿಂಘಣನ ಕಾಲದಲ್ಲಿ ಅದೇ ಅಧಿಕಾರದಲ್ಲಿ ಮುಂದುವರಿದನು. ಇವನು ಹೇಡ ಮತ್ತು ಕನ್ನಂಬಾಡೆ ಪ್ರಾಂತಗಳಿಗೂ ರಾಜ್ಯಪಾಲನಾಗಿದ್ದನು. [13] 1208ರ ಸಮಯಕ್ಕೆ ಕಪಿಲದೇವ ದಂಡನಾಯಕನು ತರ್ದವಾಡಿಯ ರಾಜ್ಯಪಾಲನಾದನು. 1222ರಲ್ಲಿ ಮಹಾಪ್ರಧಾನ ಮಲ್ಲಿದೇವನು ಅದೇ ಪ್ರಾಂತದ ಅಧಿಕಾರಿಯಾಗಿ ನಿಯಮಿತನಾದನು.[14] 1234ರಲ್ಲಿ ತಿಕ್ಕರಸನೆಂಬುವನು ಆಡಳಿತಾಧಿಕಾರಿಯಾಗಿದ್ದನೆಂದು ಗೊತ್ತಾಗುತ್ತದೆ. [15] 1244 ರಲ್ಲಿ ಭಾಗುಬಾಯಿ, ಅನಂತರ ಖಿನ್ನುವ ಪಂಡಿತ ತರ್ದವಾಡಿಯ ಆಡಳಿತಾಧಿಕಾರಿಗಳಾಗಿದ್ದರು. [16]

**ಕೃಷ್ಣ**

ಸಿಂಘಣನ ಕಾಲದಲ್ಲಿ ಬನವಾಸಿಯ ಆಡಳಿತಾಧಿಕಾರಿಯಾಗಿದ್ದ ಮಲ್ಲಿಸೆಟ್ಟಿಯ ಮಗನಾದ ಚಾವುಂಡಸೆಟ್ಟಿಯು, ಕೃಷ್ಣನ ಕಾಲದಲ್ಲಿ ತರ್ದವಾಡಿಯ ರಾಜ್ಯಪಾಲ ನಾಗಿದ್ದನು. ಇವನ ತಂದೆ ಮಲ್ಲಿಸೆಟ್ಟಿ ಮತ್ತು ಚಿಕ್ಕಪ್ಪ ಬೀಚಿಸೆಟ್ಟಿ ಕೃಷ್ಣನ ಆಳ್ವಿಕೆಯ ಮೊದಲ ವರ್ಷಗಳಲ್ಲಿ ಪ್ರಭಾವಿತ ವ್ಯಕ್ತಿಗಳಾಗಿ ಮುಂದುವರಿದರು. ಸುಮಾರು ಕ್ರಿ.ಶ. 1251ರ ಹೊತ್ತಿಗೆ ಚಾವುಂಡಸೆಟ್ಟಿಯು ಬೆಳ್ವೊಲ, ಬನವಾಸಿ, ಹಾನುಂಗಲ್ಲು, ಪಾಂಡ್ಯನಾಡು ಮತ್ತು ತರ್ದವಾಡಿ ಪ್ರಾಂತಗಳ ಅಧಿಕಾರಿಯಾಗಿದ್ದನು. ಇವನು ಹೊಯ್ಸಳರನ್ನೂ ರಟ್ಟರನ್ನೂ ಸೋಲಿಸಿದನು. ಇವನು ಕೃಷ್ಣನ ಬಲಗೈ ಎಂದು ವರ್ಣಿತನಾಗಿದ್ದಾನೆ.[17] ಸ್ವಲ್ಪ ಕಾಲಾನಂತರ ಮಹಾದೇವರಾಯನೆಂಬುವನು ತರ್ದವಾಡಿ ಮತ್ತು ಕನ್ನಂಬಾಡೆ ಪ್ರಾಂತಗಳ ಅಧಿಕಾರಿಯಾದನು.

ಚಂದ್ರದೇವ ಮತ್ತು ಕೇಶವದೇವ ಎಂಬ ಇಬ್ಬರು ಸಹೋದರರು ಸತಾರ ಜಿಲ್ಲೆಯ ಶಾಸನಗಳಿಂದ ಬೆಳಕಿಗೆ ಬಂದಿದ್ದಾರೆ. [18] ಅವರು ಗೂರ್ಜರ ದೇಶದಿಂದ ಇಲ್ಲಿಗೆ ಬಂದ ಬ್ರಾಹ್ಮಣರ ವಂಶಸ್ಥರು. ಅವರ ವಂಶಸ್ಥರ ವಿವರ ಹೀಗಿದೆ.

ಶತಾನಂದ

|

ಶ್ರಿಯಾನಂದ

|

ಜಲ್ಹಣಪಂಡಿತ

(ಪತ್ನಿ-ಕುಮಾರದೇವಿ)

ಚಂದ್ರದೇವ ಕೇಶವದೇವ

ಚಂದ್ರದೇವ ಮತ್ತು ಕೇಶವದೇವ, ಇವರು ಸಾಮಂತರತ್ನಗಳು ಎಂದು ಉಲ್ಲೇಖಿತರಾಗಿದ್ದಾರೆ. ಈ ಇಬ್ಬರೂ ಕೊಂಕಣ ರಾಜ್ಯದ ಮೇಲೆ ಯುದ್ಧಗಳನ್ನು ಮಾಡಿದರು.

## ಮಹಾದೇವ

ಕೃಷ್ಣನ ಆಳ್ವಿಕೆಯಲ್ಲಿ ಮಂತ್ರಿಗಳಾಗಿದ್ದ ಮಹಾಪ್ರಧಾನ ಕೂಚರಸ ಮತ್ತು ಚಟ್ಟರಸ, ಮಹಾದೇವನ ಆಳ್ವಿಕೆಯಲ್ಲಿಯೂ ಮುಂದುವರಿದರು. ಇವರು ನೊಳಂಬವಾಡಿ ಪ್ರಾಂತದ ಆಡಳಿತಾಧಿಕಾರಿಗಳಾಗಿದ್ದರು. [19] ಶಾಸನಗಳಿಂದ ಇವರ ವಂಶವೃಕ್ಷವನ್ನು ತಿಳಿಯಬಹುದು :

ಸಿಂಹಿರಾಜ

| (ಪತ್ನಿ-ಮಲ್ಲಾಂಬಿಕಾ)

ಕೂಚರಸ ಚಟ್ಟರಸ

| |

ವನದೇವರಸ ಚಾವುಂಡ

ಮಹಾದೇವನ ಆಳ್ವಿಕೆಯಲ್ಲಿ ಬನವಾಸಿಯ ರಾಜ್ಯಪಾಲರುಗಳಲ್ಲಿ ಮುಖ್ಯನಾದವನು ಮಹಾಪ್ರಧಾನ ಸರ್ವಾಧಿಕಾರಿ ದೇವರಾಜ. ಮಹಾದೇವನ ಸಂಗೂರು ಶಾಸನದಿಂದ ಇವನ ವಿಚಾರಗಳು ತಿಳಿಯುತ್ತವೆ. [20] ದೇವರಾಜನ ತಾತನು ಚಾವುಂಡರಸ; ಅವನ ತಂದೆ ಅಮಿತರಸ. ದೇವರಾಜನು ಮಹಾದೇವನ ರಾಜ್ಯದ ದಕ್ಷಿಣಭಾಗಕ್ಕೆ ಆಡಳಿತಾಧಿಕಾರಿಯಾಗಿದ್ದನು. ಇವನು ಸೊನ್ನಲಿಗೆಯ ಕಪಿಲಸಿದ್ಧ ಮಲ್ಲಿಕಾರ್ಜುನನ ಭಕ್ತನಾಗಿದ್ದನು.

ಹೇಮಾದ್ರಿಯು ಮಹಾದೇವನ ಸಮಸ್ತಕರಣಾಧೀಶ್ವರನಾಗಿದ್ದನು. ಇವನ ವಿಚಾರವನ್ನು ನಾವು ಆಗಲೇ ಗಮನಿಸಿದ್ದೇವೆ. ಇವನು ರಾಮಚಂದ್ರನ ಕಾಲದಲ್ಲಿಯೂ ಮುಂದುವರಿದನು.

### ರಾಮಚಂದ್ರ

ರಾಮಚಂದ್ರನ ಅಧಿಕಾರಿಗಳಲ್ಲಿ ಮುಖ್ಯನಾದವನು ಸಾಳುವ ತಿಕ್ಕಮ. ಇವನು ಹೊಯ್ಸಳರ ಮೇಲೆ ಯುದ್ಧವನ್ನು ಮಾಡಿದನು. ಇವನ ಶಾಸನಗಳಲ್ಲಿ ಇವನೇ ಜಯಶಾಲಿಯಾದನೆಂದು ಹೇಳಿದೆ. ಇವನು ಸಾಂತರ ರಾಜ ಬೊಮ್ಮರಸನ ಮೇಲೂ ವಿಜಯವನ್ನು ಸಂಪಾದಿಸಿದನು. ಇವನು ತನ್ನ ವಿಜಯಗಳ ಜ್ಞಾಪಕಾರ್ಥವಾಗಿ ಹರಹರದಲ್ಲಿ ಸೇವುಣ ಮಹಾದೇವನ ಹೆಸರಿನಲ್ಲಿ ಲಕ್ಷ್ಮೀನಾರಾಯಣ ದೇವಾಲಯವನ್ನು ಸ್ಥಾಪಿಸಿದನು. [21]

ಕನ್ನೇರಿ ದೇಶವೆಂಬ ಪ್ರಾಂತದಲ್ಲಿ ಪುರುಷೋತ್ತಮನು ರಾಜ್ಯಪಾಲನಾಗಿದ್ದನು. ಪುರುಷೋತ್ತಮಪುರಿ ಶಾಸನದಿಂದ ಇವನ ವಿವರಗಳು ತಿಳಿಯುತ್ತವೆ. [22] ಇವನ ತಂದೆ ಸಂವಲದೇವ, ತಾಯಿ ಅಕ್ಕಾಂಬಿಕಾ. ಪುರುಷೋತ್ತಮನ ಕಾರ್ಯದಕ್ಷತೆಯನ್ನು ಮೆಚ್ಚಿ ರಾಜನಾದ ರಾಮಚಂದ್ರನು ಇವನ ಹೆಸರಿನಲ್ಲಿ ಒಂದು ಅಗ್ರಹಾರವನ್ನು ಸ್ಥಾಪಿಸಿದನು.

ಈ ಮೇಲೆ ಹೆಸರಿಸಿರುವ ಮಂತ್ರಿಗಳು ಮತ್ತು ಅಧಿಕಾರಿಗಳ ವಿಷಯದಲ್ಲಿ ಶಾಸನಗಳಿಂದ ಮಾಹಿತಿಗಳು ದೊರಕುತ್ತವೆ. ಇವರು ಮಾತ್ರವಲ್ಲದೆ, ಇನ್ನೂ ಅನೇಕ ಮುಖ್ಯಾಧಿಕಾರಿಗಳು ಸೇವುಣ ರಾಜರ ಆಶ್ರಯದಲ್ಲಿದ್ದರು. ಆದರೆ ಅವರುಗಳ ವಿಷಯದಲ್ಲಿ ಅವರ ಹೆಸರುಗಳನ್ನು ಬಿಟ್ಟರೆ ನಮಗೆ ಏನೂ ತಿಳಿಯದು. ವಿವರಗಳು ತಿಳಿದಿರುವ ಮಂತ್ರಿಗಳನ್ನೂ ಅಧಿಕಾರಿಗಳನ್ನೂ ಮಾತ್ರ ಇಲ್ಲಿ ಗಮನಿಸಲಾಗಿದೆ.

### ಟಿಪ್ಪಣಿಗಳು

1 IA, Vol. XII, P. 119

2 EI, Vol. II. P. 221

3 ಅದೇ, Vol. V, P. 28

4 SII, Vol. IX, Pti. No. 367

5 SMHD, Vol. I. P. 55

6 112 of 1952-53

7 EI, Vol. XXXVI, P. 19

8 BK 51 of 12928-29

9 81 of 1952-53

10 JBBRAS, Vol. XV, P. 383
11 81 of 1952-53
12 474 of 1959-60
13 SII, Vol. XV, no. 155
14 ಅದೇ, 156
15 BK 122 of 1933-34
16 BK 144 of 1933-34 ಮತ್ತು BK 97 o 1940-41
17 IA, Vol. XIV, P. 68
18 EI, Vol XXVII, P. 208
19 EC, Vol. XI, Dg 87 ಮತ್ತು 97
20 EI, Vol. XXII, P. 189
21 EC, Vol. XI, Dg. 59
22 EI, Vol. XXIII, P. 281

* * *

ಅನುಬಂಧ ೫

# ಸೇವುಣ ರಾಜ್ಯದ ಕೆಲವು ಪ್ರಾಂತಗಳು

1 **ಆಮ್ರದೇಶ :** ಇದು ಈಗಿನ ಉಸ್ಮಾನಾಬಾದ್ ಜಿಲ್ಲೆಯ ಮೊಮೀನಾಬಾದ್‌ನ ಸುತ್ತಮುತ್ತಲ ಪ್ರದೇಶಗಳನ್ನು ಒಳಗೊಂಡಿದ್ದಿತು.

2 **ಅಂಕಲ್ಗಿ 80:** ಈಗಿನ ಅಕ್ಕಲಕೋಟೆಯ ಸುತ್ತಮುತ್ತಲ ಭಾಗ.

3 **ಅರಳು 300:** ಈ ಪ್ರಾಂತ್ಯವು ಗುಲ್ಬರ್ಗ ಜಿಲ್ಲೆಯ ಸೇಡಂ ಮತ್ತು ಚಿತಾಪುರ ತಾಲೂಕುಗಳ ಪ್ರದೇಶಗಳನ್ನು ಒಳಗೊಂಡಿದ್ದಿತು. ಅರಳು ಎಂಬುದು ಸೇಡಂ ತಾಲ್ಲೂಕಿನ ಅರಳೂರು ಎಂದು ಕರೆಯಲ್ಪಡುವ ಗ್ರಾಮ.

4 **ಅತ್ತಿನೂರು 80:** ಈಗಿನ ಗುಲ್ಬರ್ಗ ಜಿಲ್ಲೆಯ ಅಫ್‌ಜಲಪುರ ತಾಲೂಕಿನ ಅತ್ನೂರು ಗ್ರಾಮದ ಸುತ್ತಮುತ್ತಲ ಪ್ರದೇಶ

5 **ಎಡೆನಾಡು 70:** ಬನವಾಸಿಗೆ ಈಶಾನ್ಯ ದಿಕ್ಕಿಗಿರುವ ಪ್ರದೇಶ

6 **ಎಡೆದೊರೆನಾಡು :** ಈಗಿನ ರಾಯಚೂರು ಜಿಲ್ಲೆಯ ಲಿಂಗಸುಗೂರು, ಮಾನ್ವಿ ತಾಲೂಕುಗಳ ಪ್ರದೇಶಗಳನ್ನು ಒಳಗೊಂಡ ಪ್ರಾಂತ್ಯ.

7 **ಕನ್ನಂಬಾಡೆ :** ಫ್ಲೀಟ್‌ರವರು ಈ ಪ್ರಾಂತ್ಯವನ್ನು ಬಿಜಾಪುರ ತಾಲೂಕಿನ ತೆಲ್‌ಸಾಂಗ್ ಗ್ರಾಮಕ್ಕೆ ಈಶಾನ್ಯಕ್ಕಿರುವ ಕನ್ಮಡಿ ಎಂದು ಗುರುತಿಸಿದ್ದಾರೆ. ಇದು ಅಥಣಿ ತಾಲ್ಲೂಕಿನ ಕೆಲವು ಭಾಗಗಳನ್ನು ಒಳಗೊಂಡಿದ್ದಿತು. ಕನ್ನಂಬಾಡೆ ಪ್ರಾಂತ್ಯವು ಕರಹಡ 4000 ಎಂಬ ಪ್ರಾಂತ್ಯದ ಭಾಗವಾಗಿದ್ದಿತೆಂದು ಶಾಸನಗಳಿಂದ ತಿಳಿದುಬರುತ್ತದೆ.

8 **ಕನ್ನಡ 4000 :** ಇದರ ನಿರ್ದಿಷ್ಟವಾದ ವ್ಯಾಪ್ತಿ ತಿಳಿದಿಲ್ಲ. ಬಹುಶಃ ಕುಂತಳ ರಾಜ್ಯಕ್ಕೆ ಸಮಾನ ಪದವಿರಬೇಕೆಂದು ಕೆಲವರ ಊಹೆ.

9 **ಕರಡಿಕಲ್ 300:** ಇದು ರಾಯಚೂರು ಜಿಲ್ಲೆಯ ಲಿಂಗಸುಗೂರ್ ತಾಲ್ಲೂಕಿನ ಬಹು ಭಾಗಗಳನ್ನು ಒಳಗೊಂಡಿದ್ದಿತು. ಇದು ಎಡೆದೊರೆ ನಾಡು ಎಂಬ ಪ್ರಾಂತ್ಯದ ಭಾಗವಾಗಿದ್ದಿತು.

10 **ಕರಹಡ 4000 :** ಶಿಲಾಹಾರರು ಆಳುತ್ತಿದ್ದ ಪ್ರಾಚೀನ ಪ್ರಾಂತ್ಯ. ಈ ಪ್ರಾಂತ್ಯದ ಮುಖ್ಯನಗರವೇ ಕರಹಟ. ಈಗಿನ ಸತಾರ ಜಿಲ್ಲೆಯ ಕರಾಡ್ ತಾಲ್ಲೂಕಿನ ಬಹು ಭಾಗಗಳನ್ನು ಒಳಗೊಂಡಿದ್ದಿತು.

11 **ಕರ್ಣಾಟ ವಿಷಯ :** ನಿರ್ದಿಷ್ಟವಾದ ವ್ಯಾಪ್ತಿ ತಿಳಿದಿಲ್ಲವಾದರೂ, ಸಾಮಾನ್ಯವಾಗಿ ಕರ್ಣಾಟಕವನ್ನು ಕುರಿತು ಶಾಸನಗಳಲ್ಲಿ ಉಪಯೋಗಿಸಲಾಗಿದೆ. ಕೆಲವು ಸಾರಿ ಕುಂತಳ ವಿಷಯಕ್ಕೆ ಸಮಾನಪದವಾಗಿಯೂ ಬಳಸಲಾಗಿದೆ.

12 **ಕೆಳವಾಡಿ 300 :** ತರ್ದವಾಡಿ 1000 ಪ್ರಾಂತ್ಯದ ದಕ್ಷಿಣಭಾಗ. ಈಗಿನ ಬಾದಾಮಿಗೆ ಹತ್ತು ಮೈಲಿ ದೂರದಲ್ಲಿರುವ ಕೆಳವಾಡಿ ಗ್ರಾಮದ ಸುತ್ತಮುತ್ತಲ ಪ್ರದೇಶ.

13 **ಕನ್ಹೇರಿ ಕಂಪನ :** ಖಾಂದೇಶ್ ಜಿಲ್ಲೆಯ ಚಾಲೀಸ್‌ಗಾಂವ್‌ಗೆ ಎಂಟು ಮೈಲಿ ದೂರದಲ್ಲಿರುವ ಕನ್ಹೇರ ಎಂಬ ನಗರದ ಸುತ್ತಮುತ್ತಲ ಪ್ರದೇಶಗಳನ್ನು ಒಳಗೊಂಡಿದ್ದ ಪ್ರಾಚೀನ ಪ್ರಾಂತ್ಯ.

14 **ಕೀಸುಕಾಡು 70:** ಬಿಜಾಪುರ ಜಿಲ್ಲೆಯ ಪಟ್ಟದಕಲ್ಲು ಮತ್ತು ಅದರ ಸುತ್ತಮುತ್ತಲ ಪ್ರದೇಶ.

15 **ಕುಂತಳ :** ಬಹು ವ್ಯಾಪಕ ಅರ್ಥದಲ್ಲಿ ಇದು ಕರ್ಣಾಟಕಕ್ಕೆ ಸಮಾನಪದವಾಗಿ ಬಳಸಲಾಗಿದೆ. ಫ್ಲೀಟ್‌ರವರ ಪ್ರಕಾರ ಇದರಲ್ಲಿ ಉತ್ತರದಲ್ಲಿ ಕಲ್ಯಾಣ, ದಕ್ಷಿಣದಲ್ಲಿ ಹರಿಹರ ಮತ್ತು ಹಂಪೆಗಳು ಸೇರಿದ್ದವು. ಮಿರಾಶಿಯವರ ಪ್ರಕಾರ ಇದರ ವ್ಯಾಪ್ತಿ ಭೀಮಾ ಮತ್ತು ವೇದಾವತೀ ನದಿಗಳ ಮಧ್ಯಪ್ರದೇಶ. ಇದರಲ್ಲಿ ಬೊಂಬಾಯಿ ಕರ್ಣಾಟಕ, ಮೈಸೂರು, ಮದರಾಸು ಮತ್ತು ಮಹಾರಾಷ್ಟ್ರದ ಕೆಲವು ಭಾಗಗಳು ಸೇರಿದ್ದವು. ಡೆರೆಟ್‌ರವರ ಅಭಿಪ್ರಾಯದಂತೆ ಪಶ್ಚಿಮಾರ್ಧ ದಕ್ಷಿಣಾಪಥವೇ ಕುಂತಳ. ಜಿ.ಎಸ್. ದೀಕ್ಷಿತ್‌ರವರು ರಟ್ಟವಾಡಿಯೇ ಕುಂತಳವೆನ್ನುತ್ತಾರೆ. ರಾಯಚೌಧುರಿಯವರ ಪ್ರಕಾರ ಕರ್ಣಾಟಕದ ಉತ್ತರಭಾಗ, ಅದರಲ್ಲಿಯೂ ತುಂಗಭದ್ರಾದಿಂದ ಕೃಷ್ಣಾನದಿಯವರೆಗೂ, ಕೆಲವು ವೇಳೆ ಮಾಂಜ್ರನದಿಯ ತೀರದವರೆಗೂ ಹಬ್ಬಿದ್ದ ವಿಶಾಲವಾದ ಪ್ರಾಂತ್ಯ.

16 **ಕುಹುಂಡಿ :** ಈಗಿನ ಬೆಳಗಾಂ, ತೇರ್‌ದಾಲ್ ಮತ್ತು ಸಾಂಗ್ಲಿಯ ಕೆಲವು ಭಾಗಗಳನ್ನು ಒಳಗೊಂಡಿದ್ದ ಪ್ರಾಂತ್ಯ.

17 **ಕೊಂಕಣ :** ಗೋವೆಯೂ ಸೇರಿದಂತೆ ಸುತ್ತಮುತ್ತಲಿನ ಪ್ರದೇಶ. ಕದಂಬರ ರಾಜ್ಯಕ್ಕೆ ಸೇರಿದ್ದ ಪ್ರದೇಶ.

18 **ಖೇಟ್‌ದೇಶ :** ಭೀಮಾನದಿಯ ತೀರದಲ್ಲಿರುವ ಈಗಿನ ಖೇಡ್ ತಾಲೂಕಿನ ಸುತ್ತಮುತ್ತಲಿನ ಪ್ರದೇಶ.

19 **ಗೊಂಕಣ 180:** ಇದು ಸರವಡಿಗೆ ಕಂಪನ ಮತ್ತು ಅಳಂದಿ ವಿಷಯದ ಒಂದು ಭಾಗ. ಗುಲ್ಬರ್ಗ ಜಿಲ್ಲೆಯ ಮೇಲ್ಭಾಗ ಮತ್ತು ಶೋಲಾಪುರ ಜಿಲ್ಲೆಯ ಪಶ್ಚಿಮಭಾಗಗಳನ್ನು ಒಳಗೊಂಡ ಪ್ರದೇಶ.

20 **ತರ್ದವಾಡಿ 1000 :** ಬಿಜಾಪುರ ಜಿಲ್ಲೆಯ ಇಂದಿ, ಸಿಂದಗಿ, ಬಾಗೆವಾಡಿ ಮತ್ತು ಬಾಗಲಕೋಟೆ ತಾಲ್ಲೂಕುಗಳ ಭಾಗಗಳನ್ನು ಒಳಗೊಂಡಿದ್ದ ಪ್ರದೇಶ.

21 **ತೊರಗಲೆ 6000 :** ಜಮಖಂಡಿ, ಮತ್ತು ಬೆಳಗಾಂ ಜಿಲ್ಲೆಯ ಪರಾಸ್‌ಘಡ್ ತಾಲ್ಲೂಕಿನ ಭಾಗಗಳನ್ನು ಒಳಗೊಂಡ ವಿಶಾಲವಾದ ಪ್ರದೇಶ.

22 **ಜಿಡ್ಡುಲಿಗೆ :** ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನ ಭಾಗಗಳನ್ನು ಒಳಗೊಂಡಿದ್ದ ಪ್ರಾಂತ.

23 **ನಗರಖಂಡ 70 :** ಹಿರೇಕೆರೂರು ಮತ್ತು ಹಾನಗಲ್ ತಾಲ್ಲೂಕಿನ ಭಾಗಗಳನ್ನು ಒಳಗೊಂಡ ಪ್ರದೇಶ.

24 **ನಾಲ್ವಡಿವಿಷಯ (ನಳವಾಡಿ):** ಬಳ್ಳಾರಿ, ಕರ್ನೂಲು ಮತ್ತು ಅನಂತಪುರದ ಕೆಲವು ಭಾಗಗಳನ್ನು ಒಳಗೊಂಡ ಪ್ರಾಂತ್ಯ

26 **ನೊಳಂಬವಾಡಿ 32000 :** ಬಳ್ಳಾರಿ, ಚಿತ್ರದುರ್ಗ ಮತ್ತು ಅನಂತಪುರದ ಭಾಗಗಳನ್ನು ಒಳಗೊಂಡಿದ್ದ ವಿಶಾಲವಾದ ಪ್ರಾಚೀನ ಪ್ರಾಂತ್ಯ.

27 **ನೂರುಂಬಾಡ :** ನೂರುಹಳ್ಳಿಗಳುಳ್ಳ ಪ್ರಾಚೀನ ಪ್ರಾಂತ್ಯ; ಧಾರ್ವಾಡ ಜಿಲ್ಲೆಯ ರಾಣಿಬೆನ್ನೂರು ತಾಲೂಕಿನ ಪ್ರದೇಶಗಳನ್ನು ಒಳಗೊಂಡಿದ್ದಿತು.

28 **ಪಾಂಡ್ಯನಾಡು :** ನೊಳಂಬವಾಡಿ ಪ್ರಾಂತ್ಯದ ಈಗಿನ ಗುತ್ತಿಯ ಸುತ್ತಮುತ್ತಲಿನ ಪ್ರದೇಶ.

29 **ಪುಲಿಗೆರೆ 300 :** ಧಾರ್ವಾಡ ಜಿಲ್ಲೆಯ ಲಕ್ಷ್ಮೇಶ್ವರದ ಸುತ್ತಮುತ್ತಲಿನ ಪ್ರದೇಶ

30 **ಬನವಾಸಿನಾಡು :** ವರದಾ ಮತ್ತು ತುಂಗಾಭದ್ರಾ ನದಿಗಳು ಮಧ್ಯಪ್ರದೇಶ. ಈಗಿನ ಧಾರ್ವಾಡ, ಉತ್ತರ ಕನ್ನಡ ಮತ್ತು ಶಿವಮೊಗ್ಗ ಜಿಲ್ಲೆಯ ಭಾಗಗಳನ್ನು ಒಳಗೊಂಡಿದ್ದ ಪ್ರಾಂತ್ಯ. ಬನವಾಸಿ ಗ್ರಾಮವು ಉತ್ತರ ಕನ್ನಡ ಜಿಲ್ಲೆಯಲ್ಲಿದೆ.

31 **ಬಸವೂರ 140 :** ಧಾರ್ವಾಡ ಜಿಲ್ಲೆಯ ಹಾವೇರಿ ತಾಲ್ಲೂಕಿನ ಚಿಕ್ಕ ಬಸೂರು ಮತ್ತು ಹಿರೇ ಬಸೂರು ಎಂಬ ಹಳ್ಳಿಗಳ ಸುತ್ತಲಿನ ಪ್ರದೇಶ

32 **ಬಾಗೆ 80 :** ಇದಕ್ಕೆ ಬಾಗಾಡಗೆ ಎಂಬ ಹೆಸರೂ ಇದ್ದಿತೆಂದೂ, ಬಾಗಲ ಕೋಟೆಯ ಕೆಲವು ಭಾಗಗಳನ್ನು ಒಳಗೊಂಡಿದ್ದಿತೆಂದೂ ಫ್ಲೀಟ್‌ರವರು ಅಭಿಪ್ರಾಯಪಡುತ್ತಾರೆ.

33 **ಬೆಳ್ವೊಲ 300 :** ಗದಗ್, ಅಣ್ಣಿಗೇರಿ, ಕುರ್ತುಕೋಟಿ, ನರ್ಗುಂದ ಮತ್ತು ಬೆಳಗಾಂನ ಕೆಲವು ಭಾಗಗಳೂ, ರಾಯಚೂರು ಜಿಲ್ಲೆಯ ಕುಕ್ಕನೂರೂ ಇದರ ವ್ಯಾಪ್ತಿಗೆ ಒಳಪಟ್ಟಿದ್ದವೆಂದು ಫ್ಲೀಟ್‌ರವರು ಹೇಳುತ್ತಾರೆ.

34 **ಭಾಂಡಾಗಾರ :** ಮಹಾರಾಷ್ಟ್ರದ ಚಾಂದ ಜಿಲ್ಲೆಗೆ ಸೇರಿದ ಭಾಂಡಕ್ ಎಂಬ ಪ್ರದೇಶದ ಸುತ್ತಮುತ್ತಲ ದೇಶ.

35 **ಮಾಸವಾಡಿ 140 :** ಧರ್ಮಪುರಿ ಅಥವಾ ಡಂಬಳ್ ಅನ್ನು ಒಳಗೊಂಡಂತೆ, ಧಾರ್ವಾಡ ಜಿಲ್ಲೆಯ ಮುಂಡರ್ಗಿ ತಾಲ್ಲೂಕಿನ ಕೆಲವು ಪ್ರದೇಶಗಳನ್ನು ಒಳಗೊಂಡಿದ್ದಿತು.

36 **ಮೂವತ್ತಾರುಂಬಾಡ :** ಬಿಜಾಪುರ ತಾಲ್ಲೂಕಿನ ಮೂವತ್ತಾರು ಹಳ್ಳಿಗಳ ನ್ನೊಳಗೊಂಡ ಸಣ್ಣ ಪ್ರಾಂತ್ಯ.

37 **ಮೊರಟ 300 :** ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನ ಸುತ್ತಮುತ್ತಲಿನ ಪ್ರದೇಶ. ಹೈಹೇಯರು ಆಳುತ್ತಿದ್ದ ಪ್ರಾಂತ್ಯ.

38 **ವಜ್ರಕರದೇಶ :** ಮಹಾರಾಷ್ಟ್ರದ ಚಾಂದ ಜಿಲ್ಲೆಗೆ ಸಮೀಪದಲ್ಲಿರುವ ಈಗಿನ ವೈರಘರ್ ಎಂದು ಪ್ರಸಿದ್ಧವಾಗಿರುವ ನಗರದ ಸುತ್ತಮುತ್ತಲ ದೇಶ.

39 **ಸಾಗರ 500 :** ಗುಲ್ಬರ್ಗ ಜಿಲ್ಲೆಯ ಸಾಗರ ನಗರದ ಸುತ್ತಮುತ್ತಲಿನ ಪ್ರದೇಶ.

40 **ಸಿಂದವಾಡಿ :** ಬಳ್ಳಾರಿ ಜಿಲ್ಲೆಯ ಆಲೂರ್ ತಾಲ್ಲೂಕಿನ ಸಿಂಧವಾಳಂ ಈ ಪ್ರಾಂತ್ಯದ ಮುಖ್ಯ ಪಟ್ಟಣ. ಆಲೂರ್ ಮತ್ತು ಆದೋಣಿ ತಾಲ್ಲೂಕುಗಳ ಭಾಗಗಳನ್ನು ಒಳಗೊಂಡ ಪ್ರಾಚೀನ ಪ್ರಾಂತ್ಯ.

41 **ಸೇವುಣ ದೇಶ :** ವ್ಯಾಪಕವಾದ ಅರ್ಥದಲ್ಲಿ ಸೇವುಣರ ರಾಜ್ಯಕ್ಕೆ ಒಳಪಟ್ಟ ದೇಶ ಎಂದು ಹೇಳಬಹುದು.

42 **ಸಂಗಮದೇಶ :** ಪಶ್ಚಿಮ ಕರಾವಳಿಯ ರತ್ನಗಿರಿ ಮತ್ತು ಸಂಗಮೇಶ್ವರ ತಾಲ್ಲೂಕುಗಳ ಭಾಗಗಳನ್ನೊಂಡ ಪ್ರದೇಶ

43 **ಹಗರ್ತಗೆನಾಡು :** ಬಿಜಾಪುರ ಜಿಲ್ಲೆಯ ಮುದ್ದೆಬಿಹಾಳ್ ಮತ್ತು ರಾಯಚೂರಿನ ಲಿಂಗಸುಗೂರಿನ ವಾಯುವ್ಯ ಭಾಗಗಳನ್ನೂ ಒಳಗೊಂಡ ಪ್ರದೇಶ

44 **ಹಲಸಿಗೆ 12,000 :** ಇದರ ಮುಖ್ಯ ನಗರವಾದ ಹಲಸಿಯು ಖಾನಾಪುರ ಜಿಲ್ಲೆಯ ಹಲಸಿಗೆ. ಧಾರ್ವಾಡದ ವಾಯುವ್ಯ ಭಾಗಗಳನ್ನೂ ಉತ್ತರ ಕನ್ನಡದ ಉತ್ತರ ಭಾಗಗಳನ್ನೂ, ಬೆಳಗಾಂ ಜಿಲ್ಲೆಯ ನೈರುತ್ಯ ಭಾಗಗಳನ್ನೂ ಒಳಗೊಂಡ ಪ್ರಾಚೀನ ಪ್ರಾಂತ್ಯ.

45 **ಹಾನುಂಗಲ್ಲು :** ಧಾರ್ವಾಡ ಜಿಲ್ಲೆಯ ಹಾನಗಲ್ ತಾಲ್ಲೂಕಿನ ಭಾಗಗಳನ್ನೊಳಗೊಂಡ ಪ್ರಾಂತ.

46 **ಹೇಡ :** ಇದು ಸಾಮಾನ್ಯವಾಗಿ ತರ್ದವಾಡಿ, ಕನ್ನಂಬಾಡೆ ಪಾಂತ್ಯಗಳ ಜೊತೆಯಲ್ಲಿಯೇ ಉಲ್ಲೇಖಿತವಾಗಿರುತ್ತದೆ. ಬಹುಶಃ ಬಿಜಾಪುರ ಜಿಲ್ಲೆಯ ಸಮೀಪದಲ್ಲಿಯೇ ಇರುವ ಪ್ರಾಂತ್ಯವಿರಬೇಕು. ನಿರ್ದಿಷ್ಟವಾದ ಪ್ರದೇಶ ತಿಳಿದಿಲ್ಲ.

* * *

ಅನುಬಂಧ ೬

## ಸೇವುಣ ಶಾಸನಗಳ ಸೂಚಿ

ಸೇವುಣರ ಶಾಸನಗಳ ಸೂಚಿಯನ್ನು ಕೆಳಗೆ ನೀಡಲಾಗಿದೆ. ಈ ಸೂಚಿ ಸಂಪೂರ್ಣವೇನೂ ಅಲ್ಲ. ಈಚೆಗೆ ಸೇಉಣರ ಹಲವು ಶಾಸನಗಳು ಪ್ರಕಟಗೊಂಡಿವೆ ಎಂದು ತಿಳಿದುಬರುತ್ತದೆಯಾದರೂ ಪೂರ್ಣಮಾಹಿತಿ ಲಭ್ಯವಿಲ್ಲ. BK, B, A ಮತ್ತು 270 of 54-55, 74 of 50-51 ಎಂಬ ರೀತಿಯಿಂದ ದಾಖಲು ಗೊಂಡಿರುವವು ARIE ವರದಿಗಳಲ್ಲಿ ಸಾರಾಂಶ ಮಾತ್ರವಾಗಿ ಪ್ರಕಟಗೊಂಡಿವೆ. ಇವುಗಳ ಪೂರ್ಣ ಪಾಠಗಳು ಇದುವರೆಗೂ ಪ್ರಕಟಗೊಂಡಿಲ್ಲ. ಇದನ್ನೇ ಪೂರ್ಣವಾಗಿ ನೆಚ್ಚಿ ಅಧ್ಯಯನ ಸಾಧ್ಯವಿಲ್ಲ ಎಂಬುದು ನಿಜವೇ ಆಗಿದೆ. ಸೇವುಣರ ಬಹುತೇಕ ಶಾಸನಗಳು ಕನ್ನಡ ಭಾಷೆಯಲ್ಲಿವೆ. ದ್ವಿತೀಯ ಸ್ಥಾನ ಸಂಸ್ಕೃತಕ್ಕೆ ಸಲ್ಲುತ್ತದೆ. ಮರಾಠಿ ಶಾಸನಗಳು ಬಹಳ ಕಡಿಮೆ. ೩೦ ರ ಸಂಖ್ಯೆಯನ್ನೂ ಮೀರುವುದಿಲ್ಲವೆಂಬುದು ಗಮನಾರ್ಹ. ಈಗ ಪ್ರಕಟವಾಗಿರುವ ಶಾಸನ ಪಾಠಗಳು ತೃಪ್ತಿಕರವಾಗಿಲ್ಲ. ಆದ ಕಾರಣ Corpus Inscriptionum Indicarum ಮಾದರಿಯಲ್ಲಿ ಸೇವುಣರ ಶಾಸನ ಸಂಪುಟ ಪ್ರಕಟವಾಗಬೇಕಾದ್ದು ಅಗತ್ಯವಾಗಿದೆ. ಕೆಳಗೆ ನೀಡಿರುವ ಸೂಚಿಯಲ್ಲಿ ಕೆಲವು ಕೊರತೆಗಳು ಅನಿವಾರ್ಯವಾಗಿ ಉಳಿದಿವೆ. ಇಲ್ಲಿ ನೀಡಿರುವ ಜಿಲ್ಲೆ ಮತ್ತು ಸ್ಥಳಗಳ ವಿವರಗಳಲ್ಲಿ ಇಂದು ವ್ಯಾಪಕ ಬದಲಾವಣೆ ಆಗಿದೆ. ಇದನ್ನು ಸರಿಪಡಿಸಲು ಉತ್ತಮ ಗ್ರಾಮಸೂಚಿ ಇದುವರೆಗೂ ಪ್ರಕಟವಾಗದೆ ಇರುವುದು ದೊಡ್ಡ ಕೊರತೆಯಾಗಿದೆ. ಆಕರಗಳ ವಿವರಗಳನ್ನು ಮಾತ್ರ ಸಾಧ್ಯವಿರುವ ಮಟ್ಟಿಗೆ ನಿರ್ದಿಷ್ಟವಾಗಿ ನೀಡಲಾಗಿದೆ.

| ಸ್ಥಳ | ಕ್ರಿ.ಶ. ಕಾಲ | ಪ್ರಕಟಿತ ಆಕರ |
|---|---|---|
| | **ಎರಡನೆಯ ಭಿಲ್ಲಮ** | |
| ಸಂಗಂನೇರ್, ಅ | 1000 | EI, II, 217 |
| | **ಮೂರನೆಯ ಭಿಲ್ಲಮ** | |
| ದೇವಲಾಲಿ, ಅ | 1052 | A 12 of 1957-58 |
| ಕಲಾಸ್ ಬದ್ರುಕ್, ಅ | 1025 | IA, XVII, 117 |

### ಎರಡನೆಯ ಸೇವುಣ ಚಂದ್ರ

| | | |
|---|---|---|
| ವಾಘ್ಲೀ, ಖಾಂ | 1069 | EI, II, 225 |
| ಬನೇನ್, ಥಾನ | 1069 | IA, XII, 119 |

### ಐರಮ ದೇವ

| | | |
|---|---|---|
| ಆಶ್ವಿ, ಅ | 1098 | EI ,36, 249 |

### ಸೇವುಣ ದೇವ

| | | |
|---|---|---|
| ಚನ್ಯೆ, ಭೀರ್ | 1140 | B 333 of 1964-65 |
| ಅಚಿಜನೇರಿ, ನಾ | 1142 | IA, XII, 126 |

### ಐದನೆಯ ಭಿಲ್ಲಮ

| | | |
|---|---|---|
| ಕರಡ್ಕಲ್, ರಾ | 1191 | 240 of 53-54 |
| ಮಾರ್ಡೀ, ಶೋ | 1187 | B 391 of 64-65 |
| ಮುದನೂರು, ಗು | 1188 | B 525 of 60-61 |
| ಅಂದೂರ್, ಉ | 1184 | B 747 of 1962-63 |
| ಬಿಜಾಪುರ, ಬಿ | 1189 | BK 159 of 33-34 |
| ಅಂಕಳಗಿ, ಜಾತ್ | 1190 | BK 92 of 40-41 |
| ಗದಗ್, ಧಾ | 1191 | EI, III, 217 |
| ನಿಂಬಾಳ, ಬಿ | 1187 | EI, XXVIII, 94 |
| ಚೌಡದಾನಪುರ, ಧಾ | 1191 | Kielhorn, 335 |
| ಆಲೂರು, ಹಾಸನ | 1192 | MAR 1926, 9 |
| ಹಳ್ಳೂರು, ಬಿ | 1188 | SII, XV, 145 |
| ಮುತ್ತಗಿ, ಬಿ | 1189 | SII, XV, 146 |
| ಪೀರಾಪುರ, ಬಿ | 1190 | SII, XV, 147 |
| ಪೀರಾಪುರ, ಬಿ | 1190 | SII, XV, 148 |
| ಅಣ್ಣಿಗೇರಿ, ಧಾ | 1189 | SII, XV, 149 |
| ಭೈರವಾಡಗಿ, ಬಿ | 1191 | SII, XV, 151 |
| ಮುತಗಿ, ಬಿ | 1192 | SII, XV, 152 |
| ಹಿಪ್ಪರಗಿ, ಬಿ | 1192 | SII, XV, 178 |
| ಮದಭಾವಿ, ಬಿ | 1191 | SII, XX 176 |
| ಬೆಕ್ಕಿನಾಳ್, ಬಿ | 1187 | SII, XX, 173 |
| ಕಲ್ಕೇರಿ, ಬಿ | 1187 | SII, XX, 174 |
| ಹಿರೇಬೇವಿನೂರು, ಬಿ | 1190 | SII, XX, 175 |
| ಚೂರ್ಗಿ, ಬಿ | 1190 | SII, XX, 177 |
| ಸಾಲೋತ್ಗಿ, ಬಿ | 1192 | SII, XX, 179 |
| ಸಿರವಾಳ, ಗುಲ್ಬರ್ಗ | 1189 | ಶಿವಾನುಭವ 4-2 ; |

ಕರ್ನಾಟಕ ಭಾರತಿ 9-3 ; ಹೈದರಾಬಾದು ಕರ್ನಾಟಕ ಭಾಗದ ಕನ್ನಡ ಶಿಲಾಶಾಸನಗಳು-೯೩,ಪುಟ.೨೨೭

## ಜೈತುಗಿ

| | | |
|---|---|---|
| ಜಂಬಗಾವ್, ಶೋ | 1195 | B 381 of 64-65 |
| ಮಾರ್ಡಿ, ಶೋ | 1199 | B 392 of 64-65 |
| ಸಂಖ, ಚಾತ್ | 1194 | BK 109 of 40-41 |
| ಬಿಜಾಪುರ, ಬಿ | 1196 | BK 131 of 33-34 |
| ಬಿಜಾಪುರ, ಬಿ | 1196 | BK 157 of 33-34 |
| ದೇವಣ್‌ಗಾವ್, ಬಿ | 1199 | BK 18 of 36-37 |
| ದೇವೂರು, ಬಿ | 1196-97 | BK 24 of 36-37 |
| ನಾಡ, ಬಿ | 1197 | BK 47 of 37-38 |
| ಮನಗೋಳಿ, ಬಿ | 1199 | EI, V, 28 |
| ಚಿನ್ನ ತುಂಬಲಂ, ಬ | 1199 | SII, IX, I, 397 |
| ಕಡ್ಲೇವಾಡ, ಬಿ | 1192 | SII, XX, 180 |
| ಸಂಖ, ಬಿ | 1194 | SII, XX, 181 |
| ಕೂಡಗಿ, ಬಿ | 1199 | SII, XX, 185 |

## ಸಿಂಘಣ

| | | |
|---|---|---|
| ಹಿರೆಬಾಸೂರು, ಧಾ | 1242 | 101 of 49-50 |
| ಕಲ್ಲೇರಿ, ಧಾ | 1243 | 108 of 49-50 |
| ಔರಂಗಾಬಾದ್, ಔ | 1244 | 116 of 54-55 |
| ಕೋಡುಮೂರ್ತಿ, ಅನ | 1227 | 15 of 53-54 |
| ಮಿರಜ್, ಸತಾರ | 1240 | 154 of 49-50 |
| ಕುಕ್ಕನೂರು, ರಾ | 1229 | 166 of 54-55 |
| ಮೇಡಿಕುರ್ತಿ, ಅನ | 1220 | 18 of 53-54 |
| ಮರ್ದ್‌ಭಾವಿ, ಬೆ | 1239 | 185 of 53-54 |
| ಹರಿವಿ, ಧಾ | ಕಾಲ ಹೇಳಿಲ್ಲ | 218 of 46-47 |
| ಸಂಕನೂರು, ರಾ | 1239 | 219 of 55-56 |
| ನೀರಲ್ಲಿ, ಧಾ | 1247 | 239 of 46-47 |
| ಪರ್ಲ್, ಕ | 1226 | 241 of 50-51 |
| ಮುದ್ಗಲ್, ರಾ | 1215 | 253 of 53-54 |
| ತಿಳಿವಳ್ಳಿ, ಧಾ | 1238 | 255 of 45-46 |
| ಕುಕ್ಕನೂರು, ರಾ | 1231 | 270 of 53-54 |
| ಕೊಲ್ಲಾಪುರ | 1237 | 353 of 45-46 |
| ಕೊಲ್ಲಾಪುರ, | 1218 | 354 of 45-46 |
